**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

# ಕರ್ನಾಟಕ ವಿಧಾನ ಪರಿಷತ್ತು

04ನೇ ಜುಲೈ 2018
ಬುಧವಾರ

## ವಿಷಯಾನುಕ್ರಮಣಿಕೆ

1. **ನಿಯಮ 330ರ ಮೇರೆಗೆ ವಿಶೇಷ ಪ್ರಸ್ತಾವನೆಗಳು**

ಅ) ಆರೋಗ್ಯ ಕರ್ನಾಟಕ ಯೋಜನೆಯು ಸಮರ್ಪಕವಾಗಿ ಅನುಷ್ಠಾನವಾಗದೇ ಇರುವ ಬಗ್ಗೆ
- **ಶ್ರೀ ಎಂ.ಕೆ.ಪ್ರಾಣೇಶ್**
- **ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು)**

ಆ) ರಾಜ್ಯದ ಬೆಂಗಳೂರು, ಧಾರವಾಡ, ರಾಯಚೂರು ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಆಗಿರುವ ಅನ್ಯಾಯದ ಬಗ್ಗೆ.
- ಶ್ರೀ ಎನ್.ರವಿಕುಮಾರ್
- ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು)
- ಶ್ರೀ ಕೃಷ್ಣಬೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಸಂಸದೀಯ ವ್ಯವಹಾರಗಳ ಸಚಿವರು)
- ಶ್ರೀ ಜಿ.ಟಿ.ದೇವೇಗೌಡ (ಉನ್ನತ ಶಿಕ್ಷಣ ಸಚಿವರು)

ಇ) ರಾಜ್ಯದಲ್ಲಿ ಪ್ರಥಮ ದರ್ಜೆ ಕಾಲೇಜುಗಳ ತರಗತಿಗಳು ಆರಂಭವಾಗಿದ್ದು, ಅತಿಥಿ ಉಪನ್ಯಾಸಕರುಗಳು ನೇಮಕಗೊಳ್ಳದೆ ಆಗಿರುವ ತೊಂದರೆ ಬಗ್ಗೆ.
- ಶ್ರೀ ಕೆ.ಹರೀಶ್ ಕುಮಾರ್
- ಶ್ರೀ ಜಿ.ಟಿ.ದೇವೇಗೌಡ (ಉನ್ನತ ಶಿಕ್ಷಣ ಸಚಿವರು)

ಈ) ಹಟ್ಟಿಗೊಲ್ಲ, ಅಡವಿಗೊಲ್ಲ ಮತ್ತು ಕಾಡುಗೊಲ್ಲ ಈ ಜನಾಂಗದವರನ್ನು ಪರಿಶಿಷ್ಟ ವರ್ಗ(ಎಸ್.ಟಿ.)ಕ್ಕೆ ಸೇರಿಸುವ ಬಗ್ಗೆ.
- ಶ್ರೀಮತಿ ಜಯಮ್ಮ
- ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು)

ಉ) ಕೇರಳದ ಕೊಚ್ಚಿನ್‌ನಿಂದ ವಿದ್ಯಾಭ್ಯಾಸಕ್ಕೆ ಬಂದಿದ್ದ ಯುವತಿಯನ್ನು ಲವ್ ಜಿಹಾದ್ ಹೆಸರಿನಲ್ಲಿ ಬಳಸಿಕೊಂಡಿರುವ ಬೆಂಗಳೂರಿನ ಉದ್ಯಮಿ ನಜೀರ್ ಖಾನ್ ಎಂಬಾತನನ್ನು ಪೊಲೀಸರು ಬಂಧಿಸಿರುವ ಬಗ್ಗೆ.
- ಡಾ:ತೇಜಸ್ವಿನಿ ಗೌಡ
- ಡಾ: ಜಯಮಾಲ ರಾಮಚಂದ್ರ (ಸಭಾನಾಯಕರು)

2. **ನೂತನ ಸಚಿವರ ಪರಿಚಯ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**3. ಗಮನ ಸೆಳೆಯುವ ಸೂಚನೆ**

ಅ) ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ 169ರ ಗುರುಪುರ ಸೇತುವೆಯ ದುರಸ್ಥಿ ಬಗ್ಗೆ.

- ಶ್ರೀ ಐವನ್ ಡಿ'ಸೋಜಾ
- ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಸಚಿವರು ಮತ್ತು ಬಂದರು ಮತ್ತು ಒಳನಾಡು ಸಾರಿಗೆ ಸಚಿವರು)

ಆ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ವಿವಿಧ ಹುದ್ದೆಗಳನ್ನು ಸೃಜಿಸುವುದರ ಬಗ್ಗೆ.

- ಶ್ರೀ ಎಂ.ಕೆ. ಪ್ರಾಣೇಶ್
- ಶ್ರೀ ಕೃಷ್ಣ ಬೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)

**4. ನೂತನ ಸಚಿವರ ಪರಿಚಯ**

**5. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ.**

- ಶ್ರೀ ಶರಣಪ್ಪ ಮಟ್ಟೂರ
- ಶ್ರೀಮತಿ ಎಸ್.ವೀಣಾ ಅಚ್ಚಯ್ಯ
- ಶ್ರೀ ಅಪ್ಪಾಜಿ ಗೌಡ
- ಶ್ರೀ ಲಹರ್ ಸಿಂಗ್ ಸಿರೋಯಾ
- ಶ್ರೀ ಕೆ.ಅಬ್ದುಲ್ ಜಬ್ಬಾರ್
- ಶ್ರೀ ವೈ.ಎ.ನಾರಾಯಣಸ್ವಾಮಿ

**6. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ಚರ್ಚೆ**

ಪದವಿ ಪೂರ್ವ ಶಿಕ್ಷಣ ಇಲಾಖೆಯು 2018-2019ನೇ ಸಾಲಿನ ಶೈಕ್ಷಣಿಕ ವೇಳಾ ಪಟ್ಟಿಯ ಸುತ್ತೋಲೆ ಹೊರಡಿಸಿ, ತರಗತಿಗಳನ್ನು ಪ್ರಾರಂಭಿಸಿರುವುದರಿಂದ ಉಂಟಾದ ತೊಂದರೆ ಬಗ್ಗೆ.

- ಶ್ರೀ ಮರಿತಿಬ್ಬೇಗೌಡ
- ಶ್ರೀ ಎನ್.ಮಹೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಭೋಜೇಗೌಡ
- ಐವನ್ ಡಿ'ಸೋಜಾ
- ಶ್ರೀ ಶರಣಪ್ಪ ಮಟ್ಟೂರ

**7. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ.**

- ಶ್ರೀ ವೈ.ಎ.ನಾರಾಯಣಸ್ವಾಮಿ
- ಶ್ರೀ ಕೆ.ಜೆ.ಜಾರ್ಜ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಐಟಿ ಮತ್ತು ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)
- ಶ್ರೀ ಆರ್.ವಿ.ದೇಶಪಾಂಡೆ (ಕಂದಾಯ ಸಚಿವರು)
- ಶ್ರೀ ಕೆ.ಹರೀಶ್ ಕುಮಾರ್
- ಶ್ರೀ ಪ್ರಸನ್ನ ಕುಮಾರ್
- ಶ್ರೀ ಎಸ್.ವ್ಹಿ.ಸಂಕನೂರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

8. **ಮುಖ್ಯಮಂತ್ರಿಗಳ ಪರಿಚಯ**
9. **ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ.**
   - ಶ್ರೀ ಅ.ದೇವೇಗೌಡ
   - ಶ್ರೀ ಸಿ.ಎಂ.ಇಬ್ರಾಹಿಂ
   - ಶ್ರೀಮತಿ ಜಯಮ್ಮ
   - ಶ್ರೀ ಎನ್ ರವಿಕುಮಾರ್
   - ಶ್ರೀ ಕೆ.ಟಿ.ಶ್ರೀಕಂಠೇಗೌಡ
   - ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೊಧ ಪಕ್ಷದ ನಾಯಕರು)
10. **ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ**
   - ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು)
   - ಶ್ರೀ ಆಯನೂರು ಮಂಜುನಾಥ್
   - ಶ್ರೀ ಕೆ.ಬಿ.ಶಾಣಪ್ಪ
   - ಶ್ರೀ ರಿಜ್ವಾನ್ ಅರ್ಷದ್

**(ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಪ್ರಸ್ತಾವವನ್ನು ಅನುಮೋದಿಸಲಾಯಿತು)**

– – –

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(044)04.07.2018 10.30 ಕೆಜಿ.ಬಿಎನ್ಎಸ್

***ಕರ್ನಾಟಕ ವಿಧಾನ ಪರಿಷತ್ತು***

***ಬುಧವಾರ, 04ನೇ ಜುಲೈ 2018***

***ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ***

***ಬೆಳಗ್ಗೆ 10 ಗಂಟೆ 35 ನಿಮಿಷಕ್ಕೆ ಸಮಾವೇಶಗೊಂಡಿತು.***

***ಹಂಗಾಮಿ ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ರವರು***

***ಪೀಠದಲ್ಲಿ ಉಪಸ್ಥಿತರಿದ್ದರು.***

**ಸಭಾಪತಿಯವರು:-** ಈಗ ನಿಯಮ 330ಎ ಅಡಿಯಲ್ಲಿ ವಿಶೇಷ ಪ್ರಸ್ತಾವ. ಮೊದಲು ಮಾನ್ಯ ಸದಸ್ಯರಾದ ಎಂ.ಕೆ.ಪ್ರಾಣೇಶ್‌ರವರಿಂದ.

**<u>1. ನಿಯಮ 330ಎ ಅಡಿಯಲ್ಲಿ ವಿಶೇಷ ಪ್ರಾಸ್ತಾವಗಳು</u>**

**ಅ) ವಿಷಯ:-** ಆರೋಗ್ಯ ಕರ್ನಾಟಕ ಯೋಜನೆಯು ಸಮರ್ಪಕವಾಗಿ ಅನುಷ್ಠಾನವಾಗದೇ ಇರುವ ಬಗ್ಗೆ.

- - -

**ಶ್ರೀ ಎಂ.ಕೆ.ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರಸ್ತುತ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಆರೋಗ್ಯ ಕರ್ನಾಟಕ ಯೋಜನೆಯು ಸಮರ್ಪಕವಾಗಿ ಅನುಷ್ಠಾನವಾಗದೇ ಜನರಿಗೆ ತೊಂದರೆಯಾಗುತ್ತಿದೆ. ಹಿಂದೆ ಆಸ್ತಿತ್ವದಲ್ಲಿರುವ ವಾಜಪೇಯಿ ಆರೋಗ್ಯಶ್ರೀ, ರಾಜೀವ್ ಆರೋಗ್ಯ ಭಾಗ್ಯ, ರಾಷ್ಟ್ರೀಯ ಬಾಲಸ್ವಾಸ್ಥ್ಯ ಭೀಮಾ ಯೋಜನೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಗ್ಗೂಡಿಸಿಕೊಂಡು ಈಗ ಆರೋಗ್ಯ ಕರ್ನಾಟಕ ಯೋಜನೆ ಎಂಬ ನೂತನ ಯೋಜನೆಯನ್ನು ಸರ್ಕಾರ ಹಾಕಿಕೊಂಡರೂ ಈ ಯೋಜನೆ ಜನರಿಗೆ ಸಮರ್ಪಕವಾಗಿ ತಲುಪುತ್ತಿಲ್ಲ. ಆರೋಗ್ಯ ಕರ್ನಾಟಕ ಯೋಜನೆ ಜಾರಿಗೆ ಬಂದ ನಂತರ ವಾಜಪೇಯಿ ಆರೋಗ್ಯಶ್ರೀ ಕಾರ್ಡ್ ಹೊಂದಿದ ಜನರಿಗೆ ಯಾವುದೇ ವೈದ್ಯಕೀಯ ಸೌಲಭ್ಯ ದೊರಕುತ್ತಿಲ್ಲ. ಸುಮಾರು ಒಂದು ತಿಂಗಳಿಂದ ಆರೋಗ್ಯ ಕರ್ನಾಟಕ ಯೋಜನೆಯಡಿಯಲ್ಲಿ ರೋಗಿಗಳಿಗೆ ಯಾವುದೇ ಸೌಲಭ್ಯ ದೊರಕದೆ ಕಂಗಲಾಗಿರುವಂತಹ ವಿಚಾರವನ್ನು ನಾವು ದಿನೇ ದಿನೇ ಗಮನಿಸುತ್ತಿದ್ದೇವೆ.

ಮಾನ್ಯ ಸಭಾಪತಿಯವರೇ, ಆರೋಗ್ಯ ಕರ್ನಾಟಕ ಯೋಜನೆಯಡಿಯಲ್ಲಿ ರೋಗಿಯು ಸೌಲಭ್ಯವನ್ನು ಪಡೆಯಬೇಕಾದರೆ ಸರ್ಕಾರಿ ಆಸ್ಪತ್ರೆಯ ವೈದ್ಯರಿಂದ ರೋಗಿಯ ಕಾಯಿಲೆ ಬಗ್ಗೆ ವರದಿ ಪಡೆದಿರಬೇಕಾಗುತ್ತದೆ. ಇದರಿಂದ ಅನಗತ್ಯ ಅಲೆದಾಟ ಹೊರತು ಯಾವುದೇ ಪ್ರಯೋಜನ ರೋಗಿಗಳಿಗೆ ಆಗುತ್ತಿಲ್ಲ. ಅಲ್ಲದೇ, ಆರೋಗ್ಯ ಕರ್ನಾಟಕ ಯೋಜನೆ ಜಾರಿಗೆ ಬಂದು ಸುಮಾರು ಒಂದು ತಿಂಗಳಾದರೂ ಈ ಸೌಲಭ್ಯವನ್ನು ಹೇಗೆ ಪಡೆದುಕೊಳ್ಳಬೇಕೆಂದು ಸರ್ಕಾರದಿಂದ ಸರಿಯಾದ ಮಾರ್ಗಸೂಚಿಯನ್ನು ಪ್ರಕಟಿಸಿರುವುದಿಲ್ಲ. ಇದರಿಂದ ಈ ಯೋಜನೆಯನ್ನು ಅನುಷ್ಠಾನ ಮಾಡುವ ಆಸ್ಪತ್ರೆಗಳಿಗೆ ಸರಿಯಾದ ಮಾರ್ಗಸೂಚಿಗಳು ಲಭ್ಯವಾಗದೆ ರೋಗಿಗಳಿಗೆ ಗೊಂದಲವನ್ನು ಸೃಷ್ಟಿಸುವ ಸನ್ನಿವೇಶಗಳು ಸರ್ವೆಸಾಮಾನ್ಯವಾಗಿಬಿಟ್ಟಿವೆ. ಅಲ್ಲದೇ ಆಸ್ಪತ್ರೆಗೂ ಮತ್ತು ಸರ್ಕಾರಕ್ಕೂ ಈ ಯೋಜನೆಯ ಬಗ್ಗೆ ಯಾವುದೇ ಒಪ್ಪಂದಗಳು ಆಗಿರುವುದಿಲ್ಲ. ಅಲ್ಲದೇ, ಈ ಯೋಜನೆಯನ್ನು ಕೇವಲ 12 ಜಿಲ್ಲೆಗಳಲ್ಲಿ ಮಾತ್ರ ಅನುಷ್ಠಾನ ಮಾಡಲು ಸರ್ಕಾರ ನಿಶ್ಚಯಿಸಿದೆ. ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಇರುವ ಈ ಎಲ್ಲಾ ಲೋಪದೋಷಗಳನ್ನು ಸರಿಪಡಿಸಿ ಜನರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಈ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

**ಡಾ||ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿಕೊಡುತ್ತೇವೆ.

**ಸಭಾಪತಿಯವರು:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಒಂದು ನಿಮಿಷ ಕುಳಿತುಕೊಳ್ಳಿ. ತಾವು ವಿರೋಧ ಪಕ್ಷದ ನಾಯಕರು. ವಿಧಾನ ಪರಿಷತ್ತಿನ ನಿಯಮದಲ್ಲಿ ಏನಿದೆ? ನಿಯಮ 330 ಎ ರಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆಯೇ? ಉತ್ತರ ಕೊಡುವ ಪದ್ಧತಿ ಇದೆ. ತಾವು ಬೇರೆ ನಿಯಮದಡಿಯಲ್ಲಿ ಅರ್ಜಿ ಕೊಡಿ. ನಿಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ವಿಷಯ:-** ರಾಜ್ಯದ ಬೆಂಗಳೂರು, ಧಾರವಾಡ, ರಾಯಚೂರು ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಆಗುತ್ತಿರುವ ಅನ್ಯಾಯದ ಕುರಿತು.

- - -

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ ಬೆಂಗಳೂರು, ಧಾರವಾಡ, ರಾಯಚೂರು ಸೇರಿದಂತೆ ಕೃಷಿ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಕಳೆದ 20 ದಿವಸಗಳಿಂದ ತರಗತಿ ಬಹಿಷ್ಕರಿಸಿ, ಮಾನವ ಸರಪಳಿ ರಚಿಸಿ ಖಾಸಗಿ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಆಗುತ್ತಿರುವ ಅನ್ಯಾಯದ ಕುರಿತು ಹೋರಾಟ ಮಾಡುತ್ತಿದ್ದಾರೆ. ರಾಜ್ಯದ ಬಡ, ಪ್ರತಿಭಾವಂತ ರೈತಾಪಿ ಮಕ್ಕಳು ಕೃಷಿ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಖಾಸಗಿ ಕೃಷಿ ಕಾಲೇಜುಗಳಲ್ಲಿ ದುಬಾರಿ ಪ್ರವೇಶ ಶುಲ್ಕ ನಿಗದಿ ಪಡಿಸಿದ್ದು, ಇದು ಸರ್ಕಾರ ನಿಗದಿ ಪಡಿಸಿದ ಶುಲ್ಕದ 10 ಪಟ್ಟು ಹೆಚ್ಚಿದೆ. ಅಲ್ಲದೆ, ರೈತ ಕುಟುಂಬದಿಂದ ಬಂದಿರುವ ಶೇಕಡಾ 40 ವಿದ್ಯಾರ್ಥಿಗಳನ್ನು ತೆಗೆದು ಕೊಳ್ಳಬೇಕೆಂಬ ಸರಕಾರದ ಆದೇಶವನ್ನೂ ಪಾಲಿಸುತ್ತಿಲ್ಲ. ವೃತ್ತಿ ಶಿಕ್ಷಣ ಪದವಿಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಮೂಲಕ ಸ್ಪಷ್ಟ ನಿರ್ದೇಶನವಿದ್ದರೂ ಖಾಸಗಿ ಕೃಷಿ ವಿಶ್ವವಿದ್ಯಾಲಯಗಳು ಈ ಆದೇಶವನ್ನು ಸ್ಪಷ್ಟವಾಗಿ ಉಲ್ಲಂಘಿಸಿರುವುದು ಕಂಡುಬರುತ್ತದೆ.

(ಮುಂದು..)

(045):04.07.2018-10.40-ಎಂವಿ-ಬಿಎನ್‌ಎಸ್

**ಶ್ರೀ ಎನ್.ರವಿಕುಮಾರ್ (ಮುಂದು...):-**

ಅಲ್ಲದೆ ಖಾಸಗಿ ವಿಶ್ವವಿದ್ಯಾನಿಲಯಗಳು ಭಾರತೀಯ ಕೃಷಿ ಸಂಶೋಧನಾ ಪರಿಷತ್ ICAR (Indian Council of Agricultural Research)ನ ಎಲ್ಲಾ ನಿಯಮಗಳನ್ನು ಉಲ್ಲಂಘಿಸಿರುವುದಾಗಿ ಮಾಹಿತಿಗಳು ಬಂದಿರುತ್ತವೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ಕೃಷಿ ವಿದ್ಯಾರ್ಥಿಗಳ ಹಿತಕಾಯುವ ದೃಷ್ಠಿಯಿಂದ ಅಗತ್ಯ ಕ್ರಮ ಕೈಗೊಳ್ಳುವಂತೆ ನಿಯಮ 330(ಎ) ಅನ್ವಯ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರು ತಾವು ನನ್ನ ಕಡೆ ನೋಡಬೇಕು.

**ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷಿ ಸಚಿವರಿಂದ ಉತ್ತರವನ್ನು ಒದಗಿಸಿಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಇದು ಬಹಳ ಗಂಭೀರವಾದ ವಿಷಯ, ಮಾನ್ಯ ಕೃಷ್ಣಭೈರೇಗೌಡರು ಕೃಷಿ ಸಚಿವರಾಗಿ ಕೆಲಸ ಮಾಡಿದ್ದಾರೆ. ದಯಮಾಡಿ ಇವತ್ತು ಈ ಸದನ ಮುಗಿಯುವುದರೊಳಗೆ ಸರ್ಕಾರ ಒಂದು ಸ್ಟೇಟ್‌ಮೆಂಟ್ ಮಾಡಿ. ನಾವು ಎಲ್ಲದಕ್ಕೂ ಕಾನೂನನ್ನು ಅಳವಡಿಸುವುದಕ್ಕೆ ಆಗುವುದಿಲ್ಲ. ಇದು ಇಡೀ ರಾಜ್ಯದ ಕೃಷಿಕರ ಬಗ್ಗೆ ಮತ್ತು ಕೃಷಿ ವಿದ್ಯಾರ್ಥಿಗಳ ಬಗ್ಗೆ ಮತ್ತು ಮಕ್ಕಳ ಬಗ್ಗೆ ನಡೆದಿದೆ. ಅದಕ್ಕೆ ಇವತ್ತು ಸದನ ಮುಗಿಯುವುದರೊಳಗೆ ಮಾಡುತ್ತೀರೋ ಅಥವಾ ನಾಳೆ ಒಂದು ಸ್ಟೇಟ್‌ಮೆಂಟ್ ಮಾಡಬೇಕು.

**ಶ್ರೀ ಕೃಷ್ಣಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೇ, ಈ ವಿಚಾರ ಕೃಷಿ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಿರುವುದು ಆಗಿದ್ದರೂ ಸಹ, ಇದಕ್ಕೆ ಸಂಬಂಧಪಟ್ಟಂತಹ ಕಾನೂನು ಆಗಿರುವುದು ಉನ್ನತ ಶಿಕ್ಷಣ ಇಲಾಖೆಯಿಂದ. ನಮ್ಮ ಉನ್ನತ ಶಿಕ್ಷಣ ಸಚಿವರು ಮತ್ತು ಕೃಷಿ ಸಚಿವರು ಇಬ್ಬರು ಸಹ ಮಾತನಾಡಿಕೊಂಡು ಇವತ್ತು ಅಥವಾ ನಾಳೆಯ ಒಳಗಡೆ ಸರ್ಕಾರದ ನಿಲುವನ್ನು ನಾವು ಪ್ರಕಟ ಮಾಡುತ್ತೇವೆ. ಇದರಲ್ಲಿ ಎರಡು ಇಲಾಖೆ ಸೇರಿದೆ. ಅವರು ಕೇಳಿರುವುದು ಕೃಷಿ ಸಚಿವರಿಗೆ. ಆದರೆ, ಪ್ರಶ್ನೆ ನೇರವಾಗಿ ಸಂಬಂಧಪಟ್ಟಿರುವುದು ಉನ್ನತ ಶಿಕ್ಷಣ ಇಲಾಖೆಗೆ. ಏಕೆಂದರೆ ಈ ಹಿಂದೆ ಕಾನೂನನ್ನು ಮಾಡಿಕೊಟ್ಟಿರುವುದು 2012ರಲ್ಲಿ ಅಂದಿನ ಸರ್ಕಾರ ಉನ್ನತ ಶಿಕ್ಷಣ ಮಂತ್ರಾಲಯದಿಂದ ಕಾನೂನನ್ನು ಮಾಡಿಕೊಟ್ಟಿದೆ. ಇದು ಸರ್ಕಾರಿ ಆದೇಶದಷ್ಟು ಸರಳವಿಲ್ಲ, ಇದಕ್ಕೆ ಕಾನೂನು ತಿದ್ದುಪಡಿಯಾಗುತ್ತದೆ. ಅದರ ಪರಿಣಾಮಗಳು ಏನು ಎಂಬುದನ್ನು ಸ್ವಲ್ಪ ವಿಚಾರ ಮಾಡಬೇಕಾಗುತ್ತದೆ. ನಾಳೆ ಕೋರ್ಟು ಕಟ್ಟಲೆ ಇವೆಲ್ಲಾ ವಿಚಾರಗಳು ಇರುವುದರಿಂದ, ಎರಡೂ ಇಲಾಖೆಗಳ ಮಂತ್ರಿಗಳು ಸಮಾಲೋಚನೆ ಮಾಡಿ, ಸ್ವಲ್ಪ ಆಲೋಚನೆ ಮಾಡಿ ಸರ್ಕಾರದ ತೀರ್ಮಾನವನ್ನು ಪ್ರಕಟ ಮಾಡುವುದು ಒಳ್ಳೆಯದು. ವಿದ್ಯಾರ್ಥಿಗಳು ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ, ತಾವು ಸಹಾನುಭೂತಿ ವ್ಯಕ್ತಪಡಿಸಿದ್ದೀರಿ, ಮಾನ್ಯ ಸದಸ್ಯರು ಸಹ ಹೇಳಿದ್ದಾರೆ. ಆದಾಗ್ಯೂ ಸಹ ಎರಡೂ ಕಡೆಯಿಂದ ವಿಚಾರ ಮಾಡಿ, ಸರ್ಕಾರದ ನಿಲುವನ್ನು ತಿಳಿಸುತ್ತೇವೆ. ಸ್ವಲ್ಪ ತಾವು ಸಮಯಾವಕಾಶ ನೀಡಬೇಕು.

**ಸಭಾಪತಿಯವರು:–** ಆಯಿತು. ಈಗ ಮಾನ್ಯ ಉನ್ನತ ಶಿಕ್ಷಣ ಸಚಿವರು ಏನನ್ನು ಹೇಳಬೇಕು ಎಂದು ಕೊಂಡಿದ್ದೀರಿ.

**ಶ್ರೀ ಜಿ.ಟಿ.ದೇವೇಗೌಡ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಕೃಷಿ ಸಚಿವರು ಮತ್ತು ನಾನು ಮಾತನಾಡಿದ್ದೇನೆ. ಆ್ಯಕ್ಟ್ ಅನ್ನು ಅಮೆಂಡ್‌ಮೆಂಟ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದಕ್ಕೆ ಎಲ್ಲಾ ತಯಾರಿ ನಡೆಸುತ್ತಿದ್ದೇವೆ. ಅದನ್ನು ಕೂಡಲೇ ಸದನದಲ್ಲಿ ತಂದು ತಿದ್ದುಪಡಿ ಮಾಡಿ, ಸಂಪೂರ್ಣವಾಗಿ ಅದನ್ನು ಕೃಷಿ ಇಲಾಖೆ ನಿರ್ವಹಿಸುವಂತಹ ಜವಾಬ್ದಾರಿಗೆ ಕ್ರಮ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಆಯಿತು, ತಾವು ಸರ್ಕಾರ ಹೇಳಿದ ಹಾಗೆ ಮಾಡಿ. ಏಕೆಂದರೆ, ಚರ್ಚೆ ಮಾಡಿ, ಕಾನೂನುಗಳನ್ನು ವಿಚಾರ ಮಾಡಿ. ಕಾನೂನು ಮತ್ತು ಸಂಸದೀಯ ಸಚಿವರು ಹೇಳಿದ ಹಾಗೆ ಒಂದು ತೀರ್ಮಾನಕ್ಕೆ ಬನ್ನಿ.

**ಶ್ರೀ ಜಿ.ಟಿ.ದೇವೇಗೌಡ:-** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ permanent solution ಮಾಡುತ್ತೇವೆ.

**ಇ) ವಿಷಯ:** ರಾಜ್ಯದಲ್ಲಿ ಪ್ರಥಮ ದರ್ಜೆ ಕಾಲೇಜುಗಳ ತರಗತಿಗಳು ಆರಂಭವಾಗಿದ್ದು, ಅತಿಥಿ ಉಪನ್ಯಾಸಕರು ನೇಮಕಗೊಳ್ಳದೆ ಆಗಿರುವ ತೊಂದರೆ ಬಗ್ಗೆ.

***

**ಶ್ರೀ ಕೆ.ಹರೀಶ್ ಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಸುಮಾರು 11 ಸಾವಿರ ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದು, ರಾಜ್ಯದಲ್ಲಿರುವ ಎಲ್ಲಾ ಪ್ರಥಮದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ಎರಡು ಸಾವಿರ ಅತಿಥಿ ಉಪನ್ಯಾಸಕರು ಇದ್ದು, ಜಿಲ್ಲೆಯಲ್ಲಿರುವ ಎಲ್ಲಾ ಪ್ರಥಮದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಥಮದರ್ಜೆ ಕಾಲೇಜುಗಳು ಜೂನ್ 25ರಂದು ಪ್ರಾರಂಭಗೊಂಡಿದ್ದು, ಇಂದಿನವರೆವಿಗೂ ಅತಿಥಿ ಉಪನ್ಯಾಸಕರು ಇಲ್ಲದೆ, ಕಾಲೇಜುಗಳಲ್ಲಿ ಉಪನ್ಯಾಸಕರು ಇಲ್ಲ ಎಂಬ ಕಾರಣಕ್ಕಾಗಿ ವಿದ್ಯಾರ್ಥಿಗಳಿಗೆ ರಜೆ ನೀಡಲಾಗುತ್ತಿದೆ. ವಿದ್ಯಾರ್ಥಿಗಳ ಪೋಷಕರು ಸರ್ಕಾರಿ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ದಾಖಲು ಮಾಡುವುದೇ ಉತ್ತಮ ಗುಣಮಟ್ಟದ ಶಿಕ್ಷಣಕ್ಕಾಗಿ. ಆದರೆ, ಶಿಕ್ಷಕರು ಇಲ್ಲದೆ, ವಿದ್ಯಾರ್ಥಿಗಳಲ್ಲಿ ಗೊಂದಲ ಉಂಟಾಗಿದ್ದು, ಮಂಗಳೂರಿನ ಕಾರ್‌ಸ್ಟ್ರೀಟ್ ಕಾಲೇಜಿನಲ್ಲಿ ಸುಮಾರು ನೂರು ಉಪನ್ಯಾಸಕರು ಇದ್ದು, ಕಾಲೇಜುಗಳಿಗೆ ದಿನಾ ರಜೆ ಹೇಳುವ ಸ್ಥಿತಿಗೆ ಬಂದಂತಾಗಿದೆ. ಆದುದರಿಂದ ಮಾನ್ಯ ಉನ್ನತ ಶಿಕ್ಷಣ ಸಚಿವರು ಗಮನ ಹರಿಸಿ, ಅತಿಥಿ ಉಪನ್ಯಾಸಕರನ್ನು ನೇಮಿಸಿ, ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡಲು ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಉನ್ನತ ಶಿಕ್ಷಣ ಸಚಿವರು ಏನಾದರೂ ಹೇಳುತ್ತೀರೋ ಹೇಗೆ?

**ಶ್ರೀ ಜಿ.ಟಿ.ದೇವೇಗೌಡ(ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವ ವಿಚಾರವಾಗಿ ನಿನ್ನೆಯ ದಿವಸ ಸರ್ಕಾರಿ ಆದೇಶ ಹೊರಡಿಸಿದ್ದೇವೆ. ಆನ್‌ಲೈನ್ ಮೂಲಕ ಒಂದು ವಾರದಲ್ಲಿ ಸಂಪೂರ್ಣವಾಗಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಕ್ರಮವನ್ನು ಕೈಗೊಂಡಿದ್ದೇವೆ.

**ಸಭಾಪತಿಯವರು:-** ಈಗ ಮಾನ್ಯ ಉನ್ನತ ಶಿಕ್ಷಣ ಸಚಿವರೇ, ತಾವು ಈ ರೀತಿ ಮಾಡಿ, ನೀವು ಆನ್‌ಲೈನ್ ಮುಖಾಂತರ ಮಾಡಿದರೆ ಈ ಹಿಂದಿನವರು ಬಹಳ ಮಂದಿ ಹೋಗಿಬಿಡುತ್ತಾರೆ. ಈ ಹಿಂದಿನವರು ಏನು ಇದ್ದಾರೆ ಅವರನ್ನು ಮುಂದುವರೆಸಿ, ಹೊಸದಾಗಿ ಉಳಿಯುವಂತಹ ಹುದ್ದೆಗಳನ್ನು ಮಾತ್ರ ಆನ್‌ಲೈನ್‌ನಲ್ಲಿ ಭರ್ತಿ ಮಾಡಿ. ಆನ್‌ಲೈನ್ ಮಾಡಿದರೆ ಹಿಂದೆ ಇದ್ದವರು ಎಲ್ಲರೂ ಹೋಗಿಬಿಡುತ್ತಾರೆ. ಆಮೇಲೆ ಹತ್ತು ವರ್ಷಗಳ ಕಾಲ ಸೇವೆ ಮಾಡಿರುವವರು ನಿಮ್ಮ ಬಳಿಗೆ ಬರುತ್ತಾರೆ. ಅದಕ್ಕೆ ಹಿಂದೆ ಇದ್ದಂತಹವರನ್ನು ಮುಂದುವರೆಸಿ, ಉಳಿಯುವಂತಹ ಹುದ್ದೆಗಳನ್ನು ಆನ್‌ಲೈನ್ ಮೂಲಕ ಮಾಡುವಂತೆ ನಿಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ನಿಯಮದ ಪ್ರಕಾರ ಕ್ರಮ ತೆಗೆದುಕೊಳ್ಳಿ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಈ ಹಿಂದೆ ಇದ್ದಂತಹ ಅತಿಥಿ ಉಪನ್ಯಾಸಕರು ಎಲ್ಲಿಗೆ ಹೋಗುವುದು.

**ಸಭಾಪತಿಯವರು:-** ಆಯಿತು, ನಾನು ಹೇಳಿದ ಮೇಲೆ ನೀವು ಏತಕ್ಕೆ ಮಾತನಾಡುತ್ತೀರಿ? ನಿಮಗೆ ಮಾತನಾಡುವ ಚಟ ಇದೆ. ನಾನು ಹೇಳಿದ್ದೇನೆ ಅದು ಮುಗಿಯಿತು, ತಾವು ಕುಳಿತುಕೊಳ್ಳಿ.

**ಶ್ರೀ ಜಿ.ಟಿ.ದೇವೇಗೌಡ:-** ಮಾನ್ಯ ಸಭಾಪತಿಯವರೇ, ಅದು ಏನಾಗಿದೆ ಎಂದರೆ, ಸುಮಾರು 10 ರಿಂದ 15 ವರ್ಷಗಳವರೆಗೆ ಅತಿಥಿ ಉಪನ್ಯಾಸಕರಾಗಿ ಅವರು ತಮ್ಮ ಸೇವೆಯನ್ನು ಸಲ್ಲಿಸಿಕೊಂಡು ಬಂದಿದ್ದಾರೆ. ನಮ್ಮ ವಿಧಾನ ಪರಿಷತ್ತಿನ ಸದಸ್ಯರುಗಳು ಕೂಡ ಮಾತನಾಡಿದ್ದಾರೆ. ಸದಸ್ಯರಾದ ಮಾನ್ಯ ಭೋಜೇಗೌಡರು ಮತ್ತಿತರರು ನನ್ನ ಜೊತೆ ಮಾತನಾಡಿದ್ದಾರೆ. ಅದು ಏನಾಗಿದೆ ಎಂದು ಹೇಳುತ್ತೇನೆ. ಕಳೆದ ವರ್ಷ ಆ consideration ಅನ್ನು ಕೈಬಿಟ್ಟಿದ್ದಾರೆ. ಅದನ್ನು ಏತಕ್ಕೆ ಬಿಟ್ಟಿದ್ದೀರಿ ಎಂದು ಕೇಳಿದರೆ, ಅವರುಗಳನ್ನೆ ನಾವು ಮತ್ತೆ permanent ಮಾಡಿಕೊಳ್ಳಬೇಕಾಗುತ್ತದೆ. ಆದುದರಿಂದ ಅವರನ್ನು ಪ್ರತಿ ವರ್ಷ ಅತಿಥಿ ಉಪನ್ಯಾಸಕರನ್ನಾಗಿ ಮಾಡಿಕೊಳ್ಳುತ್ತಾ ಬಂದಿದ್ದೇವೆ. ಆದುದರಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊಸಬರಿಗೂ ಸಹ ಅವಕಾಶ ಕೊಡಬೇಕೆಂದು, ಇದರ ಬಗ್ಗೆ ಕಳೆದ ವರ್ಷವೇ ತೀರ್ಮಾನ ತೆಗೆದುಕೊಂಡಿದ್ದಾರೆ. ಅದಕ್ಕೆ ನಾನು ಈ ಬಾರಿ consideration ಮಾಡಬೇಕೆಂದು ಹೇಳುತ್ತಿದ್ದೇನೆ. ಮತ್ತೆ ಅದನ್ನು ಚರ್ಚೆ ಮಾಡಿ, ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು**:- ಮಾನ್ಯ ಉನ್ನತ ಶಿಕ್ಷಣ ಸಚಿವರೆ ನಾನು ಹೇಳುವುದನ್ನು ಕೇಳಿ. ಈಗ ಸಚಿವರ ಕೈಯಲ್ಲಿ ಎಲ್ಲಾ ಅಧಿಕಾರ ಇರುತ್ತದೆ. ಹೋದಬಾರಿ ಮಾಡಿದವರು ಮಾನ್ಯ ಸಚಿವರೆ. ಈ ಬಾರಿ ಸಚಿವರೆ ಮಾಡಬೇಕು. ಅದರ ಬಗ್ಗೆ ಕುಳಿತುಕೊಂಡು ಚರ್ಚೆ ಮಾಡಿ ಅದನ್ನು ಮಾಡಿ.

**ಈ) ವಿಷಯ**: ಹಟ್ಟಿಗೊಲ್ಲ, ಅಡವಿಗೊಲ್ಲ ಮತ್ತು ಕಾಡುಗೊಲ್ಲ ಈ ಜನಾಂಗದವರನ್ನು ಪರಿಶಿಷ್ಠ ವರ್ಗಕ್ಕೆ ಅಂದರೆ ಎಸ್.ಟಿ.ಗೆ ಸೇರಿಸುವ ಬಗ್ಗೆ.

***

**ಶ್ರೀಮತಿ ಜಯಮ್ಮ (ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಅವಕಾಶ ನೀಡಿರುವುದಕ್ಕಾಗಿ ಧನ್ಯವಾದಗಳು. ದಿನಾಂಕ:26.12.2014ರಂದು ಮಾನ್ಯ ಸಿದ್ಧರಾಮಯ್ಯನವರ ಸರ್ಕಾರದಲ್ಲಿ ಹಟ್ಟಿಗೊಲ್ಲ, ಅಡವಿಗೊಲ್ಲ ಮತ್ತು ಕಾಡುಗೊಲ್ಲ ಈ ಗೊಲ್ಲ ಜನಾಂಗದವರನ್ನು ಪರಿಶಿಷ್ಠ ವರ್ಗಕ್ಕೆ ಅಂದರೆ ಎಸ್.ಟಿ.ಗೆ ಸೇರಿಸಲು ಸಚಿವ ಸಂಪುಟದಲ್ಲಿ ಶಿಫಾರಸ್ಸು ಮಾಡಿ, ಕೇಂದ್ರ ಸರ್ಕಾರಕ್ಕೆ ಕಳುಹಿಸಿರುತ್ತಾರೆ. ಅದಕ್ಕೆ ಕೇಂದ್ರ ಸರ್ಕಾರ ದಿನಾಂಕ: 26.02.2017ರಂದು ಕೆಲವು ವಿವರಗಳನ್ನು ಕೇಳಿ, ರಾಜ್ಯ ಸರ್ಕಾರಕ್ಕೆ ಪತ್ರವನ್ನು ಬರೆದಿರುತ್ತಾರೆ. ರಾಜ್ಯ ಸರ್ಕಾರ ಇದುವರೆವಿಗೂ ಸಹ ಕೇಂದ್ರ ಸರ್ಕಾರಕ್ಕೆ ಯಾವುದೇ ವಿವರವನ್ನು ಕೊಟ್ಟಿರುವುದಿಲ್ಲ. ಆದುದರಿಂದ ಈ ಹಿಂದುಳಿದ ವರ್ಗದ ಜನರ ಹಿತವನ್ನು ಕಾಪಾಡಲು ಸರ್ಕಾರ ಸೂಕ್ತ ಶಿಫಾರಸ್ಸಿನೊಂದಿಗೆ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ತಮ್ಮ ಮುಖಾಂತರ ಸಮಾಜ ಕಲ್ಯಾಣ ಸಚಿವರ ಗಮನಕ್ಕೆ ತರಬಯಸುತ್ತೇನೆ.

**ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಸಮಾಜ ಕಲ್ಯಾಣ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಶ್ರೀಮತಿ ಜಯಮ್ಮ**:- ಮಾನ್ಯ ಸಭಾಪತಿಯವರೇ, ಈ ಸಂದರ್ಭ ಸಿಕ್ಕಿರುವುದರಿಂದ ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ನೀಡಿ.

**ಸಭಾಪತಿಯವರು**:- ಒಂದು ನಿಮಿಷ ನಾನು ಹೇಳುವುದನ್ನು ತಾವು ಕೇಳಿ. ಈಗ ಒಬ್ಬರಿಗೆ ಅವಕಾಶ ಕೊಟ್ಟರೆ ಎಲ್ಲರಿಗೂ ಕೊಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಜಯಮ್ಮ:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಈ ಹಟ್ಟಿಗೊಲ್ಲ ಮತ್ತು ಕಾಡುಗೊಲ್ಲ ಜನರು ಯಾವ ರೀತಿ ಇದ್ದಾರೆ, ಅವರ ಸ್ಥಿತಿಗತಿ ಏನು? ಅವರನ್ನು ಎಸ್.ಟಿ. ವರ್ಗಕ್ಕೆ ಸೇರಿಸಬೇಕೆಂದು ಏನು ಶಿಫಾರಸ್ಸು ಮಾಡಿದ್ದಾರೆ ಅದನ್ನು ಸದಸ್ಯರ ಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಕೃಷ್ಣಬೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಶ್ರೀಮತಿ ಜಯಮ್ಮನವರ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಒದಗಿಸುತ್ತಾರೆ. ಆಗ ಅವರು ತಮ್ಮ ಉಪ ಪ್ರಶ್ನೆಯನ್ನು ಕೇಳಬಹುದು.

**ಸಭಾಪತಿಯವರು:-** ಈಗ ಸದನದ ಮಾನ್ಯ ಸದಸ್ಯರ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ನಮ್ಮ ಸದನದಲ್ಲಿ ಕಡ್ಡಾಯವಾಗಿ ಕೆಲವು ಸಚಿವರನ್ನು ಮತ್ತು ಅಧಿಕಾರಿಗಳನ್ನು ನೇಮಿಸಿರುತ್ತಾರೆ. ಒಂದೊಂದು ಬಾರಿ ಅಧಿಕಾರಿಗಳು ಇರುವುದಿಲ್ಲ, ಆದುದರಿಂದ ಗೊತ್ತಾಗುವುದಿಲ್ಲ. ಬಹಳ ಸಲ ಸದನದಲ್ಲಿ ಚರ್ಚೆಯಾಗಿ ಯಾರು ಅಧಿಕಾರಿಗಳು ಇರುತ್ತಾರೆ ಎಂದು ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಅದಕ್ಕೆ ನಾವು ಏನು ಪದ್ಧತಿ ಮಾಡಿದ್ದೇವೆ ಎಂದರೆ, ಈ ಸದನದಲ್ಲಿ ಕಡ್ಡಾಯವಾಗಿ ಇರುವಂತಹ ಸಚಿವರು ಮತ್ತು ಅಧಿಕಾರಿಗಳ ಹೆಸರನ್ನು ಹೇಳುತ್ತೇನೆ ಮಾನ್ಯ ಸದಸ್ಯರು ಅದನ್ನು ನೆನಪಿಟ್ಟುಕೊಳ್ಳುವುದು.

**ಶ್ರೀ ಐವನ್ ಡಿ'ಸೋಜಾ :-** ಮಾನ್ಯ ಸಭಾಪತಿಯವರೇ, ಇನ್ನು ಒಂದು 330(ಎ) ಬಾಕಿ ಇದೆ.

**ಉ) ವಿಷಯ:** ಕೇರಳದ ಕೊಚ್ಚಿನ್‌ನಿಂದ ವಿದ್ಯಾಭ್ಯಾಸಕ್ಕೆ ಬಂದಿದ್ದ, ಯುವತಿಯನ್ನು ಲವ್ ಜಿಹಾದ್ ಹೆಸರಿನಲ್ಲಿ ಬಳಸಿಕೊಂಡಿರುವ ಬೆಂಗಳೂರಿನ ಉದ್ಯಮಿ ನಜೀರ್ ಖಾನ್ ಎಂಬಾತನನ್ನು ಪೋಲೀಸರು ಬಂಧಿಸಿರುವ ಬಗ್ಗೆ.

***

**ಡಾ.ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೇರಳದ ಕೊಚ್ಚಿನಿಂದ ವಿದ್ಯಾಭ್ಯಾಸಕ್ಕೆ ಬಂದಿದ್ದ, ಯುವತಿಯೊಬ್ಬಳನ್ನು, ಲವ್ ಜಿಹಾದ್ ಹೆಸರಿನಲ್ಲಿ ಬಳಸಿಕೊಂಡಿದ್ದ, ಎನ್ನಲಾದ ಬೆಂಗಳೂರಿನ ಉದ್ಯಮಿ ನಜೀರ್ ಖಾನ್ ಎಂಬಾತನನ್ನು ಪೋಲೀಸರು ಬಂಧಿಸಿದ್ದು. ಈತ ಯುವತಿಯರನ್ನು ಪರಿಚಯ ಮಾಡಿಕೊಂಡು ಮತಾಂತರ ಮಾಡಿ, ಆಕೆಯ ಮೇಲೆ ಅತ್ಯಾಚಾರ ಎಸಗಿದ್ದು ಅಲ್ಲದೆ, ಆಕೆಯನ್ನು ನಜೀರ್ ಖಾನ್, ಅರಬ್ ದೇಶಕ್ಕೆ ಕೊಂಡೊಯ್ದು, ಅರಬ್ ದೇಶದ ಶೇಕ್‌ಗಳಿಗೆ ಮಾರಾಟ ಮಾಡಿದ ಸುದ್ದಿ ಮಾಧ್ಯಮಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ವರದಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(ಮುಂದು...)**

(046) 04.07.2018 10.50 ವೈಎಲ್-ಜಿಆರ್

ಡಾ|| ತೇಜಸ್ವಿನಿ ಗೌಡ(ಮುಂದು):-

ಈ ಪ್ರಕರಣದಲ್ಲಿ ಅತ್ಯಂತ ದಿಗ್ಭ್ರಮೆ ಮತ್ತು ಆತಂಕಕಾರಿ ವಿಚಾರವೆಂದರೆ, ಈ ಅಮಾಯಕ ಹೆಣ್ಣು ಮಕ್ಕಳನ್ನು ಸೆಳೆಯಲು ನಕಲಿ ಹೆಸರಿನಲ್ಲಿ ಫೇಸ್ ಬುಕ್ ಖಾತೆಯನ್ನು ತೆರೆದು, ಬಡ ಹೆಣ್ಣು ಮಕ್ಕಳನ್ನು ಸೆಳೆದ ಆರೋಪಿಯ ಸ್ಥಾನದಲ್ಲಿ ವಾಣಿಜ್ಯ ತೆರಿಗೆಯ ಹಿರಿಯ ಜಿಲ್ಲಾಧಿಕಾರಿಯಾದ Irshadulla Khan ಇವರ ಪತ್ನಿ ಶಾಮೀಲಾಗಿದ್ದಾರೆಂದು ಮಧ್ಯಮಗಳಲ್ಲಿ ಅವರ ಹೆಸರುಗಳನ್ನು ಸಹ ಪ್ರಕಟಿಸಿದೆ ಮತ್ತು ಅವರ ಮನೆಗಳ ಮೇಲೆ ರಾಷ್ಟ್ರೀಯ ತನಿಖಾ ದಳ ದಾಳಿ ಮಾಡಿದ್ದೆ. ಆಪಾದಿತರಿಂದಲೇ ಲ್ಯಾಪ್‌ಟಾಪ್‌ಗಳು ಮತ್ತು 12 ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ರಾಜ್ಯದಲ್ಲಿ ಅಮಾಯಕ ಹೆಣ್ಣು ಮಕ್ಕಳನ್ನು ಅದರಲ್ಲಿಯೂ ಹಿಂದೂ ಧರ್ಮದ ಬಡ ಹೆಣ್ಣು ಮಕ್ಕಳನ್ನು 'Love Jihad' ಹೆಸರಿನಲ್ಲಿ ವಂಚನೆಗೆ ಒಳಪಡಿಸಿದ್ದಲ್ಲದೇ ಅವರನ್ನು ವಂಚಿಸಿ ಅತ್ಯಾಚಾರ ಮಾಡುವುದು ಹಾಗೂ ವಿದೇಶಕ್ಕೆ ಮಾರಾಟ ಮಾಡುವಂತಹ ಸನ್ನಿವೇಶಗಳು ರಾಜ್ಯದಲ್ಲಿ ಬಹಳಷ್ಟು ನಡೆಯುತ್ತಿದ್ದು, ಅನೇಕ ಹೆಣ್ಣು ಮಕ್ಕಳ ಕಣ್ಮರೆ ಆತಂಕಕಾರಿ ವಿಚಾರವಾಗಿದೆ. ಈ ಕೃತ್ಯಕ್ಕೆ ಕೆಲವು ಸಂಘಟನೆಗಳಿಗೆ ವಿದೇಶದ ಆರ್ಥಿಕ ನೆರವು ಸಿಕ್ಕಿರುವ ವರದಿ ಸಹ ಬಂದಿರುತ್ತದೆ. ಆದ್ದರಿಂದ ಮೇಲಿನ ಪ್ರಕರಣವು ಸೇರಿದಂತೆ ರಾಜ್ಯದ ಎಲ್ಲಾ 'Love Jihad' ಪ್ರಕರಣವನ್ನು ಕೂಲಂಕಷವಾಗಿ ಪರಿಶೀಲನೆ ನಡೆಸಿ, ತಪ್ಪಿತಸ್ಥರ ಮೇಲೆ ಅಗತ್ಯ ಕ್ರಮವನ್ನು ಕೈಗೊಂಡು, ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಗೃಹ ಇಲಾಖೆಗೆ ಸೂಚನೆ ನೀಡಿ, ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಆಗ್ರಹಿಸುತ್ತೇನೆ.

**ಡಾ|| ಜಯಮಾಲ ರಾಮಚಂದ್ರ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇದು ಸೂಕ್ಷ್ಮ ವಿಚಾರವಾಗಿದ್ದು, ಸಂಬಂಧಪಟ್ಟಂತಹ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರಾದ ಡಾ|| ಜಿ.ಪರಮೇಶ್ವರ್‌ರವರಿಂದ ಉತ್ತರವನ್ನು ತರಿಸಿಕೊಡುತ್ತೇನೆ.

**ಸಭಾಪತಿಯವರು:-** ಈ ದಿನ ಸದನದಲ್ಲಿ ಕಡ್ಡಾಯವಾಗಿ ಹಾಜರಾಗಿರಬೇಕಾದ ಸಚಿವರುಗಳೆಂದರೆ ಮಾನ್ಯ ಆರ್.ವಿ.ದೇಶಪಾಂಡೆ: ಕಂದಾಯ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು, ಮಾನ್ಯ ಜಿ.ಟಿ.ದೇವೇಗೌಡ: ಉನ್ನತ ಶಿಕ್ಷಣ ಸಚಿವರು, ಮಾನ್ಯ ಕೆ.ಜೆ.ಜಾರ್ಜ್: ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಕ್ಕರೆ ಹಾಗೂ ಐ.ಟಿ ಮತ್ತು ಬಿ.ಟಿ., ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು, ಮಾನ್ಯ ಡಿ.ಸಿ.ತಮ್ಮಣ್ಣ: ಸಾರಿಗೆ ಸಚಿವರು, ಮಾನ್ಯ ಕೃಷ್ಣಭೈರೇಗೌಡ:

“ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು, ಮಾನ್ಯ ಎನ್.ಹೆಚ್.ಶಿವಶಂಕರರೆಡ್ಡಿ: ಕೃಷಿ ಸಚಿವರು, ಮಾನ್ಯ ಎಸ್.ಆರ್.ಶ್ರೀನಿವಾಸ್(ವಾಸು): ಸಣ್ಣ ಕೈಗಾರಿಕೆಗಳ ಸಚಿವರು, ಮಾನ್ಯ ಎನ್.ಮಹೇಶ್: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಮಾನ್ಯ ವೆಂಕಟರಮಣಪ್ಪ: ಕಾರ್ಮಿಕ ಸಚಿವರು, ಮಾನ್ಯ ರಾಜಶೇಖರ್ ಬಸವರಾಜ ಪಾಟೀಲ್: ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು, ಮಾನ್ಯ ಸಿ.ಪುಟ್ಟರಂಗಶೆಟ್ಟಿ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು, ಮಾನ್ಯ ಆರ್.ಶಂಕರ್: ಅರಣ್ಯ ಇಲಾಖಾ ಸಚಿವರು, ಇವತ್ತು ಇವರುಗಳೆಲ್ಲರೂ ಸದನದ ಸಚಿವ ಸ್ಥಾನದಲ್ಲಿದ್ದಾರೆ.

ಹಾಗೆಯೇ ಇಲಾಖಾಧಿಕಾರಿಗಳಾದ ಶ್ರೀ ಗೌರವ ಗುಪ್ತ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ವಿಜ್ಞಾನ, ಶ್ರೀ ರಾಜೇಂದ್ರ ಕುಮಾರ್ ಕಠಾರಿಯ, ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರು ಬೆಳಗ್ಗೆ ಹಾಜರಿದ್ದು, ಮಧ್ಯಾಹ್ನದ ನಂತರ ಶ್ರೀ ಗಂಗಾಧರ್ ಆಚಾರ್ಯ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಶ್ರೀಮತಿ ಚೈತ್ರ ವಿ, ಆಯುಕ್ತರು, ಕಾರ್ಮಿಕ ಇಲಾಖೆ, ಉಳಿದಂಥವರು ಖಾಯಂ ಆಗಿ ವಿಧಾನ ಪರಿಷತ್ತಿನ ಅಧಿವೇಶನದ ಪ್ರಾರಂಭದಿಂದ ಮುಕ್ತಾಯವಾಗುವವರೆಗೂ ಉಪಸ್ಥಿತಿಯಲ್ಲಿರಬೇಕಾದ ಅಧಿಕಾರಿಗಳೆಂದರೆ ಸರ್ಕಾರದ ಜಂಟಿ ಕಾರ್ಯದರ್ಶಿ, ಕಂದಾಯ ಇಲಾಖೆ, ಸರ್ಕಾರದ ಉಪ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಸರ್ಕಾರದ ಉಪ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಈ ಅಧಿಕಾರಿಗಳು ಸದನದಲ್ಲಿರಬೇಕೆಂದು ಈ ಮೂಲಕ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಸಭಾನಾಯಕರು ಸದನದಲ್ಲಿ ಹಾಜರಿರತಕ್ಕ ಹೊಸ ಸಚಿವರ ಪರಿಚಯವನ್ನು ಮಾಡಿಕೊಡಬೇಕು.

**ಡಾ|| ಜಯಮಾಲ್ಲ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ನಾನು ಸದನಕ್ಕೆ ಆಗಮಿಸಿರತಕ್ಕಂಥ ಹೊಸ ಸಚಿವರ ಪರಿಚಯವನ್ನು ಮಾಡಿಕೊಡುತ್ತಿದ್ದೇನೆ. ಮಾನ್ಯ ಹೆಚ್.ಡಿ.ರೇವಣ್ಣ: ಲೋಕೋಪಯೋಗಿ ಸಚಿವರು ಸದನದಲ್ಲಿ ಹಾಜರಿದ್ದಾರೆ.

**ಶ್ರೀ ಹೆಚ್.ಡಿ.ರೇವಣ್ಣ(ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಲೋಕೋಪಯೋಗಿ ಇಲಾಖೆಯ ಸಚಿವನಾಗಿ ಈ ಸದನಕ್ಕೆ ಹಾಜರಾಗಿದ್ದೇನೆ. ತಮ್ಮೆಲ್ಲರಿಗೂ ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**2. ಸಚಿವರ ಪರಿಚಯ**

**ಡಾ|| ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಜಿ.ಟಿ.ದೇವೇಗೌಡ, ಉನ್ನತ ಶಿಕ್ಷಣ ಸಚಿವರು, ಮಾನ್ಯ ಎಸ್.ಆರ್.ಶ್ರೀನಿವಾಸ್, ಸಣ್ಣ ಕೈಗಾರಿಕೆ ಸಚಿವರು ಸದನಕ್ಕೆ ಆಗಮಿಸಿದ್ದಾರೆ.

**ಶ್ರೀ ಎಸ್.ಆರ್.ಶ್ರೀನಿವಾಸ್(ವಾಸು,) (ಸಣ್ಣ ಕೈಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಸಣ್ಣ ಕೈಗಾರಿಕೆ ಸಚಿವನಾಗಿ ನಾನು ಈ ಸದನಕ್ಕೆ ಆಗಮಿಸಿದ್ದೇನೆ.

**ಡಾ|| ಜಯಮಾವಲ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಎನ್.ಮಹೇಶ್, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಸದನಕ್ಕೆ ಆಗಮಿಸಿದ್ದಾರೆ.

**ಶ್ರೀ ಎನ್.ಮಹೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಮೊದಲ ಬಾರಿ ಎಂ.ಎಲ್.ಎ., ಆಗಿ ಸಚಿವನಾಗಿದ್ದೇನೆ. ವಿಶೇಷತೆಯೆಂದರೆ, Congress and JDS ಸಮ್ಮಿಶ್ರ ಸರ್ಕಾರದಲ್ಲಿ ನಾನೊಬ್ಬನೇ B.S.P., Member. ಇದು ಕಾಂಗ್ರೆಸ್, ಜೆಡಿಎಸ್ ಸಮ್ಮಿಶ್ರ ಸರ್ಕಾರವಾಗಿದೆ.

**ಶ್ರೀ ಕೃಷ್ಣಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಹಾಜರಿರುವವರನ್ನು ಮಾನ್ಯ ಎನ್.ಮಹೇಶ್‌ರವರಿಗೆ ಪರಿಚಯ ಮಾಡಿಕೊಡಲು ಬಯಸುತ್ತೇನೆ. ಈ ಸದನ ಇರುವುದೇ ಬಹುತೇಕ ಶಿಕ್ಷಕರಿಗಾಗಿ ಮತ್ತು ಸಚಿವರಿಗಾಗಿ. ಒಂದು ರೀತಿಯಲ್ಲಿ ಈ ಸದನ ಇರುವುದೇ ಸಚಿವರಿಗಾಗಿ ಎಂದು ತಿಳಿದುಕೊಳ್ಳಲಿ. ವಿಧಾನ ಪರಿಷತ್ತಿನಲ್ಲಿಯೇ ನಿಮ್ಮ fulltime duty ಇರುವುದು. ಮುಂದೆ ಮಾನ್ಯ ಸಚಿವರಿಗೆ ಅದೆಲ್ಲಾ ಗೊತ್ತಾಗುತ್ತದೆ. ವಿರೋಧ ಪಕ್ಷದಲ್ಲಿರುವವರೆಲ್ಲರೂ ನಿಮ್ಮ ಮುಖವನ್ನೇ ನೋಡುತ್ತಿರುತ್ತಾರೆ.

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ಅವರನ್ನೇ ಲೆಕ್ಕಕ್ಕೆ ಇಟ್ಟುಕೊಂಡಿಲ್ಲ.

**ಸಭಾಪತಿಯವರು:-** ಹೌದು ಮಾನ್ಯ ಸಚಿವರೆ, ಅವರ ಪರಿಸ್ಥಿತಿ ಬಹಳ ಗಂಭೀರವಾಗಿರುತ್ತದೆ.

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವೆಲ್ಲ ಭಾವಿಸುತ್ತಿರುವುದೇನೆಂದರೆ, ಎಲ್ಲಾ ಶಿಕ್ಷಣ ಇಲಾಖೆಯು ಒಂದೇ ಇಲಾಖೆಯಾಗಿ ತಾವು ಇಲಾಖೆಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರಾಗುತ್ತೀರೋ ಹೇಗೆ ಎಂದುಕೊಂಡಿದ್ದೇವೆ. ಆದರೆ, ಮಾನ್ಯ ಮುಖ್ಯಮಂತ್ರಿಯವರು ಇಬ್ಬರಿಗೆ ಹಂಚಿಕೆ ಮಾಡಿದ್ದಾರೆ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಎನ್.ಮಹೇಶ್‌ರವರಿಗೆ ಸಹಕಾರವಾಗುವುದಕ್ಕೆ ಮಾನ್ಯ ಜಿ.ಟಿ.ದೇವೇಗೌಡರಿದ್ದಾರೆ. ಆದರೆ, ಅವರ majority duty ಇಲ್ಲೇ. ನಿಮಗೆ ಮಾತ್ರ fulltime duty ಇರುತ್ತದೆ ಎಂದೇ ತಿಳಿದುಕೊಳ್ಳಿ.

**3.ಗಮನ ಸೆಳೆಯುವ ಸೂಚನೆ**

**ಅ)ವಿಷಯ:-** ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ 169ರ ಗುರುಪುರ ಸೇತುವೆ ತೀರಾ ದುಸ್ಥಿತಿಯಲ್ಲಿದ್ದು, 40 ವರ್ಷಗಳಿಂದ ನಾಲ್ಕು ಪಥ ರಸ್ತೆಯಾಗದೇ ಭೂಮಾಲೀಕರಿಗೆ, ಜನಸಾಮಾನ್ಯರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ.

\- - - -

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ 169ರ ಗುರುಪುರ ಸೇತುವೆ ತೀರಾ ದುಸ್ಥಿತಿಯಲ್ಲಿದ್ದು, 40 ವರ್ಷಗಳಿಂದ ನಾಲ್ಕು ಪಥ ರಸ್ತೆಯಾಗದೇ ಭೂಮಾಲೀಕರಿಗೆ, ಜನಸಾಮಾನ್ಯರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಹೆಚ್.ಡಿ.ರೇವಣ್ಣ(ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ,

**(ಸಚಿವರ ಹೇಳಿಕೆಯನ್ನು ಲಗತ್ತಿಸಿದೆ.)**

**(ಮುಂದು)** . . .

(047)/04.07.2018/11.00/ಎಸ್‌ಕೆ-ಜಿಆರ್

**ಶ್ರೀ ಹೆಚ್ ಡಿ. ರೇವಣ್ಣ (ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಕೇಂದ್ರ ಭೂ ಸಾರಿಗೆ ಇಲಾಖೆಗೆ ಸುಮಾರು 38.00 ಕೋಟಿ ರೂಪಾಯಿ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೇವೆ. ಅಲ್ಲಿಂದ ಅನುಮೋದನೆ ಬಂದ ತಕ್ಷಣ ಟೆಂಡರ್ ಕರೆದು, ಕೆಲಸವನ್ನು ಮಾಡಿಸುತ್ತೇನೆ. ಎರಡನೆಯದಾಗಿ, ಎಂ.ಡಿ.ಆರ್., ರಸ್ತೆ ಇರುವುದರಿಂದ ಇದಕ್ಕೆ ಹಣಕಾಸಿನ ಬದ್ಧತೆಯ ಮೇಲೆ ಈ ಕೆಲಸವನ್ನು ಪ್ರಮಾಣಿಕವಾಗಿ ಪ್ರಯತ್ನವನ್ನು ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ಒಂದು ಗಮನ ಸೆಳೆಯುವ ಸೂಚನೆಯನ್ನು ಏತಕ್ಕೆ ಮಂಡನೆ ಮಾಡಿದೆ ಎಂದರೆ ಇದು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಿದ್ದಲ್ಲ. ಇಡೀ ರಾಜ್ಯದಲ್ಲಿ ಈ ತರಹ ಸಮಸ್ಯೆಗಳಿವೆ. ನಮ್ಮ ಜಿಲ್ಲೆಯಲ್ಲಿ ಕಳೆದ ಎರಡು ತಿಂಗಳುಗಳಿಂದ ಸುರಿದಂತಹ ಮಳೆಯಿಂದ ಜಿಲ್ಲೆಯಲ್ಲಿ ನಾಲ್ಕು ಸೇತುವೆಗಳು ಕುಸಿದು ಬಿದ್ದಿವೆ. ಈಗಾಗಲೇ ಎರಡು ಸೇತುವೆಗಳು ಎಂದರೆ ಗುರುಪುರ ಸೇತುವೆ. ಈ ಭಾಗದ ಜನರಿಗೆ ಸಂಚಾರ ಮಾಡುವುದಕ್ಕೆ ಸಾಧ್ಯವಿಲ್ಲ. ಈಗಾಗಲೇ ಜನರು ಸಂಚಾರ ಮಾಡುವುದನ್ನು ನಿಲ್ಲಿಸಿದ್ದಾರೆ. ಜನರು ಬದಲಿ ರಸ್ತೆಯನ್ನು ನೋಡುತ್ತಿದ್ದಾರೆ. ಮೊನ್ನೆ ಮುಲ್ಲಾರಪಟ್ನದಲ್ಲಿ ಸೇತುವೆ ಮಳೆಗೆ ಕುಸಿದು ಬಿದ್ದು, ಅದು ನಲವತ್ತು ವರ್ಷವಾಗಿದೆ. ಅದು ಲೋಕೋಪಯೋಗಿ ಇಲಾಖೆಯವರು ಮಾಡಿರುವಂಥದ್ದು. ಅದು ಹೇಗೆ ಕುಸಿದು ಬಿತ್ತು ಎಂದು ಕೇಳಿದರೆ, ಇವತ್ತಿನವರೆಗೂ ಲೋಕೋಪಯೋಗಿ ಇಲಾಖೆಯವರು ಉತ್ತರ ಕೊಡುವುದಕ್ಕೆ ತಯಾರಿಲ್ಲ. ಕಾರಣವೇನೆಂದರೆ, ನಾವು ಕೋಸ್ಟಲ್ ಬೆಲ್ಟ್‌ನಲ್ಲಿ ಇರುವಂತಹವರು. ನದಿಗಳು ಮತ್ತು ಸಮುದ್ರಗಳು ಹತ್ತಿರ ಹತ್ತಿರವಿದೆ. ನದಿಯ ತೀರದಲ್ಲಿ ಹೋಗಬೇಕು ಅಥವಾ ಸಮುದ್ರದ ಬದಿಯಲ್ಲಿಯೇ ನಾವು ಹೋಗಬೇಕು. ಎಲ್ಲಿಯವರೆಗೂ ಎಂದು ಹೇಳಿದರೆ, ಇವರು ವೈಂಗೆ (ಮರಳು) ತೆಗೆಯುತ್ತಾರೆ. ವೈಂಗೆ (ಮರಳು) ತೆಗೆಯುವಂತಹ ನದಿಗಳಿಂದ, ಆ ನದಿಯ ವೈಂಗೆ (ಮರಳು) ತೆಗೆದು ತೆಗೆದು ಸೇತುವೆಯ ಬುಡದವರೆಗೆ ಬಂದಿದೆ. ಆ ಸಾಂದ್ರತೆ ಕಮ್ಮಿಯಾಗಿದೆ ಎಂದು ಅವರು ಹೇಳುತ್ತಾರೆ. ಸುಮಾರು ನಲವತ್ತು ವರ್ಷದ ಹಿಂದೆ ಹಾಕಿದಂತಹ ಬುನಾದಿ ಅದರ ಸಾಂದ್ರತೆ ಕಡಿಮೆಯಾಗಿದೆ. Weight bearing capacity ಕಡಿಮೆಯಾಗಿ ಅದು ಬಿರುಕು ಬಿಟ್ಟು, ಒಂದು ದೊಡ್ಡದಾದಂತಹ ಅನಾಹುತ ಆಗಿದೆ. ಇದು ಏತಕ್ಕೆ ಆಗುತ್ತದೆ ಎಂಬುದರ ಬಗ್ಗೆ ಮಾನ್ಯ ಸಚಿವರಿಗೆ ಕೇಳುವುದಕ್ಕೆ ಬಯಸುತ್ತೇನೆ. ಮುಲ್ಲಾರಪಟ್ನ ಸೇತುವೆ ಕುಸಿದು ಸುಮಾರು ಹತ್ತು-ಹದಿನೈದು ದಿವಸವಾಯಿತು. ಇದುವರೆಗೂ ರಿಪೋರ್ಟ್ ಬಂದಿದೆಯೇ ಎಂದು ನಾನು ಕೇಳಿದರೆ, ನಿಮ್ಮಲ್ಲಿ ಉತ್ತರವಿಲ್ಲ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಅಧಿಕಾರಿಗಳು ಉತ್ತರ ಕೊಡಲಿ ಎಂದು ನಾನು ಕೇಳುತ್ತಿಲ್ಲ. They are just avoiding. ಇದು ಏಕೆ ಮಾಡುತ್ತಿದ್ದಾರೆಂಬುದನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಇದಕ್ಕೆ ತಾವು ಉತ್ತರ ಕೊಡಬೇಕಾಗುತ್ತದೆ. ನಾನು ಕೇಳಿರುವಂಥದ್ದು ಎನ್‌ಹೆಚ್-169. ಈಗ 1923 ನೇ ಇಸವಿಯಲ್ಲಿ ಬ್ರಿಟಿಷರು ಬ್ರಿಡ್ಜ್‌ನ್ನು ಕಟ್ಟಿದ್ದರು. ಅದು ಸ್ಟೀಲ್ ಬ್ರಿಡ್ಜ್. ಅವರು ಕಟ್ಟಿರುವಂತಹ ಸೇತುವೆ, ಅಂದಿನ ಕಾಲದಲ್ಲಿ ಕುದುರೆಯ ಮೇಲೆ ಹೋಗಿ ಕಪ್ಪಕಾಣಿಕೆ ಕೊಡುವುದಕ್ಕೆ ಕಟ್ಟಿರುವಂತಹ ಸೇತುವೆ. 1923 ನೇ ಇಸವಿಯಲ್ಲಿ ಕಟ್ಟಿರುವಂತಹ ಬ್ರಿಡ್ಜ್‌ಗೆ ಅವರ ಆಯಸ್ಸಿನ ಲೆಕ್ಕ ಪ್ರಕಾರ ಬರೀ ಐವತ್ತು ವರ್ಷ. Now, we are in the year 2018. That means, already 45 years have lapsed after the guarantee period

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

of the bridge. ನೀವು ನಲವತ್ತೈದು ವರ್ಷದಲ್ಲಿ ಮೂರು ಸಲ ಬ್ರಿಡ್ಜ್‌ಗೆ paint ಕೊಟ್ಟಿದ್ದೀರಿ. ಅದು ಯಾವುದು ಎಂದರೆ silver paint ಕೊಡುತ್ತಾರಲ್ಲ ಅದು. ಅದು ಸ್ಟೀಲ್ ಬ್ರಿಡ್ಜ್. ಬ್ರಿಡ್ಜ್‌ನ ಬುಡಕ್ಕೆ ಹೋಗಿಲ್ಲ. ಅದರ ಕೆಳಗಡೆ, ಮೇಲಗಡೆ ಎಲ್ಲಾ ಕಡೆ ಸ್ಯಾಂಡ್ ತೆಗೆಯುವಂತಹದ್ದು ಲೆಕ್ಕವೇ ಇಲ್ಲ. ಇವತ್ತು ಆ ಸೇತುವೆ ಬೀಳುತ್ತದೆಂದರೆ ಎಂದರೆ ನೀವು ಸ್ಯಾಂಡ್ ತೆಗೆಯಬೇಡಿ, ಅಲ್ಲಿಗೆ ಹೋಗಬಿಡಿ ಎಂದು ನೀವು ತಡೆ ಹಾಕಿದ್ದೀರಿ.

**ಸಭಾಪತಿಯವರು**:- ಮಾನ್ಯ ಐವನ್ ಡಿ'ಸೋಜಾರವರೇ ಪ್ರಶ್ನೆಯನ್ನು ಕೇಳಿ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, I want to tell two points.

**ಸಭಾಪತಿಯವರು**:- ನೀವು ಭಾಷಣ ಮಾಡಬೇಡಿ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, ಈಗ ಸುಮಾರು 43 ವರ್ಷಗಳಿಂದ ಈ ಸೇತುವೆ ರಿಪೇರಿಯಾಗಿಲ್ಲ. 2000ನೇ ವರ್ಷದಲ್ಲಿ ರಾಜ್ಯ ಹೆದ್ದಾರಿ ಇದ್ದದ್ದನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಣೆ ಮಾಡಿದ್ದೀರಿ. ಇವತ್ತು ಹದಿನೆಂಟು ವರ್ಷವಾಯಿತು. ರಾಷ್ಟ್ರೀಯ ಹೆದ್ದಾರಿಯನ್ನು ತೆಗೆದು ರಾಜ್ಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಯನ್ನು ತೆಗೆದು ರಾಷ್ಟ್ರೀಯ ಹೆದ್ದಾರಿ ಎಂದು ಬೋರ್ಡ್‌ನ್ನು ಬದಲಾವಣೆಯನ್ನು ಮಾಡಿದ್ದು ಬಿಟ್ಟರೆ, ಈ ರಸ್ತೆಗೆ ಒಂದು ರೂಪಾಯಿಯನ್ನು ಖರ್ಚು ಮಾಡಿಲ್ಲ. Initially, the DPR was for Rs.17 crores. ಈಗ revised DPR ಎಷ್ಟು? ಸುಮಾರು 38 ಕೋಟಿ ರೂಪಾಯಿಗಳು. ಸುಮಾರು 18 ಕೋಟಿ ರೂಪಾಯಿಗಳಲ್ಲಿ ರಸ್ತೆಯನ್ನು ನಿರ್ಮಾಣ ಮಾಡಬೇಕಾಗಿತ್ತು. ಪ್ರತಿ ವರ್ಷ DPR revise ಮಾಡುತ್ತಾ ಹೋಗುತ್ತೀರಿ. Now, it is at Rs.38 crores. ಯಾರಿಗೆ ನಷ್ಟವಾಯಿತು. ಜನರು ಓಡಾಡುವುದಕ್ಕೆ ರಸ್ತೆ ಇಲ್ಲ. ಕಳೆದ ಹದಿನೈದು ದಿವಸಗಳಿಂದ ಈ ರಸ್ತೆಯನ್ನು ಸಾರ್ವಜನಿಕರು ಬಂದ್ ಮಾಡಿದ್ದಾರೆ. ಬದಲಿ ರಸ್ತೆಗೆ ಹೋಗಿ ಎಂದು ನೀವು ಹೇಳುತ್ತೀರಿ. ಈ ರಸ್ತೆಯನ್ನು ನಿರ್ಮಾಣ ಮಾಡುವುದಕ್ಕೆ ನೀರಿನ ಒಳಹರಿವು ಜಾಸ್ತಿ ಇದೆ. ಹಾಗಾಗಿ ಅಲ್ಲಿ ಫೌಂಡೇಷನ್ ಹಾಕುವುದಕ್ಕೆ ಹಾಗೂ bypass ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಸಚಿವರೇ ಸುಮಾರು 18 ವರ್ಷಗಳ ಕಾಲ ಒಂದು ರಸ್ತೆಯ ಗೋಜಿಗೆ ಹೋಗದೇ. ಆ ರಸ್ತೆಯ ನಿರ್ಮಾಣಕ್ಕೆ ಏನು ಪ್ರಯತ್ನವನ್ನೆ ಮಾಡದೇ ಇವತ್ತು ಆ ರಸ್ತೆಯಲ್ಲಿ ಹೋಗದೇ ನಮಗೆ ಬದಲಿ ರಸ್ತೆಗೆ ಹೋಗಿ ಎಂದು ಹೇಳಿದರೆ ಸಾರ್ವಜನಿಕರು ಹೇಗೆ ಹೋಗಬೇಕು. ಮಾನ್ಯ ಸಭಾಪತಿಯವರೇ, ಸುಮಾರು 47 ಕಿಲೋ ಮೀಟರ್ ರಸ್ತೆ ಇದೆ. ಮಂಗಳೂರು ಸಿಟಿಯಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಂತೂರ್ ದಿಂದ ಕಾರ್ಕಳದವರೆಗೆ ಅಂದರೆ ಸುಮಾರು ನಲವತ್ತು ಕಿಲೋ ಮೀಟರ್ ರಸ್ತೆಯಲ್ಲಿ ಕಳೆದ 17 ವರ್ಷಗಳಿಂದ ರಸ್ತೆಗಳು ಸ್ವಲ್ಪವೂ ರಿಪೇರಿಯಾಗದೇ ಸಾವಿರಾರು ಅಪಘಾತಗಳಾಗಿವೆ. ಎಷ್ಟೋ ಕುಟುಂಬಗಳು ಅನಾಥವಾಗಿವೆ. ಆ ರಸ್ತೆಯಲ್ಲಿ ಸಂಚಾರ ಮಾಡುವುದಕ್ಕೆ ಆಗುತ್ತಿಲ್ಲ. ಅದರ ಬದಲಿಗೆ ರಾಜ್ಯ ಹೆದ್ದಾರಿಯನ್ನು ಅಂದಿನ ಮಾನ್ಯ ಶ್ರೀನಿವಾಸ್ ಮಲ್ಯರವರು ಮಾಡಿದರು. ನನಗೆ ಅನಿಸುವುದೇನೆಂದರೆ, ಮಾನ್ಯ ಶ್ರೀನಿವಾಸ್ ಮಲ್ಯರವರು 1957 ರಿಂದ 1962ರ ವರೆಗೆ ಲೋಕಸಭೆಯ ಸದಸ್ಯರಾಗಿದ್ದರು. ಆಗ ಅವರು ರಾಜ್ಯ ಹೆದ್ದಾರಿಯನ್ನಾಗಿ ಮಾನ್ಯ ನೆಹರೂರವರನ್ನು ಕರೆಸಿ convert ಮಾಡಿರುವಂತಹ ರಸ್ತೆ. ನೀವು ಅದನ್ನು N.H.A.I., ಅಡಿಯಲ್ಲಿ N.H., ಮಾಡಿದ್ದೀರಿ. N.H., ನಲ್ಲಿ ಎರಡು ಲೇನ್ ಮಾಡಿದ್ದೀರಿ ಮತ್ತು ಸಾಂದ್ರತೆ ಜಾಸ್ತಿ ಇದೆ ಎಂದು ಹೇಳಿ ಅದನ್ನು ನಾಲ್ಕು ಲೇನ್ ಆಗಿ ಮಾಡಬೇಕು. ಮೊದಲು ಆ ರಸ್ತೆಯಲ್ಲಿ ಎರಡು ಸಾವಿರ ವಾಹನಗಳು ಹೋಗುತ್ತಿತ್ತು.

**ಸಭಾಪತಿಯವರು:-** ಇದಕ್ಕೆ ಉತ್ತರವನ್ನು ಕೇಳಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಒಂದೆರಡು ನಿಮಿಷ. N.H.,ಆಗುವಾಗ...

**ಸಭಾಪತಿಯವರು:-** ಸಾಕು ಮಾಹಿತಿ ಬಂತು.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, I want to draw the attention of the Government, because, this problem is there everywhere. ಸುಮಾರು ಎರಡು ಸಾವಿರ ವಾಹನಗಳು ಹೋಗುತ್ತಿದ್ದವು. ಇವತ್ತು ಸುಮಾರು ಇಪ್ಪತ್ತೈದು ಸಾವಿರ ವಾಹನಗಳು ಆ ರಸ್ತೆಯಲ್ಲಿ ಹೋಗುತ್ತಿವೆ.

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜರವರೇ, ನಿಮ್ಮದು ಪ್ರಶ್ನೆ ಏನೆಂದರೆ, ಸೇತುವೆ ಬಿದ್ದಿದೆ, ಇದನ್ನು ಯಾವಾಗ ಕಟ್ಟುತ್ತೀರಾ ಎಂದು ಕೇಳಬೇಕು.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ತುಂಬಾ ಸೇತುವೆಗಳು ಬಿದ್ದಿವೆ.

**ಸಭಾಪತಿಯವರು:-** ಮಾನ್ಯ ಸಚಿವರಿಗೆ ಗೊತ್ತಿದೆ. ಆಮೇಲೆ ಅವರು ಉತ್ತರ ಹೇಳುತ್ತಾರೆ. ಮಾನ್ಯ ಐವನ್ ಡಿ'ಸೋಜಾರವರೇ ಏನೇ ಕೇಳುವುದಿದ್ದರೆ ನಂತರ ಕೇಳಿ. ಇದಕ್ಕೆ ಮಾನ್ಯ ಸಚಿವರು ಉತ್ತರ ಹೇಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್ ಡಿ. ರೇವಣ್ಣ (ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಲೋಕೋಪಯೋಗಿ ಸಚಿವನಾದ ಮೇಲೆ ಮಂಗಳೂರು ಜಿಲ್ಲೆಗೆ ಭೇಟಿ ಮಾಡಿದ್ದೆ. ಕಳೆದ ಹತ್ತು-ಹದಿನೈದು ದಿವಸಗಳ ಹಿಂದೆ ಉಡುಪಿ ಜಿಲ್ಲೆಗೂ ಕೂಡ ಭೇಟಿ ಮಾಡಿ ಮಂಗಳೂರು ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮಳೆಯಿಂದ ಏನು ಅನಾಹುತವಾಗಿದೆ ಎಂಬುದರ ಬಗ್ಗೆ ಮೀಟಿಂಗ್ ಮಾಡಿ, ಅದರ ಸಂಪೂರ್ಣವಾದ ಮಾಹಿತಿಯನ್ನು ಪಡೆದುಕೊಂಡಿದ್ದೇನೆ. ಇವತ್ತು ಮಾನ್ಯ ಐವನ್ ಡಿ'ಸೋಜಾರವರು ನನ್ನ ಗಮನಕ್ಕೆ ತಂದಿದ್ದಾರೆ. ಅಲ್ಲಿ ವಾಹನ ದಟ್ಟಣೆ ಇದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರು ಹೇಳಿದ ಹಾಗೇ 2010 ರಲ್ಲಿ ಎಸ್‌ಹೆಚ್ ಇತ್ತು. 2012 ರಲ್ಲಿ N.H., ಮಾಡಿದ್ದಾರೆ. ಸುಮಾರು ಹದಿನೆಂಟು ವರ್ಷಗಳಾಗಿದೆ. ಅದನ್ನು ಏಕೆ ಮಾಡುವುದಕ್ಕೆ ಆಗಿಲ್ಲ. ನಾನು ಈ ಖಾತೆಯ ಸಚಿವನಾಗಿ ಹದಿನೈದು ದಿನವಾಗಿದೆ. ಹಿಂದೆ ಅವರ ಸರ್ಕಾರವೇ ಐದು ವರ್ಷವಿತ್ತು. ಆಗ ನಾವು ಏನು ಮಾಡಬೇಡಿ ಎಂದು ಹೇಳಿರಲಿಲ್ಲ.

(ಗೊಂದಲ)

**ಶ್ರೀ ಹೆಚ್ ಡಿ. ರೇವಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುವಾಗ ನಾನು ತಾಳ್ಮೆಯಿಂದ ಕುಳಿತಿದ್ದೆನಲ್ಲ. ನಾನು ಈ ಇಲಾಖೆಯ ಸಚಿವನಾಗಿ ಕೇವಲ ಹದಿನೈದು ದಿವಸವಾಗಿದೆ. ಈಗ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೇವೆ. ಕೇಂದ್ರ ಸರ್ಕಾರದಿಂದ ಬಂದ ತಕ್ಷಣ ಟೆಂಡರ್ ಕರೆದು ಕೆಲಸ ಮಾಡಿಸಿಕೊಳ್ಳುವ ಜವಾಬ್ದಾರಿ ನನ್ನದು.

ಮಾನ್ಯ ಸಭಾಪತಿಯವರೇ, ಇನ್ನೊಂದು ಎಂ.ಡಿ.ಆರ್., ಬ್ರಿಡ್ಜ್ ಬಗ್ಗೆ ಹೇಳಿದರು. ಅದಕ್ಕೆ ಸುಮಾರು 20 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು 156 ಕೋಟಿ ರೂಪಾಯಿಗಳು ಮಾತ್ರ ಈ ವರ್ಷ ಬ್ರಿಡ್ಜ್‌ಗೋಸ್ಕರ ರಸ್ತೆಯ ನಿಗಮದಲ್ಲಿ ಇಟ್ಟಿದ್ದಾರೆ. ಸುಮಾರು 1350 ಕೋಟಿ ರೂಪಾಯಿಗಳು ಅನುಮೋದನೆಯಾಗಿದೆ. ಮಾನ್ಯ ಡಿ'ಸೋಜಾರವರನ್ನೆ ಕರೆಸುತ್ತೇನೆ. ಅದರಲ್ಲಿ ಯಾವುದು priority ಮೇಲೆ ಮಾಡಬೇಕು ಎಂದು ಅವರು ಹೇಳುತ್ತಾರೆ. ಅವರು ಹೇಳಿದಂತಹ ಕೆಲಸವನ್ನು ಆದ್ಯತೆಯ ಮೇಲೆ ಮಾಡಿಸುತ್ತೇನೆ. ಇದಕ್ಕೆ ನನ್ನದೇನು ಅಭ್ಯಂತರವೇನಿಲ್ಲ. ಈ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ priority wise ನಾನು ಮಾಡುವುದಕ್ಕೆ ಪ್ರಮಾಣಿಕವಾದ ಪ್ರಯತ್ನವನ್ನು ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಈಗ deviation ಮಾಡುವುದಕ್ಕೆ ಅಲ್ಲಿ ಸಾಕಷ್ಟು ನೀರು ಇದೆ. Heavy water ಇರುವಾಗ ಅಲ್ಲಿ deviation ಮಾಡುವುದಕ್ಕೆ ಆಗುವುದಿಲ್ಲ. ನಾನು ಕೆಲವು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಇದರ ಬಗ್ಗೆ ನೀವು ಯಾವುದೇ ಹಣಕಾಸನ್ನು ಕಾಯುವುದು ಬೇಡ. ಯಾವುದಾದರೂ deviation ರಸ್ತೆ ಇದ್ದರೆ ಕೂಡಲೇ ಕ್ರಮ ತೆಗೆದುಕೊಳ್ಳಿ ಎಂದು ನಾನು ಹೇಳಿದ್ದೇನೆ. ಆದರೆ heavy ನೀರು ಸಮುದ್ರದಲ್ಲಿರುವುದರಿಂದ ಮಾಡುವುದಕ್ಕೆ ಆಗುವುದಿಲ್ಲ. ಕೇಂದ್ರ ಸರ್ಕಾರದಿಂದ ಬಂದ ತಕ್ಷಣ ಮೊದಲನೇ ಆದ್ಯತೆಯ ಮೇರೆಗೆ ಆ ಕೆಲಸವನ್ನು ಮಾಡಿಸುತ್ತೇನೆ. ಈ ವರ್ಷದಲ್ಲಿ ಸುಮಾರು 150 ಕೋಟಿ ರೂಪಾಯಿಗಳನ್ನಿಟ್ಟಿದ್ದಾರೆ. ಅದರಲ್ಲಿ ಈಗ ಸುಮಾರು 1850 ಕೋಟಿ ರೂಪಾಯಿಗಳು Work Order ಆಗಿದೆ. ನನ್ನ ಪರಿಸ್ಥಿತಿ ಈ ರೀತಿ ಇದೆ. ಅವರನ್ನು ಕೂರಿಸಿಕೊಂಡು priority ಏನು ಹೇಳುತ್ತಾರೆ? ಅದನ್ನು ನಾನು ಮಾಡಿಸಿಕೊಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೆಲಸವನ್ನು ಮಾಡಿಸುತ್ತೇನೆಂದು ಹೇಳಿದ್ದಾರೆ. ನಾನು ಅವರನ್ನು ಸ್ವಾಗತ ಮಾಡುತ್ತೇನೆ. ಮಾನ್ಯ ಲೋಕೋಪಯೋಗಿ ಸಚಿವರು ಹದಿನೈದು ದಿವಸಗಳ ಹಿಂದೆ ನಮ್ಮ ಜಿಲ್ಲೆಗೆ ಭೇಟಿ ನೀಡಿದ್ದರು. ಇನ್ನೊಮ್ಮೆ ಲೋಕೋಪಯೋಗಿ ಸಚಿವರಾಗಿದ್ದಾರೆ. ಅವರಿಗೆ ಅನುಭವ ಇದೆ. ಅವರ ಮಾತನ್ನು ನಾನು ಅಲ್ಲಗಳೆಯುವುದಕ್ಕೆ ಹೋಗುವುದಿಲ್ಲ. ಆದರೆ, ಇಲ್ಲಿ ರಾಜಕಾರಣವಾಗುತ್ತಿದೆಂಬುದನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ.

(ಮುಂದು...)

<u>(048)04.07.2018/11.10/ಎಂ.ಎಂ-ಎಂ.ಡಿ</u>

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು)**

ರಾಷ್ಟ್ರೀಯ ಹೆದ್ದಾರಿ ಅವ್ಯವಸ್ಥೆಗೆ ಯು.ಪಿ.ಎ ಸರ್ಕಾರ ಹೊಣೆ – ಶೋಭಾ ಕರಂದ್ಲಾಜೆ ಎಂದು ಇದೆ. ಈ ರಸ್ತೆಯ ದುರವಸ್ಥೆಗೆ ಕೇಂದ್ರ ಸರ್ಕಾರ ಹೊಣೆ ಎಂದಾದರೆ ಕಳೆದ ನಾಲ್ಕು ವರ್ಷಗಳಿಂದ ತಾವು ಅಧಿಕಾರದಲ್ಲಿದ್ದೀರಿ ನೀವು ಸತತವಾಗಿ . . . . ಏನು ಮಾಡುತ್ತಿದ್ದೀರಿ?

**ಸಭಾಪತಿಯವರು:–** ಮಾನ್ಯ ನಾರಾಯಣ ಸ್ವಾಮಿಯವರೇ, ಮಾನ್ಯ ಶಾಣಪ್ಪನವರೇ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ನಾನು ಪದೇ ಪದೇ ಹೇಳುತ್ತಿದ್ದೇನೆ, ಸದನದಲ್ಲಿ ಬೇಕಾದಾಗಲೆಲ್ಲ ಎದ್ದು ನಿಂತರೆ ನಾನು allow ಮಾಡುವುದಿಲ್ಲ. ಹೇಳಬೇಕಾದವರು ಒಬ್ಬರು ನಿಂತುಕೊಂಡರೆ ಸಾಕು, ಎಲ್ಲರೂ ಎದ್ದು ನಿಂತರೆ ಹೇಗೆ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ವಿರೋಧಪಕ್ಷದವರು ಲೋಪದೋಷಗಳನ್ನು ಹೇಳುವುದಕ್ಕೇ ಇರುವುದು. ನೀವು ನಮ್ಮ ರಕ್ಷಣೆಗೆ ಬರಬೇಕು.

**ಸಭಾಪತಿಯವರು:-** ನೀವು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಒಂದು ನಿಮಿಷ ನಾನು ಹೇಳುವುದನ್ನು ಕೇಳಿ.

**ಶ್ರೀ ಕೆ.ಬಿ. ಶಾಣಪ್ಪ:-** ಕೇಂದ್ರ ಸರ್ಕಾರದವರು ಹಣ ಕೊಡಲಿಲ್ಲ ಎಂದು ಹೇಳಿದರೆ, ಹಾಗೆ ಬಿಡುವುದಾ?

**ಸಭಾಪತಿಯವರು:-** ನಾನು ಹೇಳುವುದನ್ನು ಕೇಳಿ. ಎಲ್ಲರೂ ಎದ್ದರೆ ಹೇಗೆ? ಮಾನ್ಯ ಐವನ್ ಡಿ'ಸೋಜಾರವರೆ, ನಿಮ್ಮ ಪ್ರಶ್ನೆಗೆ ಸಂಬಂಧಿಸಿದ ವಿಚಾರವನ್ನು ಮಾತ್ರ ಕೇಳಿ. ರಾಜಕಾರಣದ ಬಗ್ಗೆ ಮಾತನಾಡುವ ಅವಶ್ಯಕತೆ ಇಲ್ಲ. ಅವರು ಹೇಳಿರುವ ವಿಚಾರಕ್ಕೂ ಇಲ್ಲಿನ ವಿಚಾರಕ್ಕೂ ಏನು ಸಂಬಂಧವಿದೆ? ಸದನದಲ್ಲಿ ನಿಮ್ಮ ಪ್ರಶ್ನೆಗೆ ಉತ್ತರವನ್ನು ಪಡೆದುಕೊಳ್ಳಿ. ಸುಮ್ಮನೆ ರಾಜಕಾರಣದ ಬಗ್ಗೆ ಮಾತನಾಡಿ ಸಮಯವನ್ನು ವ್ಯರ್ಥ ಮಾಡಬೇಡಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, 18 ವರ್ಷಗಳಿಂದ ಆಗಲಿಲ್ಲ.

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾರವರೇ, ಈಗ ಮಾನ್ಯ ಮಂತ್ರಿಯವರು ಉತ್ತರ ಹೇಳುತ್ತಾರೆ ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ, ಇದರಲ್ಲೆಲ್ಲಾ ರಾಜಕೀಯ ಮಾಡಬಾರದು. ಯಾರೇ ಆಗಿರಲಿ ಅವರ ಕೆಲಸ ಕರ್ತವ್ಯಗಳನ್ನು ಮಾಡಬೇಕು. ಮಾನ್ಯ ಐವನ್ ಡಿಸೋಜಾರವರು ಹೇಳಿರುವ ಹಾಗೆ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು. ದಕ್ಷಿಣ ಕನ್ನಡದವರು ಸೇತುವೆ ಮತ್ತು ಕುಡಿಯುವ ನೀರನ್ನು ಕೇಳುತ್ತಾರೆ. ಡ್ಯಾಂ ಕಟ್ಟಲು ಕೇಳುತ್ತಾರೆಯೇ? ಅದನ್ನು ನಾನು ಪ್ರಾಮಾಣಿಕವಾಗಿ ಪ್ರಯತ್ನ ಪಡುತ್ತೇನೆ. ಯು.ಪಿ.ಎ ಸರ್ಕಾರದಲ್ಲಿಯೂ ಸಾಕಷ್ಟು ಕೊಟ್ಟಿದ್ದಾರೆ. ಕೇಂದ್ರ ಸಚಿವರಾದ ಶ್ರೀ ನಿತಿನ್ ಗಡ್ಕರಿಯವರು ಈ ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಸಾಕಷ್ಟು ಕಾಮಗಾರಿಗಳನ್ನು ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸಭೆಯನ್ನು ನಾಳೆ ಶುಕ್ರವಾರ ಸಂಜೆ 4.30 ಗಂಟೆಗೆ ನಡೆಸಲಾಗುವುದು. ಆ ಸಭೆಯಲ್ಲಿ ಈ ವಿಷಯವನ್ನು ಆದ್ಯತೆಯ ಮೇಲೆ ತೆಗೆದುಕೊಳ್ಳಬೇಕೆಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ತಿಳಿಸಿ ಪ್ರಾಮಾಣಿಕವಾಗಿ ಅನುಮೋದನೆ ಪಡೆದು ಕೆಲಸ ಪ್ರಾರಂಭ ಮಾಡಲು ಪ್ರಯತ್ನ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ**:- ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು**:- ಮಾನ್ಯ ಐವನ್ ಡಿ'ಸೋಜಾ ರವರೇ, ನಿಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಹೇಳಿದ್ದಾರೆ. ಈಗ ಸಮಯ ಇಲ್ಲ. ಈಗ ಶ್ರೀ ಎಂ.ಕೆ. ಪ್ರಾಣೇಶ್‌ರವರು ಗಮನ ಸೆಳೆಯಬೇಕೆಂದು ಸೂಚಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ**:- ಮಾನ್ಯ ಸಭಾಪತಿಯವರೇ, ಎನ್.ಹೆಚ್.ಎ ಗೆ ಸಂಬಂಧಪಟ್ಟ ಹಾಗೆ Project Director's Office ಶಿವಮೊಗ್ಗದಲ್ಲಿದೆ.

**ಸಭಾಪತಿಯವರು**:- ಮಾನ್ಯ ಐವನ್ ಡಿ'ಸೋಜಾ ರವರೇ, ಮಾನ್ಯ ಸಚಿವರು ಎಲ್ಲವನ್ನೂ ಮಾಡಿಕೊಡುತ್ತೇವೆ ಎಂದು ಹೇಳಿದ್ದಾರೆ ಅಲ್ಲಿಗೆ ಮುಗಿಯಿತು.

**ಶ್ರೀ ಐವನ್ ಡಿ'ಸೋಜಾ**:- ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಎನ್.ಹೆಚ್.ಎಗೆ ಸಂಬಂಧಪಟ್ಟ ಯೋಜನಾ ನಿರ್ದೇಶಕರು ಶಿವಮೊಗ್ಗದಲ್ಲಿದ್ದಾರೆ, ಅವರನ್ನು ಮಂಗಳೂರಿಗೆ ಬರುವುದಕ್ಕೆ ಹೇಳಿ. ಅವರು ಮಂಗಳೂರಿಗೆ ಬಂದರೆ ಜನರಿಗೆ ಸಹಾಯವಾಗುತ್ತದೆ.

**ಸಭಾಪತಿಯವರು**:- ಆಯಿತು ಅದನ್ನು ಮಾನ್ಯ ಸಚಿವರು ಹೇಳುತ್ತಾರೆ.

**ಆ)ವಿಷಯ**:- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ವಿವಿಧ ಹುದ್ದೆಗಳನ್ನು ಸೃಜಿಸುವ ಬಗ್ಗೆ.

- - - -

**ಶ್ರೀ ಎಂ.ಕೆ. ಪ್ರಾಣೇಶ್**:- ಮಾನ್ಯ ಸಭಾಪತಿಯವರೇ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ವಿವಿಧ ಹುದ್ದೆಗಳನ್ನು ಸೃಜಿಸುವುದರ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)**:- ಮಾನ್ಯ ಸಭಾಪತಿಯವರೇ, ಲಿಖಿತವಾಗಿ ಉತ್ತರ ಬಂದಿದೆ, ಮಾನ್ಯ ಸದಸ್ಯರು ಓದಬೇಕೆಂದರೆ ಓದಿ ಹೇಳುತ್ತೇನೆ. ಇಲ್ಲದಿದ್ದರೆ ಸಮಯದ ದೃಷ್ಟಿಯಿಂದ ಮಂಡನೆ ಮಾಡುತ್ತೇನೆ.

**ಶ್ರೀ ಎಂ.ಕೆ. ಪ್ರಾಣೇಶ್**:- ಮಾನ್ಯ ಸಚಿವರೇ, ಉತ್ತರವನ್ನು ಓದಿ ಹೇಳಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು**:- ಮಾನ್ಯ ಸಚಿವರೇ, ಉತ್ತರವನ್ನು ಓದಿಬಿಡಿ.

**ಶ್ರೀ ಎಂ.ಕೆ. ಪ್ರಾಣೇಶ್**:- ಏಕೆಂದರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಬಹಳ ಗಂಭೀರವಾದ ಸಮಸ್ಯೆಗಳಿವೆ.

**ಶ್ರೀ ಕೃಷ್ಣ ಭೈರೇಗೌಡ**:- ಮಾನ್ಯ ಸಭಾಪತಿಯವರೇ,

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಕೆ. ಪ್ರಾಣೇಶ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಾಕಷ್ಟು ಉತ್ತರಗಳನ್ನು ಕೊಟ್ಟಿದ್ದಾರೆ. ತಾವು ಈ ಇಲಾಖೆಗೆ ಹೊಸದಾಗಿ ಬಂದಿದ್ದು, ವಾಸ್ತವವಾಗಿ ಗ್ರಾಮ ಪಂಚಾಯಿತಿಯ ಸಮಸ್ಯೆಗಳನ್ನು ಬಗೆಹರಿಸುತ್ತೀರಿ ಎಂಬ ವಿಶ್ವಾಸ ಇದೆ. ನಾನು ಆರೋಪವನ್ನು ಮಾಡುತ್ತಿಲ್ಲ. ಹಿಂದಿನಿಂದಲೂ ಕೂಡ ನಾವುಗಳು ಅದರಿಂದಲೇ ಚುನಾಯಿತರಾಗಿ ಬಂದವರಾಗಿದ್ದೇವೆ. ನಾವು ಗ್ರಾಮ ಪಂಚಾಯಿತಿಗಳಿಗೆ ನೀವು ಕೊಟ್ಟಿರುವ ವರದಿಗಳನ್ನು ತೆಗೆದುಕೊಂಡು ಹೋದಂತಹ ಸಂದರ್ಭದಲ್ಲಿ ಅಲ್ಲಿ ಯಾವುದೂ ಕಾರ್ಯ ಚಟುವಟಿಕೆಯೊಳಗೆ ಇಲ್ಲ. ಇದು ಗಮನಿಸಬೇಕಾದಂತಹ ಅಂಶವಾಗಿದೆ. ಇಲ್ಲಿ ಗ್ರಾಮ ಸ್ವರಾಜ್ ಮತ್ತು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ-1ರಲ್ಲಿ ಗ್ರಾಮ ಪಂಚಾಯಿತಿಗಳ ವ್ಯವಸ್ಥೆಗಳ ಬಗ್ಗೆ ಸಾಕಷ್ಟು ವಿವರಗಳು ಇವೆ. ಮಾನ್ಯ ರಮೇಶ್ ಕುಮಾರ್ ರವರು ವರದಿಯನ್ನು ಕೊಟ್ಟಿದ್ದಾರೆ. ಅದು ಎಷ್ಟರ ಮಟ್ಟಿಗೆ ಕಾರ್ಯಗತ ಆಗಿದೆ ಎನ್ನುವುದು ಇಲ್ಲಿರುವಂತಹ ಪ್ರಶ್ನೆ. ಅದಕ್ಕೆ ಉದಾಹರಣೆಯನ್ನು ಕೊಡಬಲ್ಲೆ. ಈಗಾಗಲೇ Audit Report ಅನ್ನು ಪಂಚಾಯಿತಿಗಳಿಂದ ತೆಗೆದುಕೊಳ್ಳುವ ಕೆಲಸವನ್ನು ಮಾಡುತ್ತಿದ್ದೀರಿ. Audit Report ಗಳನ್ನು ಕೊಡುವ ಕೆಲಸವನ್ನು ಹೊರಗುತ್ತಿಗೆ ನೌಕರರಿಗೆ ಕೊಟ್ಟಿದ್ದಾರೆ. ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಓದಿದಂತಹವರು Audit ಮಾಡುವುದಕ್ಕೆ ಗ್ರಾಮ ಪಂಚಾಯಿತಿಗಳಿಗೆ ಬರುತ್ತಾರೆ. ಅವರು ಏನು Audit ಮಾಡಬಹುದು? ಇದನ್ನು ಸರ್ಕಾರ ಯೋಚನೆ ಮಾಡಬೇಕಲ್ಲವೇ? Audit ಮಾಡುವುದಕ್ಕೆ ವಿದ್ಯಾಭ್ಯಾಸವನ್ನು ನಿಗದಿ ಮಾಡಬೇಕಲ್ಲವೇ? ಎಸ್.ಎಸ್.ಎಲ್.ಸಿ ಓದಿರುವವನು ಏನು auditing ಮಾಡಬಹುದು? ಅವನಿಗೆ ಗಣಿತ, ಲೆಕ್ಕಾಚಾರಗಳ ಬಗ್ಗೆ ಸಂಪೂರ್ಣವಾದ ಮಾಹಿತಿಗಳು ಇರುವುದಿಲ್ಲ. ಆದ್ದರಿಂದ ಇಂದು blackmail ತಂತ್ರ ಗ್ರಾಮ ಪಂಚಾಯಿತಿಗಳಲ್ಲಿ ನಡೆಯುತ್ತಿದೆ. ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಬೇಕಾಗಿದೆ. ಏಕೆಂದರೆ, NREGA (National Rural Employment Guarantee Scheme) ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ಸಾಕಷ್ಟು ಹಣ ಬರುತ್ತಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದರಲ್ಲಿ manual ಆಗಿ ಕೆಲಸ ಮಾಡಬೇಕೆಂಬುದು ಗೊತ್ತಿದೆ. ಆದರೆ ನಿಜವಾಗಲೂ ಮಾನವ ಸಂಪನ್ಮೂಲವನ್ನು ಬಳಸಿ ಈ ಹಣವನ್ನು ಉಪಯೋಗಿಸಿಕೊಂಡು ಕೆಲಸ ಮಾಡುವುದಕ್ಕೆ ತುಂಬಾ ಸಮಸ್ಯೆಗಳಿವೆ. ಕಾನೂನನ್ನು ಇಟ್ಟುಕೊಂಡೇ ಅದನ್ನು ಮಾಡಬೇಕು, ಅದನ್ನು ಮಾಡಬಾರದೆಂದಲ್ಲ. ಅದರ ಜೊತೆಗೆ ಕೆಲಸ ಆಗಬೇಕೆಂದರೆ ಸರ್ಕಾರವು ಕೂಡ ಸ್ವಲ್ಪ ಯೋಚನೆಯನ್ನು ಮಾಡಬೇಕೆಂದು ನನಗನ್ನಿಸುತ್ತದೆ. ಆ ದೃಷ್ಟಿಯಿಂದ ಇವತ್ತು Audit Report ನಲ್ಲಿ PDO (Panchayath Development Officer) ಗಳು ಸಂಕಷ್ಟಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆ. PDO ಗಳನ್ನು blackmail ಮಾಡುವಂತಹ ತಂತ್ರವನ್ನು ಮಾಡುತ್ತಿದ್ದಾರೆ. ಇಂಥ ಸಂದರ್ಭಗಳಲ್ಲಿ ಯಾವ ಕೆಲಸಗಳಿಗೂ ತಲೆ ಕೊಡುವಂತಹ ಪರಿಸ್ಥಿತಿಯಲ್ಲಿ PDO ಗಳಾಗಲೀ ಕಾರ್ಯದರ್ಶಿಯವರಾಗಲೀ ಇಲ್ಲ. ಈಗಾಗಲೇ 3F's (Functions, Functionaries and Funds) ಎಂದು ಮಾಡಿದ್ದಾರೆ. ಅದರ ಬಗ್ಗೆ ತಮಗೆ ಗೊತ್ತಿದೆ. 3F's ಎನ್ನುವುದು ಬಹಳ ಪ್ರಮುಖವಾದುದಾಗಿದೆ. ಶ್ರೀ ರಮೇಶ್ ಕುಮಾರ್ ರವರು ಯೋಚನೆ ಮಾಡಿದಂತಹ ಆ ಮೂರು 3F's ಯಾವುದೆಂದರೆ, ಕಾರ್ಯಕ್ರಮಗಳ ವರ್ಗಾವಣೆ, ಅಂದರೆ Functions, Functionaries ಅಂದರೆ ಮಾನವ ಸಂಪನ್ಮೂಲ ಮತ್ತು ಮೂರನೆಯದಾಗಿ Funds ಅಂದರೆ ಹಣಕಾಸು ಅನುದಾನ. ಈ ಮೂರು ಅಂಶಗಳ ಬಗ್ಗೆ ಸರ್ಕಾರ ಜಾಗ್ರತೆಯಾಗಿ ಯೋಚನೆಯನ್ನು ಮಾಡಿದರೆ ಖಂಡಿತವಾಗಲೂ ಗ್ರಾಮ ಪಂಚಾಯಿತಿಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಆಗುತ್ತದೆ. ಮಾನ್ಯ ಸಚಿವರು ಉತ್ತರಗಳನ್ನು ಕೊಟ್ಟಿರುವುದನ್ನು ನೋಡಿದ್ದೇನೆ. ಅದು ಸಂಪೂರ್ಣವಾಗಿ ಸತ್ಯಕ್ಕೆ ಹತ್ತಿರವಾಗಿದೆ ಎಂದು ನನಗೆ ಅನ್ನಿಸುತ್ತಿಲ್ಲ. ಮಾನ್ಯ ಸಚಿವರೇ, ತಾವು ಇನ್ನೂ ಯುವಕರಾಗಿದ್ದೀರಿ, ಹಿಂದೆ ಮಾನ್ಯ ಹೆಚ್.ಕೆ. ಪಾಟೀಲರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ಸಂದರ್ಭದಲ್ಲಿ ನಾವು ಸಾಕಷ್ಟು ಬಾರಿ ಸದನದ ಬಾವಿಗೆ ಇಳಿದು ಧರಣಿಯನ್ನು ಮಾಡಿದ್ದೆವು, ಅವರು ಆಗ ನಾವು ಸಂಪೂರ್ಣವಾಗಿ ಕಾರ್ಯ ಮಾಡುತ್ತೇವೆ ಎಂದು ಹೇಳಿದರೂ ಕೂಡ, ತಾವು ಮಾತನಾಡುವಾಗ ಶಿಕ್ಷಣ ಸಚಿವರಿಗೆ ಶಿಕ್ಷಣದ ಬಗ್ಗೆ ಮುಂದೆ ನೀವು ಗಂಭೀರವಾದ ವಿಚಾರವನ್ನು ಎದುರಿಸಬೇಕಾಗುತ್ತದೆ ಎಂದು ಹೇಳಿದಿರಿ. ಆದರೆ ನಾವು ಕೂಡ 25 ಜನರು ಗೆದ್ದಿದ್ದೇವೆ. ಆದರೆ ನಮಗೆ ಇವತ್ತಿಗೂ ಕೂಡ ಪಂಚಾಯಿತಿಗಳಿಗೆ ನ್ಯಾಯವನ್ನು ದೊರಕಿಸಿಕೊಡುವ ಕೆಲಸ ಮಾಡುವುದಕ್ಕೆ ಆಗುತ್ತಾ ಇಲ್ಲ. ಶೇ. 60 ರಷ್ಟು ಭಾಗಗಳಲ್ಲಿ ಗ್ರಾಮ ಸಭೆಗಳು ನಡೆಯುತ್ತಾ ಇಲ್ಲ. ಏಕೆ ಅಧಿಕಾರಿಗಳು ಸರ್ಕಾರದ ಹಿಡಿತದಲ್ಲಿ ಇಲ್ಲವೇ? ಯಾವುದೇ ಅಧಿಕಾರಿಗಳು ಕೂಡ ಗ್ರಾಮ ಸಭೆಗಳಿಗೆ ಬರುವುದಿಲ್ಲ. ಯಾವ ಗ್ರಾಮ ಸಭೆಗಳಿಗೆ ಯಾವ ರೀತಿ ಹೋಗಬೇಕು ಎಂದು ಅದಕ್ಕೂ ಒಂದು ಸಮಯವನ್ನು ನಿಗದಿ ಮಾಡಿದೆ. ಆದರೂ ಕೂಡ ಅವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುವುದಿಲ್ಲ. ನಾವು ಕೇಳುವುದಕ್ಕೆ ಹೋದ ಸಂದರ್ಭದಲ್ಲಿ ಸರ್ಕಾರದಿಂದ ವಾರಕ್ಕೆ 4-5 ದಿವಸ ತಾಲ್ಲೂಕು ಪಂಚಾಯಿತಿಗಳಲ್ಲಿ ಸಭೆಗಳು ಇರುತ್ತದೆ. ಹಾಗಾಗಿ ನಾವು ಅಲ್ಲಿನ ಕಾರ್ಯಕ್ರಮಗಳಿಗೆ ಹೋಗುವುದಕ್ಕೆ ಆಗುವುದಿಲ್ಲ ಎನ್ನುವ ಮಾತುಗಳನ್ನು ಅಧಿಕಾರಿಗಳು ಹೇಳುತ್ತಾರೆ.

(ಮುಂದು . . .

(49) 04-07-2018/11-20/ಕೆಹೆಚ್/ಎಂಡಿ

**ಶ್ರೀ ಪ್ರಾಣೇಶ್ ಎಂ.ಕೆ. (ಮುಂದು)**:- ಈ ಎಲ್ಲಾ ಸಮಸ್ಯೆಗಳಿಗೆ ಪರ್ಯಾಯವಾಗಿ ತಾವು ಸರಿಯಾದ ವ್ಯವಸ್ಥೆಯನ್ನು ರೂಪಿಸಿದರೆ ಈ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ. ಇಲ್ಲದಿದ್ದರೆ ಸರ್ಕಾರ ತಮಗೆ ಅಧಿಕಾರವಿದೆ ಎಂಬ ದೃಷ್ಟಿಯಿಂದ ಸರ್ಕಾರವನ್ನು ನಡೆಸಿಕೊಂಡು ಹೋಗುವಂತಹದ್ದು ಮತ್ತು ಕೆಳಗಿರುವ ಅಧಿಕಾರಿಗಳು ಅವರ ದಿಕ್ಕಿನ ಕಡೆಗೆ ಅವರು ಕೆಲಸ ಮಾಡುವುದರಿಂದ ನಮ್ಮ ಜನರು ಬಡವರಾಗುತ್ತಾರೆ. ನಮ್ಮ ಜನರ ಯಾವುದೇ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ. ಯಾವುದೇ ಕಾರ್ಯಕ್ರಮಗಳ ಸವಲತ್ತುಗಳು ಸಿಗುವುದಕ್ಕೂ ವ್ಯವಸ್ಥೆಗಳು ಆಗುವುದಿಲ್ಲ. ಆ ನಿಟ್ಟಿನಲ್ಲಿ ಮಾನ್ಯ ಸಚಿವರ ಮುಂದೆ ಪ್ರಶ್ನೆಯನ್ನು ಹಾಕಿದ್ದೇನೆ. ಇದರ ಬಗ್ಗೆ ಮಾನ್ಯ ಸಚಿವರು ಸ್ಪಂದಿಸುತ್ತಾರೆ ಎಂಬ ವಿಶ್ವಾಸ ನನಗಿದೆ. ಇನ್ನು ಹಲವಾರು ವಿಚಾರಗಳ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ ಎಂದು ಹೇಳಿ ತಮ್ಮ ಗಮನವನ್ನು ಸೆಳೆಯುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, ಶ್ರೀ ಪ್ರಾಣೇಶ್‌ರವರ ಗಮನ ಸೆಳೆಯುವ ಪ್ರಶ್ನೆಗೆ ಪೂರಕವಾಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಿಬ್ಬಂದಿ ವ್ಯವಸ್ಥೆಯನ್ನು ಸರಿಯಾಗಿ ಮಾಡಿಕೊಳ್ಳದೇ ಇದ್ದರೆ. . . ಗ್ರಾಮ ಪಂಚಾಯಿತಿಯನ್ನು ಏನು 'ಸ್ಥಳೀಯ ಸರ್ಕಾರ' ಎಂದು ಸರ್ಕಾರದ ಭಾಷೆಯಲ್ಲಿ ಕರೆಯುತ್ತೇವೆ, ಅದನ್ನು ಪರಿಪೂರ್ಣ ಮಾಡುವುದಕ್ಕೆ ಸಾಧ್ಯವಿಲ್ಲ. ಹಿಂದಿನ ಸರ್ಕಾರದಲ್ಲಿ ಅನೇಕ ಯೋಜನೆಗಳನ್ನು ರೂಪಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರಾಗಿದ್ದಂತಹ ಶ್ರೀ ಹೆಚ್.ಕೆ.ಪಾಟೀಲ್ ರವರು ಅವರ ಬಗ್ಗೆ ತಮಗೆ ಏನು ಅಭಿಪ್ರಾಯವಿದೆ ಎಂಬುದು ನನಗೆ ಗೊತ್ತಿಲ್ಲ. ಅವರು ಮತ್ತೆ ಸಚಿವರಾಗಲಿಲ್ಲ. ಆದರೆ ನಮ್ಮ ದೃಷ್ಟಿಯಲ್ಲಿ ಶ್ರೀ ಹೆಚ್.ಕೆ.ಪಾಟೀಲ್ ರವರು ಗ್ರಾಮ ಪಂಚಾಯಿತಿಗೆ ಬೇಕಾದಂತಹ ಒಂದು ಭದ್ರ ಬುನಾದಿಯನ್ನು ಹಾಕಿ ಹೋಗಿದ್ದಾರೆ. ಅದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಇವತ್ತಿನ ದಿವಸ ಒಂದು ಗ್ರಾಮ ಪಂಚಾಯಿತಿಗೆ ನಿಯಮಗಳ ಪ್ರಕಾರ 5 ಜನರನ್ನು ಅಂದರೆ ಒಬ್ಬ Clerk, Bill Collector, Pump Operator, Data Entry Operator ಮತ್ತು ಜಡಮಾಲಿಯನ್ನು ಸಿಬ್ಬಂದಿಗಳಾಗಿ ಕೊಡಬಹುದು ಎಂಬ ನಿಯಮವಿದೆ. 6022

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗ್ರಾಮಪಂಚಾಯಿತಿಗಳಲ್ಲಿ ಎಲ್ಲಾ ಕೆಲಸಗಳು ಕೂಡ ಕಂಪ್ಯೂಟರ್ ಮೂಲಕವೇ ಆಗಬೇಕು. ಆದರೆ ಇಲ್ಲಿಯವರೆಗೂ Data Entry Operator ಹುದ್ದೆಯೇ ಸೃಜನೆಯಾಗಿರುವುದಿಲ್ಲ. ಇದುವರೆವಿಗೂ ಸರ್ಕಾರವು Data Entry Operator ಹುದ್ದೆಯನ್ನು ಸೃಜಿಸುತ್ತೇವೆ ಎಂದು ಹೇಳುತ್ತಿದ್ದಾರೆ. ಆದರೆ ಇದುವರೆಗೂ ಸೃಜನೆಯಾಗಿರುವುದಿಲ್ಲ. ಈ ಹುದ್ದೆಯನ್ನು ಸೃಜನೆ ಮಾಡದೇ ಇದ್ದರೆ ಆ ಸಿಬ್ಬಂದಿಯ ಮಾನ್ಯತೆಯೇ ಇರುವುದಿಲ್ಲ. ಇವತ್ತಿನ ದಿವಸ ಈ ರೀತಿಯ ಪರಿಸ್ಥಿತಿ ನಿರ್ಮಾಣವಾಗಿದೆ. ಅವರನ್ನು ತೆಗೆದುಕೊಳ್ಳುವುದು. ಮಧ್ಯದಲ್ಲಿ ತೆಗೆಯುವುದು. ಇದೆಲ್ಲಾ ಯಾವಾಗಲೂ ನಡೆಯುತ್ತಿರುತ್ತದೆ. ಹಾಗಾಗಿ ಕಂಪ್ಯೂಟರ್ ಕೆಲಸವನ್ನು ಮಾಡುವುದಕ್ಕೆ ಬೇಕಾದ ಸಿಬ್ಬಂದಿಯ ಹುದ್ದೆಯನ್ನು ಸೃಜನೆ ಮಾಡುವುದಕ್ಕೆ ಇನ್ನೂ ವಿಳಂಬ ಮಾಡಿದರೆ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ನೀಲಾವರ ಎಂಬ ಒಂದು ಗ್ರಾಮ ಪಂಚಾಯಿತಿ ಇದ್ದು, ಆ ಗ್ರಾಮ ಪಂಚಾಯಿತಿಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು 4 ಜನ ಇತರರು ಎಂದು ಕೇವಲ 6 ಜನ ಸದಸ್ಯರು ಮಾತ್ರ ಇದ್ದಾರೆ. ಅದಕ್ಕೂ ಸಹ ಸಿಬ್ಬಂದಿಗಳ ಸಂಖ್ಯೆ ಎಷ್ಟು ಎಂದು ಕೇಳಿದರೆ ಇರುವುದೇ 5 ಜನ ಎಂದು ಹೇಳುತ್ತಾರೆ. ಇನ್ನೂ ಸೋಮೇಶ್ವರ ಗ್ರಾಮ ಪಂಚಾಯಿತಿಯಲ್ಲಿ 63 ಜನ ಸದಸ್ಯರು ಇದ್ದಾರೆ. ಅಲ್ಲಿಯೂ ಸಹ ಸಿಬ್ಬಂದಿಗಳ ಸಂಖ್ಯೆ ಎಷ್ಟು ಎಂದು ಕೇಳಿದರೆ ಇರುವುದೇ 5 ಜನ, ಇದಕ್ಕಿಂತ ಜಾಸ್ತಿ ಜನ ಇಲ್ಲವೆಂದು ಹೇಳುತ್ತಾರೆ. ಅಲ್ಲೆಲ್ಲ ಜನಸಂಖ್ಯೆ ಜಾಸ್ತಿ ಇದೆ. ಆಯಾಯ ಗ್ರಾಮ ಪಂಚಾಯಿತಿಯಲ್ಲಿರುವ ಜನಸಂಖ್ಯೆಗೆ ಪೂರಕವಾದ ಸೇವೆಯನ್ನು ಒದಗಿಸುವುದಕ್ಕೆ, ಅಲ್ಲಿರುವ ಆರ್ಥಿಕ ಶಕ್ತಿಯನ್ನು ಪರಿಗಣನೆ ಮಾಡಿ ಹುದ್ದೆಗಳನ್ನು ಮಂಜೂರು ಮಾಡುವುದಕ್ಕೆ ವಿಳಂಬ ಮಾಡಿದರೆ ಈ ಗ್ರಾಮ ಪಂಚಾಯಿತಿಯು ಕಾಟಾಚಾರಕ್ಕೆ ಇದ್ದಂತಾಗುತ್ತದೆ ಎಂದು ನನಗನಿಸುತ್ತದೆ. ಹಿಂದಿನ ಸರ್ಕಾರವು 'ಬಾಪೂಜಿ' ಕೇಂದ್ರದ ವ್ಯವಸ್ಥೆಯನ್ನು ನೀಡಿತು. 'ಬಾಪೂಜಿ' ಕೇಂದ್ರದ ಕಲ್ಪನೆಯೆನೆಂದರೆ ಆ 'ಬಾಪೂಜಿ' ಕೇಂದ್ರ ವ್ಯವಸ್ಥಿತವಾಗಿ ನಡೆಯುತ್ತದೆಂದಾದರೆ ಬಹುತೇಕವಾಗಿ ನಾಡ ಕಛೇರಿ, ತಾಲ್ಲೂಕು ಕಛೇರಿ, ಜಿಲ್ಲಾಧಿಕಾರಿಗಳ ಕಛೇರಿಯ ಕೆಲಸಗಳು ಕೂಡ ಆ ಕೇಂದ್ರದಲ್ಲಿಯೇ ಆಗಬೇಕೆಂಬ ಪರಿಕಲ್ಪನೆ ಇದೆ. ಈ ಕೇಂದ್ರದಲ್ಲಿ 100 ಸೇವೆಗಳನ್ನು ಒದಗಿಸುತ್ತೇವೆ ಎಂದು ತಾವೇ ಹೇಳಿದ್ದೀರಿ. ಜನನ ಪ್ರಮಾಣ ಪತ್ರ, ಮರಣ ಪ್ರಮಾಣ ಪತ್ರ, ವಿದ್ಯಾರ್ಥಿ ವೇತನ, ಅಂಗವಿಕಲರ ವೇತನ, ವೃದ್ಯಾಪ್ಯ ವೇತನಗಳು, ಎಲ್ಲಾ ರೀತಿಯ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು, RTC (Record of Rights, Tenancy and Crop Information) ಗಳು, ಈ ರೀತಿಯ 100 ಸೇವೆಗಳು ಕಂದಾಯ ಇಲಾಖೆಯ ಒಂದಿಷ್ಟು ಸೇವೆಗಳು, ಗ್ರಾಮೀಣಾಭಿವೃದ್ಧಿ ಇಲಾಖೆಯ ಒಂದಿಷ್ಟು ಸೇವೆಗಳನ್ನು ಕೊಡುತ್ತೇವೆ ಎಂದು ಹೇಳಲಾಗಿತ್ತು. ಇದು ಬಹಳ ಅದ್ಭುತವಾದ ಕಲ್ಪನೆಯಾಗಿದೆ. ಈಗ ತಾವು ಈ ಸೇವೆಯನ್ನು ಕೊಟ್ಟು ಹೆಚ್ಚು ಕಡಿಮೆ ಒಂದು ವರ್ಷವಾಯಿತು. ಇಲ್ಲಿಯವರೆಗೆ ಕನಿಷ್ಟಪಕ್ಷ RTC ಯಾದರೂ ತೆಗೆಯಲಾಗುತ್ತಿತ್ತು. ಈಗ RTC ಯನ್ನು ತೆಗೆಯುವ ಕೆಲಸವು ಕೂಡ ನಿಂತು ಹೋಗಿದೆ. RTC

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯನ್ನು ತೆಗೆಯುತ್ತಿಲ್ಲ. ಇತರೆಡೆ ಹೋದರೆ ಒಂದು RTC ಯನ್ನು ತೆಗೆಯುವುದಕ್ಕೆ 40 ರೂಪಾಯಿಗಳನ್ನು ಕೇಳುತ್ತಾನೆ. RTC ಯನ್ನು ಕೊಡುವಂತಹ ಸಂದರ್ಭದಲ್ಲಿ ಒಂದು RTC ಗೆ 10 ರೂಪಾಯಿಗಳನ್ನು ತೆಗೆದುಕೊಳ್ಳಲಾಗುತ್ತಿತ್ತು. ಬಡವರ ಮನೆ ಬಾಗಿಲಿಗೆ RTC ಸಿಗುತ್ತಿತ್ತು. ಇವತ್ತಿನ ದಿವಸ RTC ವ್ಯವಸ್ಥೆಯು ನಿಂತು ಹೋಗಿದೆ. ಇದರಲ್ಲಿ ಆಶ್ಚರ್ಯಯೇನೆಂದರೆ 'ಬಾಪೂಜಿ' ಕೇಂದ್ರವನ್ನು 6022 ಗ್ರಾಮಪಂಚಾಯಿತಿಯಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಹಂತದಲ್ಲಿ ಸೇವೆಯನ್ನು ಕೊಡುತ್ತಿದ್ದೇವೆ. ಆ 'ಬಾಪೂಜಿ' ಕೇಂದ್ರವನ್ನು ನಿರ್ವಹಣೆ ಮಾಡುವುದಕ್ಕೆ ಒಬ್ಬ ಸಿಬ್ಬಂದಿಯನ್ನು ತೆಗೆದುಕೊಳ್ಳುವುದಕ್ಕೆ ಅನುಮತಿಯನ್ನೆ ಕೊಟ್ಟಿರುವುದಿಲ್ಲ. ಹಣ ಕೊಡುವುದನ್ನು ಕೊನೆಗೆ ಕೊಟ್ಟಿದ್ದೇವೆ. ಒಬ್ಬ ಸಿಬ್ಬಂದಿಯನ್ನು ತೆಗೆದುಕೊಳ್ಳುವುದಕ್ಕೆ ಅನುಮತಿಯನ್ನಾದರೂ ಕೊಡಬೇಕಲ್ಲವೇ, ಅದನ್ನು ಕೂಡ ಕೊಟ್ಟಿಲ್ಲ. ಅದಕ್ಕಿಂತ ಇನ್ನೊಂದು ಆಶ್ಚರ್ಯವೇನೆಂದರೆ 'ಬಾಪೂಜಿ' ಕೇಂದ್ರದಲ್ಲಿ 100 ಸೇವೆಗಳನ್ನು ಕೊಡುತ್ತೇವೆಂದು ಎಲ್ಲಾ ಕಡೆಯು ಘೋಷಣೆಯಾಗಿ ಉದ್ಘಾಟನೆಯಾಗಿ ಕಂಪ್ಯೂಟರ್ ವ್ಯವಸ್ಥೆಯನ್ನೇ ಕೊಟ್ಟಿಲ್ಲ. ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಬಂದಂತಹ 25 ಜನ ಶಾಸಕರುಗಳು ಈ ಸದನದಲ್ಲಿ ಇದ್ದೇವೆ. ಒಂದೊಂದು ಗ್ರಾಮ ಪಂಚಾಯಿತಿಗೆ ಒಂದೊಂದು ಲಕ್ಷ ರೂಪಾಯಿಗಳನ್ನು ಕೊಡುವುದು ದೊಡ್ಡದೇನಲ್ಲ. ಒಂದು ಗ್ರಾಮ ಪಂಚಾಯಿತಿಗೆ 2 ಕಂಪ್ಯೂಟರ್‌ನ್ನು ಒದಗಿಸುವುದು ದೊಡ್ಡ ವಿಷಯವೇನಲ್ಲ. ನಮಗಾದರೂ ಅನುಮತಿಯನ್ನು ಕೊಡಬೇಕೆಂದು ಕೇಳಿದರೆ, ಶಾಸಕರ ನಿಧಿಯಿಂದ ಗ್ರಾಮ ಪಂಚಾಯಿತಿಗೆ ಮೂಲಭೂತ ಸೌಕರ್ಯವನ್ನು ಒದಗಿಸಿಕೊಡುವುದಕ್ಕೆ ಇವತ್ತಿನ ದಿವಸದವರೆಗೂ ಯಾವುದೇ ರೀತಿಯ ಅನುಮೋದನೆಯನ್ನು ಕೊಟ್ಟಿಲ್ಲ. ಆ ಗ್ರಾಮ ಪಂಚಾಯಿತಿಗಳಲ್ಲಿ ಮಾನ್ಯ ಸದಸ್ಯರು ಕುಳಿತುಕೊಳ್ಳುವುದಕ್ಕೆ ಪೀಠೋಪಕರಣಗಳ ವ್ಯವಸ್ಥೆಯೇ ಇಲ್ಲ. ನಾವು 1 ಲಕ್ಷ ರೂಪಾಯಿಗಳನ್ನು ಒದಗಿಸಿದರೆ ನಾಳೆಯೇ ಪೀಠೋಪಕರಣಗಳ ವ್ಯವಸ್ಥೆಯನ್ನು ಮಾಡುತ್ತಾರೆ. ಎಷ್ಟೋ ಗ್ರಾಮ ಪಂಚಾಯಿತಿಗಳಲ್ಲಿ ಹಣವನ್ನು ಒದಗಿಸಿದರೆ guidelines ಪ್ರಕಾರ ಈ ಹಣವನ್ನು ಉಪಯೋಗಿಸಲು ಸಾಧ್ಯವಿಲ್ಲವೆಂದು ವಾಪಸ್ಸು ಕೊಡುತ್ತಾರೆ. ತಾವು ಬಹಳ ಅನುಭವವನ್ನು ಹೊಂದಿರುವುದರಿಂದ ನಾನು ಒಂದು ಮಾತನ್ನು ಹೇಳುತ್ತೇನೆ. ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ಮಾನ್ಯ ಶಾಸಕರ ಹಣ ಖರ್ಚಾಗದೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ತಯಾರಿಗಳು ನಡೆಯುತ್ತಿವೆ. ಕಳೆದ ಬಾರಿ ಹಣ ಖರ್ಚಾಗದೆ ಉಳಿದಿರುವ ಹಣ 439 ಕೋಟಿ ರೂಪಾಯಿಗಳನ್ನು ವಾಪಸ್ಸು ತೆಗೆದುಕೊಂಡಿದ್ದೇವೆಂದು ಸರ್ಕಾರವು ಹೇಳುತ್ತದೆ. ಈ ಮೇಲ್ಮನೆಯಲ್ಲಾಗಲಿ ಮತ್ತು ಕೆಳಮನೆಯಲ್ಲಾಗಲಿ ಯಾರಾದರೊಬ್ಬ ಶಾಸಕನ ಕೈಯಲ್ಲಿ ಹಣ ಇರುವಾಗ ಜನರ ಪರವಾಗಿ ಹಣ ಖರ್ಚು ಮಾಡದೇ ಇರುವಂತಹ ಮಾನಸಿಕ ಸ್ಥಿತಿ ಇರುವಂತಹವರನ್ನು ಒಬ್ಬರನ್ನಾಗಿ ತೋರಿಸಿ. ಏನಾಗಿದೆಯೆಂದರೆ ಕಾಯ್ದೆಯನ್ನು ಮಾಡಿದವರು ಯಾರು ಎಂದು ಕೇಳಿದರೆ ಶಾಸಕರು, ಕಾನೂನನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದವರು ಯಾರು ಎಂದು ಕೇಳಿದರೆ ಶಾಸಕರು, ನಿಯಮವನ್ನು ಮಾಡಿದವರು ಯಾರು ಎಂದು ಕೇಳಿದರೆ ಶಾಸಕರು ಎಂದು ಹೇಳುತ್ತಾರೆ. ಶಾಸಕರ ಹಣವನ್ನು ಖರ್ಚು ಮಾಡುವುದಕ್ಕೆ ಯಾವುದೋ ಎ.ಸಿ., ಕೊಠಡಿಯಲ್ಲಿರುವಂತಹ ಅಧಿಕಾರಿಯು guidelines ನ್ನು ಹಾಕಿಬಿಡುತ್ತಾನೆ. ಆ ಅಧಿಕಾರಿಯ guidelines ಪ್ರಕಾರ ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆದುಕೊಟ್ಟರೆ, ಆಗಲೂ ಸಹ guidelines ಪ್ರಕಾರ ಇದನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾರೆ. ನಂತರ ಇದನ್ನು ಬದಲಾವಣೆ ಮಾಡಿಕೊಟ್ಟರೆ ನಿಯಮದಲ್ಲಿ ಅವಕಾಶವಿಲ್ಲವೆಂದು ಹೇಳುತ್ತಾರೆ. ಒಬ್ಬ ಶಾಸಕ ಇವತ್ತಿನ ದಿವಸ ಮಂಜೂರಾತಿ ಹಣಕ್ಕೆ ಪತ್ರವನ್ನು ಕೊಟ್ಟರೆ, ಅವರು ನಿವೃತ್ತಿಯಾಗುವವರೆಗೆ ಆ ಕಾಮಗಾರಿ ಅನುಷ್ಠಾನವಾಗುವುದಿಲ್ಲ. ಇದನ್ನು 'ಸಕಾಲ'ದಲ್ಲಿ ತೆಗೆದುಕೊಂಡು ಬರಬೇಕೆಂದು ಹೇಳಿದರೆ, ಇದರಲ್ಲಿ ನಾವೇ ತಪ್ಪು ಮಾಡಿರುತ್ತೇವೆ. ಶಾಸಕರ ಹಣವನ್ನು ಮಧ್ಯ ಮಧ್ಯದಲ್ಲಿ ಒಂದು ಅಥವಾ ಎರಡು ಬಾರಿ ಬದಲಾವಣೆ ಕಾಮಗಾರಿಯನ್ನು ಮಾಡಿದ್ದರೆ ಒಂದು ಅಥವಾ ಎರಡು ಬಾರಿ ಬದಲಾವಣೆಯನ್ನು ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು. ನಂತರ ಅವಕಾಶವನ್ನು ಕೊಡಬೇಕಾಗಿಲ್ಲ. ಇದನ್ನು 'ಸಕಾಲ'ದಲ್ಲಿ ತೆಗೆದುಕೊಂಡು ಬರಬೇಕೆಂದು ಹೇಳಿದರೆ, 'ಸಕಾಲ'ದಲ್ಲಿ ಕಾಮಗಾರಿಯನ್ನು ತೆಗೆದುಕೊಂಡು ಬಂದರೆ ತಕ್ಷಣ ಕಾಮಗಾರಿಯನ್ನು ಪ್ರಾರಂಭ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಅಧಿಕಾರಿಗಳು ಮತ್ತು ಮಂತ್ರಿಗಳು ಯಾರು ಇದಕ್ಕೆ ಒಪ್ಪಲಿಲ್ಲ. ಇವತ್ತಿನ ದಿವಸ ಶಾಸಕರ ಹಣ 425 ಕೋಟಿ ರೂಪಾಯಿಗಳನ್ನು ವಾಪಸ್ಸು ತೆಗೆದುಕೊಂಡಿದ್ದೇನೆ ಎಂದು ಹೇಳಿದರೆ, ತಾವೇ ಇದರ ಬಗ್ಗೆ ಯೋಚನೆ ಮಾಡಿ ಹೇಳಬೇಕು. ಕೆಳಮನೆಯಲ್ಲಿ 224 ಜನ ಮಾನ್ಯ ಸದಸ್ಯರು ಬಡವರ ಮಧ್ಯೆ ಗೆದ್ದು ಅಧಿಕಾರಕ್ಕೆ ಬಂದವರು. ಅವರ ಹಣವೇನಾದರೂ ಉಳಿಯುವುದಕ್ಕೆ ಸಾಧ್ಯವಿದೆಯೇ, ಮೇಲ್ಮನೆಯಲ್ಲಿ ವಿಸ್ತಾರವಾದಂತಹ ಪ್ರದೇಶವಿದೆ. ನಾವು ಶಾಸಕರ ನಿಧಿ ಬಂದ ತಕ್ಷಣ ಮುಂಗಡವಾಗಿ ಹಣವನ್ನು ಕೊಟ್ಟು ಬಿಡುತ್ತೇವೆ. ಖರ್ಚಾಗಿದೆ 450 ಕೋಟಿ, 250 ಕೋಟಿ ರೂಪಾಯಿಗಳು ಹೋಗಿದೆ ಎಂದರೆ ಯಾರ ಹತ್ತಿರ ಹೇಳಬೇಕು. ಕಾನೂನನ್ನು ಮಾಡುವವರು ಶಾಸಕರು, ಕಾಯ್ದೆಯನ್ನು ಮಾಡುವವರು ಶಾಸಕರು, ಆದರೆ ಶಾಸಕರು ಹಣವನ್ನು ಖರ್ಚು ಮಾಡುವುದಕ್ಕೆ guidelines ನ್ನು ಹಾಕುವವರು ಈ ಅಧಿಕಾರಿಗಳಾಗಿರುತ್ತಾರೆ. ಈ ಅಧಿಕಾರಿಗಳಲ್ಲಿ ಒಂದು ವಿಚಿತ್ರವಾದಂತಹ ಸ್ಥಿತಿ ನಿರ್ಮಾಣವಾಗಿದೆ. ಇದು ನಿಷೇಧಿತ ಕಾಮಗಾರಿಯೆಂದು ಇದೆ. ಇದಕ್ಕೆ ಅಡ್ಡಿಯೆನ್ನುವುದಿಲ್ಲ. ಇದು ಅನುಮೋದಿತ ಕಾಮಗಾರಿ ಎಂದು ಯಾರೋ ಒಬ್ಬ ಶಾಸಕನು ಹೋಗಿ ಪರಿಶಿಷ್ಟ ಜಾತಿಯ ಕೇರಿಗೆ ಹೋಗಿ ನಿಂತು ಬಿಡುತ್ತಾನೆ. ಆ ಪರಿಶಿಷ್ಟ ಜಾತಿಯವರು ನಮಗೆ ಕುಡಿಯುವುದಕ್ಕೆ ನೀರು ಇಲ್ಲವೆಂದು ಹೇಳುತ್ತಾನೆ. ಕುಡಿಯುವುದಕ್ಕೆ ನೀರಿಲ್ಲವೆಂದು ಬಾವಿಗಳನ್ನು ತೆರೆಯಲು 2 ಲಕ್ಷ ರೂಪಾಯಿಗಳನ್ನು ಶಾಸಕರು ಕೊಟ್ಟು ಬರುತ್ತಾರೆ. Guidelines ಪ್ರಕಾರ ಕುಡಿಯುವ ನೀರಿನ ಬಾವಿಗಳನ್ನು ತೆರೆಯುವುದಕ್ಕೆ ಅಧಿಕಾರ ಇಲ್ಲ ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿಲ್ಲಾಧಿಕಾರಿಗಳು ಇದನ್ನು ವಾಪಸ್ಸು ಮಾಡುತ್ತಾರೆ. ಇದಕ್ಕೆ ಏನು ಮಾಡಬೇಕು. ಗ್ರಾಮ ಪಂಚಾಯಿತಿಯಲ್ಲಿ ಎಲ್ಲರೂ ಅರ್ಧ ಕುರ್ಚಿಯಲ್ಲಿ ಕುಳಿತುಕೊಂಡಿದ್ದಾರೆ. ಮೂಲಭೂತ ಸೌಕರ್ಯಗಳಲ್ಲವೆಂದು, ಪೀಠೋಪಕರಣಗಳನ್ನು ಮಾಡಿ ಎಂದು 3 ಲಕ್ಷ ರೂಪಾಯಿಗಳನ್ನು ಕೊಟ್ಟು ಬಂದೆ. ಪೀಠೋಪಕರಣಗಳನ್ನು ಮಾಡುವುದಕ್ಕೆ ಗ್ರಾಮ ಪಂಚಾಯಿತಿಯಲ್ಲಿ ಅಧಿಕಾರವಿಲ್ಲ. ಅದಕ್ಕೋಸ್ಕರ ಹಣ ವಾಪಸ್ಸು ಮಾಡಿದ್ದಾರೆ. ನಾನು ಹೇಳುವಂತಹ ಸ್ಥಿತಿಯೇನೆಂದರೆ ಗ್ರಾಮ ಪಂಚಾಯಿತಿಗೆ ಒಂದು ಕಂಪ್ಯೂಟರ್‌ನ್ನು ಕೊಡುವುದಕ್ಕೂ ಗ್ರಾಮ ಪಂಚಾಯಿತಿಯಿಂದ ಆಯ್ಕೆಯಾದಂತಹ ಶಾಸಕರಿಗೆ ಅಧಿಕಾರ ಇಲ್ಲದಿದ್ದರೆ, ಇದರ ಬಗ್ಗೆ ಪರಿಶೀಲನೆಯನ್ನು ಮಾಡಬೇಕು. ತಮಗೆ ಪರಿಶೀಲನೆ ಮಾಡುವುದಕ್ಕೆ ತಾಕತ್ತು ಇದೆ ಎಂಬ ಕಾರಣಕ್ಕಾಗಿ ತಮ್ಮ ಹತ್ತಿರ ಈ ಮಾತನ್ನು ಹೇಳಿದೆ. ಈ ಮಾತನ್ನು ಬೇರೆ ಸಚಿವರ ಹತ್ತಿರ ಹೇಳಿ ವಿಫಲನಾಗಿದ್ದೇನೆ. ಬೇರೆ ಸಚಿವರ ಬಗ್ಗೆ ನನಗೆ ಯಾವುದೇ ರೀತಿಯ ವಿರೋಧವಿಲ್ಲ. ಮಾನ್ಯ ಸಚಿವರು ಏನಾದರೂ ಮಾಡುತ್ತಾರೆ ಎಂಬ ವಿಶ್ವಾಸದ ಮೇಲೆ ಈ ಮಾತನ್ನು ಹೇಳುತ್ತಿದ್ದೇನೆ.

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಕೃಷಿ ಸಚಿವರ ಬಗ್ಗೆ ಮಾತನಾಡುತ್ತಾ, ನಾವು ಗ್ರಾಮ ಪಂಚಾಯಿತಿಯಿಂದ ಆಯ್ಕೆಯಾದಂತಹವರು. ಗ್ರಾಮ ಪಂಚಾಯಿತಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ನಮ್ಮ ಅನುದಾನದೊಳಗೆ ಅವಕಾಶವನ್ನು ಕಲ್ಪಿಸಕೊಡಬೇಕೆಂದು ಕೇಳುತ್ತೇನೆ. ಏಕೆಂದರೆ ನಾನು ಮಾಡಿರುವಂತಹ ಕೆಲಸವನ್ನು ಹೇಳುತ್ತಿದ್ದೇನೆ. ಗ್ರಾಮ ಪಂಚಾಯಿತಿಯಲ್ಲಿ ಒಂದು ಜನರೇಟರ್‌ನ್ನು ಕೊಡಿಸುವುದಕ್ಕೆ ಒಂದೂ ಕಾಲು ವರ್ಷ ಹೋರಾಟವನ್ನು ಮಾಡಿದೆ. ಕೊನೆಗೂ ಕೂಡ ಅದರಲ್ಲಿ ಯಶಸ್ವಿಯಾಗಿದ್ದೇನೆ. ಇಡೀ ರಾಜ್ಯಕ್ಕೆ ಇಲ್ಲಿಯತನಕ ಗ್ರಾಮ ಪಂಚಾಯಿತಿಗಳಿಗೆ ಜನರೇಟರ್‌ಗಳನ್ನು ಒದಗಿಸುವಂತಹ ವ್ಯವಸ್ಥೆ ಇರಲಿಲ್ಲ. ಎಲ್ಲಾ ಅಧಿಕಾರಿಗಳ ಸಹಕಾರವನ್ನು ತೆಗೆದುಕೊಂಡು ಒಂದೂ ಕಾಲು ವರ್ಷದ ನಂತರ ಸರ್ಕಾರವು ಇದಕ್ಕೆ ಒಂದು ಅವಕಾಶವನ್ನು ಮಾಡಿಕೊಟ್ಟಿದೆ. ಇದು ಇಡೀ ರಾಜ್ಯಕ್ಕೆ ಅನ್ವಯಿಸುತ್ತದೆ. ಅದೇ ರೀತಿ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ ಹಾಗೆ ಮಾನ್ಯ ಸಚಿವರು ಅದರ ಕಡೆ ಗಮನವನ್ನು ಹರಿಸಿ, ಮೂಲಭೂತ ಸೌಕರ್ಯಕ್ಕೆ ನಮ್ಮ ಅನುದಾನದೊಳಗೆ ಹಣವನ್ನು ಕೊಡಿಸುವಂತಹ ವ್ಯವಸ್ಥೆಯನ್ನು ಮಾಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಸಮಸ್ಯೆಯೇ ಈ ಪೀಠ. ಹೆಚ್ಚು ಹೊತ್ತು ಮಾತನಾಡಬೇಡಿ ಕುಳಿತುಕೊಳ್ಳಿ ಎಂದು ಹೇಳುತ್ತಾರೆ. ನಾನು ಜಾಸ್ತಿ ಮಾತನಾಡುತ್ತೇನೆ ಎಂದು ವಿರೋಧ ಪಕ್ಷದ ನಾಯಕನಾದೆ. ಅಲ್ಲಿಯೂ ಕೂಡ ನಿಯಂತ್ರಣ ಮಾಡಿದ್ದಾರೆ. ಯಾರು ನನ್ನ ರಕ್ಷಣೆಗೆ ಬರಬೇಕೋ ಗೊತ್ತಿಲ್ಲ. ನಾನು ಕೊನೆಯದಾಗಿ ಒಂದು ಮಾತನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. 'ಬಾಪೂಜಿ' ಕೇಂದ್ರಗಳ ಬಗ್ಗೆ ತಾವು ಏನು ಮಾಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. 100 ಸೇವೆಗಳನ್ನು ಕೊಟ್ಟ ನಂತರ ಗ್ರಾಮ ಪಂಚಾಯಿತಿಯಲ್ಲಿರುವಂತಹ PDO ಗಳು ಈಗ 'ಸಿ' ದರ್ಜೆಯಲ್ಲಿ ಇದ್ದಾರೆ. ಅವರನ್ನು 'ಬಿ' ದರ್ಜೆಗೆ ಏರಿಸಿದರೆ ನಮಗಾಗಿರುವ ಆಡಳಿತಾತ್ಮಕ ಅವಕಾಶಗಳೇನೆಂದರೆ ತಹಶೀಲ್ದಾರ್‌ರವರು ಕೊಡುವಂತಹ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ನಮ್ಮ ಗ್ರಾಮ ಪಂಚಾಯಿತಿಯ PDO ರವರು ಕೊಡಬಹುದು. ಅಂಗವಿಕಲ ವೇತನ, ವಿಧವಾ ವೇತನ, ಬಡವರಿಗೆ ಕೊಡುವಂತಹ ಸವಲತ್ತುಗಳನ್ನು ಪೂರ್ಣ ಪ್ರಮಾಣದಲ್ಲಿ ನಮ್ಮ ಗ್ರಾಮ ಪಂಚಾಯಿತಿಯಲ್ಲಿಯೇ ಮಾಡುವುದಕ್ಕೆ ಅವಕಾಶ ಸಿಗುತ್ತದೆ. ಅದಕ್ಕಾಗಿ ಶ್ರೀ ಹೆಚ್.ಕೆ.ಪಾಟೀಲ್‌ರವರಿಗೆ PDO ರವರನ್ನು 'ಬಿ' ದರ್ಜೆಗೆ ಏರಿಸಿ ಎಂದು ಹೇಳಿದ್ದೆವು. ಆದ್ದರಿಂದ ಪಿ.ಡಿ.ಓ., ಗಳನ್ನು 'ಬಿ' ದರ್ಜೆಗೆ ಏರಿಸುವುದಕ್ಕೆ ಪ್ರಸ್ತಾಪವನ್ನು ಸರ್ಕಾರಕ್ಕೆ ಕಳುಹಿಸಿದರು. ಆದರೆ ಇವತ್ತಿನ ದಿವಸದವರೆಗೂ ಇದು ಅನುಮೋದನೆಯಾಗಿಲ್ಲ. ಇದರಲ್ಲಿ ಆಶ್ಚರ್ಯವೇನೆಂದರೆ ಹಿಂದಿನ ಗ್ರಾಮೀಣಾಭಿವೃದ್ಧಿ ಸಚಿವರು ಇಷ್ಟೊಂದು ಪರಿಣಾಮಕಾರಿಯಾದಂತಹ ಯೋಜನೆಯನ್ನು ಅನುಷ್ಠಾನ ಮಾಡುವುದಕ್ಕೋಸ್ಕರ ಸಿಬ್ಬಂದಿಯನ್ನು 'ಬಿ' ದರ್ಜೆಗೆ ಏರಿಸಿ ಎಂದು ನಾನು ಹೇಳಿದರೂ ಕೂಡ ಇಲ್ಲಿಯವರೆಗೂ ಇದಕ್ಕೆ ಅನುಮೋದನೆಯನ್ನು ಕೊಟ್ಟಿಲ್ಲ. ಇದು ಅತ್ಯಂತ ಬೇಜವಾಬ್ದಾರಿಯಾದಂತಹ ವಿಷಯವೆಂದು ಹೇಳಿ ಆರ್ಥಿಕ ಇಲಾಖೆಗೆ ಒಂದು ಪತ್ರವನ್ನು ಬರೆಯುತ್ತಾರೆ. ಸರ್ಕಾರಕ್ಕೆ ಇದನ್ನು ಅನುಷ್ಠಾನಗೊಳಿಸುವುದಕ್ಕೆ ಮನಸ್ಸಿದ್ದರೂ ಕೂಡ ಇಲಾಖೆಯಲ್ಲಿ ಆಗಿರುವಂತಹ ಸಮಸ್ಯೆಗಳನ್ನು ತಾವು ಅರ್ಥ ಮಾಡಿಕೊಳ್ಳಬೇಕು. ದಯವಿಟ್ಟು ಇದನ್ನು ತಕ್ಷಣ ಅನುಷ್ಠಾನಗೊಳಿಸಬೇಕಾದ ಅವಶ್ಯಕತೆ ಇದೆ. ಎರಡು ತಾಲ್ಲೂಕು ಪಂಚಾಯಿತಿಗಳನ್ನು ಮೇಲ್ಮಟ್ಟದಲ್ಲಿ ನೋಡುವುದಕ್ಕೆ RDO (Rural Development Officer) ಎಂದು ಹೊಸ ಹುದ್ದೆಯನ್ನು ಸೃಷ್ಟಿ ಮಾಡಲಾಗಿದೆ. ಈ ಹುದ್ದೆಯನ್ನು ಸೃಷ್ಟಿ ಮಾಡಿದ್ದೀರಿ. ಈ ಹುದ್ದೆಯನ್ನು ಮಂಜೂರು ಮಾಡಿದ್ದನ್ನು ಬಿಟ್ಟರೆ, ಇದುವರೆಗೂ ಈ ಹುದ್ದೆಗೆ ನೇಮಕಾತಿಯಾಗಿಲ್ಲ.

(ಮುಂದು)

**(ಶಿ)04/07/2018/ಎಸ್‌ಪಿಆರ್/ಎ.ಕೆ./11:30**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು):-**

ಗ್ರಾಮ ಪಂಚಾಯಿತಿಗಳಲ್ಲಿನ ಕಿರಿಯ ಇಂಜಿನಿಯರ್ ಹುದ್ದೆಯ ಬಗ್ಗೆ ಹೇಳುವುದಾದರೆ, 30 ಗ್ರಾಮ ಪಂಚಾಯಿತಿಗಳಿಗೆ ಒಬ್ಬ ಕಿರಿಯ ಇಂಜಿನಿಯರ್ ಇದ್ದಾರೆ. ನಮ್ಮ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಕಡತವನ್ನು ಹಿಡಿದುಕೊಂಡು ಇಂಜಿನಿಯರ್‌ರವರನ್ನು ಹುಡುಕಬೇಕು. ಕಾರನ್ನು ತೆಗೆದುಕೊಂಡು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೋಗಿ ಅವರನ್ನು ಕರೆದುಕೊಂಡು ಬರಬೇಕು. ಇಂತಹ ಪರಿಸ್ಥಿತಿಗಳು ನಿರ್ಮಾಣವಾಗಿವೆ. ಕನಿಷ್ಟ ಎರಡು ಗ್ರಾಮ ಪಂಚಾಯಿತಿಗಳಿಗೆ ಒಬ್ಬ ಇಂಜಿನಿಯರ್‌ರವರನ್ನು ನೇಮಿಸದಿದ್ದರೆ ಗ್ರಾಮ ಪಂಚಾಯಿತಿಯನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. ಇಂತಹ ಇನ್ನೂ ಹಲವಾರು ವಿಚಾರಗಳಿವೆ. ಮಾನ್ಯ ಸಭಾಪತಿಯವರು ಅವಕಾಶ ನೀಡಿದರೆ ಈ ಬಗ್ಗೆ ಅರ್ಧ ಗಂಟೆ ನಿಯಮದಡಿ ಚರ್ಚೆ ಮಾಡಲು ಮನವಿಯನ್ನು ಸಲ್ಲಿಸಲಾಗುವುದು ಹಾಗೂ ಚರ್ಚೆಯನ್ನೂ ಸಹ ಮಾಡಲಾಗುವುದು.

**ಸಭಾಪತಿಯವರು**:- ಈ ಬಗ್ಗೆ ನಾನು ಹೇಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಇಂತಹ ಎಲ್ಲಾ ವಿಷಯಗಳ ಬಗ್ಗೆ ಸರ್ಕಾರವು ಕೂಲಂಕಷವಾಗಿ ಅರ್ಥ ಮಾಡಿಕೊಂಡು, ತಕ್ಷಣವೇ ಸಮಸ್ಯೆಯನ್ನು ಪರಿಹರಿಸಬೇಕು. ಇಂತಹ ಇನ್ನೂ ಹಲವಾರು ವಿಷಯಗಳ ಬಗ್ಗೆ ಅರ್ಧ ಗಂಟೆ ಕಾಲಾವಧಿಯಲ್ಲಿ ಚರ್ಚೆ ಮಾಡಲು ಮನವಿಯನ್ನು ಸಲ್ಲಿಸುತ್ತೇವೆ, ಇವತ್ತಿನ ಸಾಯಂಕಾಲ ಅಥವಾ ನಾಳೆಯ ದಿವಸ ಈ ವಿಷಯಗಳ ಬಗ್ಗೆ ಚರ್ಚೆಯನ್ನು ಮಾಡೋಣ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡಲು ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿರುವ 25 ಜನ ಸದಸ್ಯರು ತಯಾರಿದ್ದೇವೆ.

**ಶ್ರೀ ಕೃಷ್ಣಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)**:- ಮಾನ್ಯ ಸಭಾಪತಿಯವರೇ, ಇಲ್ಲಿ ಮುಖ್ಯವಾಗಿ ಎರಡು ಹುದ್ದೆಗಳಿಗೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರಾದ ಶ್ರೀ ಎಂ.ಕೆ.ಪ್ರಾಣೇಶ್‌ರವರು ಪ್ರಸ್ತಾಪ ಮಾಡುತ್ತಾ, ಸರ್ಕಾರದ ಗಮನ ಸೆಳೆದಿದ್ದಾರೆ. ಅವರ ಜೊತೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಇದೇ ರೀತಿಯ ಇನ್ನೂ ಹಲವಾರು ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಪ್ರಾಸ್ತಾವಿಕವಾಗಿ ಒಂದು ವಿಷಯದ ಬಗ್ಗೆ ಹೇಳುವುದಾದರೆ, ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿರುವ ಸಮಸ್ಯೆಗಳು ನಿಜವಾಗಿಯೂ ಸಹ ಇವೆ, ಅವುಗಳು ಇಲ್ಲವೆಂದು ನಾವು ಅಲ್ಲಗೆಳೆಯುವುದಿಲ್ಲ. ಏಕೆಂದರೆ ಸರ್ಕಾರ ಕೇವಲ ಸಮಜಾಯಿಷಿಯನ್ನು ಮಾಡಿಕೊಳ್ಳುವುದಕ್ಕೆ ಮಾತ್ರವೇ ನಿಂತಿದೆ ಎಂದು ಅಲ್ಲ. ಅನೇಕ ರೀತಿಯಾದ ಸಮಸ್ಯೆಗಳು ಇವೆ, ಅವುಗಳನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ತಾವು ಪ್ರಾಯಶಃ ಒಂದು ವಿಚಾರವನ್ನು ಒಪ್ಪಿಕೊಳ್ಳುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಶ್ರೀ ಹೆಚ್.ಕೆ.ಪಾಟೀಲ್‌ರವರು ಈ ಹಿಂದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಐದು ವರ್ಷಗಳ ಕಾಲ ಸಚಿವರಾಗಿದ್ದಂತಹ ಅವಧಿಯಲ್ಲಿ, ಪಂಚಾಯತ್ ವ್ಯವಸ್ಥೆಯನ್ನು ಸಶಕ್ತೀಕರಣ ಮಾಡುವಂತಹ ದಿಕ್ಕಿನಲ್ಲಿ ಬಹಳ ಬಲವಾದ ಮತ್ತು ದೃಢವಾದ ಹೆಜ್ಜೆಗಳನ್ನು ಇಟ್ಟಿದ್ದಾರೆ. ಆ ಪೈಕಿ ಕೆಲವು

ಯೋಜನೆಗಳು ಇನ್ನೂ ಅನುಷ್ಠಾನಗೊಂಡಿಲ್ಲ. ಇದು ನಿಜ. ಇದಕ್ಕೆ ಕಾರಣವೇನೆಂದರೆ ದೇಶದಲ್ಲಿಯೇ ಪರಿಣಾಮಕಾರಿಯಾದಂತಹ ವ್ಯವಸ್ಥೆಯನ್ನು ರೂಪಿಸಬೇಕೆಂಬ ಗುರಿಯನ್ನು ಅವರಾಗಿಯೇ ಅವರು ಇಟ್ಟುಕೊಂಡಿದ್ದಾರೆ. ಈ ವ್ಯವಸ್ಥೆಯನ್ನು ಬದಲಾವಣೆ ಮಾಡಿ ಎಂದು ಯಾರೂ ಸಹ ಅವರನ್ನು ಕೇಳಲಿಲ್ಲ. ಮಾನ್ಯ ರಮೇಶ್ ಕುಮಾರ್ ರವರು ನೀಡಿರುವ ವರದಿಯನ್ನು ನೋಡಿದರೆ, we have set a very high aspiration for ourselves. ಬಹಳ ಉನ್ನತ ಗುರಿಯನ್ನು ನಮಗೆ ನಾವೇ ಇಟ್ಟುಕೊಂಡಿದ್ದೇವೆ. ಅದರಲ್ಲಿ ಸಾಕಷ್ಟು ಯೋಜನೆಗಳು ಅನುಷ್ಠಾನಗೊಂಡಿವೆ. ಈ ಅಂಶವನ್ನು ಮಾನ್ಯ ವಿರೋಧ ಪಕ್ಷದವರು ಒಪ್ಪುತ್ತಾರೆ ಎಂದು ನಾನು ಭಾವಿಸಿದ್ದೇನೆ. ಮಾನ್ಯ ರಮೇಶ್ ಕುಮಾರ್ ರವರು ಸಲ್ಲಿಸಿರುವ ವರದಿಯನ್ನು ಸಂಪೂರ್ಣವಾಗಿ ಅಲ್ಲದೇ ಹೋದರೂ, ಸಾಕಷ್ಟು ಯೋಜನೆಗಳು ಅನುಷ್ಠಾನಗೊಂಡಿವೆ. ಇದಕ್ಕೆ ಮಾನ್ಯ ರಮೇಶ್ ಕುಮಾರ್ ಹಾಗೂ ಮಾನ್ಯ ಹೆಚ್.ಕೆ.ಪಾಟೀಲ್ ರವರುಗಳು ಕಾರಣಕರ್ತರಾಗಿದ್ದಾರೆ. ದೇಶದಲ್ಲಿಯೇ ಪರಿಣಾಮಕಾರಿಯಾದ ಕಾನೂನನ್ನು ಕರ್ನಾಟಕದಲ್ಲಿ ಜಾರಿಗೆ ತಂದು ಅದನ್ನು ಅನುಷ್ಠಾನಗೊಳಿಸುವಲ್ಲಿ ಪ್ರಯತ್ನ ಮಾಡಲಾಗುತ್ತಿದೆ. ಕೆಲವು ಯೋಜನೆಗಳು ಇನ್ನೂ ಅನುಷ್ಠಾನಗೊಳ್ಳಬೇಕಾಗಿವೆ, ಈ ಅಂಶವನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದು ನಿಜವಲ್ಲ ಎಂಬುದಾಗಿ ನಾನು ಹೇಳಲಿಲ್ಲ. ಆದರೆ ಎಲ್ಲಾ ಯೋಜನೆಗಳನ್ನು ಒಂದೇ ಬಾರಿಗೆ ಅನುಷ್ಠಾನಗೊಳಿಸಲು ಸಾಧ್ಯವಾಗುವುದಿಲ್ಲ. ಪ್ರಾಯಶಃ ತಾವು ಈ ಅಂಶವನ್ನು ಒಪ್ಪಿಕೊಳ್ಳುತ್ತೀರಿ ಎಂದು ನಾನು ಭಾವಿಸುತ್ತೇನೆ. ಹಂತ ಹಂತವಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸೋಣ. ಇಲಾಖೆಯ ಈ ಹಿಂದಿನ ಮಂತ್ರಿಗಳು ಕೈಗೊಂಡ ಯೋಜನೆಗಳನ್ನು ಮುಂದುವರೆಸುವಂತಹ ಪ್ರಯತ್ನವನ್ನು ನಿಮ್ಮ ಸಹಕಾರದೊಂದಿಗೆ ನಾನು ಮಾಡುತ್ತೇನೆ. ಮಾನ್ಯ ಶಾಸಕರ ಅನುದಾನವನ್ನು ಪಂಚಾಯಿತಿಗಳ ಮೂಲಭೂತ ಸೌಕರ್ಯಗಳಿಗಾಗಿ ಕೊಡಬೇಕು ಎನ್ನುವ ವಿಷಯದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೆಚ್ಚು ಪ್ರಸ್ತಾಪ ಮಾಡಿದ್ದಾರೆ. ತಮಗೆ ಗೊತ್ತಿರುವಂತೆ ಈ ವಿಚಾರವು ಯೋಜನಾ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತದೆ. ಸಂಬಂಧಪಟ್ಟ ನಿಯಮಾವಳಿಗಳನ್ನು ರೂಪಿಸುವುದು ಇದೇ ಇಲಾಖೆಯೆ. ಹಿರಿಯ ಸಚಿವರಾದ ಮಾನ್ಯ ಆರ್.ವಿ.ದೇಶಪಾಂಡೆ ರವರು ನಾನು ಈ ವಿಚಾರದಲ್ಲಿ ಯೋಜನೆ ಇಲಾಖೆಯೊಂದಿಗೆ ವ್ಯವಹರಿಸಿ, ಅವರ ಮನವೊಲಿಸುಂತೆ ನನಗೆ ಸಲಹೆಯನ್ನು ನೀಡಿದ್ದಾರೆ. ಈ ವಿಚಾರವು ಮೊದಲ ಬಾರಿಗೆ ನನ್ನ ಗಮನಕ್ಕೆ ಬಂದಿದೆ. ಯೋಜನಾ ಇಲಾಖೆಯವರು ಈ ವಿಚಾರದಲ್ಲಿ ಯಾವ ಕಾರಣಕ್ಕಾಗಿ ಕೆಲವು ನಿರ್ಬಂಧಗಳನ್ನು ಇಟ್ಟುಕೊಂಡಿದ್ದಾರೆ ಎನ್ನುವ ಅಂಶಗಳನ್ನು ನಾನು ಇದುವರೆವಿಗೆ ಅರ್ಥ ಮಾಡಿಕೊಂಡಿಲ್ಲ. ಆದಾಗ್ಯೂ ಸಹ ನಾನು ಈ ವಿಚಾರದಲ್ಲಿ ಇಲಾಖೆಯೊಂದಿಗೆ ವ್ಯವಹರಿಸುತ್ತೇನೆ. ಗಮನ ಸೆಳೆಯುವ ಸೂಚನೆಗೆ ನೀಡುವ ಉತ್ತರಕ್ಕೆ ನಾನು ಇನ್ನೂ ಬಂದಿಲ್ಲ. ಮೊದಲು ಬೇರೆ ವಿಚಾರಕ್ಕೆ ಸಂಬಂಧಪಟ್ಟಂತೆ ತಾವುಗಳೆಲ್ಲರೂ

ಮಾತನಾಡಿರುವುದರಿಂದ ಈ ಬಗ್ಗೆ ಮಾತನಾಡುತ್ತಿದ್ದೇನೆ. ಈ ವಿಚಾರದಲ್ಲಿ ಯಾವ ಕಾರಣಕ್ಕಾಗಿ ತಕರಾರು ಇದೆ ಎಂಬ ಅಂಶದ ಬಗ್ಗೆ ನಾನು ಯೋಜನಾ ಇಲಾಖೆಯೊಂದಿಗೆ ಮಾತನಾಡುತ್ತೇನೆ ಹಾಗೂ ಅದನ್ನು ಅರ್ಥ ಮಾಡಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಹಿರಿಯ ಸಚಿವರಾದ ಮಾನ್ಯ ಆರ್.ವಿ.ದೇಶಪಾಂಡೆ ರವರ ಸಹಕಾರವನ್ನು ನಾನು ತೆಗೆದುಕೊಂಡು, ಯೋಜನಾ ಇಲಾಖೆಯ ಮನವೊಲಿಸುವ ಪ್ರಯತ್ನವನ್ನು ಮಾಡುತ್ತೇನೆ. ಸದರಿ ಇಲಾಖೆಯ ನಿರ್ಬಂಧಗಳನ್ನು ನಾನು ಅರ್ಥ ಮಾಡಿಕೊಳ್ಳದೇ, ನಾನು ಅವರ ಪರವಾಗಿ ಹೇಳಿಕೆಯನ್ನು ನೀಡಿದರೆ ಅದು ತಪ್ಪಾಗುತ್ತದೆ. ನಾಳೆಯ ದಿವಸ ನಾನು ಹೇಳಿಕೆಯನ್ನು ಕೊಟ್ಟ ನಂತರ ಇಲಾಖೆಗೆ ನಿರ್ಬಂಧ ಹೇರಲು ಬಲವಾದ ಕಾರಣಗಳಿವೆ ಎಂದಾದರೆ, ನಾನು ಸುಮ್ಮನೆ ಸದನದಲ್ಲಿ ತಪ್ಪು ಮಾಹಿತಿಯನ್ನು ನೀಡಿದಂತಾಗುತ್ತದೆ. ಈ ವಿಚಾರದಲ್ಲಿ ನಾನು ಗಂಭೀರವಾಗಿ ಇಲಾಖೆಯೊಂದಿಗೆ ಮಾತನಾಡಿ, ಅವರ ನಿರ್ಬಂಧಕ್ಕೆ ಇರುವ ಸಮಸ್ಯೆಗಳನ್ನು ಪರಿಹಾರ ಮಾಡಿ, ಇಲಾಖೆಯವರ ಮನವೊಲಿಸುವ ಪ್ರಯತ್ನವನ್ನು ನಾನು ಮಾಡುತ್ತೇನೆ.

ಮಾನ್ಯ ಸದಸ್ಯರು ಹುದ್ದೆಗಳ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ನಾವು ಹುದ್ದೆಗಳ ಭರ್ತಿಗಾಗಿ ಅನುಮೋದನೆ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. ಇದು ನಿಜ. ಆರ್ಥಿಕ ಇಲಾಖೆಯಲ್ಲಿ ಹೆಚ್ಚುವರಿಯಾಗಿ ಎರಡು ಹುದ್ದೆಗಳನ್ನು ಸೃಜನೆ ಮಾಡುವ ನಮ್ಮ ಪ್ರಸ್ತಾವನೆ ಸ್ಥಗಿತಗೊಂಡಿದೆ. ಹಣಕಾಸು ಇಲಾಖೆಯವರ ಸಮಸ್ಯೆ ಏನೆಂದರೆ, ಪ್ರಸ್ತುತ ಆರನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಪರಿಸ್ಥಿತಿ ಉದ್ಭವವಾಗಿರುವುದರಿಂದ, ಒಂದೇ ಬಾರಿಗೆ ಒಂದು ವರ್ಷದಲ್ಲಿ 10 ಸಾವಿರ ಕೋಟಿ ರೂಪಾಯಿಗಳನ್ನು ಸಂಬಳಕ್ಕಾಗಿ ಹೆಚ್ಚುವರಿಯಾಗಿ ವಿನಿಯೋಗಿಸುವಂತಹ ಸಂದರ್ಭ ಬಂದಿರುವುದರಿಂದ, ಇದು ಜಾರಿಗೊಂಡ ನಂತರ ಹೊಸ ಹುದ್ದೆಗಳನ್ನು ಸೃಜಿಸುವ ಬಗ್ಗೆ ಕ್ರಮ ವಹಿಸಲಾಗುವುದು. ನಮ್ಮ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯು ತಿರಸ್ಕರಿಸಿಲ್ಲ. ಈಗ ಹೆಚ್ಚುವರಿಯಾಗಿ ವಿನಿಯೋಗ ಮಾಡಬೇಕಾದ 10 ಸಾವಿರ ಕೋಟಿ ರೂಪಾಯಿಗಳ ವಿತರಣಾ ಹೊರೆಯನ್ನು ಹೊಂದಾಣಿಕೆ ಮಾಡಲು ಮೊದಲು ಅವಕಾಶ ನೀಡಿ, ನಂತರದಲ್ಲಿ ಹೊಸ ಹುದ್ದೆಗಳ ಸೃಜನೆ ಬಗ್ಗೆ ಕ್ರಮ ತೆಗೆದುಕೊಳ್ಳೋಣ ಎಂಬುದಾಗಿ ಹೇಳಿದ್ದಾರೆಯೇ ಹೊರತು ನಮ್ಮ ಪ್ರಸ್ತಾವನೆಯನ್ನು ತಿರಸ್ಕರಿಸಿಲ್ಲ. ಈ ವಿಚಾರದಲ್ಲಿ ನಾವು ಅವರೊಂದಿಗೆ ಸಮಾಲೋಚನೆ ಮಾಡುತ್ತೇವೆ. ಆರ್ಥಿಕ ಇಲಾಖೆಯ ಸಮಸ್ಯೆಯನ್ನು ನಾವು ಸಾರಾಸಗಟಾಗಿ ತಿರಸ್ಕಾರ ಮಾಡುವುದಕ್ಕಾಗುವುದಿಲ್ಲ. ಪ್ರಸ್ತುತ ವಿಚಾರಕ್ಕೆ ಬರುವುದಾದರೆ, ಸಣ್ಣ ಹಾಗೂ ದೊಡ್ಡ ಗ್ರಾಮ ಪಂಚಾಯಿತಿಗಳು ಎರಡೂ ಸಹ ಒಂದೇ ರೀತಿಯದ್ದಾಗಿರುತ್ತದೆ ಎಂಬುದಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಸಲಹೆಯನ್ನು ನೀಡಿದ್ದಾರೆ. ಎರಡೂ ರೀತಿಯ ಗ್ರಾಮ ಪಂಚಾಯಿತಿಗಳಿಗೆ ಒಂದೇ ಸಂಖ್ಯೆಯ ಹುದ್ದೆಗಳನ್ನು ಮಂಜೂರು ಮಾಡಿದರೆ ಯಾವ ರೀತಿಯ ಅರ್ಥವಾಗುತ್ತದೆ? ಆರು ಜನ ಸದಸ್ಯರು

ಹೊಂದಿರುವ ಗ್ರಾಮ ಪಂಚಾಯಿತಿ ಹಾಗೂ 26 ಜನ ಸದಸ್ಯರನ್ನು ಹೊಂದಿರುವ ಗ್ರಾಮ ಪಂಚಾಯಿತಿಗಳು ಹೇಗೆ ಒಂದೇ ರೀತಿಯದ್ದಾಗಿರುತ್ತವೆ? ಈ ವಿಚಾರದಲ್ಲಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಗ್ರೇಡ್-1 ಮತ್ತು ಗ್ರೇಡ್-2 ಎಂಬುದಾಗಿ ಎರಡು ರೀತಿಯ ಗ್ರಾಮ ಪಂಚಾಯಿತಿಗಳನ್ನು ಮಾಡಿರುವುದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಿಳಿದ ವಿಚಾರವಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಗ್ರೇಡ್-1 ಗ್ರಾಮ ಪಂಚಾಯಿತಿಗಳಿಗೆ ಲೆಕ್ಕಗಳನ್ನು ಬರೆಯಲು ಸಿಬ್ಬಂದಿಗಳ ಅವಶ್ಯಕತೆ ಇದೆ. ಹೀಗಾಗಿ 2,579 ದ್ವಿತೀಯ ದರ್ಜೆ ಲೆಕ್ಕ ಸಹಾಯಕರನ್ನು ಗ್ರೇಡ್-1 ಗ್ರಾಮ ಪಂಚಾಯಿತಿಗಳಿಗೆ ನಿಯೋಜಿಸುವಂತಹ ಕೆಲಸಗಳಾಗುತ್ತಿವೆ. ಗ್ರೇಡ್-2 ಗ್ರಾಮ ಪಂಚಾಯಿತಿಗಳಿಗೆ ಈ ರೀತಿಯ ಸೌಲಭ್ಯವನ್ನು ಇನ್ನೂ ಕೊಟ್ಟಿಲ್ಲ. ಏಕೆಂದರೆ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಿದಂತೆ, ಅಲ್ಲಿನ ಗ್ರಾಮ ಪಂಚಾಯಿತಿಗಳಲ್ಲಿ ಹೆಚ್ಚಿನ ಕೆಲಸದ ಒತ್ತಡಗಳಿರುವುದಿಲ್ಲ. ಗ್ರೇಡ್-1 ಗ್ರಾಮ ಪಂಚಾಯಿತಿಗಳಿಗೆ ಒಬ್ಬ ಅಕೌಂಟೆಂಟ್‌ರವರನ್ನು ನಿಯೋಜಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹಾಗೂ ಕಾರ್ಯದರ್ಶಿಗಳ ಹಲವಾರು ಹುದ್ದೆಗಳು ಪ್ರಸ್ತುತ ಖಾಲಿಯಿವೆ. ಹಾಲಿ ತಮಗೆ ತಿಳಿದಿರುವಂತೆ ನೇರ ನೇಮಕಾತಿ ಪ್ರಕ್ರಿಯೆ ಮುಖಾಂತರ, ಯಾವುದೇ ಒಂದು ರೀತಿಯಾದ ಸಂದರ್ಶನವಿಲ್ಲದೇ ಸುಮಾರು 1,624 ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹಾಗೂ ಕಾರ್ಯದರ್ಶಿ ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿದೆ. ಆ ಪೈಕಿ 815 ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಗಳು ಹಾಗೂ 809 ಕಾರ್ಯದರ್ಶಿ ಹುದ್ದೆಗಳಿಗೆ ಪ್ರಸ್ತುತ ನೇಮಕಾತಿ ಆದೇಶವನ್ನು ಕೊಡುವ ಹಂತದಲ್ಲಿದೆ. ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಸ್ವಲ್ಪ ದಿನಗಳ ಮಟ್ಟಿಗೆ ತರಬೇತಿಯನ್ನು ನೀಡಿದ ನಂತರ ಆ ಪೈಕಿ ಸುಮಾರು 1,624 ಹುದ್ದೆಗಳಿಗೆ ಮುಂದಿನ ಒಂದೆರೆಡು ತಿಂಗಳೊಳಗೆ ಸ್ಥಳ ನಿಯುಕ್ತಿಗೊಳಿಸುವ ಕೆಲಸಗಳನ್ನು ನಾವು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ಎಲ್ಲಾ ಸಮಸ್ಯೆಗಳಿಗೆ ಅಲ್ಲದೇ ಹೋದರೂ ಸಹ ಹಂತ ಹಂತವಾಗಿ ಅವುಗಳನ್ನು ಪರಿಹರಿಸುವ ಕೆಲಸಗಳನ್ನು ನಾವು ಮಾಡುತ್ತಿದ್ದೇವೆ. ಇವುಗಳಲ್ಲದೇ ಮಾನ್ಯ ಸದಸ್ಯರು ಇನ್ನಿತರೆ ಎರಡು-ಮೂರು ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ಈಗಾಗಲೇ ಸ್ಥಾಪಿಸಿರುವ ಬಾಪೂಜಿ ಸೇವಾ ಕೇಂದ್ರಗಳು ಕನಿಷ್ಠ ಸೌಲಭ್ಯಗಳನ್ನು ಒದಗಿಸುವಂತಹ ಕೆಲವು ಕೆಲಸಗಳನ್ನು ಸರಿಯಾಗಿ ಮಾಡುತ್ತಿಲ್ಲ. ನಾನು ಉಡುಪಿ ಹಾಗೂ ಇನ್ನಿತರೆ ಜಿಲ್ಲೆಗಳಿಗೆ ಭೇಟಿ ನೀಡುತ್ತೇನೆ. ಆಗ ನೇರವಾಗಿ ಬಾಪೂಜಿ ಸೇವಾ ಕೇಂದ್ರಗಳಿಗೆ ತೆರಳಿ, ಅಲ್ಲಿ ಯಾವ ರೀತಿಯ ಸಮಸ್ಯೆಗಳಿವೆ, ಅವುಗಳನ್ನು ಅರ್ಥ ಮಾಡಿಕೊಳ್ಳೋಣ. ಬಾಪೂಜಿ ಸೇವಾ ಕೇಂದ್ರಗಳಲ್ಲಿನ ಸಮಸ್ಯೆಗಳು ನಿವಾರಣೆಯಾದಲ್ಲಿ ಮಾನ್ಯ ಸದಸ್ಯರು ಹೇಳಿದ ಹಾಗೆ ಮನೆಯ ಬಾಗಿಲಿನಲ್ಲಿ ಜನಗಳಿಗೆ ಸೌಕರ್ಯಗಳು ಲಭ್ಯವಾಗುತ್ತದೆ. ಇದರಲ್ಲಿ ಖಂಡಿತವಾಗಿಯೂ ಸಹ ಯಾವುದೇ ರೀತಿಯಾದ ಅನುಮಾನವಿಲ್ಲ. ಇಂತಹ ಕೇಂದ್ರಗಳಿಂದ ಬಹಳ ಅನುಕೂಲಗಳಾಗುತ್ತವೆ. ಹಾಲಿ ಇರುವ

ಸಮಸ್ಯೆಗಳನ್ನು ಪರಿಹಾರ ಮಾಡುವ ಪ್ರಯತ್ನಗಳನ್ನು ಮಾಡೋಣ. ಗ್ರಾಮ ಪಂಚಾಯಿತಿಗಳು ಕೆಲಸವನ್ನು ನಿರ್ವಹಿಸಬೇಕಾದರೆ, ಕನಿಷ್ಠ ಒಬ್ಬ ಕಂಪ್ಯೂಟರ್ ಆಪರೇಟರ್‌ಗಳನ್ನಾದರೂ ಅಲ್ಲಿ ನೇಮಿಸಬೇಕಾಗುತ್ತದೆ ಎನ್ನುವ ಅಂಶದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ವಾದವನ್ನು ಮಂಡಿಸಿದ್ದಾರೆ. ಹೀಗಾಗಿ ಈಗಾಗಲೇ ಪ್ರತಿ ಗ್ರಾಮ ಪಂಚಾಯಿತಿಗೆ ಒಂದು ಡೇಟಾ ಎಂಟ್ರಿ ಆಪರೇಟರ್ ಹುದ್ದೆಯನ್ನು ಮಂಜೂರು ಮಾಡಿ, ನೇಮಕಾತಿಯನ್ನು ಮಾಡುವ ಕೆಲಸವನ್ನು ಮಾಡಲಾಗುತ್ತಿತ್ತು. ಆದರೆ ಸದರಿ ಹುದ್ದೆಗಳಲ್ಲಿ ನೇಮಕಾತಿಯನ್ನು ಮಾಡುವಾಗ ರೋಸ್ಟರ್ ಪದ್ಧತಿಯನ್ನು ಅನುಸರಿಸಿಲ್ಲ ಎಂಬ ತಕರಾರು ಬಂದಿದ್ದರಿಂದ, ಈ ಪ್ರಕ್ರಿಯೆಯಲ್ಲಿ ಸ್ವಲ್ಪ ವಿಳಂಬವಾಗಿದೆ. ಈ ತಕರಾರನ್ನು ಪಂಚಾಯಿತಿಯ ಮಟ್ಟದಲ್ಲಿಯೇ ಪರಿಹರಿಸಿ ಎಂಬುದಾಗಿ ನಾವು ಹೇಳಿದ್ದೆವು ಹಾಗೂ ಅವರಿಗೆ ಅವಕಾಶವನ್ನೂ ಸಹ ನೀಡಲಾಗಿತ್ತು. ಪಂಚಾಯಿತಿಗಳಲ್ಲಿಯೇ ಈ ವಿಚಾರವನ್ನು ಬಗೆಹರಿಸಿದರೆ ಸಾಮಾಜಿಕ ನ್ಯಾಯವನ್ನು ಕಾಪಾಡುವುದಕ್ಕಾಗುವುದಿಲ್ಲ ಎಂಬ ಹೊಸ ತಕರಾರು ಬಂದಿದೆ. ಈ ಸಮಸ್ಯೆಯನ್ನು ಬಗೆಹರಿಸಲು ಒಂದು ಸೂತ್ರವನ್ನು ಮಾಡಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಘಟಕ ಎಂಬುದಾಗಿ ಸ್ಥಾಪಿಸಿ, ಅದರ ಮೂಲಕ ಸಾಮಾಜಿಕ ನ್ಯಾಯವನ್ನು ಒದಗಿಸುವ ಪ್ರಯತ್ನ ಮಾಡಲಾಗುತ್ತಿದೆ. ಈ ಸಮಸ್ಯೆಗಳನ್ನೆಲ್ಲ ಬಗೆಹರಿಸಿ, ಪ್ರತಿ ಪಂಚಾಯಿತಿಗೆ ಒಂದು ಡೇಟಾ ಎಂಟ್ರಿ ಆಪರೇಟರ್‌ಗಳನ್ನು ನೇಮಕ ಮಾಡುವಂತೆ ಒಟ್ಟು 6,072 ಪಂಚಾಯಿತಿಗಳಿಗೆ ಹುದ್ದೆಗಳನ್ನು ಕೊಡುವಂತಹ ಕೆಲಸವನ್ನು ಮುಂದಿನ ತಿಂಗಳುಗಳಲ್ಲಿ ಖಂಡಿತವಾಗಿಯೂ ಸಹ ನಾವು ಮಾಡುತ್ತೇವೆ.

ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಭಾಷಣದ ಕೊನೆಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯ ಹುದ್ದೆಯನ್ನು 'ಬಿ' ಗ್ರೇಡ್ ಹುದ್ದೆಗೆ ಏರಿಸುವ ವಿಚಾರದ ಬಗ್ಗೆ ಹೇಳಿದ್ದಾರೆ. ಈ ವಿಚಾರದಲ್ಲಿ ಸ್ವಾಭಾವಿಕವಾಗಿ ನಮ್ಮ ಇಲಾಖೆಯ ವಾದವಿದೆ. ತಮಗೆ ಗೊತ್ತಿರುವಂತೆ ಸರ್ಕಾರದ ಮಟ್ಟದಲ್ಲಿ 'ಬಿ' ಗ್ರೇಡ್ ಹುದ್ದೆ ಎಂದರೆ ಅದು ತಹಸೀಲ್ದಾರ್ ಹುದ್ದೆಗೆ ಸಮನಾಗಿರುತ್ತದೆ. ಎಷ್ಟೋ ತಾಲ್ಲೂಕುಗಳ ತಹಸೀಲ್ದಾರ್ ರವರು 'ಬಿ' ಗ್ರೇಡ್ ಹುದ್ದೆಯಲ್ಲಿದ್ದಾರೆ. ತಹಸೀಲ್ದಾರ್ ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಇಬ್ಬರೂ ಸಹ 'ಬಿ' ಗ್ರೇಡ್ ಹುದ್ದೆ ಎಂಬುದಾಗಿ ಮಾಡಿದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಿದಂತೆ ಅನುಕೂಲವಾಗುತ್ತದೆ. ಗ್ರಾಮೀಣ ಜನರಿಗೆ ಅಲ್ಲಿಯೇ ಜಾತಿ ಪ್ರಮಾಣ ಪತ್ರ ಹಾಗೂ ಇನ್ನಿತರೆ ಸೌಲಭ್ಯಗಳನ್ನು ವಿತರಿಸಲು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಗಳನ್ನು ಮೇಲ್ದರ್ಜೆಗೆ ಏರಿಸುವುದು ಅವಶ್ಯಕ. ಈ ಕಾರಣಕ್ಕಾಗಿ ಸದರಿ ಹುದ್ದೆಗಳನ್ನು ಮೇಲ್ದರ್ಜೆಗೆ ಏರಿಸುವ ರೂಪದಲ್ಲಿಯಾದರೂ ಸರಿ ಅಥವಾ ಬೇರೆ ಇನ್ನಾವುದೇ ಮಾರ್ಗದಲ್ಲಿ ನೀಡುವ ನಿಟ್ಟಿನಲ್ಲಾದರೂ ಸರಿ ಕಂದಾಯ ಇಲಾಖೆಯೊಂದಿಗೆ ಮಾತನಾಡಿ, ಸದರಿ ಸೌಲಭ್ಯಗಳು ಸಹ ಬಾಪೂಜಿ ಸೇವಾ ಕೇಂದ್ರಗಳಲ್ಲಿ ದೊರೆಯುವಂತಹ ಪ್ರಯತ್ನಗಳನ್ನು ಮಾಡೋಣ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

(051) 04-7-2018 11.40 ಬಿಎಸ್‌ಡಿ/ಎಕೆ

ಶ್ರೀ ಕೃಷ್ಣ ಭೈರೇಗೌಡ (ಮುಂದು)

ಹಾಗಂತ ಅದರ ಬಗ್ಗೆ ನಾವು pursue ಮಾಡುವುದಿಲ್ಲ ಎಂದಲ್ಲ. ಆ ರೀತಿ ತಕರಾರು ಇರುವುದರಿಂದ ಬೇರೆ ರೂಪದಲ್ಲಿ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡೋಣ. ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ತೇರ್ಗಡೆಯಾಗಿರುವವರು ಲೆಕ್ಕ ಪರಿಶೋಧನೆ ಮಾಡುತ್ತಾರೆ ಎಂಬುದು ತಪ್ಪು. ಅದು ಏಕೆ ಆ ರೀತಿ ಆಗುತ್ತಿದೆಯೋ, ಅದು ಸರಿಯಲ್ಲ. ಅವರು ಆಡಿಟ್ ಮಾಡಿ ಸುಮ್ಮನೆ ಏನೋ ಒಂದು ಬರೆಯುವುದು ಸರಿಯಲ್ಲ. ಇದು ಹೊಸ ಜವಾಬ್ದಾರಿಯಾಗಿರುವುದರಿಂದ ನನ್ನ ಗಮನಕ್ಕೆ ಬಂದಿರಲಿಲ್ಲ. ಇದರ ಬಗ್ಗೆ ನಾನು ಅಧಿಕಾರಿಗಳ ಜೊತೆ ಮಾತನಾಡುತ್ತೇನೆ. ಇದನ್ನು outsource ಮಾಡಿದರೂ ಕನಿಷ್ಠ ಅವರಿಗೆ ಲೆಕ್ಕ-ಪತ್ರ ನೋಡುವಂತಹ ಜ್ಞಾನ ಇರಬೇಕಾಗುತ್ತದೆ. ಅಂತಹವನ್ನು ನೇಮಿಸಲು ನಾನು ಇವತ್ತೇ ಮಾತನಾಡುತ್ತೇನೆ. ಅಂತಹವರಿಗೆ ಏಕೆ ಅವಕಾಶ ಆಯಿತು ಎಂದು ನನಗೆ ಅರ್ಥವಾಗುತ್ತಿಲ್ಲ. ಅದನ್ನು ಸರಿಮಾಡುವ ಪ್ರಯತ್ನವನ್ನು ನಾನು ಖಂಡಿತ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)** :- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಿ-ದರ್ಜೆ ಹುದ್ದೆಯ ಬಗ್ಗೆ ಮಾತನಾಡಿದರು, ಅದರ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಅದನ್ನು ಯಾವ ರೀತಿ ಮಾಡುತ್ತಾರೋ, ನೋಡೋಣ. ಆದರೆ ಹಿಂದೆ ಇದ್ದ ಮಂತ್ರಿಗಳು ಪ್ರಸ್ತಾವನೆ ಕಳುಹಿಸಿ 3 ವರ್ಷಗಳು ಆಗಿದೆ. ಆರ್ಥಿಕ ಇಲಾಖೆಯು ಸರ್ಕಾರದ ಅಧೀನದಲ್ಲಿದ್ದರೂ ಸರ್ಕಾರ ಹೇಳಿದ್ದೆಲ್ಲವನ್ನೂ ಪಾಲಿಸಲು ಸಾಧ್ಯವಾಗದೇ ಇರಬಹುದು. ಆದರೆ ವ್ಯವಸ್ಥೆಯನ್ನು ಸರಿಪಡಿಸಲು ಒಂದು ವ್ಯವಸ್ಥೆಯನ್ನಾದರೂ ರೂಪಿಸಬೇಕಲ್ಲವೇ? ಅದನ್ನೂ ಮಾಡಿಲ್ಲ. 3 ವರ್ಷಗಳಿಂದ ಕಡತ ಬಾಕಿ ಇರುವ ಬಗ್ಗೆ ಗಮನಹರಿಸಬೇಕು.

ಶಾಸಕರ ನಿಧಿಯನ್ನು ಯೋಜನಾ ಇಲಾಖೆಯಿಂದ ಬಳಸುವುದಾಗಿದ್ದು, ಇದರ ಬಗ್ಗೆ ಸರಿ ಮಾಡದಿದ್ದರೆ ಏನೂ ಆಗುವುದಿಲ್ಲ. ಗ್ರಾಮ ಪಂಚಾಯಿತಿಗಳಿಗೆ ಮೂಲಭೂತ ಸೌಕರ್ಯಗಳನ್ನು ಶಾಸಕರು ಕೊಟ್ಟಾಗ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲವೆಂದರೆ ಹೇಗೆ? ದಯಮಾಡಿ ತಪ್ಪು ತಿಳಿಯಬಾರದು. ನಮ್ಮಲ್ಲಿ ಒಂದು ವ್ಯವಸ್ಥೆ ಇದೆ. ದೇವಸ್ಥಾನದಲ್ಲಿ ಆನೆಯು ಪಾರುಪತ್ಯ ನಡೆಸುತ್ತದೆ. ಆನೆ ಪಾರುಪತ್ಯ ನಡೆಸುವುದು ಸರಿ, ಆದರೆ ಬಾಲ ಪಾರುಪತ್ಯ ನಡೆಸಲು ಸಾಧ್ಯವೇ? ಆನೆಯು ಬಾಲವನ್ನು ಅಲ್ಲಾಡಿಸಬೇಕೆ ಹೊರತು ಬಾಲ ಆನೆಯನ್ನು ಅಲ್ಲಾಡಿಸಲು ಸಾಧ್ಯವಿಲ್ಲ. ಈ ಶಾಸಕಾಂಗ ಎಂಬುದು ಒಂದು ಆನೆ ಇದ್ದ ಹಾಗೆ, ಬಾಲ ಹೇಳಿದಂತೆ ಕೇಳಬೇಕಾಗಿಲ್ಲ. ಯೋಜನಾ ಇಲಾಖೆಗೆ

ನಿರ್ದೇಶನ ಕೊಟ್ಟು ಈ ರೀತಿ ಮಾಡಿ ಎಂದು ಹೇಳಬೇಕು. ಕೆಲವೊಮ್ಮೆ ಇಂತಹ ನಿಷೇಧಿತ ವ್ಯವಸ್ಥೆಗಳು ಇವೆ. ಈಗ ಭೂಮಿ ಖರೀದಿ ಮಾಡುವಂತಿಲ್ಲ. ಅದು ಸರಿ, ಅದನ್ನು ಒಪ್ಪಿಕೊಳ್ಳೋಣ. ಇಂತಹದ್ದನ್ನು ಒಪ್ಪಿದ್ದೇವೆ, ಇಂತಹದ್ದನ್ನು ಒಪ್ಪಿಲ್ಲ ಎಂದು ಇದ್ದರೆ ಮಧ್ಯೆ ಇರುವುದು ಏನು? ಅಂದರೆ ಶಾಸಕರ ವಿವೇಚನಾ ನಿಧಿಯನ್ನು ಕೊಡುವಾಗ ಅವರ ಮೇಲೆ ನಿಯಂತ್ರಣ ಹೇರುವಂತಹ ವ್ಯವಸ್ಥೆಗಳು ಬಂದಾಗ ಹಾಗೂ ಶಾಸಕರೇ ಅಲೆದಾಡುವಂತಹ ವ್ಯವಸ್ಥೆ ರಾಜ್ಯದಲ್ಲಿ ರೂಪುಗೊಂಡರೆ ಸಾಮಾನ್ಯರ ಕತೆ ಏನು ಎನ್ನುವುದನ್ನು ಹೇಳಬೇಕಲ್ಲವೇ?

**ಸಭಾಪತಿಯವರು** :- ಮಾನ್ಯ ಲಹರ್ ಸಿಂಗ್ ಸಿರೋಯರವರು ಬಾಗಲಕೋಟೆಯ ಜಿಲ್ಲೆಯ ಒಂದು ಸರ್ಕಾರಿ ಶಾಲೆಗೆ ಕೊಠಡಿ ಕಟ್ಟಲು ಹಣ ಕೊಟ್ಟಿದ್ದು, 7 ವರ್ಷಗಳಿಂದ ಇನ್ನೂ ಆಗಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ** :- ಮಾನ್ಯ ಸಭಾಪತಿಯವರೇ, ಯಾವುದೇ ನಿಷೇಧಿತ ಕಾಮಗಾರಿಗಳನ್ನು ಬಿಟ್ಟು ಉಳಿದೆಲ್ಲವನ್ನೂ ಶಾಸಕರ ವಿವೇಚನೆಗೆ ಬಿಡಬೇಕು. ಶಾಸಕರನ್ನು ಪ್ರಶ್ನೆ ಮಾಡುವಂತಹ ಪರಿಸ್ಥಿತಿ ಇಲಾಖೆಯಲ್ಲಿ ನಿರ್ಮಾಣವಾದರೆ ಹೇಗೆ? ನಾನೇ 3 ಸಾರಿ ಹೋಗಿ ಈ ರೀತಿ ಆಗಿದೆ ಎಂದೆಲ್ಲಾ ಹೇಳಬೇಕು. ಈ ರೀತಿ ಹೇಳುವುದಾದರೆ ಅವರದೇನು ಹೊಸ ಸರ್ಕಾರವೇ? ಆ ರೀತಿ ಮಾಡಬಾರದು. ದಯವಿಟ್ಟು ಸರ್ಕಾರದಿಂದ ತಕ್ಷಣ ಅಧಿಕಾರಿಗಳಿಗೆ ನಿರ್ದೇಶನ ಕೊಡಬೇಕು. ನಿಷೇಧಿತ ಕಾಮಗಾರಿಗಳನ್ನು ಹೊರತುಪಡಿಸಿ ಶಾಸಕರು ಸಂಪೂರ್ಣ ಸ್ವಾತಂತ್ರ್ಯವಾಗಿ ಕೆಲಸ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಆಗ್ರಹ ಮಾಡುತ್ತೇನೆ. ಮಾನ್ಯ ಸಭಾಪತಿಯವರೇ, ತಮ್ಮ ದೃಷ್ಟಿ ನನಗೆ ಅರ್ಥವಾಗುತ್ತದೆ. ಅರ್ಧ ಗಂಟೆ ಚರ್ಚೆಗೆ 25 ಜನ ಸದಸ್ಯರು ಮಾತನಾಡುವವರಿದ್ದಾರೆ. ಈ ಕಡೆ ಎಲ್ಲರೂ ಪಂಚಾಯತ್ ರಾಜ್ ವ್ಯವಸ್ಥೆಗೆ ಒಗ್ಗಿಕೊಂಡವರಾಗಿದ್ದಾರೆ. ದಯಮಾಡಿ ಎಲ್ಲರಿಗೂ ಅವಕಾಶ ಮಾಡಿಕೊಡಬೇಕು.

**ಶ್ರೀ ಕೆ.ಬಿ. ಶಾಣಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, under the MPLADS (Members of Parliament Local Area Development Scheme), a Member of Parliament can give funds for supply of water. ಗುಲ್ಬರ್ಗದ ಡಿ.ಸಿ. ರವರಿಗೆ as a M.L.C. ಮಾನ್ಯ ಬಿ.ಜಿ. ಪಾಟೀಲರು ಒಂದು ಪತ್ರವನ್ನು ಕೊಟ್ಟರು. ಆಗ ಗುಲ್ಬರ್ಗದಲ್ಲಿ there was severe scarcity of water. ಹೆಚ್ಚಿನ ಬಿಸಿಲು ಇತ್ತು. ಅವರು ಒಂದು ಕಾಲೋನಿಗೆ ನೀರು supply ಮಾಡಬೇಕು ಎಂದು ಒಂದೂವರೆ ಲಕ್ಷ ರೂಪಾಯಿಗಳ ದೇಣಿಗೆ ಕೊಟ್ಟರು. ಆಗ ಡಿ.ಸಿ. ಇದ್ದರು, I don't want to refer the Deputy Commissioner's name. I told the D.C. that water is the

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

basic minimum requirement for survival of human beings on earth. ಇದನ್ನು ಕೊಡಬೇಕು ಎಂದು ನಾನು argument ಮಾಡಿದೆ. ಆಗ ಡಿ.ಸಿ. ರವರು ನಮ್ಮ guidelines ನಲ್ಲಿ ಇಲ್ಲ, ಹೇಗೆ ಕೊಡಲಿ ಎಂದು ಹೇಳಿದರು. ಆಗ ನಾನು ಜನರು ಸತ್ತರೆ guidelines ಬೇಕೆ ಎಂದು ಕೇಳಿದೆ. ಅದಕ್ಕೆ ಅವರು programme ಮಾಡುವವರಿಗೆ ಕೇಳಿ, ನನ್ನ ಕೈಯಲ್ಲಿ ಏನೂ ಇಲ್ಲ ಎಂದು ಹೇಳಿದರು. But the D.C. was very correct to say that he had no power to give it to us. ಇಲ್ಲಿ ಇವರ ಕೈಯಲ್ಲಿ ಅಧಿಕಾರ ಇಟ್ಟುಕೊಂಡು Planning Department ನಲ್ಲಿ modification ಮಾಡುವುದಕ್ಕೆ ಆಗುವುದಿಲ್ಲವೇ? At last, Mr. Basavaraj Patil Sedam gave the money and we could do that work. So we were helpless. ತಾವು ದಯಮಾಡಿ ಈ ವಿಚಾರವನ್ನು serious ಆಗಿ ತೆಗೆದುಕೊಳ್ಳಬೇಕು. ಈ ಸದನಕ್ಕೆ we are talking this as a group. At least, you must add 'supply of water' in that list. Everybody is in favour of it. Kindly ask the concerned bureaucrats not to come in between this.

**ಶ್ರೀ ರಘು ಆಚಾರ್:-** ಮಾನ್ಯ ಸಭಾಪತಿಯವರೇ, ಈ ವಿಚಾರಕ್ಕೆ ನಾವೆಲ್ಲರೂ support ಮಾಡುತ್ತೇವೆ.

**Sri M.K. PRANESH:** You bifurcate the movable and immovable property.

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಭೋಜೇಗೌಡರು ಒಬ್ಬ ಪ್ರತಿನಿಧಿಯಾಗಿರುವುದರಿಂದ ಹೇಳಿದೆ. You are the representative of all of them. ಅದಕ್ಕಾಗಿ ಇದನ್ನು serious ಆಗಿ ತೆಗೆದುಕೊಂಡು ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಕೃಷ್ಣ ಭೈರೇಗೌಡ** :- ಮಾನ್ಯ ಸಭಾಪತಿಯವರೇ, ನನ್ನ ಮನವಿ ಏನೆಂದರೆ, ಇದಕ್ಕೆ ಸಂಬಂಧಪಟ್ಟ ಕಾರ್ಯದರ್ಶಿಯವರನ್ನು ತಮ್ಮ ಕಛೇರಿಗೆ ಕರೆಸಿ, ನಾವು-ನೀವು ಕೂಡಿ ಮಾತನಾಡೋಣ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಭೋಜೇಗೌಡರು ಹೇಳಿದಂತೆ ಅರ್ಧ ತಾಸಿನ ಬದಲು ನಿಯಮ 330ರಡಿ ಈ ವಿಚಾರಕ್ಕೆ ನೋಟೀಸ್ ಕೊಡಿ, ಸುಮಾರು 25 ಜನ ಮಾತನಾಡುವವರಿದ್ದು ಸಾಕಷ್ಟು ಸಮಯದ ಅವಶ್ಯಕತೆ ಇರುವುದರಿಂದ ಸಮಯವನ್ನು ನಿಗದಿ ಮಾಡುತ್ತೇನೆ. ಎಲ್ಲರೂ ಚರ್ಚೆ ಮಾಡೋಣ.

ನಿಯಮ 330ರಡಿಯ ಮಾನ್ಯ ಮರಿತಿಬ್ಬೇಗೌಡರ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಮಧ್ಯಾಹ್ನ ಉತ್ತರ ಕೊಡುವುದಾಗಿ ತಿಳಿಸಿದ್ದಾರೆ.

**ಡಾ|| ಜಯಮಾಲ (ಸಭಾನಾಯಕರು) :-** ಮಾನ್ಯ ಸಭಾಪತಿಯವರೇ, ಹೊಸ ಸಚಿವರು ಸದನಕ್ಕೆ ಆಗಮಿಸಿದ್ದಾರೆ. ಹಿರಿಯರಾದ ಮಾನ್ಯ ಆರ್.ವಿ. ದೇಶಪಾಂಡೆಯವರು ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಸದನಕ್ಕೆ ಆಗಮಿಸಿದ್ದಾರೆ. ಅವರ ಪರಿಚಯವನ್ನು ಮಾಡಿಕೊಡುತ್ತಿದ್ದೇನೆ. ಅದೇ ರೀತಿ ಹಿರಿಯರಾದ ಶ್ರೀಯುತ ಕೆ.ಜೆ. ಜಾರ್ಜ್‌ರವರು ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರಾಗಿದ್ದು, ಸದನಕ್ಕೆ ಆಗಮಿಸಿದ್ದಾರೆ.

**ಸಭಾಪತಿಯವರು :-** ಅವರು ಹೊರಗೆ ಹೋಗಿದ್ದಾರೆ. ಇರಲಿ ಬಿಡಿ.

ಶ್ರೀಮತಿ ಜಯಮಾಲ :- ಮಾನ್ಯ ರಾಜಶೇಖರ್ ಪಾಟೀಲ್‌ರವರು ಗಣಿ ಸಚಿವರಾಗಿದ್ದು, ಸದನಕ್ಕೆ ಆಗಮಿಸಿದ್ದಾರೆ. ಅವರ ಪರಿಚಯವನ್ನು ಮಾಡಿಕೊಡುತ್ತೇನೆ.

**ಸಭಾಪತಿಯವರು :-** ಈ ದಿನ ಮಧ್ಯಾಹ್ನ 4 ಗಂಟೆಗೆ ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ ಬರುವುದಿದ್ದು, ಇನ್ನೂ ಸುಮಾರು 9 ಜನ ಸದಸ್ಯರು ಮಾತನಾಡುವುದಿದೆ. ದಯಮಾಡಿ ನಾನು ಬೆಲ್ ಬಾರಿಸಿದಾಗ ಮಾತನಾಡುತ್ತಿದ್ದ ಸದಸ್ಯರು ತಮ್ಮ ಮಾತನ್ನು ಮುಕ್ತಾಯ ಮಾಡಿ ಸಹಕಾರ ಮಾಡಬೇಕು.

ನಿನ್ನೆ ಮಾನ್ಯ ಶರಣಪ್ಪ ಮಟ್ಟೂರರವರ ವಿಚಾರಕ್ಕೆ ಸಂಬಂಧಪಟ್ಟಂತೆ ಕಡತದಿಂದ ತೆಗೆಯುವ ವಾಕ್ಯಗಳ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಇಂದು ರೂಲಿಂಗ್ ಕೊಡುವ ಬಗ್ಗೆ ನಾನು ಹೇಳಿದ್ದೆನು. ದಿನಾಂಕ 3/7/18ನೇ ಮಂಗಳವಾರ ಮಾನ್ಯ ಸದಸ್ಯರಾದ ಶ್ರೀಯುತ ಶರಣಪ್ಪ ಮಟ್ಟೂರರವರು ಮಾನ್ಯ ವಿರೋಧಪಕ್ಷದ ನಾಯಕರನ್ನು ಉದ್ದೇಶಿಸಿ " ಶ್ರೀ ಪೂಜಾರಿಯವರೇ, ತಾಳ್ಮೆ ಇರಲಿ, ತಾವು ವಿರೋಧ ಪಕ್ಷದ ನಾಯಕರಾಗಿದ್ದೀರಿ. On the very first day you are harping like anything. I don't understand your attitude. You please sit

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

down. ತಾವು ದಯಮಾಡಿ ಕುಳಿತುಕೊಳ್ಳಿ" ಎಂದು ಹೇಳಿದ ವಾಕ್ಯವನ್ನು ಕಡತದಿಂದ ತೆಗೆದುಹಾಕಿದ್ದೇನೆ. ಇದು unparliamentary ಅಲ್ಲ, ಅವರು 'sit down' ಎಂದು ಹೇಳಿ, ದಯಮಾಡಿ ಕುಳಿತುಕೊಳ್ಳಿ ಎಂದು ಹೇಳಿದ್ದರೂ ಸಹ it is not in good taste. ಇದನ್ನೆಲ್ಲಾ ಹೇಳಿದ್ದೇನೆ. ಇದನ್ನು ಕಡತದಿಂದ ತೆಗೆದುಹಾಕಿದ್ದೇನೆ. ಅದೇ ರೀತಿ ಮಾನ್ಯ ಭೋಜೇಗೌಡರ ವಿಚಾರವನ್ನು ಪ್ರಸ್ತಾಪ ಮಾಡಿದ್ದರು. ಅವರು ಮಾತನಾಡಿದ ವಿಚಾರ unparliamentary ಅಲ್ಲದಿದ್ದರೂ, ಅವರು ಸ್ವಯಂ ವಿಷಾಧವನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕೆ ಅವರನ್ನು appreciate ಮಾಡುತ್ತೇನೆ. ಈ ಮಾಹಿತಿಯನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ)ಃ–** ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ಒಂದು ಮನವಿ.

**ಸಭಾಪತಿಯವರು :–** ಬೇಡ, Ruling ಬಗ್ಗೆ question ಮಾಡಬಾರದು.

**ಶ್ರೀ ಶರಣಪ್ಪ ಮಟ್ಟೂರಃ–** ಮಾನ್ಯ ಸಭಾಪತಿಯವರೇ, ತಮ್ಮ ruling ಗೆ ನಾನು ತಲೆಬಾಗುತ್ತೇನೆ. ದಯಮಾಡಿ ನನಗೆ ಸ್ವಲ್ಪ ಮಾತನಾಡಲು ಅವಕಾಶ ಕೊಡಬೇಕು. ಆದರೆ ಈ ನಿಯಮಾವಳಿಗಳಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ permission ಇಲ್ಲದೇ ಯಾವಾಗ ಬೇಕಾದರೂ ಎದ್ದುನಿಂತು ಮಾತನಾಡಬಹುದು ಎಂದು ಇದಯೇ ಎಂಬ ಪ್ರಶ್ನೆಗೆ ಉತ್ತರ ಬೇಕು.

**ಸಭಾಪತಿಯವರು :–** ಮಾನ್ಯ ಸದಸ್ಯರು ದಯಮಾಡಿ ಎಂಬ ಪದವನ್ನು ಸೇರಿಸಿ ಹೇಳಿದ್ದಾರೆ. ಆದರೆ ಸದನದಲ್ಲಿ ಒಳ್ಳೆಯ ಸಂಪ್ರದಾಯಗಳನ್ನು ನಿರ್ಮಾಣ ಮಾಡಬೇಕು ಎನ್ನುವ ದೃಷ್ಟಿಯಿಂದ ಹೇಳಿದ್ದೇನೆಯೇ ವಿನಃ ತಮ್ಮ ಮನಸ್ಸಿಗೆ ನೋವು ಮಾಡಬೇಕೆಂದು ಹೇಳಿಲ್ಲ. ನಾನು ಸಭಾಪೀಠದಲ್ಲಿ ಕುಳಿತು ನಾಳೆಗೆ ಉತ್ತರ ಕೊಡುತ್ತೇನೆಂದು ಹೇಳಿದ್ದೇನೆ. ಅದೇರೀತಿ ಕಡತವನ್ನು ತರಿಸಿ ನೋಡಿದೆ. ನಾನು ಸಭಾಪೀಠದಲ್ಲಿ ಕುಳಿತು ಮಾತನಾಡಿದಂತೆ stick on ಆಗಿರುತ್ತೇನೆ. ತಾವೆಲ್ಲ ಒಳ್ಳೆಯ ರೀತಿ ಹೇಳಿದ್ದೀರಿ. I appreciate you.

**ಶ್ರೀ ಶರಣಪ್ಪ ಮಟ್ಟೂರಃ–** ಮಾನ್ಯ ಸಭಾಪತಿಯವರೇ, ತಮಗೆ ಧನ್ಯವಾದಗಳು. ಆದರೆ ನನ್ನ ಪ್ರಶ್ನೆಗೆ ಉತ್ತರವೂ ಬೇಕಾಗಿದೆ. ತಾವು ಒಬ್ಬ ಗೌರವಾನ್ವಿತ ಸದಸ್ಯರಿಗೆ ಅವಕಾಶವನ್ನು ಕೊಟ್ಟಿರುವಾಗ ಅಥವಾ ಆ ಸದಸ್ಯರು submission ಮಾಡುತ್ತಿರುವ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾಯಕರು ತಮ್ಮ permission ಇಲ್ಲದೇ suddenly ಕೇಳಬಹುದೇ ಎಂಬ ಪ್ರಶ್ನೆಗೆ ಉತ್ತರ ಬೇಕು.

**ಸಭಾಪತಿಯವರು :-** ಅದಕ್ಕೆ ನಾನು ಹೇಳುತ್ತೇನೆ. ರಾಜ್ಯಪಾಲದ ಭಾಷಣದ ಮೇಲಿನ ವಂದನಾ ನಿರ್ಣಯದ ಮುಂದುವರೆದ ಚರ್ಚೆಯಲ್ಲಿ ಮಾನ್ಯ ಶರಣಪ್ಪ ಮಟ್ಟೂರರವರು ಮಾತನಾಡಿ.

***ಘನತೆವೆತ್ತ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ***

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಭರವಸೆ ಸಮಿತಿಯ ಸದಸ್ಯನಾಗಿ ಬಂದಾಗ ತಾವೇ ನನಗೆ ಶಿಸ್ತನ್ನು ಕಲಿಸಿದ್ದೀರಿ. ನನ್ನ ಮೇಲೆ ತಮಗೆ ಸಿಟ್ಟು ಇರುವಷ್ಟೂ ಪ್ರೀತಿ ಇದೆ ಎಂದು ನನಗೆ ಗೊತ್ತಿದೆ. ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು.

ಮಾನ್ಯ ಸಭಾಪತಿಯವರೇ, ಸಂವಿಧಾನದ Article 162, clause (2) ಪ್ರಕಾರ ಮಾನ್ಯ ಸಭಾಪತಿಯವರಾದ ತಾವು ರಾಜ್ಯಪಾಲರ ಭಾಷಣದ ಮೇಲೆ discussion ಗೆ ಅವಕಾಶ ಕೊಟ್ಟಿದ್ದೀರಿ.

(ಮುಂದು)

52/04.07.2018/11.50/ಹೆಚ್‌ವಿ:ಆರ್‌ಜಿನ್

**ಶ್ರೀ ಶರಣಪ್ಪ ಮಟ್ಟೂರ (ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರು ಎರಡೂ ಸದನಗಳನ್ನುದ್ದೇಶಿಸಿ ದಯಪಾಲಿಸಿರುವ ಭಾಷಣದ ಬಗ್ಗೆ ನಿನ್ನೆ ಈ ಸದನದಲ್ಲಿ ಸಂಪೂರ್ಣವಾದ ಚರ್ಚೆ ನಡೆದಿತ್ತು. ಕೆಲವರು ತಮ್ಮದೇ ಆದ ಶೈಲಿಯಲ್ಲಿ ತಮ್ಮ ಹಿರಿತನವನ್ನು ಗಮನದಲ್ಲಿಟ್ಟುಕೊಂಡು ನಮ್ಮನ್ನು ಚುಚ್ಚಿ ಮಾತನಾಡಿದರು. ಅದರ ಅರಿವನ್ನಿಟ್ಟುಕೊಂಡು ನಾವು ಮಾತನಾಡಬೇಕಾಗಿದೆ.

ಘನತೆವೆತ್ತ ರಾಜ್ಯಪಾಲರ ಭಾಷಣದ ಪುಟ ಸಂಖ್ಯೆ:02ರ ಕಂಡಿಕೆ:02ರಲ್ಲಿ ಉಲ್ಲೇಖಿಸಿರುವ ಅಂಶಗಳು ಈ ಕೆಳಕಂಡಂತಿವೆ;

> "ಅನ್ನದಾತನ ಬದುಕನ್ನು ಹಸನುಗೊಳಿಸಲು ನಮ್ಮ ಸರ್ಕಾರವು ಮಾನವೀಯತೆಯ ಚೌಕಟ್ಟಿನಲ್ಲಿ ನಿಲುವು ನಿರ್ಧಾರಗಳನ್ನು ಕೈಗೊಳ್ಳಲಿದೆ. ನನ್ನ ಹೊಸ ಸರ್ಕಾರವು ಈ ಹಿಂದಿನ ಪರಿಣಾಮಕಾರಿ ಯೋಜನೆಗಳ ಜೊತೆಗೆ ಮುಂದಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿನಗಳಲ್ಲಿ ಪ್ರತಿಯೊಬ್ಬ ನಾಗರಿಕನ ಹಿತ ಕಾಪಾಡುವಂತಹ ಹೊಸ ದೃಷ್ಟಿ-ಹೊಸ ದಾರಿಯಲ್ಲಿ ಹೆಜ್ಜೆ ಇಡಲಿದೆ. ಸಮಾಜದ ಎಲ್ಲಾ ವರ್ಗ ಅದರಲ್ಲೂ ಅವಕಾಶ ವಂಚಿತರು, ಹಿಂದುಳಿದವರು, ಮಹಿಳೆಯರು, ಯುವ ಜನಾಂಗ ಹಾಗೂ ರೈತರ ಕಲ್ಯಾಣಕ್ಕೆ ಕಂಕಣಬದ್ಧವಾಗಿದೆ. ಹಳ್ಳಿ ಮತ್ತು ಪಟ್ಟಣಗಳ ಸಮಗ್ರ ಅಭಿವೃದ್ಧಿಗೆ ಸರಿಸಮಾನವಾದ ಯೋಜನೆಗಳನ್ನು ರೂಪಿಸಲಾಗುವುದು."

ಒಳ್ಳೆಯ ವಿಚಾರಗಳನ್ನು ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಹೇಳಲಾಗಿದೆ. ಇದನ್ನು ನಾನು ಸ್ವಾಗತಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ concern and commitment ಗಳನ್ನು ನಾವು ಇಲ್ಲಿ ಶ್ಲಾಘಿಸಬೇಕಾಗುತ್ತದೆ. ನಿನ್ನೆ ಈ ಸದನದಲ್ಲಿ ಮಾತನಾಡಿದ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು, 'ಘನತೆವೆತ್ತ ರಾಜ್ಯಪಾಲರಿಂದ ಈ ರೀತಿ ಹೇಳಿಸಿದ್ದಾರೆ, ಆ ರೀತಿ ಹೇಳಿಸಿದ್ದಾರೆ' ಎನ್ನುವ ಮಾತುಗಳನ್ನು ಹೇಳಿದ್ದಾರೆ. ಸಂವಿಧಾನದ ಹಕ್ಕನ್ನು ಹೊಂದಿರುವ ಘನತೆವೆತ್ತ ರಾಜ್ಯಪಾಲರಿಗೆ ಇನ್ನೊಬ್ಬರು ಹೇಳಿ ಭಾಷಣವನ್ನು ಓದಿಸುವಂತಹ ಪ್ರಶ್ನೆ ಉದ್ಭವಿಸುವುದಿಲ್ಲ. ಅವರು Constitutional Body ಆಗಿರುವಂತಹವರು. ಅವರದೇ ಆಗಿರುವಂತಹ ಪರಮಾಧಿಕಾರವನ್ನು ಅವರು ಹೊಂದಿದ್ದಾರೆ. ಅವರಿಗೆ ಇದರ ಬಗ್ಗೆ ಅರಿವಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣದ ಪುಟ ಸಂಖ್ಯೆ:೦2ರ ಕಂಡಿಕೆ ೦3ರಲ್ಲಿ ;

**"ಯುವ ಜನಾಂಗ ಉದ್ಯೋಗಕ್ಕಾಗಿ ಪರಿತಪಿಸುತ್ತಿರುವುದನ್ನು ನನ್ನ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಶಿಕ್ಷಣದಲ್ಲಿ ವೃತ್ತಿ ಕೌಶಲ್ಯವನ್ನು ಅಳವಡಿಸಿ ಉದ್ಯೋಗಕ್ಕೆ ಅವಕಾಶ ಕಲ್ಪಿಸಲು ನನ್ನ ಸರ್ಕಾರ ಬದ್ಧವಾಗಿದೆ. 'ಶಿಕ್ಷಣವೇ ಶಕ್ತಿ' ಎಂಬುದರ ಅರಿವು ನನ್ನ ಸರ್ಕಾರಕ್ಕಿದೆ. ಶಿಕ್ಷಣದಲ್ಲಿ ಕೌಶಲ್ಯ ಸಹಿತ ವೃತ್ತಿ ತರಬೇತಿಯನ್ನು ಕಡ್ಡಾಯಗೊಳಿಸಲು ನನ್ನ ಸರ್ಕಾರ ಚಿಂತಿಸುತ್ತಿದೆ. ಸರ್ವರಿಗೂ ಶಿಕ್ಷಣ, ಸರ್ವರಿಗೂ ಆರೋಗ್ಯ, ಸರ್ವರಿಗೂ ವಸತಿ ನನ್ನ ಸರ್ಕರದ ಆದ್ಯತಾ ವಲಯಗಳು"**

ಎಂದು ಹೇಳಿದ್ದಾರೆ. ಇವು ಬಹಳ ಉತ್ತಮವಾಗಿರುವ ಅಂಶಗಳಾಗಿವೆ. ಕಂಡಿಕೆ 2ರಲ್ಲಿ 'ನನ್ನ ಹೊಸ ಸರ್ಕಾರವು ಈ ಹಿಂದಿನ ಪರಿಣಾಮಕಾರಿ ಯೋಜನೆಗಳ ಜೊತೆಗೆ ಮುಂದಿನ ದಿನಗಳಲ್ಲಿ ಪ್ರತಿಯೊಬ್ಬ ನಾಗರಿಕನ ಹಿತ ಕಾಪಾಡುವಂತಹ ಹೊಸ ದೃಷ್ಟಿ-ಹೊಸ ದಾರಿಯಲ್ಲಿ ಹೆಜ್ಜೆ ಇಡಲಿದೆ.' ಎನ್ನುವ ಮಾತುಗಳನ್ನು ಹೇಳಲಾಗಿದೆ. ಇದರರ್ಥವೇನೆಂದರೆ, ಹಿಂದೆ ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಮಂಡಿಸಿದಂತಹ ಆಯವ್ಯಯವನ್ನು ಸಹ ಇದರಲ್ಲಿ ಸೇರಿಸಿಕೊಂಡಿದ್ದಾರೆ. ಈಗ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿ ಇರುವುದರಿಂದ ಮಾನ್ಯ ಮುಖ್ಯಮಂತ್ರಿಗಳು ಬಹಳ ಬಿಚ್ಚು ಮನಸ್ಸಿನಿಂದ ಈ ಮಾತುಗಳನ್ನು ಹೇಳಿದ್ದಾರೆ.

ಘನತೆವೆತ್ತ ರಾಜ್ಯಪಾಲರ ಭಾಷಣದ ಪುಟ ಸಂಖ್ಯೆ:04ರ ಕಂಡಿಕೆ 07ರಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಪಟ್ಟಂತೆ ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ;

**"ನನ್ನ ಸರ್ಕಾರವು ರಾಜ್ಯದಲ್ಲಿ ತೃಪ್ತಿಕರವಾದ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಯ್ದುಕೊಂಡಿದೆ. ಎಲ್ಲಾ ಮುಖ್ಯಪೇದೆ ಮತ್ತು ಪೋಲೀಸ್ ಪೇದೆಗಳಿಗೆ ಅವರ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಒಂದೊಂದು ಭೌಗೋಳಿಕ ಸರಹದ್ದು ನಿಗದಿಪಡಿಸಲಾಗಿದೆ. ಅವರು ತಮ್ಮ ಸರಹದ್ದುಗಳಿಗೆ ಸಂಪೂರ್ಣ ಹೊಣೆಗಾರರಾಗಿರುತ್ತಾರೆ"**

ಎಂದು ಹೇಳಲಾಗಿದೆ. ಇದು ನಿಜವಾಗಿಯೂ ಸ್ವಾಗತಾರ್ಹವಾಗಿರುವ ಅಂಶವೆಂದು ನಾನು ಭಾವಿಸುತ್ತೇನೆ. ಒಬ್ಬ ಪೋಲೀಸ್ ಅಧಿಕಾರಿ ಯಾವುದೋ ಒಂದು ಪ್ರಕರಣದ ತನಿಖೆಯನ್ನು ಕೈಗೊಂಡಾಗ, ಆತನನ್ನು ವರ್ಗಾವಣೆ ಮಾಡಿದರೆ, ಆ ಪ್ರಕರಣದ ಕಥೆ ಮುಗಿಯಿತು ಎಂದು ನಾವೆಲ್ಲರೂ ಚರ್ಚೆ ಮಾಡಿದ್ದೇವೆ. ಬಹಳ ಗಂಭೀರವಾಗಿ ಈ ಅಂಶವನ್ನು ಪರಿಗಣಿಸಬೇಕೆನ್ನುವುದು ನನ್ನ ಮನವಿಯಾಗಿದೆ. I have given good suggestions to the officers with regard to bring certain changes for the investigations are concerned. ಪೋಲೀಸ್ ಪೇದೆಗಳಿಗೆ ಸರಹದ್ದು ನಿಗದಿಪಡಿಸಿ, ಆ ಸರಹದ್ದುಗಳಿಗೆ ಅವರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ ಎನ್ನುವ ಅಂಶವನ್ನು ಘನತೆವೆತ್ತ ರಾಜ್ಯಪಾಲರು ಬಹಳ ಗಂಭೀರವಾಗಿ ಓದಿದ್ದಾರೆ. ಇದನ್ನು ನಾನು ಸ್ವಾಗತಿಸುತ್ತಿದ್ದೇನೆ. ಒಂದು ಪ್ರದೇಶಕ್ಕೆ ಅವರನ್ನು ಮುಖ್ಯಸ್ಥರನ್ನಾಗಿ ಮಾಡಿದಾಗ, ಆ ಪ್ರದೇಶದಲ್ಲಿ ಅಹಿತಕರ ಘಟನೆಗಳು ನಡೆದಾಗ, ಆ ಘಟನೆ ನಡೆಯುವುದಕ್ಕೆ ಕಾರಣವೇನು, ಅದರಿಂದಾಗಿ ಸಾರ್ವಜನಿಕರಿಗೆ ಯಾವ ರೀತಿಯಲ್ಲಿ ಅನಾನುಕೂಲತೆಯುಂಟಾಗುತ್ತದೆ ಎನ್ನುವುದನ್ನು ಬಹಳ ಚೆನ್ನಾಗಿ ಉಲ್ಲೇಖಿಸಿದ್ದಾರೆ.

ಘನತೆವೆತ್ತ ರಾಜ್ಯಪಾಲರ ಭಾಷಣದ ಪುಟ ಸಂಖ್ಯೆ:05ರ ಕಂಡಿಕೆ 09ರಲ್ಲಿ ;

**"ಭಾರತ ಸಂವಿಧಾನದ 371(ಜೆ) ಅನುಚ್ಛೇದದ ಅನುಸಾರ ಹೈದರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಸಾರ್ವಜನಿಕ ಉದ್ಯೋಗದಲ್ಲಿ ವಿವಿಧ ಪ್ರವರ್ಗದ ಹುದ್ದೆಗಳಿಗೆ ಮೀಸಲಾತಿಯನ್ನು ಒದಗಿಸಿದೆ."**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಹೇಳಲಾಗಿದೆ. ಇದರ ಇತಿಹಾಸವನ್ನು ಸ್ವಲ್ಪ ಮೆಲುಕು ಹಾಕಿ ನೋಡಬೇಕಾಗಿದೆ. ಅಂದಿನ ಉಪ ಪ್ರಧಾನ ಮಂತ್ರಿಗಳಾಗಿದ್ದ ಮಾನ್ಯ ಎಲ್.ಕೆ. ಅಡ್ವಾನಿಯವರು ಗುಲ್ಬರ್ಗಾ ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ, 'ಹೈದ್ರಾಬಾದ್ ನಿಜಾಮರ ಆಳ್ವಿಕೆಗೆ ನಮ್ಮ ಭಾಗ ಒಳಪಟ್ಟಿದ್ದು, ಶೈಕ್ಷಣಿಕವಾಗಿ ನಾವು ಹಿಂದುಳಿದಿದ್ದೇವೆ. ನೀರಾವರಿ ಸೌಲಭ್ಯಗಳ ಮತ್ತು ಮೂಲ ಸೌಲಭ್ಯಗಳ ಕೊರತೆ ಇದೆ. ಆದ್ದರಿಂದ ಈ ಭಾಗಕ್ಕೆ ಸಂವಿಧಾನದ ಅನುಚ್ಛೇಧ 371(ಜೆ) ಪ್ರಕಾರ ವಿಶೇಷ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು' ಎಂದು ಅಲಲಿನ ಜನರು ಕೇಳಿಕೊಂಡಿದ್ದರು.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೇ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಯಾವ ಅಂಶಗಳನ್ನು ಉಲ್ಲೇಖ ಮಾಡುತ್ತಿದ್ದಾರೆ. ಅದರ ಬಗ್ಗೆ ನನ್ನ ಆಕ್ಷೇಪವನ್ನು ವ್ಯಕ್ತಪಡಿಸುತ್ತಿದ್ದೇನೆ.

**ಶ್ರೀ ಶರಣಪ್ಪ ಮಟ್ಟೂರ:–** ಸನ್ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿಲ್ಲ. Please, tell them to sit down.

**ಸಭಾಪತಿಯವರು:–** ಅವರು ಯೀಲ್ಡ್ ಆಗಿಲ್ಲ.

**ಶ್ರೀ ಶರಣಪ್ಪ ಮಟ್ಟೂರ:–** ಸನ್ಮಾನ್ಯ ಸಭಾಪತಿಯವರೇ, ಅಂದು ಅವರು ಆ ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದಾಗ, . . . .

**ಶ್ರೀ ರಘುನಾಥ್ ರಾವ್ ಮಲ್ಕಾಪೂರೇ:–** ಸನ್ಮಾನ್ಯ ಸಭಾಪತಿಯವರೇ, ಅವರು ಉಲ್ಲೇಖ ಮಾಡುತ್ತಿರುವುದರ ಬಗ್ಗೆ ನನ್ನ ಆಕ್ಷೇಪವಿದೆ.

**ಸಭಾಪತಿಯವರು:–** ಮಾನ್ಯ ರಘುನಾಥ್ ರಾವ್ ಮಲ್ಕಾಪೂರೆಯವರೇ, ತಾವು ಏನು ಹೇಳಬೇಕೆಂದಿದ್ದೀರಿ ಅದನ್ನು ಆಮೇಲೆ ಹೇಳಿ.

**ಶ್ರೀ ಶರಣಪ್ಪ ಮಟ್ಟೂರ:–** ಸನ್ಮಾನ್ಯ ಸಭಾಪತಿಯವರೇ, they will have right to comment us. ಏನೂ ಸಮಸ್ಯೆ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಉಲ್ಲೇಖ ಮಾಡುತ್ತಿರುವ ವಿಷಯದ ಬಗ್ಗೆ ನನ್ನ ಆಕ್ಷೇಪ ಇಲ್ಲ. ಆದರೆ, ಅಂದಿನ ಉಪ ಪ್ರಧಾನಮಂತ್ರಿಗಳಾಗಿದ್ದ ಎಲ್.ಕೆ.ಅಡ್ವಾನಿಯವರು ಆಕ್ಷೇಪ ಮಾಡಿದ್ದರು ಎಂದು ಅವರು ಹೇಳುತ್ತಿದ್ದಾರೆ. ಇದು ತಪ್ಪು. 'ಸಂವಿಧಾನದ ಅನುಚ್ಛೇಧ 371(ಜೆ) ಅಡಿ ಕರ್ನಾಟಕ ರಾಜ್ಯದ ಹೈದ್ರಾಬಾದ್-ಕರ್ನಾಟಕ ಭಾಗ ಎಂದರೆ, ಬೀದರ್, ಗುಲ್ಬರ್ಗಾ, ಯಾದಗಿರಿ ರಾಯಚೂರು ಮತ್ತು ಬಳ್ಳಾರಿ ಇದನ್ನು ಹೊರತುಪಡಿಸಿ, ಇನ್ನೂ ಇತರೆ ತಾಲ್ಲೂಕುಗಳು ....' ಎಂದು ಅದರಲ್ಲಿ ಬರೆದಿತ್ತು. 'ಇನ್ನೂ ಇತರೆ ತಾಲ್ಲೂಕುಗಳು' ಎನ್ನುವುದು ತಪ್ಪಾಗುತ್ತದೆ. ಯಾವ ರೀತಿಯಲ್ಲಿ ಆಂಧ್ರಪ್ರದೇಶದ ತೆಲಂಗಾಣ ಮತ್ತು ಮಹಾರಾಷ್ಟ್ರದ ಮರಾಠವಾಡಗಳು ಈಗಾಗಲೇ ಸಂವಿಧಾನದ ಅನುಚ್ಛೇಧ 371(ಜೆ) ಅಡಿ ದೊರೆಯುವ ವಿಶೇಷ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿವೆ. ಆದರೆ, ಕರ್ನಾಟಕದ ಹೈದ್ರಾಬಾದ್-ಕರ್ನಾಟಕ ಭಾಗ ಈ ವಿಶೇಷ ಸೌಲಭ್ಯಗಳಿಂದ ವಂಚಿತವಾಗುತ್ತಿರುವ ಕಾರಣದಿಂದ ರಾಜ್ಯದ ಇತರೆ ರಾಜ್ಯಗಳಿಗೆ ಸರಿಸಮನಾಗಿ ಅಭಿವೃದ್ಧಿ ಹೊಂದಬೇಕಾಗಿರುವ ಕಾರಣ ಇದನ್ನು ಪುನರ್ ಪರಿಶೀಲನೆ ಮಾಡಬೇಕು' ಎನ್ನುವ ಅಂಶಗಳನ್ನು ಆ ಭಾಗದವರಾದ ನಾವುಗಳು ಮಾನ್ಯ ಎಲ್.ಕೆ.ಅಡ್ವಾನಿಯವರಿಗೆ ಮನವರಿಕೆ ಮಾಡಿಕೊಟ್ಟಾಗ, ಅವರು ಇದನ್ನು ಪುನರ್ ಪರಿಶೀಲನೆಗೆ ಕಳುಹಿಸಿಕೊಟ್ಟರೇ ವಿನಃ, ರಿಜೆಕ್ಟ್ ಮಾಡಲಿಲ್ಲ. ಆದ್ದರಿಂದ ಸದನದ ದಾಖಲೆಗೆ ತಪ್ಪು ಮಾಹಿತಿ ಹೋಗಬಾರದು ಎನ್ನುವುದು ನನ್ನ ವಿನಂತಿಯಾಗಿದೆ.

**ಶ್ರೀ ಕೆ.ಬಿ.ಶಾಣಪ್ಪ(ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ರಾಜ್ಯದ ಅಂದಿನ ಮುಖ್ಯ ಮಂತ್ರಿಗಳು, ಸಂವಿಧಾನದ ಅನುಚ್ಛೇಧ 371(ಜೆ) ಅಡಿ ಹೈದ್ರಾಬಾದ್-ಕರ್ನಾಟಕ ಭಾಗ ವಿಶೇಷ ಸೌಲಭ್ಯಗಳನ್ನು ಪಡೆದುಕೊಳ್ಳುವ ಬಗ್ಗೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಾಗ, 'other parts of the State' ಎಂದು ಸಹ ಬರೆದಿದ್ದರು. ಅದರ ಬಗ್ಗೆ ಮಾನ್ಯ ಎಲ್.ಕೆ.ಅಡ್ವಾನಿಯವರು ಸ್ಪಷ್ಟೀಕರಣವನ್ನು ಕೇಳಿದ್ದರು. These are the suffering districts, they pertaining to this or other parts of the State and what are those? ಎನ್ನುವಂತಹ ಸ್ಪಷ್ಟೀಕರಣವನ್ನು ಕೇಳಿದ್ದರೆಯೇ ಹೊರತು ರಿಜೆಕ್ಟ್ ಮಾಡಿರಲಿಲ್ಲ. That is the information which I would like to given on this floor of the House.

**ಶ್ರೀ ಶರಣಪ್ಪ ಮಟ್ಟೂರು:-** ಸನ್ಮಾನ್ಯ ಸಭಾಪತಿಯವರೇ, ಆಗ ನಮ್ಮ ಪಕ್ಷದಿಂದ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಎಸ್.ಎಂ.ಕೃಷ್ಣರವರು ಬರೆದಿರುವ ಪತ್ರ ಈ ಸದನದ ದಾಖಲೆಗಳಲ್ಲಿ ಇದೆ. ಈಗ ಹಿರಿಯ ಸದಸ್ಯರುಗಳಾಗಿರುವ ಶ್ರೀಯುತ ಕೆ.ಬಿ.ಶಾಣಪ್ಪನವರು ಮತ್ತು ರಘುನಾಥ್ ರಾವ್ ಮಲ್ಕಾಪೂರೆಯವರು ಹೇಳಿರುವುದು ಸದನವನ್ನು ತಪ್ಪು ದಾರಿಗೆಳೆಯುವಂತಹ ಅಂಶವಾಗಿದೆ. They have interpreted wrongly to this House. I will tell you very perfectly. ಇದೇ ರೀತಿ 371(ಜೆ).........

**ಶ್ರೀ ಕೆ.ಬಿ.ಶಾಣಪ್ಪ:-** ಸನ್ಮಾನ್ಯ ಸಭಾಪತಿಯವರೇ, ರಿಜೆಕ್ಟ್ ಮಾಡಿಲ್ಲ. ನಮ್ಮ ಬಳಿಯೂ ದಾಖಲೆ ಇದೆ, ಅದರ ಪ್ರತಿಯನ್ನು ಕೊಡುತ್ತೇವೆ.

**ಶ್ರೀ ಶರಣಪ್ಪ ಮಟ್ಟೂರು:-** ಸನ್ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿಲ್ಲ. ಮಧ್ಯೆ ಮಾತನಾಡುವುದಕ್ಕೆ ನಮಗೆ ಮಾತ್ರ ಅನುಮತಿ ಬೇಕೇ? ಅವರಿಗೆ ಬೇಡವೇ?

**ಶ್ರೀ ಕೆ.ಬಿ.ಶಾಣಪ್ಪ:-** ಸನ್ಮಾನ್ಯ ಸಭಾಪತಿಯವರೇ, ಆಂದಿನ ಮುಖ್ಯಮಂತ್ರಿಗಳ ಹಸ್ತಾಕ್ಷರದಲ್ಲಿ ಬರೆದಿರುವ ಪತ್ರದಲ್ಲಿ 'other parts of the State' ಎಂದು ಇದೆ. ಅದಕ್ಕೆ ವಿಧಾನಸಭಾ ಸದಸ್ಯರುಗಳು ಸಹಿ ಮಾಡಿರುವ ಪತ್ರವನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. I am giving this information on this August House ಆ ಪತ್ರವನ್ನು ಕೊಡಿ ಎಂದರೆ ನಾನು ಅದನ್ನು ತಮಗೆ ಕಳುಹಿಸಿಕೊಡುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರು:-** ಸನ್ಮಾನ್ಯ ಸಭಾಪತಿಯವರೇ, I am very well aware about the meaning of this August House. I know it well. I don't want to tell now.

**ಸಭಾಪತಿಯವರು:-** ಸದನದಲ್ಲಿ ಯಾವುದೇ ವಿಚಾರದ ಬಗ್ಗೆ ಮಾತನಾಡುವಾಗ ಸರಿಯಾಗಿ ತಿಳಿದುಕೊಂಡು ಮಾತನಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಶರಣಪ್ಪ ಮಟ್ಟೂರಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಎಲ್.ಕೆ.ಅಡ್ವಾನಿಯವರು, 'ನೀವು ಈ ರೀತಿ ಸಂವಿಧಾನದ ಅನುಚ್ಛೇಧ 371(ಜೆ) ಅಡಿ ಹೈದ್ರಾಬಾದ್–ಕರ್ನಾಟಕ ಭಾಗಕ್ಕೆ ವಿಶೇಷ ಸೌಲಭ್ಯಗಳನ್ನು ಕೇಳಿದರೆ, every parts of this Country ಕೂಡ ಕೇಳುತ್ತಾರೆ. ನನಗೆ ಕೊಡುವುದಕ್ಕೆ ಆಗುವುದಿಲ್ಲ' ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ, ಕೇಂದ್ರದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೂ ಮೊದಲೇ ಮಾನ್ಯ ರಾಹುಲ್‌ಗಾಂಧಿಯವರು ಗುಲ್ಬರ್ಗಾಕ್ಕೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಅಲ್ಲಿನ ಜನರು, 'ಸಂವಿಧಾನದ ಅನುಚ್ಛೇಧ 371(ಜೆ) ಅಡಿ ಹೈದ್ರಾಬಾದ್–ಕರ್ನಾಟಕ ಭಾಗಕ್ಕೆ ವಿಶೇಷ ಸೌಲಭ್ಯಗಳನ್ನು ತಾವು ಕಲ್ಪಿಸಿಕೊಟ್ಟರೆ ನಾವು ತಮಗೆ ಬೆಂಬಲ ಕೊಡುತ್ತೇವೆ' ಎನ್ನುವ ಮಾತನ್ನು ಹೇಳಿದರು. ಆಗ ಮಾನ್ಯ ರಾಹುಲ್ ಗಾಂಧಿಯವರು, 'ನೀವು ನಮಗೆ ಬೆಂಬಲ ಕೊಟ್ಟು ಗೆಲ್ಲಿಸಿದರೆ ನಾನು ಈ ಸೌಲಭ್ಯವನ್ನು ಕೊಡುತ್ತೇನೆ' ಎನ್ನುವ ಮಾತನ್ನು ಹೇಳಿದ್ದರು.

(ಮುಂದುವರಿದಿದೆ)

(53) 4.7.2018 12.00 ¦PÉ:DgïJ£ï

**ಶ್ರೀ ಶರಣಪ್ಪ ಮಟ್ಟೂರ(ಮುಂದುವರೆದಿದೆ)**

ಅದೇರೀತಿ ಕೊಟ್ಟ ಮಾತಿನಂತೆ ನಡೆದ ವ್ಯಕ್ತಿ ಎಂದರೆ ಮಾನ್ಯ ರಾಹುಲ್‌ಜೀಯವರು. ಇದೇರೀತಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಂಸತ್ತಿನಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿ 89ನೇ ತಿದ್ದುಪಡಿಯನ್ನು ತಂದು, 371(ಜೆ) ಜಾರಿಗೆ ತರುವುದರ ಮೂಲಕ ಆ ಭಾಗದ ಅಭಿವೃದ್ಧಿಗೋಸ್ಕರ ಕೊಡುಗೆ ನೀಡಿದರು.

ಸಭಾಪತಿಯವರು:– ಮುಗಿದ ಹಳೆಯ ವಿಚಾರಗಳನ್ನು ಮತ್ತೆ ಏಕೆ ತೆಗೆಯುತ್ತಿದ್ದೀರಿ?

(ಗೊಂದಲ)

**ಶ್ರೀ ಕೆ.ಬಿ. ಶಾಣಪ್ಪಃ–** ಮಾನ್ಯ ಸಭಾಪತಿಯವರೇ, during that time, I was Member of Parliament and I moved Private Member Bill on the floor of the Parliament. For forty-five minutes I have spoken on this Bill. None of Congressmen have spoken on this Bill.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಶರಣಪ್ಪ ಮಟ್ಟೂರಃ–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ನಾನು ಮಾತನಾಡುತ್ತಿದ್ದೇನೆ. ಮಾನ್ಯ ಸದಸ್ಯರಿಗೆ ಮಾತನಾಡಲು ತಾವು ಅವಕಾಶ ಕೊಡುವಾಗ ಅವರು ಮಾತನಾಡಲಿ.

**ಶ್ರೀ ಅಬ್ದುಲ್ ಜಬ್ಬಾರ್** :– ಮಾನ್ಯ ಸಭಾಪತಿಯವರೇ, ನಿನ್ನೆ ಇವರು ಮಾತನಾಡುತ್ತಿದ್ದಾಗ ನಾವೇನಾದರೂ ಮಧ್ಯದಲ್ಲಿ ಎದ್ದು ನಿಂತು ಮಾತನಾಡಿದ್ದೇವೆಯೇ?

(ಗೊಂದಲ)

ಸಭಾಪತಿಯವರು:– ಮಾನ್ಯ ಶಾಣಪ್ಪನವರೇ, ನೀವು ಹೇಳುತ್ತಿರುವುದರ ಬಗ್ಗೆ ದಾಖಲೆ ಕೊಡಿ, ಮಾನ್ಯ ಮಟ್ಟೂರರವರು ಪ್ರಸ್ತಾಪ ಮಾಡುತ್ತಿರುವ ದಾಖಲೆಯನ್ನೂ ಕೊಡಲಿ, ಎರಡನ್ನೂ ನೋಡುತ್ತೇನೆ.

(ಗೊಂದಲ)

ಸಭಾಪತಿಯವರು:– ಮಾನ್ಯ ಶಾಣಪ್ಪನವರೇ ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಶರಣಪ್ಪ ಮಟ್ಟೂರರವರು ಮಾತನಾಡಲಿ.

(ಗೊಂದಲ)

(ಈ ಹಂತದಲ್ಲಿ ಹಲವಾರು ಜನ ಮಾನ್ಯ ಸದಸ್ಯರು ಎದ್ದು ನಿಂತು ಮಾತನಾಡುತ್ತಿದ್ದುದರಿಂದ ಅವರು ಹೇಳಿದ ಮಾತುಗಳು ದಾಖಲೆಗೆ ಹೋಗಬಾರದು ಎಂದು ಮಾನ್ಯ ಸಭಾಪತಿಯವರು ಸೂಚನೆ ಕೊಟ್ಟರು)

ಸಭಾಪತಿಯವರು:– ನನ್ನ ಅನುಮತಿ ಇಲ್ಲದೇ ಮಾತನಾಡಿದವರ ಮಾತುಗಳು ಯಾವುದೂ ಕಡತಕ್ಕೆ ಹೋಗಬಾರದು. ಮಾನ್ಯ ಶರಣಪ್ಪ ಮಟ್ಟೂರರವರೇ ನೀವು ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಶರಣಪ್ಪ ಮಟ್ಟೂರು:-** ಮಾನ್ಯ ಸಭಾಪತಿಯವರೇ, ಸಂವಿಧಾನದ ಅನುಚ್ಛೇದ 371(ಜೆ)ಗೆ ತಿದ್ದುಪಡಿಯನ್ನು ತರಲು ಮಾನ್ಯ ಖರ್ಗೆಯವರ ಸತತ ಪ್ರಯತ್ನ ಮತ್ತು ನಮ್ಮ ಭಾಗದ ಹಿರಿಯ ಹೋರಾಟಗಾರರು ಕೈಜೋಡಿಸಿದರು. ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ನಮ್ಮ ಭಾಗಕ್ಕೆ ಸಂಬಂಧಪಟ್ಟ ಹಾಗೆ Article.371(J) Amendment Draft Rule, dated:01.01.2013 ರಿಂದಲೇ ಜಾರಿಗೆ ಬಂದಿದ್ದರೂ ಸಹ ಇಲ್ಲಿಯವರೆಗೂ ಕೆಲವು ಇಲಾಖೆಗಳವರು ಸ್ಟ್ರಿಕ್ಟ್ ಆಗಿ ಫಾಲೋ ಮಾಡುತ್ತಿಲ್ಲ. “It amounts to contempt of special provision of the Constitution under Article.371(J)” ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ತಮ್ಮ ಅಧ್ಯಕ್ಷತೆಯಲ್ಲಿ ನಡೆಯುತ್ತಿದ್ದ ಭರವಸೆ ಸಮಿತಿಯಲ್ಲಿ ಈ ಕುರಿತು ಸಂಬಂಧಪಟ್ಟವರಿಗೆ ಗಂಭೀರವಾದ ಎಚ್ಚರಿಕೆಯನ್ನೂ ಕೊಟ್ಟಿದ್ದೀರಿ. ಇವತ್ತಿಗೂ ಕೂಡ State level recruitment ನಲ್ಲಿ ಶೇಕಡ 8 ಮತ್ತು specially ‘C’ ಯಲ್ಲಿ 75:25, ಡಿ ಯಲ್ಲಿ 85:15 ಈ ರೀತಿ ವರ್ಗೀಕರಣ ಮಾಡಿ ನಮ್ಮ ಭಾಗಕ್ಕೆ ಎಷ್ಟು ಬರಬೇಕು ಮತ್ತು ಅವರ ಭಾಗಕ್ಕೆ ಎಷ್ಟು ಬರಬೇಕು ಎಂಬ ಬಗ್ಗೆ ಕೆಲವು ಇಲಾಖೆಗಳಲ್ಲಿ ಸ್ಟ್ರಿಕ್ಟ್ ಆಗಿ ಫಾಲೋ ಮಾಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನಹರಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಪುಟ ಸಂಖ್ಯೆ:9ರ ಪ್ಯಾರಾ 17 ರಲ್ಲಿ, “ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಗಂಗಾ ಕಲ್ಯಾಣ, ಭೂ ಖರೀದಿ ಮತ್ತು ಸ್ವ-ಉದ್ಯೋಗಕ್ಕಾಗಿ ನೆರವು ನೀಡುವಂತಹ ಹಲವಾರು ಆರ್ಥಿಕಾಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ. ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಕ್ಕೆ ಮತ್ತು ನಿರುದ್ಯೋಗಿ ಯುವ ಜನತೆಗೆ ತರಬೇತಿ ನೀಡುವುದಕ್ಕೆ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮವು ಹಲವಾರು ಯೋಜನೆಗಳನ್ನು ಜಾರಿಗೊಳಿಸುತ್ತಿದೆ” ಎಂದು ಹೇಳಲಾಗಿದೆ. ಇದು ಸ್ವಾಗತಾರ್ಹವಾದುದು ಮತ್ತು ಇದರ ಅವಶ್ಯಕತೆ ಬಹಳ ಇದೆ. ಕೌಶಲ್ಯಾಭಿವೃದ್ಧಿ ಕೇಂದ್ರಕ್ಕೆ ಹೆಚ್ಚಿನ ಒತ್ತನ್ನು ನೀಡಿದ್ದಾರೆ ಮತ್ತು ರೈತರಿಗೆ ಸ್ವ-ಉದ್ಯೋಗಕ್ಕಾಗಿ ಅನುಕೂಲ ಮಾಡಿಕೊಟ್ಟಿದ್ದಾರೆ. ನಾನು ಇದನ್ನೂ ಕೂಡ ಸ್ವಾಗತಿಸುತ್ತೇನೆ.

ಪ್ಯಾರಾ 20ರಲ್ಲಿ “ವಿದ್ಯಾರ್ಥಿಗಳ ಕಲಿಕಾ ಮಟ್ಟ ಹಾಗೂ ಕಲಿಕಾ ದೋಷಗಳನ್ನು ಪತ್ತೆ ಹಚ್ಚಲು ರಾಜ್ಯ ಸಾಧನಾ ಸಮೀಕ್ಷೆಯನ್ನು ನಡೆಸಲಾಗಿದೆ; ಹಾಗೂ ಸೂಕ್ತ ಸುಧಾರಣಾ ಬೋಧನೆಯ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತರಗತಿಗಳನ್ನು ಪ್ರಾರಂಭಿಸಲಾಗಿದೆ. ನನ್ನ ಸರ್ಕಾರವು, ಶಾಲಾ ಶಿಕ್ಷಣದ ಗುಣಮಟ್ಟದ ಅಭಿವೃದ್ಧಿಗಾಗಿ ತಂತ್ರಜ್ಞಾನ ಆಧಾರಿತ ಕಲಿಕಾ ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಪಠ್ಯೇತರ ಚಟುವಟಿಕೆಗಳು, ಕ್ರೀಡಾ ಚಟುವಟಿಕೆಗಳು, ವಿಜ್ಞಾನ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸಲಾಗುತ್ತಿದೆ" ಎಂದು ಹೇಳಿದ್ದಾರೆ. ಅಂದರೆ quality of education ನ ವಿಷಯವನ್ನು ಇಲ್ಲಿ ತಂದಿದ್ದಾರೆ. ಮಾನ್ಯ ಸಭಾಪತಿಯವರೇ, ಮಾನ್ಯ ಜಿ.ಟಿ.ದೇವೇಗೌಡರು ಮತ್ತು ಮಾನ್ಯ ಮಹೇಶ್‌ರವರು ಸದನದಲ್ಲಿ ಉಪಸ್ಥಿತರಿದ್ದಾರೆ. With regard to maintain the quality of education in our State, ಮಹಾತ್ಮ ಗಾಂಧೀಜಿಯವರು ಹೇಳಿರುವ ಮಾತು ಎಲ್ಲರಿಗೂ ಗೊತ್ತಿದೆ ಎಂದು ನಾನು ಭಾವಿಸುತ್ತೇನೆ. You are all Seniors having rich knowledge about the education and its privilege and proud to speak about presence of our Ex-Higher Education Minister Mr.Desh Pandeji is also here. ಒಂದು ಪ್ರಾಥಮಿಕ ಶಾಲಾ ಶಿಕ್ಷಣದ ಪಠ್ಯಕ್ರಮವನ್ನು ಗಮನಿಸಿ ಆ ದೇಶದ ಭವಿಷ್ಯವನ್ನು ನಿರ್ಧರಿಸಬಹುದು ಎನ್ನುವ ಮಾತನ್ನು ಮಹಾತ್ಮ ಗಾಂಧೀಜಿಯವರು ಮತ್ತು ಮಾನ್ಯ ಎ.ಪಿ.ಜೆ.ಅಬ್ದುಲ್‌ಕಲಾಂರವರು reiterate ಮಾಡಿದ್ದಾರೆ. ಆದರೆ ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ unless and until you correct the primary education, we cannot get the quality of education either in the Secondary educaton or in the Pre-university or in the Degree education. ನಿನ್ನೆ ತಾನೇ ಮಾನ್ಯ ರವಿಕುಮಾರ್‌ರವರು, 413 ಡಿಗ್ರಿ ಕಾಲೇಜುಗಳ ಪೈಕಿ 395 ಕಾಲೇಜುಗಳಲ್ಲಿ ಪ್ರಾಂಶುಪಾಲರಿಲ್ಲ, ಶೇಕಡ 50 ರಷ್ಟು ಪಿ.ಯು. ಉಪನ್ಯಾಸಕರ ನೇಮಕಾತಿಯಾಗಿಲ್ಲ, ಸುಮಾರು ಶೇಕಡ 40 ಪಿ.ಯು ಕಾಲೇಜುಗಳಲ್ಲಿ ಪ್ರಾಂಶುಪಾಲರು ಇಲ್ಲ ಎಂಬ ಮಾತನ್ನು ಹೇಳಿದರು. ಪ್ರೌಢ ಶಾಲೆಗಳಲ್ಲೂ ಕೂಡ ಶೇಕಡ 50ರಷ್ಟು ಮುಖ್ಯೋಪಾಧ್ಯಾಯರುಗಳು ಇಲ್ಲ. ಮಾನ್ಯ ಮಹೇಶ್‌ರವರಿಗೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಾಥಮಿಕ ಶಿಕ್ಷಣಕ್ಕೆ ಒತ್ತು ಕೊಟ್ಟರೆ ಮಾತ್ರ ರಾಜ್ಯ ಅಥವಾ ದೇಶ ಇರಬಹುದು, quality of education maintain ಮಾಡಬಹುದು. ಆಗಿನ ಮುಖ್ಯಮಂತ್ರಿಯಾಗಿದ್ದ ಮಾನ್ಯ ಸಿದ್ದರಾಮಯ್ಯನವರು ಒಂದು ಸಲ ತೋರಣಗಲ್‌ಗೆ ಬಂದಿದ್ದಾಗ ನಾನು ಮತ್ತು ಮಾನ್ಯ ಕಿಮ್ಮನೆ ರತ್ನಾಕರ್‌ರವರು ಕೂಡಿ ಅಲ್ಲಿಗೆ ಹೋದೆವು. ಅಲ್ಲಿನ ಒಂದು ಶಾಲೆಗೆ ಜೂನ್ ತಿಂಗಳ ಮೊದಲ ವಾರದಲ್ಲಿ ಭೇಟಿ ಕೊಟ್ಟೆವು. 8ನೇ ತರಗತಿಗೆ ಹೋಗಿ, "ಸಿದ್ಧರಾಮಯ್ಯ" ಎಂದು ಬರೆಯಿರಿ ಎಂದು ಹೇಳಿದಾಗ, ಆ ವಿದ್ಯಾರ್ಥಿಗಳಿಗೆ ಸರಿಯಾಗಿ ಬರೆಯುವುದಕ್ಕೆ ಬರಲಿಲ್ಲ. ಆಗ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಮುಖ್ಯಮಂತ್ರಿಗಳ ಹೆಸರು ಬರೆಯುವುದನ್ನೇ ಕಲಿಸುವುದಕ್ಕೆ ಆಗಲಿಲ್ಲ, ನೀವೆಂಥ ಶಿಕ್ಷಕರು ಎಂದು ಹೇಳಿ ಕನ್ನಡ ಕಲಿಸುತ್ತಿದ್ದ ಶಿಕ್ಷಕನನ್ನು ಸಸ್ಪೆಂಡ್ ಮಾಡಿದರು. ನಾನು ಆಗ, ಆ ಮಗು ಇಲ್ಲಿ ಅಡ್ಮಿಷನ್ ಆಗಿ ಒಂದು ವಾರ ಆಗಿದೆ. ಅವನಿಗೆ 'ಸಿದ್ಧರಾಮಯ್ಯ' ಎಂದು ಬರೆಯಲು ಬಾರದೇ ಇದ್ದರೆ, whose fault? Please tell me Sir. ಎಂದು ಕೇಳಿದೆ. 1ನೇ ತರಗತಿಯಿಂದ 7 ನೇ ತರಗತಿಯವರೆಗೆ ಕನ್ನಡದಲ್ಲಿ ಓದಿದ ವಿದ್ಯಾರ್ಥಿಗೆ 'ಸಿದ್ಧರಾಮಯ್ಯ' ಎಂದು ಬರೆಯಲು ಬರದೇ ಹೋದರೆ, ಇಂಥದ್ದನ್ನು ತಳಮಟ್ಟದಿಂದಲೇ ಸರಿಪಡಿಸಬೇಕು ಎಂಬ ಮಾತನ್ನು ಮಾನ್ಯ ಕಿಮ್ಮನೆ ರತ್ನಾಕರ್‌ರವರು ಹೇಳಿದರು. ಇವರ ಕಳಕಳಿಯನ್ನು ನಾನು ಅಭಿನಂದಿಸುತ್ತೇನೆ. ಆದ್ದರಿಂದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕು ಎನ್ನುವುದನ್ನು ಮಾನ್ಯ ಮಹೇಶ್‌ರವರಲ್ಲಿ ಹೇಳಬಯಸುತ್ತೇನೆ.

ನಿನ್ನೆ ಮಾನ್ಯ ಭೋಜೇಗೌಡರವರು, ಮಾನ್ಯ ಮಂಜುನಾಥ್‌ರವರು ಕೆಲವು ಸಮಸ್ಯೆಗಳ ಬಗ್ಗೆ ಮಾತನಾಡಿದರು. ಮಾನ್ಯ ಸಭಾಪತಿಯವರೇ ಅದಕ್ಕೆ ತಾವೂ ಕೂಡ ಬೆಂಬಲವನ್ನು ವ್ಯಕ್ತಪಡಿಸಿದಿರಿ. ಮಾನ್ಯ ಸಭಾಪತಿಯವರೇ, ಇವತ್ತಿನ ಪತ್ರಿಕೆಲ್ಲಿ Guest Lecturers ಬಗ್ಗೆ ಒಂದು ಸ್ಟೇಟ್‌ಮೆಂಟ್ ಬಂದಿದೆ. 2016-17ರಲ್ಲಿ ಒಂದು ನೋಟಿಫಿಕೇಷನ್ ಇತ್ತು, ಒಂದು ಮಾನದಂಡವನ್ನು ಅನುಸರಿಸಿ ಈ ಒಂದು ನೋಟಿಫಿಕೇಷನ್ ಮಾಡಿದ್ದಿರಿ. ಸಡನ್ ಆಗಿ ಆ ನೋಟಿಫಿಕೇಷನ್ನನ್ನು ವಾಪಸ್ಸು ತೆಗೆದುಕೊಂಡು ಕಳೆದ ವರ್ಷ ಇನ್ನೊಂದು ನೋಟಿಫಿಕೇಷನ್ ಬಿಡುಗಡೆ ಮಾಡಿದಿರಿ. ನಿನ್ನೆ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ. 20 ವರ್ಷಗಳ ಕಾಲ ಅತಿಥಿ ಉಪನ್ಯಾಸಕನಾಗಿ ಕಾರ್ಯನಿರ್ವಹಿಸಿದ ಒಬ್ಬನ ಬದುಕು ಅತಂತ್ರವಾಗಿದೆ. ನಾನು ಸಾರಾಸಗಟಾಗಿ ಇವರನ್ನು ರೆಗ್ಯುಲರೈಸ್ ಮಾಡಿ ಎಂದು ಹೇಳುತ್ತಿಲ್ಲ. My suggestion and also I am well aware about the judgment given by the Apex Court reported in 2010. That is UmaDevi's Case. ಅದರಲ್ಲಿ 5 ಮಾನದಂಡಗಳನ್ನು ಕೊಡುತ್ತಾರೆ. ಒಂದನೆಯದು recruitment should be against the vacant post, required age and required qualification. Required qualification ಅಂದರೆ UGC Norms ಪ್ರಕಾರ MA-PhD, MSc-PhD ಆಗಿರಬೇಕು. ಆದರೆ ಅಲ್ಲಿ against the sanctioned post, ten years must be there ಎನ್ನುವ 5 ಕಂಡೀಷನ್ ಹಾಕಿದ್ದಾರೆ. ಈ ಕುರಿತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಬಸವರಾಜ ಹೊರಟ್ಟಿಯವರು, ಮಾನ್ಯ ಶ್ರೀಕಂಠೇಗೌಡರು, ಮಾನ್ಯ ಅಮರನಾಥ ಪಾಟೀಲರು ಮತ್ತು ಐವನ್ ಡಿ'ಸೋಜಾ ರವರು ವಿಚಾರ ಮಾಡಿದ್ದೆವು.

(ಮುಂದು . . .)

(054)4-7-2018 12.10 ಡಿಎಸ್-ವಿಕೆ

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅತಿಥಿ ಉಪನ್ಯಾಸಕರ ಬಗ್ಗೆ ಪ್ರತಿ ಸಲ ಸದನದಲ್ಲಿ ಪ್ರಸ್ತಾಪ ಮಾಡುತ್ತಿರುತ್ತೇವೆ. ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಪ್ರಾರ್ಥನೆ ಮಾಡುತ್ತೇನೆ. ಕಳೆದ 20-25 ವರ್ಷಗಳಿಂದ ನಾವು ಏನು ಕೊಡುತ್ತೇವೆ ಅಷ್ಟೆ ಸಂಭಾವನೆಗೆ ಈ ಅತಿಥಿ ಉಪನ್ಯಾಸಕರು ಕೆಲಸ ಮಾಡುತ್ತಾ ಬಂದಿದ್ದಾರೆ. ಹಿಂದೆ ನಮ್ಮಲ್ಲಿ annual system ಇತ್ತು, ಇತ್ತೀಚೆಗೆ semester system ಬಂದಿದೆ. ಈಗ semester system ನಲ್ಲಿ ಅತ್ಯಂತ ಹೆಚ್ಚು ಅಂಕ ಕೊಡುವ ಪರಿಪಾಠ ಬಂದಿದೆ.

**ಸಭಾಪತಿಯವರು:-** ನೀವು ಬರುವುದಕ್ಕಿಂತ ಮೊದಲು ಇದರ ಬಗ್ಗೆ ಚರ್ಚೆಯಾಗಿದೆ. ಸಚಿವರು ಸಂಬಂಧಪಟ್ಟವರನ್ನು ಕರೆದು ಸಭೆ ಮಾಡಿ, ಆ ಸಭೆಯಲ್ಲಿ ತೀರ್ಮಾನ ಮಾಡುತ್ತೇವೆಂದು ಹೇಳಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈಗ ಆಗಬೇಕಾಗಿರುವುದೇನೆಂದರೆ, ಕಳೆದ ವರ್ಷ ಇದ್ದವರನ್ನು ಮುಂದುವರೆಸುವುದು ಹಾಗೂ ಉಳಿದ ಖಾಲಿ ಹುದ್ದೆಗಳಿಗೆ ಕನಿಷ್ಠ ಹತ್ತು ವರ್ಷ weightage ಕೊಡುವುದು ಇವೆರಡು ಆಗಬೇಕು ಅಷ್ಟೆ.

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಒಂಚು ವಿಚಾರವನ್ನು ನೇರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಶಾಸನ ಸಭೆಯಲ್ಲಿ ಶಾಸನವನ್ನು ಮಾಡುವುದರಿಂದ ನಮ್ಮ ಹಾಗೆಯೇ ನಡೆಯಬೇಕು. ಐ.ಎ.ಎಸ್. ಅಧಿಕಾರಿಗಳ ಆಟದಲ್ಲಿ ನಡೆಯಬಾರದು. ಅತಿಥಿ ಉಪನ್ಯಾಸಕರದ್ದು Circular ಹೋಗಿರುವಂತದ್ದು...

**ಸಭಾಪತಿಯವರು:-** ಈಗಾಗಲೇ ಪೀಠದಿಂದ ಹೇಳಿದ್ದೇನೆ. ಸಭೆಯನ್ನು ಕರೆದು ನಿಮ್ಮ ಜೊತೆಯಲ್ಲಿ ಚರ್ಚೆ ಮಾಡುತ್ತಾರೆ. ಎಲ್ಲರೂ ಸೇರಿ ತೀರ್ಮಾನವನ್ನು ಮಾಡಿ.

ಶ್ರೀ **ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ತಾವು ಕೂಡ ಸಭೆಯನ್ನು ಕರೆಯುವುದಕ್ಕೆ ಆದೇಶ ಮಾಡಿದ್ದೀರಿ, ತಮಗೆ ಧನ್ಯವಾದಗಳು. ನಾನು ಮಾನ್ಯ ಶಿಕ್ಷಣ ಸಚಿವರಿಗೆ ಮತ್ತೊಂದು ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಅತಿಥಿ ಉಪನ್ಯಾಸಕರಿಗೆ ಸರಿಯಾದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯಲ್ಲಿ ಸಂಬಳ ಬರುತ್ತಿಲ್ಲ. ಅವರಿಗೆ ತಿಂಗಳಿಗೆ 7,000 ರೂಪಾಯಿ ಸಂಬಳ ಕೊಡುತ್ತಿದ್ದಾರೆ, ಅದನ್ನು 10,000 ರೂಪಾಯಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಇವತ್ತಿನ ಪರಿಸ್ಥಿತಿಯಲ್ಲಿ ದಿನಕ್ಕೆ 300 ರೂಪಾಯಿ ಕೂಲಿಯಾದರೂ 9,000 ರೂಪಾಯಿ ಆಗುತ್ತದೆ. ನಮ್ಮಲ್ಲಿ recruitment ಗೆ ತುಂಬಾ ತೊಂದರೆಯಾಗುತ್ತಿದೆ. ಶೇಕಡಾ 50 ರಷ್ಟು ಶಿಕ್ಷಕರು ನಮ್ಮ ಹೈದರಾಬಾದ್-ಕರ್ನಾಟಕದಲ್ಲಿ ಕಡಿಮೆ ಇದ್ದಾರೆ. ಇಲ್ಲಿ ಶೇಕಡ 25 ರಷ್ಟು ಕಡಿಮೆ ಇದ್ದಾರೆಂದು ನಾನು ಭಾವಿಸುತ್ತಿದ್ದೇನೆ. ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರ promotion list ಕೂಡ ತುಂಬಾ ತಡವಾಗುತ್ತಿದೆ. ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, 371(ಜೆ) ವಿಚಾರ ಬಂದಾಗ ಅಲ್ಲಿ ಹೈದರಾಬಾದ್-ಕರ್ನಾಟಕೇತರ ಮತ್ತು ಹೈದರಾಬಾದ್-ಕರ್ನಾಟಕ ವಿಚಾರ ಬಂದಾಗ ಜಲ್ವಂತ ಸಮಸ್ಯೆಯೊಂದು ಈಗ ಆಗಿದೆ. ಕಾರ್ಯದರ್ಶಿಯವರಾದ ಶ್ರೀಮತಿ ಶಾಲಿನಿ ರಜನೀಶ್‌ರವರು ಇಲ್ಲದ್ದಾರೆ. She is also well aware about this issue. Cabinet Sub-Committee ಗೆ ಆ ಕಡತ ಹೋಗಬೇಕೆನ್ನುವ ವಿಚಾರ ಬಂದಿದೆ. ಇದಕ್ಕೆ ಕಾರಣವೇನೆಂದರೆ, ಯಾರಿಗೂ ಅನ್ಯಾಯವಾಗಬಾರದು. ಹೈದರಾಬಾದ್-ಕರ್ನಾಟಕದವರು ಇರಲಿ ಅಥವಾ ಹೈದರಾಬಾದ್-ಕರ್ನಾಟಕೇತರದವರು ಇರಲಿ, ನನ್ನ ಕಳಕಳಿ ಇಷ್ಟೆ, 371(ಜೆ) ತಿದ್ದುಪಡಿ ಪ್ರಕಾರ ನಮಗೆ ಶೇಕಡಾ 75 ರಷ್ಟು, ಹೈದರಾಬಾದ್-ಕರ್ನಾಟಕೇತರದವರಿಗೆ ಶೇಕಡ 25 ರಷ್ಟು ಕೊಡಲೇಬೇಕು. It is a mandatory condition. ಇದನ್ನು ಯಾರು ನಿಯಂತ್ರಣ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಅರುಣ್‌ಶಹಾಪುರರವರು ಇಲ್ಲದ್ದಾರೆ. ಹಾಗಾಗಿ ಐದು ವರ್ಷಗಳಿಂದ ಈ ವಿಚಾರ ಹಾಗೆಯೇ ಉಳಿದಿದೆ. ಮೊನ್ನೆ ನಡೆದಿರುವಂತಹ ಸಭೆಯಲ್ಲಿಯೂ ಈ ವಿಚಾರವನ್ನು ಗಮನಕ್ಕೆ ತಂದಿದ್ದೇವೆ.

**ಶ್ರೀ ಅರುಣ ಶಹಾಪುರ**:- ಮಾನ್ಯ ಸಭಾಪತಿಯವರೇ, ಅವರು ಬಹಳ ಪ್ರಮುಖವಾದ ಸಂಗತಿಯನ್ನು ಹೇಳುತ್ತಿದ್ದಾರೆ. ಹೈದರಾಬಾದ್-ಕರ್ನಾಟಕೇತರದವರ ಶೇಕಡ 25 ರಷ್ಟು ಕೋಟಾ ಏನಿದೆ ಅವರಿಗೆ ಅಧಿಕಾರಿಗಳು ಕೊಡಬೇಕಾಗಿರುವಂತಹ ನ್ಯಾಯ ಕೊಡುತ್ತಿಲ್ಲ.

**ಶ್ರೀ ಶರಣಪ್ಪ ಮಟ್ಟೂರ**:- ಮಾನ್ಯ ಅರುಣ ಶಹಾಪುರರವರೇ, ಆ ರೀತಿ ಅಧಿಕಾರಿಗಳ ಮೇಲೆ blame ಮಾಡಬೇಡಿ. She is also a very good Officer. ಅವರು ಮಾಡುತ್ತಿದ್ದಾರೆ. ತಾವು ಕಾರಣವೇನೆಂದು ತಿಳಿದುಕೊಳ್ಳಿ. ಸುಮ್ಮನೆ ಅಧಿಕಾರಿಗಳ ಮೇಲೆ ಹೇಳುವುದು ಬೇಡ. ಇಲ್ಲಿ ಏನಾಗಿದೆ ಎಂದರೆ, 371(ಜೆ) ಗೆ ತಿದ್ದುಪಡಿಯಾದ ಪ್ರಕಾರ ನಮಗೆ ಶೇಕಡಾ 75 ರಷ್ಟು, ಅವರಿಗೆ ಶೇಕಡಾ 25 ರಷ್ಟು ಕೊಡಬೇಕು. ಶೇಕಡ 25 ರಷ್ಟರಲ್ಲಿ 1957ರ ಕೆ.ಸಿ.ಎಸ್.ಆರ್. ನಲ್ಲಿರುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಯಮಾವಳಿಯಲ್ಲಿ ಒಬ್ಬ ಜೂನಿಯರ್ ಒಂದು ದಿನ ಸೀನಿಯರ್‌ಗಿಂತ ಪ್ರಮೋಷನ್ ಆಗಬಾರದು ಎಂದು ಇದೆ. ಸೀನಿಯರ್‌ಗಿಂತಲೂ ಒಂದು ರೂಪಾಯಿ ಹೆಚ್ಚಿನ ಸಂಬಳವನ್ನು ತೆಗೆದುಕೊಳ್ಳಬಾರದು ಎನ್ನುವ ನಿಯಮ ಇರುವುದರಿಂದ, ಇಲ್ಲಿ ಸ್ಪೆಷಲ್ ಅಮೆಂಡ್‌ಮೆಂಟ್ ಇರುವುದರಿಂದ ಕೊಡಲೇಬೇಕಾಗುತ್ತದೆ. ನಾವು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ಯಾವುದೇ ಒಂದು ಕಾನೂನನ್ನು, particularly the Act. Act should be in conformity with the Constitution, Rules and Regulations should be in conformity with the Act. ಹೀಗಿರುವಾಗ ಇದರಲ್ಲಿ ಅಧಿಕಾರಿಗಳ ತಪ್ಪು ಇಲ್ಲ. ಕ್ಯಾಬಿನೆಟ್ ಸಬ್‌ಕಮಿಟಿಯಲ್ಲಿ ಈ ವಿಷಯ ಇದೆ. ಪ್ರಧಾನ ಕಾರ್ಯದರ್ಶಿಯವರು, ಮಾನ್ಯ ಮಹೇಶ್‌ರವರು, ಈ ವಿಚಾರದ ಬಗ್ಗೆ ಗಮನಹರಿಸಿ ಕೂಡಲೇ ಪ್ರಮೋಷನ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. High School to PU College promotions ಕೂಡ ಏಳು ವರ್ಷಗಳಿಂದ ಬಾಕಿ ಇದೆ. ದಯಮಾಡಿ ಅದನ್ನು ಮಾಡಬೇಕೆಂದು ಸಲಹೆ ಕೊಡುತ್ತಾ, ಅವಕಾಶಕ್ಕಾಗಿ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. ರಾಜ್ಯ ಸರ್ಕಾರವು ಎಲ್ಲಾ ವಿಭಾಗಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದೆ. ಅನ್ನದಾತನ ಬದುಕನ್ನು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಕೃಷಿ ಕಾರ್ಮಿಕರಿಗೆ, ಹಿಂದುಳಿದವರಿಗೆ, ಮಹಿಳೆಯರಿಗೆ, ಮಕ್ಕಳಿಗೆ ಎಲ್ಲರಿಗೂ ಉತ್ತಮವಾದ ಯೋಜನೆಗಳನ್ನು ನಮ್ಮ ರಾಜ್ಯಪಾಲರ ಭಾಷಣದಲ್ಲಿ ಅಳವಡಿಸಿಕೊಂಡಿದ್ದಾರೆ. ನಾನು ಹೇಳುವುದೇನೆಂದರೆ, ಜನಪ್ರತಿನಿಧಿಗಳು, ಮಾನ್ಯ ಮುಖ್ಯಮಂತ್ರಿಗಳ ಉದ್ದೇಶ ಕೂಡ ಒಂದೇ ಆಗಿದೆ. ಆದರೆ ಇದರಲ್ಲಿ ನಾವು ಎಷ್ಟು ವಿಚಾರಗಳನ್ನು ಅನುಷ್ಠಾನ ಮಾಡಿ ಫಲಾನುಭವಿಗಳಿಗೆ ತಲುಪಿಸುತ್ತೇವೆ ಎನ್ನುವ ಬಗ್ಗೆ ಇವತ್ತು ಚರ್ಚೆ ಮಾಡಬೇಕಾಗಿದೆ. ಇವತ್ತು ಕೊಡಗು ಜಿಲ್ಲೆ ಒಂದು ಪುಟ್ಟ ಜಿಲ್ಲೆಯಾಗಿದೆ. ಮೂರು ವಿಧಾನಸಭಾ ಕ್ಷೇತ್ರ ಇದ್ದದ್ದು ಎರಡು ವಿಧಾನಸಭಾ ಕ್ಷೇತ್ರಕ್ಕೆ ತಲುಪಿದೆ. ಇಬ್ಬರು ವಿಧಾನ ಪರಿಷತ್ತಿನ ಸದಸ್ಯರು ಹಾಗು ಇಬ್ಬರು ವಿಧಾನಸಭಾ ಸದಸ್ಯರು ಸೇರಿ ಒಟ್ಟು ನಾಲ್ಕು ಜನ ಪ್ರತಿನಿಧಿಗಳು ಇವತ್ತು ಕೊಡಗು ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದೇವೆ. ಕೊಡಗಿನ ಜನರೆಲ್ಲರ ಸಮಸ್ಯೆಗೆ ಸ್ಪಂದನೆ ಮಾಡಬೇಕಾದರೆ ಅಲ್ಲಿನ ಅಧಿಕಾರಿಗಳು ಉತ್ತಮವಾಗಿ ಕೆಲಸ ಮಾಡಬೇಕಾಗುತ್ತದೆ. ಬೇರೆ ಕಡೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲದಿರುವುದರಿಂದ ಇಲ್ಲಿ ಹೇಳಬಯಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತು ರಾಜ್ಯ ಸರ್ಕಾರ ಎಲ್ಲರಿಗೂ ಸಮಪಾಲು ಸಮಬಾಳು ಎಂದು ಹೇಳಿರುವಂತಹ ವಿಚಾರಕ್ಕೆ ಸಂಬಂಧಿಸಿದಂತೆ ನಾನು ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಿಗೆ ಎರಡು ತಿಂಗಳು ಮಳೆಯಾದರೆ ನಮ್ಮ ಜಿಲ್ಲೆಯಲ್ಲಿ 7 ತಿಂಗಳು ಮಳೆಯಾಗುತ್ತದೆ. ಅಂತಹ ವ್ಯವಸ್ಥೆಯಲ್ಲಿ ಅಲ್ಲಿನ ಜನರ ಜೀವನ ಎಷ್ಟು ಕಷ್ಟಕರವಾಗಿದೆ ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಮಳೆಯಿಂದ ಅತಿವೃಷ್ಟಿಯಾದಂತಹ ಸಂದರ್ಭದಲ್ಲಿ ನಮ್ಮ ಕಂದಾಯ ಮಂತ್ರಿಗಳು ಕೂಡ ನಮ್ಮ ಜಿಲ್ಲೆಗೆ ಬಂದಿದ್ದರು. ಇದುವರೆವಿಗೂ ನಾವು ಏನು ಅಭಿವೃದ್ಧಿ ಕೆಲಸ ಮಾಡಿದ್ದೆವು, ಅದೆಲ್ಲಾ ಮಳೆ ನೀರಲ್ಲಿ ಕೊಚ್ಚಿ ಹೋಗಿದೆ. ಅಂತಹ ಒಂದು ಸಂದರ್ಭ ನಮ್ಮ ಕೊಡಗು ಜಿಲ್ಲೆಗೆ ಬಂದಿದ್ದೆ. ಅದರ ಜೊತೆಗೆ ಮೊನ್ನೆ ಅರಣ್ಯ ಮಂತ್ರಿಗಳು ಕೂಡ ನಮ್ಮ ಜಿಲ್ಲೆಗೆ ಬಂದಿದ್ದರು. ಅವರು ಬರುತ್ತಾರೆಂದು ಜನಪ್ರತಿನಿಧಿಗಳಿಗೆ ಗೊತ್ತಿರಲಿಲ್ಲ. ಅವರು ಅಲ್ಲಿನ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ ಬಂದಿದ್ದಾರೆ. ಇವತ್ತು ಕೊಡಗು ಜಿಲ್ಲೆಯಲ್ಲಿ ಆನೆ ಮತ್ತು ಮಾನವನ ನಡುವಿನ ಸಂಘರ್ಷ ಯಾವ ರೀತಿ ಇದೆ ಎಂದರೆ ಪ್ರತಿ ವರ್ಷ ಅಲ್ಲಿ ಸುಮಾರು 20-30 ಜನರು ಆನೆಯ ದೌರ್ಜನ್ಯಕ್ಕೆ ಬಲಿಯಾಗಿ ಸಾವನ್ನಪ್ಪಿದ್ದಾರೆ. ಅದೇ ರೀತಿ ಕಾಡು ಪ್ರಾಣಿಗಳು ಕೊಟ್ಟಿಗೆಯಿಂದ ದನಕರುಗಳನ್ನು ಹೊತ್ತೊಯ್ದು ತಿನ್ನುವಂತಹ ವ್ಯವಸ್ಥೆಯಾಗಿದೆ. ಅರಣ್ಯ ಇಲಾಖೆಯಲ್ಲಿ ಸಮಗ್ರವಾದ ಬದಲಾವಣೆ ಖಂಡಿತ ಆಗಬೇಕಾಗಿದೆ. ಅಲ್ಲಿ ಸಿಬ್ಬಂದಿಗಳ ಕೊರತೆ ಕೂಡ ಇದೆ. ಇದನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಏಕೆಂದರೆ, ಅವರು ಜನರ ಕಷ್ಟ ಸುಖಗಳಿಗೆ ಸ್ಪಂದಿಸಬೇಕು. ಅಂತಹ ಅಧಿಕಾರಿಗಳು ಖಂಡಿತವಾಗಿಯೂ ಇಲ್ಲ. ಇನ್ನು ಮಳೆ ವಿಪರೀತವಾಗಿ ಕಷ್ಟ ನಷ್ಟಗಳಾಗುತ್ತಿವೆ. ಕಂದಾಯ ಇಲಾಖೆಯಿಂದ ಜನಸಾಮಾನ್ಯರಿಗೆ ಆಗುವ ತೊಂದರೆಗಳನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಏಕೆಂದರೆ, ಅನೇಕ ವಿಧವೆಯರು, ವೃದ್ಧರು, ಇಲಾಖೆಗಳಿಗೆ ಭೇಟಿ ಕೊಟ್ಟಾಗ ಕೇವಲ ಸಣ್ಣಪುಟ್ಟ ಕೆಲಸಗಳು ಕೂಡ ಅಲ್ಲಿ ಆಗುವುದಿಲ್ಲ. ಒಂದು paper move ಆಗಬೇಕಾದರೆ ಕನಿಷ್ಠ ಪಕ್ಷ ಆರು ತಿಂಗಳು ಆಗುತ್ತದೆ. ಜನರಿಗೆ ಯಾವ ರೀತಿ ಸಹಾಯ ಮಾಡಬೇಕೆಂದು ನಮಗೂ ಕೂಡ ಗೊತ್ತಾಗುವುದಿಲ್ಲ. ಆಡಳಿತ ವ್ಯವಸ್ಥೆ ಯಾವಾಗ ಚುರುಕು ಆಗುವುದಿಲ್ಲವೋ, ಅಲ್ಲಿಯವರೆಗೆ ಖಂಡಿತವಾಗಿಯೂ ಜನರಿಗೆ ಜನಪ್ರತಿನಿಧಿಗಳು ಸಹಾಯ ಮಾಡುವುದಕ್ಕೆ ಆಗುವುದಿಲ್ಲ. ಆ ನಿಟ್ಟಿನಲ್ಲಿ ಸಂಬಂಧಪಟ್ಟ ಮಂತ್ರಿಗಳು ಕೊಡಗು ಜಿಲ್ಲೆಗೆ ವಿಶೇಷವಾದ ಗಮನಹರಿಸಬೇಕೆಂದು ಕೊಡಗಿನ ಜನರ ಪರವಾಗಿ ನಾನು ಕೇಳಿಕೊಳ್ಳುತ್ತಿದ್ದೇನೆ.

ನಮ್ಮ ಕೊಡಗಿಗೆ ಮಾರಕವಾಗಿರುವಂತಹ ಅನೇಕ ಯೋಜನೆಗಳನ್ನು ತಂದಿರುವಂತಹ ವಿಚಾರದ ಬಗ್ಗೆ ಹೇಳುವುದಕ್ಕೆ ನಾನು ಈ ಸಂದರ್ಭದಲ್ಲಿ ಇಷ್ಟಪಡುತ್ತಿದ್ದೇನೆ. ಆದರೆ ನಾನು ಎಲ್ಲಾ ಜನಪ್ರತಿನಿಧಿಗಳನ್ನು ಹಾಗೂ ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ, ಕೊಡಗು ಒಂದು ಸಣ್ಣ ಜಿಲ್ಲೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮನ್ನು ನಾವು ಬದುಕುವಂತೆ ಬದುಕಲು ಬಿಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಕೇಳಿಕೊಳ್ಳಬಯಸುತ್ತೇನೆ. ಏಕೆಂದರೆ, ಈಗಾಗಲೇ ಕೇರಳಕ್ಕೆ ಹಾದು ಹೋಗುವ ರೈಲ್ವೆ ವಿಚಾರದಲ್ಲಿಯೂ ಕೂಡ ಅನೇಕ ಗೊಂದಲಗಳಾಗಿವೆ. ನಿನ್ನೆಯ ಪತ್ರಿಕೆಯಲ್ಲಿ ನಾನು ನೋಡಿದೆ. ಅದು WhatsApp ನಲ್ಲಿ ಬಂದಿದೆ, ನೇರವಾಗಿ ನನ್ನ ಗಮನಕ್ಕೆ ಅದು ಇನ್ನೂ ಬಂದಿಲ್ಲ. ಆದರೂ ಆ ಬಗ್ಗೆ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಆ WhatsApp message ನಲ್ಲಿ ಏನು ಬಂದಿದೆ ಎಂದರೆ, 'ಕಾಫಿ ಬೆಳೆಗಾರರ ಸಾಲ ಮನ್ನಾ ಇಲ್ಲ' ಎಂದು ಬಂದಿದೆ. ಅದು ಒಂದು ಊಹೆ ಅಷ್ಟೆ. ನಾಳೆ ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಏನು ಹೇಳುತ್ತಾರೆಂದು ನೋಡಬೇಕು.

(ಮುಂದು)

055/03/07-2018/1-00/bkp-vk

**ಶ್ರೀಮತಿ ವೀಣಾ ಅಚ್ಚಯ್ಯ (ಮುಂದು)**

ದಯವಿಟ್ಟು ಕಾಫಿ ಬೆಳೆಗಾರರ ಸಾಲವನ್ನೂ ಸಹ ಮನ್ನಾ ಮಾಡುವಲ್ಲಿ ಎಲ್ಲವನ್ನು ಪರಿಗಣಿಸಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಕಂದಾಯ ಮಂತ್ರಿಗಳು ಬಂದಂತಹ ಸಮಯದಲ್ಲಿ ಜಿಲ್ಲಾಧಿಕಾರಿಗಳು ಸಹ ಇದ್ದರು. ಪುನಃ 5 ಕೋಟಿ ರೂಪಾಯಿಗಳ ಹಣವನ್ನು ಕೊಟ್ಟಿದ್ದೇವೆಂದು ಮಾನ್ಯ ಕಂದಾಯ ಮಂತ್ರಿಗಳು ಈಗಾಗಲೇ ಹೇಳಿದರು. ಮತ್ತೆ, ಮಂಗಳೂರು ವಿಭಾಗದ ಸದಸ್ಯರು ಸೇತುವೆ ಸರಿಯಾಗಿ ನಿಲ್ಲುವುದಿಲ್ಲವೆಂದು ಹೇಳಿದರು. ಅದೇ ರೀತಿಯಲ್ಲಿ ನಮ್ಮಲ್ಲಿಯೂ ಸಹ ಕೆರೆ ಕಟ್ಟೆಗಳು ಒಡೆದು ಜನರಿಗೆ ಜೀವನ ಮಾಡಲಿಕ್ಕೆ ಕಷ್ಟವಾಗಿದೆ. ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ ಈಗ ನಮ್ಮಲ್ಲಿ ಬಿತ್ತನೆ ಸಮಯ ಬಂದಿದ್ದು, ಆನೆಗಳ ಕಾಟ ಜಾಸ್ತಿಯಾಗಿದೆ. ನಾವು ಏನು ಭತ್ತ ಬೆಳೆಯಲು ಬಿತ್ತನೆ ಮಾಡುತ್ತೇವೆ, ಆನೆಗಳು ಅದನ್ನು ತುಳಿಯುವುದರ ಮೂಲಕ ಜನರಿಗೆ ಕಷ್ಟವನ್ನು ಕೊಡುತ್ತಿದೆ. ಕಾಫಿ ತೋಟದಲ್ಲಿಯೂ ಸಹ ಇವುಗಳು ಖಾಯಂ ಆಗಿ ವಾಸ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ, ಸಂಬಂಧಪಟ್ಟ ಮಂತ್ರಿಗಳು ಹಾಗೂ ಅಧಿಕಾರಿಗಳು ಸಮಾಲೋಚನೆ ಮಾಡಿ ನಮ್ಮ ಕೊಡಗಿನ ಜನರ ಬದುಕನ್ನು ಹಸನು ಮಾಡಬೇಕು. ಜನರು ಈ ತೊಂದರೆಯಿಂದಾಗಿ ರೊಚ್ಚಿಗೇಳುವ ಪರಿಸ್ಥಿತಿ ನಿರ್ಮಾಣವಾಗುವ ಹಂತಕ್ಕೆ ಬಂದಿದೆ. ಇದಕ್ಕೆ ಸರ್ಕಾರ ಖಂಡಿತವಾಗಿಯೂ ಸಹ ಅವಕಾಶ ಕೊಡಬಾರದು ಎಂದು ಹೇಳಿ ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ರಾಜ್ಯಪಾಲರ ಭಾಷಣಕ್ಕೆ ನನ್ನ ಸಂಪೂರ್ಣವಾದ ಬೆಂಬಲ ಇದೆ. ಮಾನ್ಯ ರಾಜ್ಯಪಾಲರು ಬಹಳ ಉತ್ತಮವಾದ ಭಾಷಣವನ್ನು ಮಾಡಿದ್ದಾರೆ. ಸರ್ಕಾರವೂ ಸಹ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದರಂತೆ ನಡೆದುಕೊಳ್ಳುತ್ತದೆ ಎನ್ನುವ ನಂಬಿಕೆ ಕೂಡ ನನ್ನಲ್ಲಿ ಇದೆ. ಏನೇ ಆಗಲಿ, ಕೊಡಗು ಜಿಲ್ಲೆಯ ಬಗ್ಗೆ ಹೆಚ್ಚಿನ ಒಂದು ಮುತುವರ್ಜಿಯನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಹೇಳಿ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಡಾ॥ ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಜಮ್ಮು-ಕಾಶ್ಮೀರದ ವಿಚಾರದಲ್ಲಿ ಪಿಹೆಚ್‌ಡಿ ಯನ್ನು ಪಡೆದಿರುತ್ತೇನೆ. ದಕ್ಷಿಣದ ಕಾಶ್ಮೀರ ಕೊಡಗು ಒಂದು ಪ್ರಕೃತಿ ಸೊಬಗು ಮಾತ್ರವಲ್ಲ, ಇವತ್ತು Global Warming ಸಂದರ್ಭದಲ್ಲಿ ವಿಶ್ವಸಂಸ್ಥೆ ಕೂಡ ಪಶ್ಚಿಮ ಘಟ್ಟಗಳ ಕೊಡುಗೆಯನ್ನು ಗಮನಿಸಿದೆ. ಇಂತಹ ಸಂದರ್ಭದಲ್ಲಿ ಕೊಡಗಿನ ವಿಚಾರ ಬಂದಾಗ ಮಾನ್ಯ ಸದಸ್ಯರಾದ ಶ್ರೀಮತಿ ವೀಣಾ ಅಚ್ಚಯ್ಯನವರು ಸದನದ ಗಮನವನ್ನು, ಬೆಂಬಲವನ್ನು ಕೋರಿದ್ದಾರೆ. ಅಭಿವೃದ್ಧಿ ಯೋಜನೆಗಳಿಗೆ ಪರಿಸರಕ್ಕೆ ಮಾರಕವಾಗದೇ ಇರುವಂತಹ ರೀತಿಯಲ್ಲಿ ಸುರಂಗ ಮಾರ್ಗದ ರೈಲ್ವೇ ಮಾರ್ಗವನ್ನು ಮಾಡುವ ಬಗ್ಗೆ ಹೇಳಿದ್ದಾರೆ. ಏಕೆಂದರೆ, ಕೊಡಗು ಜಿಲ್ಲೆಗೆ ಅಭಿವೃದ್ಧಿ ಬೇಕೇ ಬೇಕು. ಆ ಮೂಲಕ ಕರ್ನಾಟಕದ ಸಮಗ್ರ ಅಭಿವೃದ್ಧಿಯಾಗಲೇಬೇಕು. ಕೊಡಗಿನ ಜನಸಂಖ್ಯೆ ಇವತ್ತು ಆತಂಕದಲ್ಲಿದೆ, ವಿನಾಶದ ಅಂಚಿನಲ್ಲಿದೆ, ಕೊಡಗಿನ ಸಂಸ್ಕೃತಿ ಅಪಾಯದಲ್ಲಿದೆ, ಪರಿಸರ ಅಪಾಯದಲ್ಲಿದೆ. ಆದ್ದರಿಂದ, ಈ ಬಗ್ಗೆ ಒಂದು ವಿಶೇಷ ಚರ್ಚೆಗೆ ತಾವು ಬಿಡುವು ಆದಾಗ ಅವಕಾಶ ಮಾಡಿಕೊಡಬೇಕು. ಆಗ ಎಲ್ಲರೂ ಇದರಲ್ಲಿ contribute ಮಾಡುವುದಕ್ಕೆ ಸಹಕಾರ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಎನ್. ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ, ಘನತೆವೆತ್ತ ರಾಜ್ಯಪಾಲರು ಸರ್ಕಾರದ ವಿವಿಧ ಯೋಜನೆಗಳು ಮತ್ತು ಜನತೆಯ ಅಭಿವೃದ್ಧಿಗಾಗಿ ಅನೇಕ ಸಂಗತಿಗಳನ್ನು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಮ್ಮ ಮಾನ್ಯ ಹಿರಿಯ ಸಹೋದ್ಯೋಗಿಗಳು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿದ್ದಾರೆ. ನಮ್ಮ ಮುಖ್ಯಮಂತ್ರಿಗಳು ಅನೇಕ ಯೋಜನೆಗಳನ್ನು ತರಲಿಕ್ಕೆ ಉತ್ಸುಕರಾಗಿದ್ದಾರೆ. ನಮ್ಮ ಸದಸ್ಯರು ಮಾತನಾಡುತ್ತಾ, ಇಸ್ರೇಲ್ ಮಾದರಿ ಎಂದರೆ ಏನು ಎನ್ನುವ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ನಮ್ಮ ಮಾನ್ಯ ಮುಖ್ಯಮಂತ್ರಿಗಳು, ಗೌರವಾನ್ವಿತ ಸಭಾಪತಿಯವರು, ಮಾನ್ಯ ಸಣ್ಣ ನೀರಾವರಿ ಸಚಿವರು ಹಾಗೂ ನಾನು ಸೆಪ್ಟೆಂಬರ್ ತಿಂಗಳಿನಲ್ಲಿ ಇಸ್ರೇಲ್ ಪ್ರವಾಸ ಮಾಡಿಕೊಂಡು ಬಂದಿದ್ದೇವೆ. ಆ ಒಂದು ಪ್ರವಾಸದಲ್ಲಿ ಆ ಒಂದು ಕೃಷಿ ಚಟುವಟಿಕೆಯ ಬಗ್ಗೆ ಆಮೂಲಾಗ್ರವಾಗಿ ಸುಮಾರು 5 ದಿವಸಗಳ ಕಾಲ, ಏನು ಸುಮಾರು 40 ಡಿಗ್ರಿ ಉಷ್ಣಾಂಶ ಇದೆ, ಅಂತಹ ಸ್ಥಳದಲ್ಲಿ ಪ್ರತಿಯೊಂದು ಸ್ಥಳಕ್ಕೆ ಹೋಗಿ ಅಲ್ಲಿನ ಕೃಷಿಯ ಬಗ್ಗೆ, ತೋಟಗಾರಿಕೆಯ ಬಗ್ಗೆ, ಹೈನುಗಾರಿಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗ್ಗೆ ಸುಮಾರು 12 ಗಂಟೆಗಳ ಕಾಲ ಪ್ರತಿ ದಿವಸ ನಾವು ಗಮನಿಸಿದ್ದೇವೆ. ಇಸ್ರೇಲ್ ಒಂದು ಚಿಕ್ಕ ದೇಶವಾಗಿದ್ದರೂ ಸಹ ಪ್ರಪಂಚದಲ್ಲಿಯೇ ಅಲ್ಲಿನ ಕೃಷಿ ಬೆಳೆ ಮತ್ತು ಹೈನುಗಾರಿಕೆ ಬಹಳ ಪ್ರಸಿದ್ಧಿ ಪಡೆದಿದೆ. ಒಂದು ಉದಾಹರಣೆಯನ್ನು ಕೊಡಬೇಕೆಂದರೆ ಈ cactus, ಏನು ನಮ್ಮ ಹಳ್ಳಿಗಳ ಕಡೆಯಲ್ಲಿ ಪಾಪಸ್‌ಕಳ್ಳಿ ಎಂದು ಕರೆಯುತ್ತೇವೆ, ಆ ಒಂದು ಹಣ್ಣಿಗೆ ಮಳೆಯೇ ಬೇಕಾಗುವುದಿಲ್ಲ. ಒಣ ಭೂಮಿಯಲ್ಲಿಯೇ ಬೆಳೆಯುವಂತಹ ಹಣ್ಣು ಅದಾಗಿದೆ. ಅದನ್ನು ತಿನ್ನುವುದರಿಂದ ಬೊಜ್ಜು, ಬಿಪಿ. ಕೊಲೆಸ್ಟ್ರಾಲ್ ಇತ್ಯಾದಿಯಾಗಿ ಎಲ್ಲವೂ ಕಡಿಮೆಯಾಗುತ್ತದೆ. ಅವರು ಈ ಹಣ್ಣು ಇಡೀ ಪ್ರಪಂಚಕ್ಕೆ ರಫ್ತು ಮಾಡುತ್ತಾರೆ. ಆ ಒಂದು ಮಾದರಿಯನ್ನು ಚಿತ್ರದುರ್ಗ, ಬಳ್ಳಾರಿ, ಚಾಮರಾಜನಗರ ಇಂತಹ ಜಿಲ್ಲೆಗಳಲ್ಲಿ ಏನು ಕಡಿಮೆ ಮಳೆಯಾಗುತ್ತಿದೆ, ಅಲ್ಲಿ ಈ ಬೆಳೆಯನ್ನು ಅಭಿವೃದ್ಧಿ ಪಡಿಸಿದಲ್ಲಿ ನಮ್ಮ ರಾಜ್ಯದ ರೈತರು ಸುಖ ಜೀವನ ಮಾಡಲಿಕ್ಕೆ ಅವಕಾಶವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಮತ್ತೆ, ಅಲ್ಲಿನ ಹೈನುಗಾರಿಕೆ ಬಗ್ಗೆ ಹೇಳುವುದಾದರೆ ಸುಮಾರು 100-200 ಹಸುಗಳನ್ನು ಸಾಕುವುದರ ಮೂಲಕ ಈ ಹೈನುಗಾರಿಕೆಯನ್ನು ಒಂದು ಇಂಡಸ್ಟ್ರಿ ರೀತಿಯಲ್ಲಿ ನೋಡುತ್ತಾರೆ. ನಮಗೂ ಅವರಿಗೂ ಏನು ವ್ಯತ್ಯಾಸವೆಂದರೆ ವ್ಯವಸಾಯ ಮಾಡುವಂತಹ ನಮ್ಮ ರೈತರಿಗೆ ಈ ವಿಚಾರದಲ್ಲಿ ತಿಳುವಳಿಕೆ ಕಡಿಮೆ ಇದ್ದು, ಈ ನಿಟ್ಟಿನಲ್ಲಿ ಅವರಿಗೆ ಇನ್ನು ಹೆಚ್ಚಿನ ತಿಳುವಳಿಕೆಯನ್ನು ಕೊಡಬೇಕಾಗಿದೆ. ಅಲ್ಲಿ 100-200 ಹಸುಗಳನ್ನು 3-4 ಜನರು ಮಾತ್ರ ನೋಡಿಕೊಳ್ಳುತ್ತಾರೆ. ಪ್ರತಿ 8 ಗಂಟೆಗೊಮ್ಮೆ ಒಬ್ಬರು ಎಂದು ನಿಗದಿ ಮಾಡಿಕೊಂಡು ಅದನ್ನು ಪಾಳಿ ಪದ್ಧತಿಯಲ್ಲಿ ಆ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಾರೆ. ಅದೇ ವ್ಯವಸ್ಥೆಯನ್ನು ನಮ್ಮಲ್ಲೂ ಅಳವಡಿಸಿಕೊಂಡರೆ ಅನುಕೂಲವಾಗುತ್ತದೆ. ಏನು ಡೆನ್ಮಾರ್ಕ್‌ನಿಂದ ನೋಡಿಕೊಂಡು ಇಲ್ಲಿ ಮಾಡಿದ್ದೇವೆ, ಅದಕ್ಕಿಂತ ಹೆಚ್ಚಿನದಾಗಿ ಇಸ್ರೇಲ್‌ನಲ್ಲಿ ಇರುವಂತಹ ಪದ್ಧತಿಯನ್ನು ನಮ್ಮ ರಾಜ್ಯದಲ್ಲಿ ಅಳವಡಿಸಿಕೊಂಡರೆ ನಮ್ಮ ರೈತರ ಬದುಕು ಹಸನಾಗುತ್ತದೆ.

ಸಭಾಪತಿಯವರು:- ಶ್ರೀಯುತ ಭೋಜೇಗೌಡ ರವರು ಇಲ್ಲಿ ಗಮನಿಸಬೇಕು. ಅಲ್ಲಿಗೆ ಹೋಗಿದ್ದಂತಹ ಸಮಯದಲ್ಲಿ ನಮಗೆ ಕಂಡು ಬಂದಿದ್ದು ಏನೆಂದರೆ 2000 ಹಸುಗಳನ್ನು ನೋಡಿಕೊಳ್ಳಲಿಕ್ಕೆ 7 ಮಂದಿ ಇದ್ದರು. ಅದೆಲ್ಲವೂ ಒಂದು technique.

**ಶ್ರೀ ಎನ್. ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಇನ್ನು ಅಲ್ಲಿನ ತೋಟಗಾರಿಕೆ ಬಗ್ಗೆ ಹೇಳಬೇಕೆಂದರೆ ಮಾನ್ಯ ಸಭಾಪತಿಯವರು ಹೇಳಿದ ಹಾಗೆ ನಮ್ಮ ಕಣ್ಣುಗಳು ಎಷ್ಟು ದೂರ ನೋಡಬಹುದು, ಅಷ್ಟು ದೂರ ಅಲ್ಲಿ ತರಕಾರಿ ಬೆಳೆಗಳು ಕಾಣಿಸುತ್ತವೆ. ನಮ್ಮ ರಾಜ್ಯದಲ್ಲಿ ಏನೇನು ಸಮಸ್ಯೆಗಳಿವೆ ಎಂದರೆ ನಮ್ಮಲ್ಲಿ ಸಣ್ಣ ಸಣ್ಣ ಹೊಲಗಳಿರುತ್ತವೆ. ಆದರೆ, ಅಲ್ಲಿ Co-Operative

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Farming ಇದೆ. ಅಲ್ಲಿ 500 ಎಕರೆ, 1000 ಎಕರೆ ಮತ್ತು ಅದಕ್ಕಿಂತ ಜಾಸ್ತಿ ಎಕರೆ ಜಮೀನುಗಳಿದ್ದು, ಅಲ್ಲಿ ಆ ಒಂದು ರೀತಿಯಲ್ಲಿ ಬೆಳೆಗಳನ್ನು ಬೆಳೆಯುತ್ತಾರೆ. ಅಲ್ಲಿ ಎಲ್ಲಾ ರೈತರು Co-Operative Farming method ನಲ್ಲಿ ಬೆಳೆಗಳನ್ನು ಬೆಳೆಯುವುದರಿಂದ ಅಲ್ಲಿ ಬರುವಂತಹ ಉತ್ಪನ್ನಗಳನ್ನು, ಬೆಳೆಗಳನ್ನು ಎಲ್ಲರೂ ಸರಿ ಸಮನಾಗಿ ಹಂಚಿಕೊಳ್ಳುವುದರಿಂದ ಎಲ್ಲರೂ ಕೂಡ ವ್ಯವಸಾಯವನ್ನು ದೊಡ್ಡ ಮಟ್ಟದಲ್ಲಿ ಮಾಡುತ್ತಾರೆ. ಅದೇ ರೀತಿಯಲ್ಲಿ ಇಲ್ಲಿಯೂ ಕೂಡ ನಮ್ಮ ಸರ್ಕಾರ, ನಮ್ಮ ಮುಖ್ಯಮಂತ್ರಿಗಳು ಆ ರೀತಿಯ ಒಂದು ಯೋಚನೆಯನ್ನು ಮಾಡಿದ್ದಾರೆ.

ಇನ್ನು ಹತ್ತಿ ಬೆಳೆಯ ವಿಚಾರವಾಗಿ ಹೇಳುವುದಾದರೆ, ನಮ್ಮಲ್ಲಿ ಹತ್ತಿ ಬೆಳೆ ನಶಿಸಿ ಹೋಗುತ್ತಿದೆ. ಆದರೆ, ಅಲ್ಲಿ ಹತ್ತಿ ಬೆಳೆಯನ್ನು ಬಹಳ ಚೆನ್ನಾಗಿ ಬೆಳೆಯುತ್ತಿದ್ದಾರೆ. ಈ ಎಲ್ಲಾ ಅಂಶಗಳನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಗಮನಿಸಿದ್ದಾರೆ. ಈ ಸದನದ ಕೆಲವು ಮಾನ್ಯ ಸದಸ್ಯರುಗಳು ಸರ್ಕಾರದ ಮತ್ತು ಮುಖ್ಯಮಂತ್ರಿಗಳ ಬಗ್ಗೆ ಮಾತನಾಡುತ್ತಾ. ಕೇವಲ 37 ಜನ ಶಾಸಕರುಗಳನ್ನು ಗೆಲ್ಲಿಸಿಕೊಂಡು ಮುಖ್ಯಮಂತ್ರಿಗಳಾಗಿದ್ದಾರೆಂದು ಹೇಳಿದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ Sri Madhu Koda ಎನ್ನುವ ಒಬ್ಬ ವ್ಯಕ್ತಿ Jharkhand ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಆದರೆ, ಇಲ್ಲಿ ಏತಕ್ಕೋ ಏನೋ ಕೆಲವು ಮಾನ್ಯ ಸದಸ್ಯರುಗಳು 37 ಜನ ಶಾಸಕರನ್ನು ಒಳಗೊಂಡವರು ಮುಖ್ಯಮಂತ್ರಿಗಳಾಗಿದ್ದಾರೆಂದು ಹೇಳಿ ಚುಚ್ಚಿ ಚುಚ್ಚಿ ಮಾತನಾಡುತ್ತಿದ್ದಾರೆ. ಅವರ ಅಸೂಯೆ ನನಗೆ ಅರ್ಥವಾಗುತ್ತಿಲ್ಲ. ಏತಕ್ಕೆ ಮುಖ್ಯಮಂತ್ರಿಯಾಗಬಾರದು, ಎಲ್ಲಿದೆ? ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆ ರೀತಿಯ ಕಾನೂನು ಏನಾದರೂ ಇದೆಯೇ? ಗೋವಾದಲ್ಲಿ ಏನಾಯಿತು? ಮತ್ತೆ ಬಿಹಾರ ರಾಜ್ಯದಲ್ಲಿ ಮೊದಲು ಶ್ರೀಯುತ ನಿತೀಶ್ ಕುಮಾರ್ ಮತ್ತು ಶ್ರೀಯುತ ಲಾಲೂ ಪ್ರಸಾದ್ ಯಾದವ್ ರವರು ಸೇರಿಕೊಂಡು ಸರ್ಕಾರವನ್ನು ಮಾಡಿದ್ದರು. ನಂತರ ಈಗ ನಿತೀಶ್ ಕುಮಾರ್ ರವರು ಮತ್ತು ಬಿಜೆಪಿಯವರು ಸೇರಿಕೊಂಡು ಸರ್ಕಾರ ನಡೆಸುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ ಏನಾಗುತ್ತಿದೆ ಎಂದರೆ ಅಲ್ಲಿ ಬಿಜೆಪಿ ಮತ್ತು ಶಿವಸೇನೆ ಇವರಿಬ್ಬರು ಪ್ರತ್ಯೇಕವಾಗಿ ಚುನಾವಣೆಯನ್ನು ಎದುರಿಸಿದರು. ಕೇಂದ್ರದಲ್ಲಿ ಬಿಜೆಪಿಗೆ ಸಪೋರ್ಟ್ ಕೊಟ್ಟಿದ್ದನ್ನು ಶಿವಸೇನೆಯವರು ವಾಪಸ್ಸು ತೆಗೆದುಕೊಂಡರು. ಮತ್ತೆ ಸೇರಿಕೊಂಡು ಸರ್ಕಾರವನ್ನು ನಡೆಸುತ್ತಿಲ್ಲವೇ?

ಆದ್ದರಿಂದ, ತಮಗೆ ಯಾರಿಗೂ ಸರ್ಕಾರದ ಬಗ್ಗೆ ಗಾಬರಿ ಬೇಡ. ಸನ್ಮಾನ್ಯ ಶ್ರೀ ಕುಮಾರಸ್ವಾಮಿಯವರ ಒಂದು ನೇತೃತ್ವದಲ್ಲಿ 5 ವರ್ಷಗಳ ಕಾಲ ಸುಭದ್ರವಾಗಿ ಸರ್ಕಾರವನ್ನು ನಡೆಸಲಾಗುತ್ತದೆ. ಹೀಗಾಗಿ, ಸರ್ಕಾರದ ಮತ್ತು ಕರ್ನಾಟಕದ ಬೆಳವಣಿಗೆಗೆ ತಾವು ಏನು ವಿರೋಧ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಕ್ಷದಲ್ಲಿದ್ದೀರಿ, ನೀವು ರಚನಾತ್ಮಕವಾದ ಸಲಹೆಗಳನ್ನು ಕೊಡಿ. ನಾವು ಮತ್ತು ನೀವೆಲ್ಲರೂ ಕರ್ನಾಟಕ ಸರ್ವಾಂಗೀಣ ಅಭಿವೃದ್ಧಿಯನ್ನು ಮಾಡೋಣವೆಂದು ತಿಳಿಸುತ್ತಾ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಂತೆ ಮಾನ್ಯ ಸಭಾಪತಿಯವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಮುಂದು. . .

**(056) 04.07.2018 12.30 ಎಸ್‌ವಿ-ಬಿಎನ್‌ಎಸ್**

**ಶ್ರೀ ಎನ್.ಅಪ್ಪಾಜಿಗೌಡ (ಮುಂದು):-**

ವೀಡಿಯೋ ರೆಕಾರ್ಡಿಂಗ್‌ನಲ್ಲಿರುವುದು ಸನ್ಮಾನ್ಯ ಸಿದ್ಧರಾಮಯ್ಯನವರ ಧ್ವನಿಯೇ ಅಲ್ಲ. ಅದು ಬೇರೆಯವರ ಧ್ವನಿ. ಅವರ ಧ್ವನಿಯಂತೆ ಮಿಮಿಕ್ರಿ ಮಾಡಲಾಗಿದೆ.

**ಶ್ರೀ ಎಂ.ಕೆ.ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 8-9 ಬಾರಿ ಗೆದ್ದವರನ್ನು ಬಿಟ್ಟು, ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕಾಗಿ ಯಾರ್ಯಾರನ್ನು ಮಂತ್ರಿಗಳನ್ನಾಗಿ ಮಾಡಲಾಗಿದೆ ಎಂಬುದು ತಿಳಿದ ವಿಚಾರವೇ ಆಗಿದೆ.

**ಸಭಾಪತಿಯವರು:-** ಮಾನ್ಯ ಪ್ರಾಣೇಶ್‌ರವರೇ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಚುನಾವಣೆ ಪೂರ್ವದಲ್ಲಿ ಮಾನ್ಯ ಯಡಿಯೂರಪ್ಪನವರು, ಮಾನ್ಯ ಈಶ್ವರಪ್ಪನವರು ಏನೇನು ಮಾತನಾಡಿದರು ಎಂಬ ವಿಚಾರ ಎಲ್ಲರಿಗೂ ತಿಳಿದಿದೆ.

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಎಲ್ಲಾ ಮಾನ್ಯ ಸದಸ್ಯರಿಗೆ ಮತ್ತೊಂದು ಬಾರಿ ಹೇಳುತ್ತಿದ್ದೇನೆ. ನಿಮ್ಮಿಷ್ಟಕ್ಕೆ ನೀವೇ ಎದ್ದು ನಿಂತು ಮಾತನಾಡುವುದನ್ನು ನನ್ನಿಂದ ಸಹಿಸಲು ಆಗುವುದಿಲ್ಲ. ನಾನು ಅನುಮತಿ ಕೊಟ್ಟಾಗ ಮಾತ್ರ ಮಾತನಾಡಬೇಕು ಎಂಬುದನ್ನು ಪದೇ ಪದೇ ಹೇಳುತ್ತಿದ್ದೇನೆ. ಪುನಃ ಪುನಃ ಹೇಳಿಸಿಕೊಳ್ಳಬೇಡಿ. ಮಾತನಾಡುತ್ತಿರುವ ಮಾನ್ಯ ಸದಸ್ಯರಿಗೆ ಅಡಚಣೆ ಉಂಟು ಮಾಡಬೇಡಿ. ಮಾನ್ಯ ಅಪ್ಪಾಜಿಗೌಡರೆ, ನೀವು ನನ್ನನ್ನು ನೋಡಿ ಮಾತನಾಡಿರಿ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೆ, ವಿರೋಧಪಕ್ಷದವರಲ್ಲವೆ? ಮಾನ್ಯ ಸಿದ್ದರಾಮಯ್ಯನವರ ಬಗ್ಗೆ ಹಾಗೂ ನಮ್ಮ ಸರ್ಕಾರದ ಬಗ್ಗೆ ಅವರಿಗೆ ಚಿಂತೆ ಬೇಡ. ಸರ್ಕಾರದಿಂದ ಏನಾದರೂ ತಪ್ಪಾಗಿದ್ದಲ್ಲಿ ವಿರೋಧಪಕ್ಷದವರು ಎಚ್ಚರಿಸಲಿ. ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಅವರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವ ಚಿಂತನೆಗಳನ್ನು ನಮ್ಮ ಮುಖ್ಯಮಂತ್ರಿಯವರಿಗೆ, ನಮ್ಮ ಸರ್ಕಾರಕ್ಕೆ ಕೊಟ್ಟರೆ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇಡೀ ಕರ್ನಾಟಕವನ್ನು ಅಭಿವೃದ್ಧಿ ಮಾಡುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಹೇಳಿ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ನನ್ನ ಸಮ್ಮತಿಯನ್ನು ಸೂಚಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕಳೆದ ಬಜೆಟ್ ಅಧಿವೇಶನವಾದಾಗಿನಿಂದ ಈ ಅಧಿವೇಶನದವರೆಗೆ ಬಹಳ ಬದಲಾವಣೆಗಳಾಗಿವೆ.

**ಸಭಾಪತಿಯವರು:-** ಮಾನ್ಯ ಲಹರ್‌ಸಿಂಗ್‌ರವರೆ, ತಮಗೆ 20 ನಿಮಿಷಗಳ ಕಾಲಾವಕಾಶವಿದ್ದು, ಅಷ್ಟರಲ್ಲಿ ತಮ್ಮ ಮಾತನ್ನು ಮುಗಿಸಿ. ಏಕೆಂದರೆ ಇನ್ನುಳಿದವರೂ ಸಹ ಮಾತನಾಡಬೇಕಿದೆ. ತಾವು ಬೇಗ ಮುಗಿಸುತ್ತೀರೆಂದು ನನಗೆ ಗೊತ್ತಿದೆ.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಮೊದಲ ಸಾಲಿನಿಂದ ಇದೇ ಮೊದಲ ಬಾರಿಗೆ ನಾನು ಮಾತನಾಡುತ್ತಿದ್ದೇನೆ. ಇದನ್ನು ತಾವು ನನ್ನ maiden speech ಎಂದು ತಿಳಿದುಕೊಳ್ಳಬೇಕು. ಇಂದು ನಾನು ಮಾತನಾಡಲು ಬಹಳಷ್ಟು ತಯಾರಿಯನ್ನು ಮಾಡಿಕೊಂಡು ಬಂದಿದ್ದೇನೆ. ಮಾನ್ಯ ಸದಸ್ಯರಾದ ಶ್ರೀ ಸಿ.ಎಂ.ಇಬ್ರಾಹಿಂ ಅವರು ಬಂದಾಗ ನನಗೆ ಇದೆಲ್ಲಾ ಮರೆತು ಹೋಗಿ ಒಂದು ವಿಷಯ ಜ್ಞಾಪಕ ಬಂದಿತು. ಪ್ರಥಮ ಬಾರಿಗೆ ನಾನು ದಿನಾಂಕ 26ನೇ ಜೂನ್ 1975ರಂದು ಅವರನ್ನು ನೋಡಿದ್ದೆನು. ಆಗ ಅವರಿಗೆ ಸುಮಾರು 30 ವರ್ಷ. ಅಂದು ಬೆಳಿಗ್ಗೆ 11 ಗಂಟೆ ಸುಮಾರಿಗೆ ಮೈಸೂರು ಬ್ಯಾಂಕ್ ವೃತ್ತದಲ್ಲಿ ನಾವು ಒಂದು ಪ್ರತಿಭಟನೆಯನ್ನು ನಡೆಸಿದ್ದೆವು. ನಾವು ಸುಮಾರು 50 ಜನ ಹುಡುಗರಿದ್ದೆವು. ಆಗ ಅವರು ನಮ್ಮನ್ನು ಉದ್ದೇಶಿಸಿ ಮಾತನಾಡಿದ್ದರು. ಅದು ತುರ್ತು ಪರಿಸ್ಥಿತಿಯ ಸಂದರ್ಭ. ಅಂದು ಅವರ ಭಾಷಣವನ್ನು ಕೇಳಿ ಅವರ ವಾಕ್ಚಾತುರ್ಯಕ್ಕೆ, ಅವರ ಸಂಸ್ಕೃತ ಭಾಷಾ ಜ್ಞಾನಕ್ಕೆ ನಾನು ಮಾರು ಹೋಗಿದ್ದೆನು. From that day, he has become my leader in oratory skill and I tried to learn from him.

ನನ್ನ ನೆನಪಿಗೆ ಬಂದ ಮತ್ತೊಂದು ವಿಷಯವೇನೆಂದರೆ, 39 ವರ್ಷಕ್ಕೆ ಒಬ್ಬ ಯುವಕರು Opposition Leader ಆಗಿದ್ದರು. ನಮ್ಮಲ್ಲಿಯೂ ಸಹ ಶ್ರೀ ಅರುಣ ಶಹಾಪುರ ಮತ್ತು ಶ್ರೀ ರಿಜ್ವಾನ್ ಅರ್ಷದ್ ಇಂತಹ ಯುವಕರಿದ್ದಾರೆ. ಮಾಜಿ ಪ್ರಧಾನಿಯವರಾದ ಶ್ರೀ ಹೆಚ್.ಡಿ.ದೇವೇಗೌಡರ ಬಗ್ಗೆ ನಿನ್ನೆ ಮಾನ್ಯ ಶರವಣರವರು ಮಾತನಾಡಿದ್ದರು. ಶ್ರೀ ದೇವೇಗೌಡರ ಬಗ್ಗೆ ನನಗೆ ಅಪಾರವಾದ ಗೌರವವಿದೆ ಹಾಗೂ ಅದಕ್ಕಾಗಿ ನಾನು ಇತ್ತೀಚೆಗೆ ದೆಹಲಿಗೆ ಹೋದ ಸಂದರ್ಭದಲ್ಲಿ ಅವರು ಕರ್ನಾಟಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭವನದಲ್ಲಿದ್ದಾರೆಂದು ತಿಳಿದು, ಭೇಟಿ ಮಾಡಿ ಬಂದಿದ್ದೇನೆ. ದಿ:ದೇವರಾಜ ಅರಸು ಸರ್ಕಾರವಿದ್ದಾಗ ಅವರು ತಮ್ಮ 39 ವರ್ಷ ವಯಸ್ಸಿಗೆ ವಿರೋಧ ಪಕ್ಷದ ನಾಯಕರಾಗಿದ್ದರು. 1973, 1974, 1975ರಲ್ಲಿ ದೇವರಾಜ ಅರಸು ಸರ್ಕಾರವಿದ್ದಾಗ ಮಾನ್ಯ ದೇವೇಗೌಡರು ಎಷ್ಟು ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದರೆಂದರೆ, he had cornered the Government single-handedly. ಪ್ರತಿದಿನವೂ ಪತ್ರಿಕೆಯಲ್ಲಿ ದೇವೇಗೌಡರು ಎಷ್ಟು ಧೈರ್ಯವಾಗಿ ಮಾತನಾಡುತ್ತಾರೆ ಎಂದು ನಾವು ತಿಳಿದುಕೊಳ್ಳುತ್ತಿದ್ದೆವು. ಏಕೆಂದರೆ, rowdyism and corruption ಬಗ್ಗೆ ಆ ಕಾಲದಲ್ಲಿ ದಿ:ದೇವರಾಜ ಅರಸ್‌ರವರ ವಿರುದ್ಧ ಯಾರೂ ಮಾತನಾಡುತ್ತಿರಲಿಲ್ಲ. When he was 43 years old, ಅವರನ್ನು ಜೈಲಿಗೆ ಕಳುಹಿಸಲಾಯಿತು. After 1980, ದಿ: ಶ್ರೀಮತಿ ಇಂದಿರಾ ಗಾಂಧಿಯವರು ಪುನಃ ಅಧಿಕಾರಕ್ಕೆ ಬಂದರು. ಹೀಗಾಗಿ ನಾವು ತುರ್ತು ಪರಿಸ್ಥಿತಿಯ ಬಗ್ಗೆ ಹೆಚ್ಚಿಗೆ ಮಾತನಾಡುವುದು ಬೇಡ. I think it is not fair on my part to talk much about Emergency Period. ಏಕೆಂದರೆ, ಆಗ ಜೈಲಿನಲ್ಲಿದ್ದವರೂ ಸಹ ಇಂದು ಅವರ ಜೊತೆಯಲ್ಲಿಯೇ ಇದ್ದಾರೆ.

ಮಾನ್ಯ ಕುಮಾರಸ್ವಾಮಿಯವರು ಪ್ರಮಾಣವಚನವನ್ನು ಸ್ವೀಕರಿಸಿದ ತಕ್ಷಣ ಒಂದು ಮಾತನ್ನು ಹೇಳಿದರು; “Congress forced C.M. Post on me”, said H.D.K., ನಾನು ಹೇಳುತ್ತಿರುವ ಮಾತಲ್ಲ. ಇದು ಪತ್ರಿಕೆಗಳಲ್ಲಿ ಬಂದಂಥದ್ದಾಗಿದೆ. I will go much beyond that. ಕಳೆದ ಅಧಿವೇಶನದಲ್ಲಿ ಬೇರೆ ಬೇರೆ ಕಾರಣಗಳಿಂದ ಸದನದಲ್ಲಿ ಸರಿಯಾದ ರೀತಿಯಲ್ಲಿ ಚರ್ಚೆಗಳು ನಡೆದಿರಲಿಲ್ಲ. ನಾವು ಬಂದ ನಂತರ ಕಳೆದ ಮೂರು ದಿನಗಳಿಂದ ಒಳ್ಳೆಯ ರೀತಿಯಲ್ಲಿ healthy debate ಆಗುತ್ತಿದೆ. ಮಾನ್ಯ ಭೋಜೇಗೌಡರು ನಿನ್ನೆ ಒಳ್ಳೆಯ ಕಾಮೆಂಟ್ ಮಾಡಿದ್ದಾರೆ.

**ಸಭಾಪತಿಯವರು**:- ಮಾನ್ಯ ಲಹರ್ ಸಿಂಗ್ ಅವರೆ, ಮಾನ್ಯ ಭೋಜೇಗೌಡರ ಹೆಸರನ್ನು ತೆಗೆಯಬೇಡಿ.

**ಶ್ರೀ ಲಹರ್ ಸಿಂಗ್ ಸಿರೋಯ**:- ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಮತಿ ತಾರಾ ಅವರು ಮಾತನಾಡುತ್ತಾ, ಕನ್ನಡ ಚಲನಚಿತ್ರಗಳಿಗೆ ಉತ್ತಮ ಕ್ವಾಲಿಟಿಯೇ ಕಾರಣ ಎಂದು ಹೇಳಿದರು. ಹಿಂದೆ ಬಂದಂತಹ ‘ಭೂತಯ್ಯನ ಮಗ ಅಯ್ಯು’ ಚಲನಚಿತ್ರವನ್ನು ನಾನು ನೋಡಿದ್ದೇನೆ. ಇದೇ ಚಿತ್ರವು ಹಿಂದಿ ಭಾಷೆಯಲ್ಲಿ “ಏಕ್ ಗಾಂವ್ ಕಿ ಕಹಾನಿ” ಎಂಬುದಾಗಿ ಬಂದಿತ್ತು. I swear and tell that Hindi movie is no match for this Kannada movie. ಶ್ರೀಮತಿ ತಾರಾ ಅವರು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ರಾಜಕೀಯಕ್ಕೆ ಬಾರದೆ ಇದ್ದಿದ್ದರೆ, ಅವರಿಂದ ಇನ್ನೂ ಉತ್ತಮ ಚಲನಚಿತ್ರಗಳನ್ನು ಹಾಗೂ ಉತ್ತಮ ನಟನೆಯನ್ನು ನಿರೀಕ್ಷಿಸಬಹುದಿತ್ತು. ಆಡಳಿತ ಪಕ್ಷದ ಮಾನ್ಯ ಸದಸ್ಯರು ಈ ಸರ್ಕಾರ ಐದು ವರ್ಷಗಳ ಕಾಲ ಸುಭದ್ರವಾಗಿರುತ್ತದೆ ಎಂದು ಹೇಳಿದರು. ನಮಗೆ ಯಾವುದೇ ರೀತಿಯ ಅನುಮಾನವಿಲ್ಲ. ಮಾನ್ಯ ಕುಮಾರಸ್ವಾಮಿಯವರು ಒಳ್ಳೆಯ ಜನಪರ ಕೆಲಸ ಮಾಡಿದರೆ ನಾವು ಅವರಿಗೆ ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತೇವೆ. ಮಾನ್ಯ ಮುಖ್ಯಮಂತ್ರಿಯವರ, "Congress forced C.M. Post on me", said H.D.K., ಹಾಗೂ "Corruption is rampant. Don't know where to begin and clean up" ಎಂಬ ಎರಡು ಹೇಳಿಕೆಗಳನ್ನು ನಾವು ಗಮನಿಸಬೇಕು. Coalition Government ಅನ್ನು ನೋಡಿದಾಗ ನಿನ್ನೆಯೂ ಸಹ ಶ್ರೀ ಗುಲಾಂ ನಬಿ ಆಜಾದ್ ಮುಂತಾದವರ ಹೆಸರು ಇಲ್ಲಿ ಪ್ರಸ್ತಾಪವಾಯಿತು. I have got the speech of Sri H.D. Deve Gowda which runs into 18 pages. ಇಲ್ಲಿ ಮಾನ್ಯ ರೇವಣ್ಣ ಅವರು ಇಲ್ಲ. ಈ ಭಾಷಣದ hard copy ಯನ್ನು ಮಾನ್ಯ ರೇವಣ್ಣ ಹಾಗೂ ಮಾನ್ಯ ಶರವಣ ಅವರಿಗೆ ಕಳುಹಿಸುತ್ತೇನೆ.

ಇಲ್ಲಿರುವಂತಹ ಮಾನ್ಯ ಜಿ.ಟಿ.ದೇವೇಗೌಡರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಅವರು ಒಳ್ಳೆಯ ಕೆಲಸವನ್ನು ಮಾಡಿ ಇಲ್ಲಿಗೆ ಬಂದಿದ್ದಾರೆ. ಜಾತಿಯ ಆಧಾರದ ಮೇಲೆ ಸಮಾಜವನ್ನು ಒಡೆಯಲು ಹೊರಟಿದ್ದವರನ್ನು ಸೋಲಿಸಿ ಅವರು ಇಲ್ಲಿಗೆ ಬಂದಿದ್ದಾರೆ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಯಾವುದೇ ನಡವಳಿಗಳನ್ನು ದಾಖಲಿಸದಂತೆ ಸೂಚಿಸಿದರು.)**

**ಸಭಾಪತಿಯವರು:-** ಮಾನ್ಯ ಲಹರ್‌ಸಿಂಗ್ ಅವರೆ, ಎಲ್ಲಾದಕ್ಕೂ yield ಆಗುವುದಿಲ್ಲ ಎಂದು ಹೇಳಲಿಕ್ಕೆ ಆಗುವುದಿಲ್ಲ. ಒಂದು ಸಾರಿ ನೀವು ಅವರ ಹೆಸರು ತೆಗೆದುಕೊಂಡ ಮೇಲೆ ಅವರು ಹೇಳಬೇಕಾಗುತ್ತದೆ. ಮಾನ್ಯ ಕೆ.ಜೆ.ಜಾರ್ಜ್‌ರವರು ಮಾಡನಾಡಲಿ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುವಾಗ ಒಬ್ಬ ಮುಖ್ಯಮಂತ್ರಿಯಾಗಿದ್ದವರ ಬಗ್ಗೆ ಅವರ ವೈಯಕ್ತಿಕ ತೇಜೋವಧೆ ಮಾಡಿ ಅದು ದಾಖಲೆಗೆ ಹೋಗಿಬಿಟ್ಟರೆ ಅದು ಎಷ್ಟು ಸರಿ? ಅವರ ವಿಚಾರದಲ್ಲಿ ಈ ರೀತಿ ಮಾತನಾಡುವುದಕ್ಕೆ ಇವರಿಗೆ ಯಾವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅರ್ಹತೆ ಇದೆ? ನಾವೂ ಸಹ ಈ ರೀತಿ ಅವರ ವಿಚಾರದಲ್ಲಿ ಆಗಲೀ ಅಥವಾ ಬೇರೆಯವರ ವಿಚಾರದಲ್ಲಿ ಆಗಲೀ ಮಾತನಾಡಿದರೆ ಅವರು ಒಪ್ಪಿಕೊಳ್ಳುತ್ತಾರೆಯೆ?

**(...ಮುಂದು)**

(057)04.07.2018 12.40 ಕೆಜಿ.ಬಿಎನ್‌ಎಸ್

**ಶ್ರೀ ಕೆ.ಜೆ.ಜಾರ್ಜ್ (ಮುಂದು..):-** ಇಂತಹ ವಿಷಯಗಳು ದಾಖಲೆಗೆ ಹೋದರೆ ಯಾವ ರೀತಿ ಆಗುತ್ತದೆ? ಮಾನ್ಯ ಸಿದ್ಧರಾಮಯ್ಯನವರು ನಮ್ಮ ರಾಜ್ಯದ ಮುಖ್ಯಮಂತ್ರಿಯಾಗಿದ್ದವರು. ಅವರ ಬಗ್ಗೆ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಏನು ಅರ್ಹತೆ ಇದೆ? ನಾನು ನಾಳೆ ದಿವಸ ಮಾನ್ಯ ಸದಸ್ಯರ ವಿಚಾರದ ಬಗ್ಗೆಯಾಗಲೀ ಅಥವಾ ಬೇರೆಯವರ ವಿಚಾರದ ಬಗ್ಗೆಯಾಗಲೀ ಮಾತನಾಡಿದರೆ ಮಾನ್ಯ ಸದಸ್ಯರು ಅದನ್ನು ಒಪ್ಪಿಕೊಳ್ಳುತ್ತಾರೆಯೇ? ಮಾನ್ಯ ಸಿದ್ಧರಾಮಯ್ಯನವರು ಐದು ವರ್ಷಗಳ ಕಾಲ ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಅವರು ಎಲ್ಲಾ ವರ್ಗದವರನ್ನು ಜೊತೆಗೆ ಸೇರಿಸಿಕೊಂಡು ಹೋದಂತಹವರು. ಅವರು ಸಾಕಷ್ಟು ಜನಪ್ರಿಯ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಅಂತಹವರ ವಿಚಾರದಲ್ಲಿ ಈ ರೀತಿ ಮಾತನಾಡಬಾರದು. ಎಲ್ಲರಿಗೂ ಚುನಾವಣೆಯಲ್ಲಿ ಗೆಲ್ಲುವುದು ಮತ್ತು ಸೋಲುವುದು ಸಾಮಾನ್ಯ. ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ವಾಜಪೇಯಿರವರು ಚುನಾವಣೆಯಲ್ಲಿ ಸೋತಿದ್ದರು. ಆಗ ಅವರಿಗೆ ಗೌರವ ಕಡಿಮೆ ಆಯಿತೇ? ಮಾನ್ಯ ಸಭಾಪತಿಯವರೇ, ಈ ರೀತಿ ಇದ್ದಲ್ಲಿ, ಮಾನ್ಯ ಸದಸ್ಯರು ಮಾನ್ಯ ಸಿದ್ಧರಾಮಯ್ಯನವರ ವಿರುದ್ಧ ಯಾವ ರೀತಿ ಮಾತನಾಡುತ್ತಾರೆ?

(ಗೊಂದಲ)

**ಸಭಾಪತಿಯವರು:-** ಮಾನ್ಯ ಲಹರ್ ಸಿಂಗ್ ಸಿರೋಯರವರೇ, ವೈಯಕ್ತಿಕವಾಗಿ ಯಾರ ಬಗ್ಗೆಯೂ ಸದನದಲ್ಲಿ ಮಾತನಾಡಬಾರದು.

(ಗೊಂದಲ)

**ಶ್ರೀ ಆರ್.ವಿ.ದೇಶಪಾಂಡೆ(ಕಂದಾಯ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):-** ಮಾನ್ಯ ಸಭಾಪತಿಯವರೇ, he (Sri Siddaramaiah) is not a Member of this House. ಮಾನ್ಯ ಸದಸ್ಯರು ಈ ಬಗ್ಗೆ ಮಾತನಾಡುವುದಕ್ಕೆ ನೋಟೀಸ್ ಕೊಟ್ಟಿದ್ದಾರೆಯೇ? ಮಾನ್ಯ ಸದಸ್ಯರು ಈ ರೀತಿ ಮನಸ್ಸಿಗೆ ಬಂದಂತೆ ಮಾತನಾಡಿದರೆ ಹೇಗೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ನಾನು ಅವರ ಪರವಾಗಿಯೇ ಮಾತನಾಡಬೇಕೇ?

(ಗೊಂದಲ)

**ಸಭಾಪತಿಯವರು:-** ಮಾನ್ಯ ಲಹರ್ ಸಿಂಗ್ ಸಿರೋಯರವರೇ, ಒಂದು ನಿಮಿಷ ನನ್ನ ಮಾತು ಕೇಳಿ. ಯಾವುದೇ ಸದಸ್ಯರು ಈ ಸದನದ ಸದಸ್ಯರಲ್ಲದವರ ವೈಯಕ್ತಿಕ ವಿಷಯಗಳನ್ನು ಈ ಸದನದಲ್ಲಿ ತೆಗೆದುಕೊಳ್ಳಬಾರದು. ತಾವು ಬೇಗ ಮಾತನಾಡಿ ಮುಗಿಸಿ.

(Interruptions)

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, I am quoting the speech by former Prime Minister Sri H.D. Deve Gowda in Lok Sabha.

(ಗೊಂದಲ)

**ಶ್ರೀ ಕೃಷ್ಣಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ಮಾನ್ಯ ಲಹರ್ ಸಿಂಗ್ ಸಿರೋಯರವರು ಹೊರಗಡೆ ಬಹಳ ದೋಸ್ತಿಯಾಗಿರುತ್ತಾರೆ. ಆದರೆ, ಅವರು ಸದನದಲ್ಲಿ ಯಾರನ್ನು ಮೆಚ್ಚಿಸುವುದಕ್ಕೆ ಈ ರೀತಿ ಮಾತನಾಡುತ್ತಿದ್ದಾರೆ?

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ನಾನು ಬಹಳ ಪ್ರಾಮಾಣಿಕತೆಯಿಂದ ಮಾತನಾಡುತ್ತಿದ್ದೇನೆ.

(Interruptions)

**ಡಾ||ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ದಯವಿಟ್ಟು ಒಂದು ನಿಮಿಷ ನನಗೆ ಮಾತನಾಡಲು ಅವಕಾಶ ಕೊಡಿ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಮಾತನಾಡಿ.

**ಡಾ||ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಇಲ್ಲಿ ಇದೇ ವಿಷಯ ಇತ್ಯಾರ್ಥ ಆಗಬೇಕಾಗಿದೆ. ಮಾನ್ಯ ಸಿದ್ಧರಾಮಯ್ಯನವರನ್ನು ಜಾತಿವಾದಿ ಎಂದು ಮತ್ತು ಜಾತಿರಾಜಕಾರಣ ಮಾಡಿ ಸಮಾಜವನ್ನು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಒಡೆದಿದ್ದಾರೆಂದು ಕರೆದವರು ನಾವಲ್ಲ. ಪ್ರತಿ ಪಕ್ಷದಲ್ಲಿದ್ದಂತಹ ಜೆ.ಡಿ.ಎಸ್. ಪಕ್ಷದವರು. ಈಗ ಇವರು ಅವರನ್ನು ಸೋಲಿಸಿ ಹಿಂದುಗಡೆ ಕುಳಿತುಕೊಂಡು support ಮಾಡಿರುವಂಥದ್ದನ್ನು ಅವರುಗಳು ಆತ್ಮವಿಮರ್ಶೆ ಮಾಡಿಕೊಳ್ಳಬೇಕು ಮತ್ತು ಆತ್ಮಸಾಕ್ಷಿಯಿಂದ ರಾಜಕಾರಣ ಮಾಡಬೇಕು. ನಾಳೆಯ ಬಜೆಟ್ ಮಂಡನೆಯ ಬಗ್ಗೆ ಸಹಾ, ಕಾಂಗ್ರೆಸ್ ಪಕ್ಷದವರು ಮಾನ್ಯ ಸಿದ್ದರಾಮಯ್ಯನವರ ಅಭಿಪ್ರಾಯಗಳನ್ನು ಗೌರವಿಸದೆ ಆತ್ಮವಂಚನೆ ರಾಜಕಾರಣ ಮಾಡುತ್ತಿದ್ದಾರೆಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಗೊಂದಲ)

**ಸಭಾಪತಿಯವರು:-** ದಯವಿಟ್ಟು ಮಾನ್ಯ ಎಲ್ಲ ಸದಸ್ಯರು ಕುಳಿತುಕೊಳ್ಳಿ. ನಾನು ಯಾರನ್ನೂ allow ಮಾಡುವುದಿಲ್ಲ. ಲಹರ್ ಸಿಂಗ್ ಸಿರೋಯರವರೇ, ತಾವು ಮಾತನಾಡಿ.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್.ಡಿ.ದೇವೇಗೌಡರವರ ಭಾಷಣದ ಒಂದೇ ಒಂದು line ಅನ್ನು ಇಲ್ಲಿ quote ಮಾಡುತ್ತೇನೆ. It is from the record of the Parliament which reads thus:

> *"Firstly, did I ask for their support? They only took a decision on the 12th – the Congress (I) Working Committee took a decision spontaneously when no one approached them and without any one's request – to support us. On that day, they told the nation that they would not allow a communal party to come to power."*

ಇದನ್ನು ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್.ಡಿ.ದೇವೇಗೌಡರವರು ಹೇಳುತ್ತಿರುವುದು, ನಾವು support ಕೇಳಿಲ್ಲ. ಅವರೇ spontaneously ನಮ್ಮನ್ನು support ಮಾಡಿದರು.

(ಗೊಂದಲ)

**ಸಭಾಪತಿಯವರು:-** ಮಾನ್ಯ ಲಹರ್ ಸಿಂಗ್ ಸಿರೋಯರವರೇ, ನೀವು ಮಾತನಾಡುವುದನ್ನು ಏಕೆ ನಿಲ್ಲಿಸುತ್ತೀರಿ? ತಾವು ಮುಂದುವರಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಟಿ.ಎ.ಶರವಣರವರಿಗೆ remind ಮಾಡುತ್ತೇನೆ. ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್.ಡಿ.ದೇವೇಗೌಡರು ಏಕೆ ಹೇಳಿದರು ಎಂಬುದನ್ನು ತಾಳ್ಮೆಯಿಂದ ತಾವೆಲ್ಲರೂ ಕೇಳಬೇಕು.

(ಗೊಂದಲ)

**ಸಭಾಪತಿಯವರು:-** ಮಾನ್ಯ ಲಹರ್ ಸಿಂಗ್ ಸಿರೋಯರವರೇ, ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಮಾತ್ರ ಮಾತನಾಡಿ. ರಾಜಕೀಯದ ಬಗ್ಗೆ ಮಾತನಾಡ ಬೇಡಿ. ಇನ್ನೂ ನಿಮಗೆ 5 ನಿಮಿಷಗಳ ಕಾಲವಕಾಶ ಮಾತ್ರ ಇದೆ.

(ಗೊಂದಲ)

**ಶ್ರೀ ಆರ್.ಶಂಕರ್ (ಅರಣ್ಯ ಸಚಿವರು):-** ಮಾನ್ಯ ಸಭಾಪತಿಯವರೇ, ಮೊದಲು ಸರ್ಕಾರ ರಚನೆ ಮಾಡುವುದಕ್ಕೆ ಅವರಿಗೆ ಅವಕಾಶ ಕೊಟ್ಟಿತ್ತು. ಅದರಂತೆ, ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾದರು. ಆನಂತರ ಅವರು ಹೊರಗಡೆ ಹೋದರು. ಮತ್ತೆ ಇದರ ಬಗ್ಗೆ ಮತ್ತೆ ಮತ್ತೆ ಏಕೆ ಚರ್ಚೆಗಳು ಈ ಸದನದಲ್ಲಿ ಆಗಬೇಕು?

(ಗೊಂದಲ)

**ಸಭಾಪತಿಯವರು:-** ಮಾನ್ಯ ಲಹರ್ ಸಿಂಗ್ ಸಿರೋಯರವರೇ, ತಾವು ರಾಜ್ಯಪಾಲರ ಭಾಷಣದ ಮೇಲೆ ಮಾತ್ರ ಮಾತನಾಡಿ. ತಾವು ಮಾತನಾಡುವುದಿಲ್ಲವೆಂದರೆ, ನಾನು ಬೇರೆ ಸದಸ್ಯರಿಗೆ ಅವಕಾಶ ಕೊಡುತ್ತೇನೆ.

(ಗೊಂದಲ)

**ಶೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಏಕೆ ಉಂಟಾಗಿದೆ ಎಂದರೆ, ಈ ಸರ್ಕಾರ 5 ವರ್ಷ ಇರುತ್ತದೆಯೋ ಅಥವಾ ಇಲ್ಲವೋ ಎಂದು ಅವರೇ ಹೇಳಿದ್ದಾರೆ.

(ಗೊಂದಲ)

**ಡಾ||ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಂತೆ ತಿಳಿಸಿ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಲಹರ್ ಸಿಂಗ್ ಸಿರೋಯರವರೇ, ತಮಗೆ ಮಾಡನಾಡಲು last five minutes ಮಾತ್ರ ಅವಕಾಶವಿದೆ. ದಯವಿಟ್ಟು, ತಾವು ಬೇಗ ಮಾತನಾಡಿ ಮುಗಿಸಿ.

(Interruptions)

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, further, I quote from the speech of former Prime Minister, Sri H.D. Deve Gowda which reads thus:

*“Before my Minister of Finance left Delhi for Calcutta on 29th March, he requested me that the Congress (I) has not submitted their party accounts to the Investigating Officer. 31st March is the last date. There is no other option except to take action to levy penalty. He said that he was going to Calcutta and then to Goa and coming back only on the 31st March; please try to sort out this problem. This is what the Minister of Finance told me. He also told me that he had tried his best to contact the Treasurer, Shri Ahmed Patel to get the necessary explanation. But he was not available. So, please see that this issue is sorted out. I went to Shri P.V.Narasimha Rao on 30th March because he was the President at that time responsible for 1993-94 accounts…”*

(Interruptions)

(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಯಾವುದೇ ನಡವಳಿಕೆಗಳನ್ನು ದಾಖಲಿಸಿಕೊಳ್ಳದಂತೆ ಸೂಚಿಸಿದರು)

**ಸಭಾಪತಿಯವರು:-** ಮಾನ್ಯ ಲಹರ್ ಸಿಂಗ್ ಸಿರೋಯರವರೇ, ನಿಮ್ಮ ಸಮಯ ಇಲ್ಲಿಗೆ ಮುಗಿಯಿತು. ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಆರ್.ಪ್ರಸನ್ನಕುಮಾರ್‌ರವರೇ, ತಾವು ಈಗ ಮಾತನಾಡಿ. ಅವರು ಹಾಜರಿಲ್ಲ. ಮಾನ್ಯ ಕೆ.ಅಬ್ದುಲ್ ಜಬ್ಬಾರ್‌ರವರೇ, ತಾವು ಮಾತನಾಡಿ. 20 ನಿಮಿಷಗಳಿಗಿಂತ ಹೆಚ್ಚಿನ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾನ್ಯ ಸಚಿವರಾದ ಕೃಷ್ಣಭೈರೇಗೌಡರವರು ಈಗ ಮಾತನಾಡುತ್ತಾರೆ. ಅವರಿಗೆ ಅನುಮತಿ ಕೊಟ್ಟಿದ್ದೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ಎಲ್ಲಾ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ, ಸಂಸದೀಯ ಚರ್ಚೆಗಳು ನಡೆಯುವಾಗ ಬಹಳ ಕರಾರುವಕ್ಕಾಗಿ ನಿಯಮ ಬಿಟ್ಟು ಕದಲಬಾರದೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಾವು ಸಂಸದೀಯ ವ್ಯವಹಾರಗಳು ನಡೆಯುವಾಗ ಸ್ವಲ್ಪ ಎಲ್ಲದಕ್ಕೂ ತೆರೆದ ಮನಸ್ಸನ್ನು ಇಟ್ಟುಕೊಂಡಿರಬೇಕಾಗುತ್ತದೆ. ಮಾನ್ಯ ಗೌರವಾನ್ವಿತ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಯಾವ ರೀತಿ ಚರ್ಚೆ ನಡೆಯಬೇಕು ಎಂದು ನಮ್ಮ ವಿಧಾನ ಪರಿಷತ್ತಿನ ನಿಯಮಾಳಿಗಳಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಇದನ್ನು ಮಾನ್ಯ ಎಲ್ಲಾ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕು. ನಾನು ಇದನ್ನು ಆಡಳಿತ ಪಕ್ಷದ ಮತ್ತು ವಿರೋಧಪಕ್ಷದ ಸದಸ್ಯರುಗಳಿಗೂ ಹೇಳುತ್ತಿದ್ದೇನೆ.

**ಶ್ರೀ ಕೆ.ಬಿ.ಶಾಣಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಇದನ್ನು ಎಲ್ಲರಿಗೂ ಹೇಳಬೇಕು.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಇದನ್ನು ಎಲ್ಲರಿಗೂ ಹೇಳುತ್ತಿದ್ದೇನೆ. ನಾನು caveat ಮೊದಲೇ ಹೇಳಿದ್ದೇನೆ. ನಾವು ಕೇವಲ ಬರಿ ಅಕ್ಷರವನ್ನೇ ಅನುಸರಣೆ ಮಾಡುವುದಕ್ಕೆ ಆಗುವುದಿಲ್ಲ. Parliamentary ವಿಚಾರಗಳು ಬಂದಾಗ, ಸ್ವಲ್ಪಮಟ್ಟಿಗೆ ಈ ಸದನಕ್ಕೆ relaxation ಇದ್ದೇ ಇರುತ್ತದೆ. ಆದರೂ ಸಹ, ನಾವು ನಿಯಮಗಳನ್ನು ಸಂಪೂರ್ಣವಾಗಿ ಮರೆಯುವುದು ಸೂಕ್ತವಲ್ಲ. ಇದರ ಬಗ್ಗೆ "ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಅಧ್ಯಾಯ-5ರ ನಿಯಮ 19"ರಲ್ಲಿ ಸ್ಪಷ್ಟವಾಗಿ ಹೇಳಿದೆ. ಇದರ ಬಗ್ಗೆ ಮಾನ್ಯ ಸಭಾಪತಿಗಳಾದ ತಮಗೆ ಗೊತ್ತಿದೆ. ನಾನು ಇನ್ನೊಂದು ಬಾರಿ ಈ ಸದನದ ಸದಸ್ಯರಿಗೆ ತಿಳಿಸಿಕೊಡುವುದಕ್ಕೆ ಬಯಸುತ್ತೇನೆ. ಇದನ್ನು ತಮಗೆ ಮಾತ್ರ ಹೇಳುತ್ತಿಲ್ಲ. ಇದನ್ನು ಮಾನ್ಯ ಎಲ್ಲಾ ಸದಸ್ಯರು ಗಮನಿಸಬೇಕು. ನಾನು ಹೇಳುವುದೇನೆಂದರೆ, willfully we should not disobey the Chair. ಮಾನ್ಯ ಸಭಾಪತಿಯವರು ತಮಗೆ 2 ರಿಂದ 3 ಬಾರಿ caution ಕೊಟ್ಟರೂ ಸಹ, somewhere, intentionally ಅವರ ಅಭಿಪ್ರಾಯದ ವಿರುದ್ಧ ಹೋಗುವುದು ಸೂಕ್ತವಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು..)

(058):04.07.2018-12.50-ಎಂವಿ-ಜಿಆರ್

**ಶ್ರೀ ಕೃಷ್ಣ ಬೈರೇಗೌಡ (ಮುಂದು...):-**

ಒಂದು ನಿಮಿಷ ಕೇಳಿಸಿಕೊಳ್ಳಿ, ಅವಸರ ಏಕೆ? ನೀವು ಎಲ್ಲಿಗೆ ಹೋಗಬೇಕು. ಯಾರಿಗಾದರೂ ವರದಿ ಕೊಡುವುದು ಇದೆಯೋ? ವರದಿ ಕೊಡುವುದು ಇಲ್ಲತಾನೆ, ಹಾಗಾದರೆ ತಾವು ಕುಳಿತುಕೊಳ್ಳಿ. ಒಂದು ನಿಮಿಷ, ಅವರ ಮತ್ತು ನಮ್ಮ ದೋಸ್ತಿ ಏನಿದೆ ಎಂದು ನಮಗೆ ಗೊತ್ತಿದೆ. ನಾನು ಅದಕ್ಕೋಸ್ಕರ ಹೇಳುತ್ತಿದ್ದೇನೆ, ಮಾನ್ಯ ಸಭಾಪತಿಯವರ ತಾಳ್ಮೆಯನ್ನು ನಾನು ಪರೀಕ್ಷೆ ಮಾಡುವುದಕ್ಕೆ ಹೋಗುವುದಿಲ್ಲ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಅಧ್ಯಾಯ:5, ನಿಯಮ.19ರಲ್ಲಿ ಏನಿದೆ ಎಂಬುದನ್ನು ದಯವಿಟ್ಟು ಎಲ್ಲಾ ಸದಸ್ಯರು; ನಾನು ನಮ್ಮ ಸದಸ್ಯರಿಗೂ ಸಹ ಹೇಳುತ್ತಿದ್ದೇನೆ. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ ಮಾನ್ಯ ಸಭಾಪತಿಯವರು ನಿಗದಿ ಮಾಡಿದ ದಿನ ಮತ್ತು ಸಮಯದಲ್ಲಿ ಚರ್ಚೆ ಮಾಡಬಹುದು ಎಂಬುದಾಗಿ ಅದರಲ್ಲಿ ತಿಳಿಸಲಾಗಿದೆ.

**ಸಭಾಪತಿಯವರು:-** ಅದು ಒಂದನ್ನು ಬಿಟ್ಟು ಬೇರೆ ಎಲ್ಲವನ್ನು ಮಾತನಾಡುತ್ತಾರೆ.

**ಶ್ರೀ ಕೃಷ್ಣಬೈರೇಗೌಡ:-** ಮಾನ್ಯ ಸಭಾಪತಿಯವರೇ, ಇದನ್ನು ಸಂಸದೀಯ ವ್ಯವಹಾರಗಳಲ್ಲಿ ವಿಶ್ಲೇಷಣೆ ಮಾಡಿದಂತಹ ಸಂದರ್ಭದಲ್ಲಿ ಏನು ಹೇಳುತ್ತಾರೆ ಎಂದರೆ, ಈ ಸದನದ Rules of Procedure and Conduct of Business in the Karnataka Legislative Council ರಚನೆ ಆಗಿರುವುದು Constitution of Indiaದ ಆರ್ಟಿಕಲ್ 176ರ ಅಡಿಯಲ್ಲಿ. ಈಗ ಏನಾದರೂ ವಿಚಾರ ಬಿಟ್ಟು ಹೋಗಿದೆ ಎಂದು ಹೇಳಿ, ಅದನ್ನು ಬಿಟ್ಟು ಸಂಬಂಧಗಳೇ ಇಲ್ಲದೆ ಇರುವಂತಹ ವಿಚಾರಗಳನ್ನು ಎಲ್ಲೆಲ್ಲಿಗೋ ತೆಗೆದುಕೊಂಡು ಹೋಗಿ, ರಾಜ್ಯಪಾಲರ ಭಾಷಣದ ಮೇಲೆ ವ್ಯಾಪ್ತಿ ಬಹಳ ವಿಸ್ತೃತವಾಗಿದೆ. ಆದರೂ ಸಹ ಈ ನಿಯಮಾವಳಿಗಳನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿ, ಸಂಬಂಧ ಇಲ್ಲದೆ ಇರುವಂತಹ ಚರ್ಚೆಗಳು ಅಷ್ಟೊಂದು ಫಲಪ್ರದ ಆಗುವುದಿಲ್ಲ ಎಂದು ಮಾನ್ಯ ಸದಸ್ಯರ ಮಾಹಿತಿಗೆ ತರಬಯಸುತ್ತೇನೆ. ಸ್ವಲ್ಪ ತಾವು freedom exercise ಮಾಡಿ. ದಯವಿಟ್ಟು ಒಂದು ಬೌಂಡರಿ ಒಳಗಡೆ ಇರಲಿ.

**ಸಭಾಪತಿಯವರು:-** ಈಗ ನಾನು ಹೇಳುತ್ತೇನೆ ಕೇಳಿ. ಸದನವನ್ನು ನಡೆಸಬೇಕಾದರೆ ನಿಯಮಗಳು ಇರುತ್ತವೆ. ಎಲ್ಲರೂ ಎದ್ದು ನಿಂತುಕೊಂಡರೆ ನಾನು ಸದನವನ್ನು ಹೇಗೆ ನಡೆಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಮ್ಮವರೆ ಎಲ್ಲರೂ ಸೇರಿಕೊಂಡು ನಿಮ್ಮನ್ನು ಬಲಿಪಶು ಮಾಡುವುದಕ್ಕೆ ಹೊರಟಿದ್ದಾರೆ, ಹುಷಾರಾಗಿ ಮಾತನಾಡಿ. ನಿಮ್ಮವರೆ ನಿಮಗೆ ಹವಾ ಹಾಕುತ್ತಾರೆ. ಮಾನ್ಯ ಲಹರ್ ಸಿಂಗ್‌ರವರೆ, ನಿಮ್ಮ ಸಮಯ ಮುಗಿದಿದೆ. ನಾನು ಮಾನ್ಯ ಅಬ್ದುಲ್ ಜಬ್ಬಾರ್‌ರವರು ಮಾತನಾಡುವುದಕ್ಕೆ ಅವರ ಹೆಸರನ್ನು ಕರೆದಿದ್ದೇನೆ. ನಿಮ್ಮ ಸಮಯ ಮುಗಿದಿದೆ, ನಿಮಗೆ ಸುಮಾರು 25 ನಿಮಿಷಗಳ ಕಾಲ ಅವಕಾಶ ನೀಡಿದ್ದೇನೆ. ಮಾನ್ಯ ಲಹರ್ ಸಿಂಗ್ ರವರೆ ತಾವು ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸಿ, ಮತ್ತೆ ಪಾಲಿಟಿಕ್ಸ್ ಬಗ್ಗೆ ಮಾತನಾಡಬೇಡಿ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ. ನೀವು ಎಲ್ಲಾ ಪಾಲಿಟಿಕ್ಸ್ ಬಗ್ಗೆ ಮಾತನಾಡಿದ್ದೀರಿ.

**ಶ್ರೀ ಲಹರ್ ಸಿಂಗ್ ಸಿರೋಯ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು actually politics ಮಾತನಾಡಬಾರದು ಅಂದುಕೊಂಡಿದ್ದೆ. ನಾನು ಪೂರ್ತಿ ಸಮಸ್ಯೆಯ ಬಗ್ಗೆ ಮಾತನಾಡಬೇಕೆಂದು ತಯಾರಿ ಮಾಡಿಕೊಂಡು ಬಂದಿದ್ದೇನೆ. ಬೆಂಗಳೂರಿನಲ್ಲಿ ಈ ಟ್ರಾಫಿಕ್ ಬಗ್ಗೆ ಬಹಳ ಸಮಸ್ಯೆ ಇದೆ. ನಾನು ಬೇಕಾದಷ್ಟು ಮಾತನಾಡಬೇಕಾಗಿತ್ತು, ಆದರೆ ನಾನು ಏತಕ್ಕೆ ಮಾತನಾಡಲಿಲ್ಲವೆಂದರೆ, ಮೊನ್ನೆಯ ದಿವಸ ಮಾನ್ಯ ಶರವಣರವರು ಏನು ಹೇಳಿದರು ಎಂದರೆ; ಬಜೆಟ್ ಬಂದಾಗ ನೋಡಿ, ಈಗ ಏನು ಇಲ್ಲ ಎಂದರು, ಅದಕ್ಕೆ ನಾನು ಅದನ್ನು ಬಿಟ್ಟೆ. ನಾನು ಯಾವುದೇ ರಾಜಕೀಯ ಮಾತನಾಡುವುದಕ್ಕೆ ತಯಾರು ಇರಲಿಲ್ಲ. Drugs menace ಬಗ್ಗೆ ಬಹಳವಾಗಿದೆ. ಎಲ್ಲಿಯತನಕ ಆಗಿದೆ ಎಂದರೆ, ಪಂಜಾಬ್‌ನ ಮುಖ್ಯಮಂತ್ರಿಯವರು ಕ್ಯಾಬಿನೇಟ್ ಸೇರಿ ಪ್ರಸ್ತಾಪ ಮಾಡಿ ಒಂದು resolution ಅನ್ನು pass ಮಾಡಿದರು. Death penalty ಆಗಲೇ ಬೇಕೆಂದು. ಇಲ್ಲದೇ ಇದ್ದರೆ ಇದನ್ನು ತಡೆಯುವುದಕ್ಕೆ ಆಗುವುದಿಲ್ಲ. ಈ ಸಮಸ್ಯೆ ನಮ್ಮ ಕರ್ನಾಟಕದಲ್ಲಿ ಬಹಳ ಇದೆ, ಬೆಂಗಳೂರಿನಲ್ಲಿ ಮತ್ತು ಬೇರೆ-ಬೇರೆ ಕೋಸ್ಟಲ್ ಏರಿಯಾಗಳಲ್ಲಿ ಈ ಡ್ರಗ್ ಸಮಸ್ಯೆ ಬಹಳ ಇದೆ. ಸುಮಾರು 11-12 ವರ್ಷದ ಸ್ಕೂಲ್ ಹುಡುಗರು drugs addict ಆಗುವಂತಹ ಸಮಸ್ಯೆ ಆಗಿದೆ. This is rampant in...

**ಸಭಾಪತಿಯವರು:-** ಇಷ್ಟು ಚೆನ್ನಾಗಿ ಮಾತನಾಡುತ್ತೀರಿ, ಇದನ್ನು ಬಿಟ್ಟು ಬೇರೆ-ಬೇರೆ ಏನನ್ನೋ ಮಾತನಾಡುತ್ತೀರಿ.

**ಶ್ರೀ ಲಹರ್ ಸಿಂಗ್ ಸಿರೋಯ:-** ಮಾನ್ಯ ಸಭಾಪತಿಯವರೇ, ಇದಕ್ಕೆ ನಾನು ಏನು ಹೇಳುತ್ತೇನೆಂದರೆ, ಇದರ ಬಗ್ಗೆ ಚರ್ಚೆ ಮಾಡಿದಾಗ ಕಳೆದ ವರ್ಷ ಈ ಹಿಂದಿನ ಗೃಹ ಸಚಿವರು ಕರ್ನಾಟಕವನ್ನು ಪಂಜಾಬ್ ರೀತಿ ಆಗುವುದಕ್ಕೆ ಬಿಡುವುದಿಲ್ಲವೆಂದು ಹೇಳಿದರು. ಅದನ್ನು ನಾನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪತ್ರಿಕೆಗಳಲ್ಲಿ ಓದಿದ್ದೇನೆ. ಅದು ನನ್ನ ಬಳಿ ಇದೆ, ಆದರೆ ಅದನ್ನು ಸದನದಲ್ಲಿ ಓದುವುದಕ್ಕೆ ಹೋಗುವುದಿಲ್ಲ. ಈ ಡ್ರಗ್ ಬಗ್ಗೆ ಸರ್ಕಾರ ಕಡಿವಾಣ ಹಾಕದೆ ಇದ್ದರೆ, strict ಕ್ರಮ ತೆಗೆದುಕೊಳ್ಳದೆ ಇದ್ದರೆ, ಅಧಿಕಾರಿಗಳನ್ನು ಮತ್ತು ಇಲಾಖೆಯನ್ನು ಬಿಗಿ ಮಾಡದೇ ಇದ್ದರೆ, ಇದು ಬಹಳ ಅಧ್ವಾನ ಆಗುತ್ತದೆ. Future generation ಭವಿಷ್ಯ ಹಾಳಾಗುತ್ತದೆ. ಎರಡನೆಯದಾಗಿ ಟ್ರಾಫಿಕ್ ಸಮಸ್ಯೆ ಬಗ್ಗೆ ಹೇಳುವುದಾದರೆ, ನನಗೆ ಕಣ್ಣಿನಲ್ಲಿ ನೀರು ಬರುತ್ತದೆ. ಈ ಹೆಬ್ಬಾಳ, ಕೆ.ಆರ್.ಪುರಂ ಜಂಕ್ಷನ್ ಮತ್ತು ಬೇರೆ-ಬೇರೆ ಜಂಕ್ಷನ್ ಆಗಲಿ. ಜನರು ಆಟೋಗಳಲ್ಲಿ ಗಂಟೆಗಟ್ಟಲೆ ಕುಳಿತುಕೊಂಡಿರುತ್ತಾರೆ. At least, ಒಂದು taskforce ಮಾಡಿ immediate reliefಗೆ ಸಂಬಂಧಪಟ್ಟಂತೆ ಏನು ಮಾಡಬೇಕೆಂದು, ಈ ಮುಂಚೆ ಸದನದಲ್ಲಿ ಹೇಳಿದ್ದೇನೆ. Encroachments ಅನ್ನು remove ಮಾಡಬೇಕು. Traffic discipline ಮಾಡಬೇಕು. ಅದನ್ನೆಲ್ಲಾ ತಕ್ಷಣ ಮಾಡಬೇಕು. ಸರ್ಕಾರಕ್ಕೆ ಇಚ್ಛಾಶಕ್ತಿ ಇದ್ದರೆ, ಆ ಎರಡನ್ನು ತಕ್ಷಣ ಮಾಡಬೇಕು. ಇದರಿಂದ ಸ್ವಲ್ಪವಾದರೂ relife ಸಿಗುತ್ತದೆ. Long-term planning and road widening ಮಾಡಬೇಕು. ನಾವು ಬೆಂಗಳೂರು ಪ್ಯಾಲೇಸ್ ನೋಡಿದ್ದೇವೆ ಆ ರಸ್ತೆಗೆ ಸುಮಾರು 50 feet ಜಾಗ ಬಿಟ್ಟಿದೆ. ಐದಾರು ವರ್ಷದಿಂದ ಎರಡು-ಮೂರು ಸರ್ಕಾರ ಬಂದು ನಾಲ್ಕೈದು ಜನ ಮುಖ್ಯಮಂತ್ರಿಗಳು ಬಂದರು. ಆದರೂ ಸಹ ರಸ್ತೆ ಅಗಲೀಕರಣದ ಕೆಲಸ ಆಗಿಲ್ಲ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಸಂಬಂಧಪಟ್ಟ ಸಚಿವರಿಗೆ ನಾನು ಕೈಮುಗಿದು ಮನವಿ ಮಾಡುತ್ತೇನೆ. ಬೆಂಗಳೂರು ಪ್ಯಾಲೇಸ್‌ನ ಸುತ್ತಮುತ್ತಲಿನ ರಸ್ತೆ ಅಗಲೀಕರಣವನ್ನು ಮಾಡಬೇಕು. ಈಗ ಏರ್‌ಪೋರ್ಟ್‌ಗೆ ಹೋಗುವಂತಹ ಬೇರೆ-ಬೇರೆ ಜನ, ಕೇವಲ ಬೆಂಗಳೂರಿನಿಂದ ಮಾತ್ರವಲ್ಲ ಬೇರೆ-ಬೇರೆ ಊರಿನಿಂದ ಜನರು ಬರುತ್ತಾರೆ. About one crore population keep coming in and going out of the City. ಅವರಿಗೆಲ್ಲಾ ತೊಂದರೆಯಾಗುತ್ತದೆ. ಒಂದು ದಿನದ ಕೆಲಸಕ್ಕೆ ಅವರು ಎರಡು ದಿವಸ ಇರಬೇಕಾಗುತ್ತದೆ. ಮಾನ್ಯ ಸಭಾಪತಿಯವರೇ, ನಾನು ಕುಡಿಯುವ ನೀರಿನ ಬಗ್ಗೆ ಮಾತನಾಡುತ್ತೇನೆ. ಅದರ ಬಗ್ಗೆ ಒಂದು ವರದಿ ಇದೆ.

**ಸಭಾಪತಿಯವರು**:- ಸಾಕು ಬಿಡಿ, ಈಗ ಕುಡಿಯುವ ನೀರಿನ ಬಗ್ಗೆ ಚರ್ಚೆ ಬೇಡ, ಆ ವರದಿಯನ್ನು ಆಮೇಲೆ ನನಗೆ ಕಳುಹಿಸಿಕೊಡಿ. ಈಗ ಮಾನ್ಯ ಅಬ್ದುಲ್ ಜಬ್ಬಾರ್ ರವರು ಮಾತನಾಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಅಬ್ದುಲ್ ಜಬ್ಬಾರ್ (ನಾಮನಿದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸುತ್ತೇನೆ. ಈಗ ಮಾನ್ಯ ಶರಣಪ್ಪ ಮಟ್ಟೂರ ರವರು ಹೇಳಿದ ಪ್ರಕಾರ ಸನ್ಮಾನ್ಯ ರಾಜ್ಯಪಾಲರ ಭಾಷಣದ ಪುಟ ಸಂಖ್ಯೆ:2ರ ಎರಡನೇ ಕಂಡಿಕೆಯಲ್ಲಿ ಅನ್ನದಾತನ ಬದುಕನ್ನು ಹಸನುಗೊಳಿಸಲು ನಮ್ಮ ಸರ್ಕಾರವು ಮಾನವೀಯತೆಯ ಚೌಕಟ್ಟಿನಲ್ಲಿ ನಿಲುವು ನಿರ್ಧಾರಗಳನ್ನು ಕೈಗೊಳ್ಳಲಿದೆ ಎಂಬುದಾಗಿ ಉಲ್ಲೇಖಿಸಿದ್ದಾರೆ.

ನಿನ್ನೆಯ ದಿವಸ ಒಂದು ಪತ್ರಿಕೆಯಲ್ಲಿ ಓದಿದೆ, ಅದು ನನಗೆ ಬಹಳ ಚೆನ್ನಾಗಿದೆ ಎಂದು ಅನಿಸಿತು. ನಮ್ಮ ಶ್ರೀ ಮಹದೇವ ಪ್ರಕಾಶ್‌ರವರು ಒಂದು ಆರ್ಟಿಕಲ್ ಅನ್ನು ಬರೆದಿದ್ದಾರೆ. ಕೃಷಿಕರ ಸಮಸ್ಯೆ ಪರಿಹಾರಕ್ಕೆ ರೈತ ನ್ಯಾಯಮಂಡಳಿ, ತಾಲ್ಲೂಕು ಮಟ್ಟದಲ್ಲಿ ನ್ಯಾಯ ಮಂಡಳಿಯನ್ನು ಅನುಷ್ಠಾನಗೊಳಿಸಿದರೆ, ರೈತರ ಆತ್ಮಹತ್ಯೆಗಳಿಗೆ ಕಡಿವಾಣ ಹಾಕಬಹುದು ಎನ್ನುವಂತಹ ವಿಚಾರಗಳಿಗೆ ನಮ್ಮ ಶ್ರೀ ಮಹದೇವರವರು ಬಹಳ ಚೆನ್ನಾಗಿ ಬರೆದಿದ್ದಾರೆ. ನಾನು ಆ ಕಡೆ ಗಮನ ಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಏಕೆಂದರೆ ರೈತರ ಕಷ್ಟಕ್ಕೆ ಬೇಕಾದಷ್ಟು ಬಾರಿ ಸಾಲ ಮನ್ನಾ ಆಗಿದೆ. 1990ರಲ್ಲಿ ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ವಿ.ಪಿ.ಸಿಂಗ್ ರವರ ಕಾಲದಲ್ಲೂ ಸುಮಾರು ಹತ್ತು ಸಾವಿರ ಕೋಟಿ ಸಾಲ ಮನ್ನಾ ಆಗಿತ್ತು. ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ಮನಮೋಹನ್ ಸಿಂಗ್ ರವರ ಕಾಲದಲ್ಲೂ ಸಹ ಸುಮಾರು 72 ಸಾವಿರ ಕೋಟಿ ರೂಪಾಯಿಗಳ ಸಾಲ ಮನ್ನಾ ಆಗಿದೆ. ಬೇಕಾದಷ್ಟು ಸಮಯದಲ್ಲಿ ರಾಜ್ಯದಲ್ಲಿ ರೈತರ ಸಾಲವನ್ನು ಮನ್ನಾ ಮಾಡಿದ್ದಾರೆ. ಆದರೆ, ಅದಕ್ಕೆ ಪರಿಹಾರ ಮಾತ್ರ ದೊರಕುವಂತಹ ಸ್ಥಿತಿ ಕಾಣುತ್ತಿಲ್ಲ.

ನಾನು ಈ ಮಾತನ್ನು ಹೇಳಲು ಕಾರಣವೇನೆಂದರೆ, ಇಷ್ಟೆಲ್ಲವನ್ನು programme ಸಹಿತ ಕೊಟ್ಟರು, 2013ರಿಂದ ಇಲ್ಲಿಯತನಕ ಈ ದೇಶದಲ್ಲಿ ಹತ್ತಿರ-ಹತ್ತಿರ ಸುಮಾರು 12 ಸಾವಿರ ರೈತರ ಆತ್ಮಹತ್ಯೆಗಳು ಆಗಿವೆ. ಅದರಲ್ಲಿ ಮಹಾರಾಷ್ಟ್ರ ರಾಜ್ಯ ಒಂದನೆ ಸ್ಥಾನದಲ್ಲಿ ಇದ್ದರೆ, ನಮ್ಮ ಕರ್ನಾಟಕ ರಾಜ್ಯ ಎರಡನೆ ಸ್ಥಾನದಲ್ಲಿ ಇದೆ. ಕಳೆದ ವರ್ಷ ಸುಮಾರು 3816 ಜನ ರೈತರು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ. ಇದಕ್ಕೆಲ್ಲಾ ಪರಿಹಾರ ಏನೆಂದರೆ, ನಮ್ಮ ಮಹಾದೇವರವರು ಹೇಳಿದ ಪ್ರಕಾರ ಪಂಚಾಯಿತಿವಾರು ಒಂದು ಸಮಿತಿಯನ್ನು ರಚಿಸಿ ಅದರಲ್ಲಿ ತಹಶೀಲ್ದಾರ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಬೇಕು. ಆ ಸಮಿತಿಯಲ್ಲಿ ಕೃಷಿ ಅಧಿಕಾರಿಗಳು, ಪಿ.ಡಿ.ಓ., ಮತ್ತು ಪೋಲೀಸ್ ಅಧಿಕಾರಿಯನ್ನು ನೇಮಕ ಮಾಡುವುದರ ಜೊತೆಗೆ ರೈತರ ರೈತ ಸಂಘದ ಒಬ್ಬ ಸದಸ್ಯರನ್ನು ನೇಮಕ ಮಾಡಬೇಕು. ಆ ಸಮಿತಿಯಲ್ಲಿ ತಿಂಗಳಿಗೆ ಒಮ್ಮೆ ರೈತರ ಸಮಸ್ಯೆ ಬಗ್ಗೆ ಚರ್ಚೆಯಾದರೆ, ನನ್ನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂದಾಜಿನ ಪ್ರಕಾರ ಆಗುವಂತಹ ಅನಾಹುತಗಳನ್ನು ತಪ್ಪಿಸಬಹುದು ಎಂದು ಅನಿಸುತ್ತದೆ. ಏಕೆಂದರೆ, ಈ ಸಮಿತಿಗೆ ಏನು ಬ್ರೋಕರ್ಸ್ ಇರುತ್ತಾರೆ, ಅಂದರೆ ಬಡ್ಡಿಗೆ ಹಣ ಕೊಡುವಂತಹ ಜನ ಇರುತ್ತಾರೆ; ಯಾರೋ ಒಬ್ಬ ರೈತ ಆ ಹಣ ತೆಗೆದುಕೊಂಡವನು ಬಂದು ಆ ಸಮಿತಿಗೆ ದೂರು ನೀಡಿದರೆ ತಹಶೀಲ್ದಾರ್ ಆಗಲಿ, ಪೋಲೀಸ್ ಅಧಿಕಾರಿಯಾಗಲಿ, ಅದಕ್ಕೆ ಒಂದು ಬಿಗಿ ಬಂದೋಬಸ್ತ್ ಮಾಡುವಂತಹ ಪ್ರಸಂಗ ಬರುತ್ತದೆ. ಆಗ ರೈತರು ಆತ್ಮಹತ್ಯೆ ಮಾಡುವ ಕಡೆ ಗಮನವನ್ನು ಕೊಡುವುದಿಲ್ಲ. ಆಗ ಸರ್ಕಾರ ಸಹಾಯಕ್ಕೆ ಬರುತ್ತದೆ ಎಂದು ಹೇಳುತ್ತೇನೆ. ಇನ್ನು ಈ ಸಾಲ ಮನ್ನಾ ವಿಚಾರದಲ್ಲಿ ನಿನ್ನೆಯ ದಿವಸ ಬಹಳ ಜನ ಮಾನ್ಯ ಸದಸ್ಯರು ಮಾತನಾಡಿದರು. ಕಾಂಗ್ರೆಸ್ ಸರ್ಕಾರ ಇದ್ದಾಗ ಸುಮಾರು 72 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದೆ. ಕಳೆದ ಐದು ವರ್ಷಗಳಲ್ಲಿ ರೈತರು ಬಹಳ ತೊಂದರೆಯಲ್ಲಿ ಇದ್ದರು. ಅದಕ್ಕೆ ರಾಜ್ಯದಲ್ಲಿ ಕನಿಷ್ಠ ಮೂರು ಸಾವಿರದಿಂದ ನಾಲ್ಕು ಸಾವಿರ ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆಗ ವಿರೋಧ ಪಕ್ಷದವರು ಮತ್ತು ಆಡಳಿತ ಪಕ್ಷದವರು ಎಲ್ಲರೂ ಹೋಗಿ ಕೇಂದ್ರ ಸರ್ಕಾರಕ್ಕೆ ಸಹಾಯವನ್ನು ಕೋರಿದರು ಸಹ, ಏನೂ ಆಗಿಲ್ಲ. ಆದರೆ, ಕೇಂದ್ರ ಸರ್ಕಾರದಲ್ಲಿ ಇರುವಂತಹ ಮಾನ್ಯ ಪ್ರಧಾನ ಮಂತ್ರಿಗಳು ಕೈಗಾರಿಕೋದ್ಯಮಿಗಳ ಒಂದು ಲಕ್ಷದ ನಲವತ್ತು ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದ್ದಾರೆ. ಇಲ್ಲಿ ಜನ ಸಾಯುತ್ತಿದ್ದರು ಸಹ, ಅವರು ರೈತರ ಕಡೆಗೆ ಗಮನ ಕೊಡುತ್ತಿಲ್ಲ. ಪುನಃ ಅವರು ಚುನಾವಣೆಗೆ ಬಂದಾಗ, ನಿಮಗೆ ಗೊತ್ತಿರುವ ಪ್ರಕಾರ ನಡೆದಿರುವಂತಹ ಚಳುವಳಿ ಕಳಸ-ಬಂಡೂರಿ ವಿಚಾರದಲ್ಲಿ ಆದಷ್ಟು ಬೇಗ ಪರಿಹಾರವನ್ನು ದೊರಕಿಸಿ ಕೊಡುತ್ತೇನೆ. ಈ ಚುನಾವಣೆ ಮುಗಿದ ಕೂಡಲೇ ಕಳಸ-ಬಂಡೂರಿ ಮತ್ತು ಮಹದಾಯಿ ವಿಚಾರವನ್ನು ಸರಿಪಡಿಸುತ್ತೇನೆ ಎಂದು ಹೇಳಿದರು.

**(ಮುಂದು...)**

(059) 04.07.2018 1.00 ವೈಎಲ್-ಜಿಆರ್

ಶ್ರೀ ಕೆ.ಅಬ್ದುಲ್ ಜಬ್ಬಾರ್(ಮುಂದು):-

ಮಹಾದಾಯಿ ಮತ್ತು ಕಳಸಾ ಬಂಡೂರಿ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಇವತ್ತಿನವರೆಗೂ ಯಾರು ಸಹ ಗಮನವನ್ನು ಹರಿಸಿರುವುದಿಲ್ಲ. ಗಮನ ಹರಿಸುವುದಕ್ಕೂ ತಯಾರಿಲ್ಲ. ಅದಕ್ಕಾಗಿ ರೈತರ ಸಾಲದ ವಿಚಾರವಾಗಿ ಕೇಂದ್ರ ಸರ್ಕಾರದವರು ಸ್ವಲ್ಪ ಧಾರಳತನವನ್ನು ತೋರಿಸಬೇಕು. ಏಕೆಂದರೆ, ನಾವೆಲ್ಲರೂ ಭಾರತದಲ್ಲಿಯೇ ಇರುವ ಕರ್ನಾಟಕ ರಾಜ್ಯದಲ್ಲಿಯೇ ಇರುವುದು. ಇಲ್ಲಿನ ರೈತರು ಸಹ ಈ ದೇಶಕ್ಕೆ ಸಂಬಂಧಪಟ್ಟಂಥವರು. ಪ್ರಧಾನ ಮಂತ್ರಿಗಳು U.P.,ನಲ್ಲಿ ಮಾಡಿದ್ದರು ಎಂದು ಹೇಳುತ್ತಾರೆ. ಆದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಇಂತಹ ಒಂದು ಕಷ್ಟ ಪರಿಸ್ಥಿತಿ ಇದ್ದರೂ ಸಹ ಇವತ್ತಿನವರೆಗೂ ಇಲ್ಲಿಯ ಸಮಸ್ಯೆಯ ಬಗ್ಗೆ ಗಮನ ಹರಿಸುತ್ತಿಲ್ಲ. ತಾರತಮ್ಯ ಮಾಡುತ್ತಿದ್ದಾರೆ. ಅದಕ್ಕಾಗಿ ಆ ರೀತಿ ಆಗಬಾರದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿರೋಧ ಪಕ್ಷದಲ್ಲಿರುವಂತಹ ನಮ್ಮ ಸದಸ್ಯರು ಆ ಕಡೆ ಜಾಸ್ತಿ ಗಮನ ಹರಿಸಿ, ಮಹಾದಾಯಿ ಮತ್ತು ಕಳಸಾ ಬಂಡೂರಿಯ ಸಮಸ್ಯೆಯನ್ನು ಬಗೆಹರಿಸಬೇಕು. ಹಾಗೆಯೇ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಕೇವಲ ಮುಖ್ಯಮಂತ್ರಿಗಳಿಗೆ ಸಲಹೆ ನೀಡುವುದಾಗಲಿ ಅಥವಾ ಸರ್ಕಾರಕ್ಕೆ ಸಲಹೆ ನೀಡುವುದಾಗಲಿ ಒಂದೇ ಇರುವುದಿಲ್ಲ. ಅವರಿಗೆ ಸಹಾಯ ಮಾಡುವುದಕ್ಕೆ ಏನು ಮಾಡಬೇಕೋ ಅದು ನಮ್ಮ ಹಾಗೂ ವಿರೋಧ ಪಕ್ಷದವರ ಜವಾಬ್ದಾರಿಯಾಗಿರುತ್ತದೆ. ವಿರೋಧ ಪಕ್ಷದವರು ಸಹ ಕೇಂದ್ರ ಸರ್ಕಾರದವರಿಗೆ ಇಂತಹ ಕೆಲಸವನ್ನು ಮಾಡಿ, ಸಹಾಯ ಮಾಡಬೇಕು, ಅವರು ಸಹ ನಮ್ಮ ಪ್ರಜೆಗಳೇ ಎಂದು ಬೆಂಬಲ ನೀಡಬೇಕಾಗುತ್ತದೆ. ಯಾರೋ ಒಬ್ಬರೂ ಜವಾಬ್ದಾರಿ ಹೊತ್ತು ಕೊಂಡಿದ್ದರೆ, ಅದನ್ನು ಅವರೇ ಮಾಡಬೇಕು, ಅವರು ಹೇಗೇ ಮಾಡುತ್ತಾರೆ ಎಂಬುದನ್ನು ನೋಡುತ್ತೇವೆ ಎಂದು ಹೇಳಿದರೆ ಆಗುವುದಿಲ್ಲ.  ಖಾಸಗಿಯವರ ಸಾಲವನ್ನು ಮನ್ನಾ ಮಾಡಿ, ರೈತರ ಸಾಲವನ್ನು ಮನ್ನಾ ಮಾಡಿ ಎಂದರೆ ಆಗುವುದಿಲ್ಲ. ಒಂದು ಪಕ್ಷ ಮಾಡುವುದಕ್ಕೆ ಅವಕಾಶವಿದ್ದರೆ ಮಾಡೇ ಮಾಡುತ್ತಾರೆ. ಆದರೂ ಮಾನ್ಯ ಮುಖ್ಯಮಂತ್ರಿಯವರು ಧೈರ್ಯ ಮಾಡಿದ್ದಾರಲ್ಲ ಅದು ನಿಜಕ್ಕೂ ಮೆಚ್ಚುವಂತಹ ವಿಚಾರ. ಅದಕ್ಕೆ ರಾಜ್ಯಪಾಲರು ಇನ್ನೂ ಅನೇಕ ವಿಚಾರಗಳಲ್ಲಿ ಹೇಳಿದ್ದಾರೆ.

ಈ ವಿಷಯದ ಬಗ್ಗೆ ನಾನು ಹೇಳುವುದೇಂದರೆ, ಒಂದು ಸಮಿತಿಯನ್ನು ರಚಿಸುವುದರ ಜೊತೆಗೆ ಪಂಚಾಯಿತಿವಾರು ರೈತರಿಗೊಂದು ಉದ್ಯೋಗಾವಕಾಶವನ್ನು ಕಲ್ಪಿಸಬೇಕು. ಏಕೆಂದರೆ, ಮಡಿಕೇರಿ ಕಡೆಗಳಲ್ಲಿ 5-6 ತಿಂಗಳು ಮಳೆಯಾಗುತ್ತಿದ್ದರೆ ಅಲ್ಲಿನ ರೈತರು ಹೇಗೆ ಸುಮ್ಮನೆ ಕುಳಿತಿರುತ್ತಾರೋ, ಈ ಸಮಯದಲ್ಲಿ ಮಳೆ ಬಂದ ಕಡೆ ಕೃಷಿ ಮಾಡುವುದಕ್ಕೆ ಅವಕಾಶವಿದ್ದರೂ 5-6 ತಿಂಗಳು ರೈತರು ಸುಮ್ಮನೆ ಕುಳಿತಿರುತ್ತಾರೆ.  ಅವರಿಗೆ ಎಲ್ಲಿಯಾದರೂ ಒಂದು ಕಡೆ ಕೆಲಸ ಮಾಡುವುದಕ್ಕೆ ಅವಕಾಶ ಒದಗಿಸಿದರೆ, ಅವರ ಊರುಗಳಲ್ಲಿ, ಪಂಚಾಯಿತಿಗಳಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸಿದರೆ, ಈ ರೀತಿ ಎಲ್ಲಾ ಅನಾಹುತಗಳಾಗುವುದು ತಪ್ಪುತ್ತದೆ.  ಇನ್ನು ರೈತರ ಮಕ್ಕಳ ವಿದ್ಯಾಭ್ಯಾಸದ ಕಡೆಯೂ ಗಮನ ಕೊಡಬೇಕು. ತಾವು ಹಾಗೂ ಸಚಿವರು ಶಿಕ್ಷಣ ಕ್ಷೇತ್ರದಿಂದಲೇ ಆಯ್ಕೆಯಾಗಿ ಬಂದಿರುತ್ತೀರಿ. ಹಳ್ಳಿಗಳಲ್ಲಿರುವ ಶಾಲೆಗಳನ್ನು ನೋಡಿದರೆ, ಭಗವಂತನ ಆಣೆಗೂ ಆ ಶಾಲೆಗಳನ್ನು ಮುಚ್ಚಿದರೆ ಅಲ್ಲಿನ ಮಕ್ಕಳಾದರೂ ಬೇರೆ ಕಡೆ ಹೋಗಿ ವಿದ್ಯಾಭ್ಯಾಸವನ್ನು ಮಾಡಿಕೊಳ್ಳುತ್ತಾರೆ. ಏಕೆಂದರೆ, ನಾನು ನೋಡಿರುವ ಹಾಗೆ ಒಂದು ಶಾಲೆಯಲ್ಲಿ ಒಂದು-ಎರಡು ರೂಂ ಇರುವುದರಿಂದ 7ನೇ ತರಗತಿವರೆಗೂ ಪಾಠ ಮಾಡುತ್ತಾರೆ. ಹಾಗಾಗಿ ಇಂತಹ ಶಾಲೆಗೆ ಹೋಗುವ ಬದಲು ದನ-ಕರುಗಳನ್ನು ಮೇಯಿಸಿಕೊಂಡು ಬನ್ನಿ ಎಂದು ಪೋಷಕರು ಹೊರಗೆ ಕಳುಹಿಸುವಂತಹ ಒಂದು ಪರಿಸ್ಥಿತಿ ಹಳ್ಳಿಯಲ್ಲಿ ಇದೆ.  ಓದುವಂತಹ ಪರಿಸ್ಥಿತಿ ಮಾತ್ರ ಅಲ್ಲಿ ನಿರ್ಮಾಣವಾಗುತ್ತಿಲ್ಲ. ಅದಕ್ಕಾಗಿ ನಾನು ಸರ್ಕಾರಕ್ಕೆ ವಿನಂತಿಸುವುದೇನೆಂದರೆ, ನಮ್ಮ ಸಚಿವರು ಇಲ್ಲಿಯೇ ಇದ್ದಾರೆ. ಬ್ರಿಟಿಷ್ ಕಾಲದಲ್ಲಿ ಯಾವ ಕಟ್ಟಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇತ್ತೋ, ಇವತ್ತಿಗೂ ಅದೇ ಕಟ್ಟಡ ಇದೆ. ಆ ಕಾಲದಲ್ಲಿ ಅಳವಡಿಸಿದ ಛೇರ್, ಟೇಬಲ್ ಹಾಗೆ ಇದೆ. ಅವುಗಳು ಮುರಿದಿದ್ದರು ಮಕ್ಕಳು ಅದರ ಮೇಲೆಯೇ ಕುಳಿತುಕೊಳ್ಳುತ್ತಾರೆ. ದಯವಿಟ್ಟು ಹೊಸ ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕಿಂತ ಇರುವಂತಹ ಶಾಲೆಗಳನ್ನು ಉನ್ನತ ಮಟ್ಟಕ್ಕೆ ತನ್ನಿ. ಮಕ್ಕಳು ಇಷ್ಟ ಪಟ್ಟು ಶಾಲೆಗೆ ಹೋಗಬೇಕು. ಅವರು ಕುಳಿತುಕೊಳ್ಳುವ ಜಾಗ ಚೆನ್ನಾಗಿ ಇದ್ದರೆ, ಮಕ್ಕಳು ಶಾಲೆಗೆ ಹೋಗೇ ಹೋಗುತ್ತಾರೆ. ಆದರೆ, ಅಲ್ಲಿ ಏನಾಗುತ್ತಿದೆ ಎಂದರೆ, ಪಾಠ ಮಾಡುವಂತಹ ಶಿಕ್ಷಕರು ಸಹ ಹಳ್ಳಿಯಲ್ಲಿ ಯಾರು ಬಂದು ನೋಡುವುದಿಲ್ಲವೆಂದು ಚೆನ್ನಾಗಿ ಪಾಠವನ್ನು ಮಾಡುವುದಿಲ್ಲ. ಅದರ ಜೊತೆಗೆ ಮಕ್ಕಳಿಗೂ ಸಹ ಒಳ್ಳೆಯ ವಾತಾವರಣವನ್ನು ಸರ್ಕಾರ ಗಮನಹರಿಸಿ ಮಾಡುತ್ತಿಲ್ಲ. ಅದಕ್ಕಾಗಿ ಮೊದಲು ಹಳೆಯ ಶಾಲೆಗಳನ್ನು ಚೆನ್ನಾಗಿ ಮಾಡಿ, ನಂತರ ಹೊಸ ಶಾಲೆಗಳನ್ನು ಪ್ರಾರಂಭ ಮಾಡಿ.

ಇವತ್ತಿನ ದಿವಸ ಖಾಸಗಿ ಶಾಲೆಗಳಲ್ಲಿ 5 ರಿಂದ 10 ಸಾವಿರ ರೂಪಾಯಿವರೆಗೂ ಸಂಬಳವನ್ನು ನೀಡುತ್ತಿದ್ದರೆ ಜನ ಸಾಲಿನಲ್ಲಿ ನಿಂತುಕೊಂಡು ಅಪ್ಲಿಕೇಷನ್ ತೆಗೆದುಕೊಳ್ಳುತ್ತಿದ್ದಾರೆ. ಆದರೆ, ಸರ್ಕಾರಿ ಶಾಲೆಗಳಲ್ಲಿ ಪಾಠ ಮಾಡತಕ್ಕಂಥ ಶಿಕ್ಷಕರಿಗೆ 25000 ರೂಪಾಯಿವರೆಗೂ ಸಂಬಳವನ್ನು ನೀಡುತ್ತಿದ್ದರೂ ಮಕ್ಕಳನ್ನು ಸರ್ಕಾರಿ ಶಾಲೆಗೆ ಕಳುಹಿಸುವುದಕ್ಕೆ ಹಿಂದೆ ಮುಂದೆ ನೋಡುತ್ತಿದ್ದಾರೆ. ಇದರಿಂದ ಹಳ್ಳಿಯಲ್ಲಿರುವ ಬಹಳ ಶಾಲೆಗಳು ಮಕ್ಕಳ ಸಂಖ್ಯೆ ಜಾಸ್ತಿ ಇಲ್ಲದೇ ಮುಚ್ಚಲಾಗುತ್ತಿದೆ. ಅದಕ್ಕಾಗಿ ಖಾಸಗಿ ಶಾಲೆಗಳಲ್ಲಿಗೆ ಮಕ್ಕಳು ಹೋಗುವುದನ್ನು ತಪ್ಪಿಸುವುದಕ್ಕೆ ಸರ್ಕಾರದಲ್ಲಿ ಒಳ್ಳೆಯ ಅವಕಾಶ ಇದೆ. ಯಾವುದೇ ರೀತಿಯ ಸಮಸ್ಯೆ ಇಲ್ಲ. ಗ್ರಾಮೀಣ ಭಾಗದಲ್ಲಿರುವಂತಹ ಶಾಲೆಗಳನ್ನು ಉನ್ನತ ಮಟ್ಟಕ್ಕೆ ತರಬೇಕು ಹಾಗೂ ಒಂದು-ಎರಡು ಕ್ಲಾಸ್ ರೂಂಗಳಲ್ಲಿರುವ ಶಾಲೆಗಳಲ್ಲಿ ಹೆಚ್ಚಿನ ಕ್ಲಾಸ್ ರೂಂಗಳನ್ನು ತೆರೆಯಬೇಕು. ಅದರ ಜೊತೆಗೆ ಟೇಬಲ್, ಕುರ್ಚಿ ಒದಗಿಸಿ, ಒಳ್ಳೆಯ ವಾತಾವರಣವನ್ನು ಸೃಷ್ಟಿ ಮಾಡಬೇಕು. ಒಳ್ಳೆಯ ಶಿಕ್ಷಕರನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ರೈತರ ಮಕ್ಕಳಿಗೆ ವಿದ್ಯಾಭ್ಯಾಸ ನೀಡಿದರೆ ಇಂತಹ ಎಲ್ಲಾ ಅನಾಹುತಕ್ಕೆ ಕಡಿವಾಣ ಹಾಕಿದಂತಾಗುತ್ತದೆ. ಅದರ ಜೊತೆಗೆ ತಾಲ್ಲೂಕಿನಲ್ಲಿ ಒಂದಾದರೂ ಐ.ಟಿ.ಐ. ಯನ್ನು ತೆರೆಯಬೇಕು. ಏಕೆಂದರೆ, ರೈತರ ಮಕ್ಕಳು ಯಾವುದಾದರೂ ಒಂದು ಕೆಲಸವನ್ನು ಕಲಿತರೆ, ಕೌಶಲ್ಯಾಭಿವೃದ್ಧಿಯನ್ನು ಕಲಿಸಿದರೆ, ಮಕ್ಕಳು ವಿದ್ಯಾಭ್ಯಾಸ ಮಾಡಿಕೊಂಡು ದುಡಿಯುತ್ತಿದ್ದರೆ, ರೈತರಿಗೂ ಆತ್ಮಹತ್ಯೆ ಮಾಡಿಕೊಳ್ಳಬೇಕೆಂಬುದರ ಕಡೆ ಗಮನ ಹೋಗುವುದಿಲ್ಲ. ಏಕೆಂದರೆ, ಮಕ್ಕಳ ಮದುವೆ ಮಾಡುವುದಕ್ಕೆ ಮತ್ತೊಂದಕ್ಕೆ ಎಂದು ಖಾಸಗಿಯವರ ಹತ್ತಿರ 50,000 ಅಥವಾ 1,00,000 ರೂಪಾಯಿಗಳವರೆಗೂ ಸಾಲ ಮಾಡಿಕೊಂಡಿರುತ್ತಾರೆ. ಆದರೆ ಅವರಿಗೆ ತೀರಿಸುವುದಕ್ಕಾಗುವುದಿಲ್ಲ. ಏಕೆಂದರೆ ಬೆಳೆ ಬೆಳೆದರೂ ಅವರಿಗೆ ಸರಿಯಾದ ರೀತಿಯಲ್ಲಿ ಹಣ ಸಿಗುತ್ತಿಲ್ಲ. ಅವರಿಗೆ ಬೆಳೆ ಬೆಳೆಯದಿದ್ದರೂ ಹಣವನ್ನು ವಾಪಸ್ಸು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಮನೆಯವರ ಮುಂದೆ, ಮಕ್ಕಳ ಮುಂದೆ ಸಾಲ ನೀಡಿದವರು ಬಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ-ಮರ್ಯಾದೆ ತೆಗೆಯುತ್ತಾರೆ ಎಂದು ಆ ಕಷ್ಟವನ್ನು ತಡೆಯಲಾಗದೇ ಆತ್ಮಹತ್ಯೆ ಮಾಡಿಕೊಳ್ಳುವುದೇ ಉತ್ತಮವೆಂದು ರೈತ ಸಾಯುತ್ತಾನೆ. ಅದಕ್ಕಾಗಿ ರೈತರ ಮಕ್ಕಳಿಗೆ ಕಡ್ಡಾಯವಾಗಿ ಪರಿಹಾರವನ್ನು ಒದಗಿಸಬೇಕು. ಸಾಲವನ್ನು ಮನ್ನಾ ಮಾಡುತ್ತೇವೆ ಎಂದು ಎಷ್ಟು ದಿನ ಮಾಡುವುದಕ್ಕಾಗುತ್ತದೆ? ರೈತರಿಗೆ ಪರಿಹಾರವನ್ನು ಒದಗಿಸಬೇಕು. ರೈತರು ಆತ್ಮಹತ್ಯೆ ಮಾಡಿಕೊಳ್ಳದೇ ಇರುವ ಹಾಗೆ ಏನು ಮಾಡಬೇಕೆಂದರೆ ಅವರ ಮಕ್ಕಳಿಗೆ ವಿದ್ಯಾಭ್ಯಾಸ ಒದಗಿಸಬೇಕು. ಶಾಲೆಗಳಲ್ಲಿ ಒಳ್ಳೆಯ ವಾತಾವರಣವನ್ನು ಸೃಷ್ಟಿ ಮಾಡಬೇಕು. ಕೈಗಾರಿಕೆಗಳನ್ನು ಮತ್ತು ಐ.ಟಿ.ಐ., ಗಳನ್ನು ತೆರೆಯಬೇಕು. ಶಾಲೆಯಲ್ಲಿರುವ ಶಿಕ್ಷಕರಿಗೆ ಒತ್ತಡ ಕಡಿಮೆ ಮಾಡಿ, ಶಾಲೆಯಲ್ಲಿ ಒಳ್ಳೆಯ ವಾತಾವರಣವನ್ನು ಸೃಷ್ಟಿ ಮಾಡಿದರೆ ಒಳ್ಳೆಯದು. ಅದರ ಜೊತೆಗೆ ನಾನು ಹೇಳಿದ ಪ್ರಕಾರ ಮಾನ್ಯ ಮುಖ್ಯಮಂತ್ರಿಯವರು ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದರೆ ಯಾವುದೇ ಕಾರಣಕ್ಕೂ ರೈತ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬರುವುದಿಲ್ಲವೆಂದು ನನ್ನಗನಿಸುತ್ತದೆ.

ತಹಶೀಲ್ದಾರ್ ಮತ್ತು ಪೋಲೀಸ್ ಇಲಾಖೆಯವರು ಮತ್ತು ಗ್ರಾಮೀಣ ಭಾಗದಲ್ಲಿರುವ ಪಂಚಾಯಿತಿಯವರು Rural Panchayath ವತಿಯಿಂದ E.O., or P.D.O., ಯಾರಾದರೂ ಇದ್ದರೆ, ರೈತರ ಕಷ್ಟ ಸುಖವನ್ನು ಹೇಳಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ನಾನು ಸಾಲ ಮಾಡಿದ್ದೇನೆ, ಸರಿಯಾಗಿ ಬೆಳೆ ಆಗುತ್ತಿಲ್ಲ ಎಂದು ಹೇಳಿಕೊಂಡರೆ, ಅವರು ಏನಾದರೂ ಪರಿಹಾರವನ್ನು ಒದಗಿಸುತ್ತಾರೆ. ಇದೆಲ್ಲಾವನ್ನು ತಪ್ಪಿಸುವಂತಹ ಒಂದು ವಾತಾವರಣ ಸೃಷ್ಟಿಯಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಥಮಿಕ ಶಿಕ್ಷಣ ಸಚಿವರು ಸಹ ಸದನದಲ್ಲಿಯೇ ಇದ್ದಾರೆ. ಗ್ರಾಮೀಣ ಭಾಗಗಳಲ್ಲಿ ಶಿಕ್ಷಕರ ನೇಮಕಾತಿ ಬಹಳ ಕಡಿಮೆ ಇದೆ. ಎರಡು-ಮೂರು ಜನ ಶಿಕ್ಷಕರಿದ್ದು ಇವರುಗಳು 1 ರಿಂದ 7ನೇ ತರಗತಿಯವರೆಗೂ ಪಾಠ ಮಾಡಬೇಕಾದರೆ ಒಂದಾದ ಮೇಲೆ ಮತ್ತೊಂದು ತರಗತಿಯನ್ನು ತೆಗೆದುಕೊಳ್ಳುವಷ್ಟರಲ್ಲಿ ಸಂಜೆ 5.00 ಗಂಟೆಯಾಗಿ ಕೊನೆಗೆ ಬೆಲ್ ಒಡೆಯುತ್ತಾರೆ. ಅದಕ್ಕಾಗಿ ಆದಷ್ಟು ಶಿಕ್ಷಕರ ನೇಮಕಾತಿಯನ್ನು ಮಾಡಿ, ಶಿಕ್ಷಕರ ಮೇಲಿನ ಒತ್ತಡವನ್ನು ಕಡಿಮೆ ಮಾಡಬೇಕೆಂದು ಹೇಳುತ್ತೇನೆ. ಎರಡನೆಯದಾಗಿ, ಇವತ್ತಿನವರೆಗೂ ಸಹ ಸರ್ಕಾರಿ ಶಾಲೆಗಳಲ್ಲಿನ ಮಕ್ಕಳಿಗೆ ಓದಿಸುವುದಕ್ಕೆ ಪುಸ್ತಕಗಳು ದೊರೆತ್ತಿಲ್ಲ ಎಂದು ನಮಗೆ ಮಾಹಿತಿ ಬಂದಿದೆ. ಹಾಗಾಗಿ ಆದಷ್ಟು ಬೇಗ ತಕ್ಷಣ ಇದರ ಕಡೆ ಮಾನ್ಯ ಸಚಿವರು ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅದರ ಜೊತೆಗೆ ಸರ್ಕಾರಿ ಶಾಲೆಗಳನ್ನು ಉನ್ನತ ಮಟ್ಟಕ್ಕೆ ಏರಿಸಬೇಕು. ಹೇಗೇ ಬೇಕು ಹಾಗೆ, ಎಲ್ಲಿ ಬೇಕೆಂದರೆ ಅಲ್ಲಿ ಶಾಲೆಗಳನ್ನು ತೆರೆಯುವುದರಿಂದ ಏನು ಪ್ರಯೋಜನವಾಗುವುದಿಲ್ಲ. ಈಗ ಇರತಕ್ಕಂಥ ಶಾಲೆಗಳನ್ನೇ ಅಭಿವೃದ್ಧಿಪಡಿಸಿ, ಒಂದು ವರ್ಷ ಪೂರ್ತಿ ಸರ್ಕಾರಿ ಶಾಲೆಗಳಿಗೆ ಆದ್ಯತೆ ನೀಡಿದರೆ ಒಳ್ಳೆಯ ರೀತಿಯಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಭಿವೃದ್ಧಿಯಾಗುತ್ತದೆ ಮತ್ತು ರೈತರಿಗೂ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಅವಕಾಶವಾಗುವುದಿಲ್ಲವೆಂದು ಈ ಮೂಲಕ ಹೇಳಬಯಸುತ್ತೇನೆ.

ರಾಜ್ಯಪಾಲರ ಭಾಷಣದಲ್ಲಿ ಗ್ರಾಮೀಣ ಪ್ರದೇಶಗಳಾದ ತಾಲ್ಲೂಕು ಮತ್ತು ಜಿಲ್ಲೆಗಳಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಇದೇ ರೀತಿಯ ಪರಿಸ್ಥಿತಿ ಇದೆ. ರೈತರಿಗೆ ಏನಾದರೂ ಖಾಯಿಲೆ ಬಂದು ಆಸ್ಪತ್ರೆಗೆ ಬಂದರೆ, ಆ ಊರಿನಲ್ಲಿರತಕ್ಕಂಥ ಆಸ್ಪತ್ರೆಗಳಲ್ಲಿ ಡಾಕ್ಟರ್ಸ್ ಆಗಲಿ, ನರ್ಸ್ ಆಗಲಿ ಇರುವುದಿಲ್ಲ. ಏಕೆಂದ್ರೆ, ನಮ್ಮ ಸರ್ಕಾರ ಅವರು ಆಸ್ಪತ್ರೆಯಲ್ಲಿ ಇರುವಂತಹ ವಾತಾವರಣವನ್ನು ಸೃಷ್ಟಿ ಮಾಡಿಕೊಟ್ಟಿರುವುದಿಲ್ಲ. ಗ್ರಾಮೀಣ ಭಾಗದಲ್ಲಿರತಕ್ಕಂಥ ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳಿಗೆ ಮೂಲಭೂತ ಸೌಕರ್ಯವನ್ನು ಒದಗಿಸಿ ಕೊಟ್ಟರೆ ಅವರುಗಳು ಆಸ್ಪತ್ರೆಯಲ್ಲಿಯೇ ಉಳಿಯುತ್ತಾರೆ. ರೈತರಿಗೆ ಮತ್ತೊಬ್ಬರಿಗೆ ಏನಾದರೂ ತುರ್ತು ಪರಿಸ್ಥಿತಿ ಉದ್ಭವಿಸಿದರೆ, ತಕ್ಷಣ ತೋರಿಸುವುದಕ್ಕೆ ಒಬ್ಬ ವೈದ್ಯರು ಇರುವುದಿಲ್ಲ. ಅಂತಹ ಒಂದು ಪರಿಸ್ಥಿತಿ ಇರುತ್ತದೆ. ಆದುದರಿಂದ ಜನರು ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಿಗೆ ಹೋಗುವಂತಹ ವಾತಾವರಣವನ್ನು ಸೃಷ್ಟಿ ಮಾಡಬೇಕು. ಜನಸಾಮಾನ್ಯರು ಖಾಸಗಿ ಆಸ್ಪತ್ರೆಗಳಿಗೆ ಹೋಗುವುದನ್ನು ತಪ್ಪಿಸುವುದಕ್ಕೆ ಬೇಕಾದಷ್ಟು ಅವಕಾಶ ಇದೆ. ನಾವು ಸಾವಿರಾರು ಕೋಟಿ ರೂಪಾಯಿಗಳನ್ನು ಆಸ್ಪತ್ರೆಗಾಗಿ ಖರ್ಚು ಮಾಡುತ್ತೇವೆ. ಅದು ಎಲ್ಲಿಗೆ ಹೋಗುತ್ತದೆ ಎಂಬುದು ಅರ್ಥವಾಗುವುದಿಲ್ಲ. ನಾವು ಸರ್ಕಾರಿ ಆಸ್ಪತ್ರೆಗಳಿಗೆ ಒಳ್ಳೆಯ ವೈದ್ಯರನ್ನು ಒದಗಿಸಿ, ಅವರಿಗೆ ಮೂಲಭೂತ ಸೌಕರ್ಯವನ್ನು ಒದಗಿಸಿ ಅವರು ಅಲ್ಲಿಯೇ ವಾಸವಾಗಿರುವಂತೆ ಮಾಡಿ, ಅದೇ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಕೆಲಸ ಮಾಡುವಂತೆ ಮಾಡಿಬೇಕು. ತಾಲ್ಲೂಕು ಮಟ್ಟದಲ್ಲಿ ಆದಷ್ಟು Dialysis Centers ತೆರೆಯಬೇಕು. ಏಕೆಂದರೆ, ಕಿಡ್ನಿ failure ಎಲ್ಲವೂ ಸಾಮಾನ್ಯವಾಗಿ ಬಿಟ್ಟಿದೆ. ಅದಕ್ಕಾಗಿ Dialysis Centers, Blood Banks ತೆರೆಯಬೇಕು. ನಮ್ಮ ಸರ್ಕಾರದಿಂದ ಆದಷ್ಟು ಕಡೆ Dialysis Centers ಮಾಡಲಾಗಿದೆ, ಆದರೆ ಇನ್ನೂ ಕೆಲವು ಕಡೆ ಹಾಗೆ ಉಳಿದಿದೆ. ಆದುದರಿಂದ ತಾಲ್ಲೂಕು ಮಟ್ಟದಲ್ಲಿ Dialysis Centers ಮಾಡಿದರೆ, ಬಡ ಜನರಿಗೆ ಉಪಕಾರವಾಗುತ್ತದೆ ಎಂದು ಹೇಳುತ್ತಾ, ಅದರ ಜೊತೆಗೆ Blood Banks ಸಹ ತಾಲ್ಲೂಕು ಮಟ್ಟದಲ್ಲಿ ತೆರೆಯಬೇಕು. ಜೊತೆಗೆ ಸ್ಮಾರ್ಟ್ ಸಿಟಿ ಮಾಡಬೇಕು. ಸ್ಮಾರ್ಟ್ ಸಿಟಿ ಮಾಡಿ ಎಂದು ಕೇಳಿ 5 ವರ್ಷವಾಗಿದೆ.

(ಮುಂದು) . . .

(060)04.07.2018/1.10/ಎಸ್‌ಕೆ-ಎಂ.ಡಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** (ಮುಂದು)

ಐದು ವರ್ಷಗಳಿಂದ 'Smart City' ಗೆ ಸಂಬಂಧಿಸಿದಂತೆ ಎಲ್ಲಿ ಕೆಲಸವನ್ನು ಚಾಲು ಮಾಡಿದ್ದಾರೆ ಎನ್ನುವುದೇ ಅರ್ಥವಾಗುತ್ತಿಲ್ಲ. ಅಧಿಕಾರಿಗಳು ಎಲ್ಲದ್ದಕ್ಕೂ query ಹಾಕುತ್ತಾರೆ. ಹಣ ಬಂದು ಬ್ಯಾಂಕ್ ಅಕೌಂಟ್‌ನಲ್ಲಿದೆ. ಸಂಬಂಧಪಟ್ಟ ಅಧಿಕಾರಿಗಳು ಅದರ interest draw ಮಾಡಿಕೊಳ್ಳುತ್ತಿದ್ದಾರೆ ವಿನಃ ಏಕೆ ಕೆಲಸವನ್ನು ಮಾಡುತ್ತಿಲ್ಲವೆಂದು ಹೇಳಿದರೆ, ಟೆಂಡರ್ ಆಗಿಲ್ಲ. ಟೆಂಡರ್ ಹಾಕಿದರೂ ಸಹ ಅದು ವಾಪಸ್ ಬಂದಿಲ್ಲ ಎಂದು ಹೇಳುತ್ತಾರೆ. ನಮ್ಮ ರಾಜ್ಯದಲ್ಲಿ 5-6 'Smart City' declare ಮಾಡಿ ಸುಮಾರು 5 ವರ್ಷಗಳಾಗಿವೆ. ನಮ್ಮ ರಾಜ್ಯದಿಂದ ಶೇಕಡ 50 ಮತ್ತು ಕೇಂದ್ರ ಸರ್ಕಾರದಿಂದ ಶೇಕಡ 50ರಷ್ಟು ಹಣ ಬಂದಿದೆ. ಆದರೆ ಕೆಲಸ ಮಾತ್ರ ಎಲ್ಲಿಯೂ ಸಹ ಪ್ರಾರಂಭವಾಗಿಲ್ಲ. 'Smart City' ವಿಚಾರವಾಗಿ ಹೇಳಬೇಕೆಂದರೆ... ನಾನು ಉನ್ನತ ಶಿಕ್ಷಣ ಇಲಾಖೆಯ ಬಗ್ಗೆಯೂ ಸಹ ಒಂದೆರಡು ನಿಮಿಷಗಳ ಕಾಲ ಮಾತನಾಡುತ್ತೇನೆ. ದಾವಣಗೆರೆಯಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯವಿದೆ. ಕುವೆಂಪು ವಿಶ್ವವಿದ್ಯಾನಿಲಯದಿಂದ ಇದನ್ನು ತೆಗೆದುಕೊಂಡು ನನ್ನ ಅಂದಾಜಿನ ಪ್ರಕಾರ ಸುಮಾರು ಐದಾರು ವರ್ಷಗಳಾಗಿವೆ. ಅಲ್ಲಿ ಕೇವಲ 14 ಜನ ಉಪನ್ಯಾಸಕರು ಮಾತ್ರ ಇದ್ದಾರೆ, ಆದರೆ ಅದಕ್ಕೆ ವಿಶ್ವವಿದ್ಯಾನಿಲಯದ ಹೆಸರನ್ನು ಕೊಟ್ಟಿದ್ದಾರೆ. ಒಂದು ಕಾಲೇಜಿನಲ್ಲಿ ಸುಮಾರು 25 ಜನ ಉಪನ್ಯಾಸಕರುಗಳು ಇರುತ್ತಾರೆ. ಆದರೆ ಈ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಕೇವಲ 14 ಜನ ಉಪನ್ಯಾಸಕರುಗಳಿದ್ದಾರೆ. ನಾನು ಈ ಸದನದ ಸದಸ್ಯನಾದಾಗಿನಿಂದಲೂ ಕೇಳುತ್ತಿದ್ದೇನೆ, ಆದರೆ ಈ ವಿಶ್ವವಿದ್ಯಾನಿಲಯಕ್ಕೆ recruitment ಆಗುತ್ತಿಲ್ಲ.

**ಶ್ರೀ ಅರುಣ ಶಹಾಪೂರ:-** ಮಾನ್ಯ ಸಭಾಪತಿಯವರೆ, ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿಯೂ ಸಹ ಇದೇ ಸ್ಥಿತಿ ಇದೆ. ಕಳೆದ ಐದು ವರ್ಷಗಳಿಂದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಹುದ್ದೆಗಳು ಖಾಲಿ ಇವೆ. ಅವರು ತುಂಬಾ ಒಳ್ಳೆಯ ಮಾತನ್ನು ಹೇಳುತ್ತಿದ್ದಾರೆ.

**ಶ್ರೀ ಕೆ.ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೆ, ವಿಶ್ವವಿದ್ಯಾನಿಲಯಗಳಲ್ಲಿ ಹುದ್ದೆಗಳ ನೇಮಕಾತಿ ವಿಚಾರದಲ್ಲಿ ಆದಷ್ಟು ಬೇಗ ಕ್ರಮ ಆಗಬೇಕು. ವಿಶ್ವವಿದ್ಯಾನಿಲಯವೆಂದರೆ ಅದಕ್ಕೊಂದು value ಇರಬೇಕು. 200 ಜನರ ನೇಮಕಾತಿಯನ್ನು ಮಾಡಿ ಎಂದು ಪ್ರಸ್ತಾವನೆಯನ್ನು ಕಳುಹಿಸಿ ಸುಮಾರು ಎರಡು ವರ್ಷಗಳಾಗಿವೆ. ಆದರೆ ಇವತ್ತಿನವರೆವಿಗೂ call-for ಮಾಡಿ ನೇಮಕಾತಿ ಆಗಿಲ್ಲ. ಏನಾಗಿದೆ ಎಂಬುದು ನಮಗೆ ಅರ್ಥವಾಗಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊನೆಯದಾಗಿ ಅಲ್ಪಸಂಖ್ಯಾತರ ವಿಚಾರವಾಗಿ ಹೇಳುವುದಾದರೆ, ಅಲ್ಪಸಂಖ್ಯಾತರ ಕಾಲೋನಿಯ ಅಭಿವೃದ್ಧಿ ಬಗ್ಗೆ ಹೇಳಿದ್ದಾರೆ. ಅಲ್ಪಸಂಖ್ಯಾತರ ಕಾಲೋನಿ ಎಂದರೆ ಅದು ಒಂದು ನಮೂನೆ slums ಇದ್ದ ಹಾಗೆ. ಅವು ಹೆಚ್ಚು ಅಭಿವೃದ್ಧಿಯನ್ನು ಹೊಂದಿಲ್ಲ. ಮಾನ್ಯ ಸಿದ್ದರಾಮಯ್ಯನವರ ಸರ್ಕಾರದಲ್ಲಿ ಸುಮಾರು 800 ಕೋಟಿ ರೂ.ಗಳನ್ನು ಕೊಟ್ಟಿದ್ದರು. ಬರುವ ಬಜೆಟ್‌ನಲ್ಲಿ ಈ ಹಣವನ್ನು ಹೆಚ್ಚು ಮಾಡಬೇಕೇ ವಿನಃ ಕಡಿಮೆ ಮಾಡಬಾರದು. ಅಲ್ಲಿ ಚರಂಡಿ, ರಸ್ತೆ ಎಲ್ಲವೂ ಬಹಳ ಕೆಟ್ಟ ಪರಿಸ್ಥಿತಿಯಲ್ಲಿವೆ. ಅವುಗಳನ್ನು ಯಾವ ಕಾಲದಲ್ಲಿ ಮಾಡಿದ್ದಾರೋ ಗೊತ್ತಿಲ್ಲ. ಅಲ್ಪಸಂಖ್ಯಾತರ ಕಾಲೋನಿಯ ಅಭಿವೃದ್ಧಿಪಡಿಸಲು ಒಳ್ಳೆಯ ವಾತಾವರಣವನ್ನು ಮಾಜಿ ಮುಖ್ಯಮಂತ್ರಿಗಳು ಮಾಡಿಕೊಟ್ಟಿದ್ದಾರೆ. ಕಳೆದ ಸರ್ಕಾರದಲ್ಲಿ ಕೊಟ್ಟಿರುವ ಕಾರ್ಯಕ್ರಮಗಳ್ಯಾವುದನ್ನು ತೆಗೆಯುವುದಕ್ಕೆ ಆಗುವುದಿಲ್ಲ. 'ಅನ್ನಭಾಗ್ಯ', 'ಕ್ಷೀರಭಾಗ್ಯ', 'ಇಂದಿರಾ ಕ್ಯಾಂಟೀನ್' ನಂತಹ ಕಾರ್ಯಕ್ರಮಗಳನ್ನು ತೆಗೆದರೆ ಜನ ಚಳುವಳಿ ಮಾಡುತ್ತಾರೆ. ನಾವೇನೂ ಇದರೆ ಬಗ್ಗೆ ಹೇಳುವ ಅವಶ್ಯಕತೆ ಇಲ್ಲ. ಇದನ್ನು ಬೆಳೆಸಿದರೆ ಜನರಿಗೆ ಉಪಕಾರವಾಗುತ್ತದೆ ವಿನಃ ಅದರಿಂದ ಏನೂ ಆಗುವುದಿಲ್ಲ. ನಾವು ಅವರು ಕೂಡಿ ನಮ್ಮ ಸರ್ಕಾರದಲ್ಲಿ ಏನು ಕಾರ್ಯಕ್ರಮಗಳನ್ನು ಮಾಡಿದ್ದೇವೆ, ಅದನ್ನು ಮುಂದುವರೆಸಬೇಕು. ಈ ಸರ್ಕಾರ ಈ ಕಾರ್ಯಕ್ರಮಗಳ ಬಗ್ಗೆ ಹೆಚ್ಚು ಗಮನ ಹರಿಸುತ್ತದೆಂದು ನಂಬಿ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ್, ಜೈ ಕರ್ನಾಟಕ ಮಾತೆ.

**ಸಭಾಪತಿಯವರು**:- ಮಾನ್ಯ ವೈ.ಎ.ನಾರಾಯಣಸ್ವಾಮಿಯವರೆ, ನಿಮಗೆ ನಿರ್ದಿಷ್ಟವಾಗಿ 20 ನಿಮಿಷಗಳು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ.

**ಶ್ರೀ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೆ, ಎರಡು ವರ್ಷಗಳ ನಂತರ ಈ ಸದನಕ್ಕೆ ಬಂದ ನಂತರ ತಾವು ಮೊಟ್ಟಮೊದಲ ಬಾರಿಗೆ ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಮೂರನೇ ಬಾರಿಗೆ ಈ ಸದನವನ್ನು ಪ್ರವೇಶಿಸಿದ್ದು ತಾವು ಸಭಾ ಪೀಠದಲ್ಲಿ ಕುಳಿತು ಬಹಳ ಚೆನ್ನಾಗಿ ನಿಭಾಯಿಸುತ್ತಿದ್ದೀರಿ ಮತ್ತು ನಿಗ್ರಹಿಸುತ್ತಿದ್ದೀರಿ. ತಮಗೆ ಆ ದೇವರು ಇನ್ನು ಹೆಚ್ಚಿನ ಶಕ್ತಿಯನ್ನು ಕೊಡಲಿ, ನೀವು ಅದೇ ಸ್ಥಾನದಲ್ಲಿ ಮುಂದುವರೆಯಿರಿ ಎಂದು ಆಶಿಸುತ್ತೇನೆ. ಈ ಸದನದಲ್ಲಿ ಮೊಟ್ಟಮೊದಲ ಬಾರಿಗೆ ನಮ್ಮ ಸಹೋದರಿ ಶ್ರೀಮತಿ ಜೈಮಾಲಾರವರು ಆಯ್ಕೆಯಾಗಿದ್ದಾರೆ. ಅವರಿಗೂ ಸಹ ಅಭಿನಂದಿಸುತ್ತೇನೆ. ಮೊಟ್ಟಮೊದಲ ಬಾರಿಗೆ ಎಂಎಲ್‌ಎ ಆಗಿ ಸಮ್ಮಿಶ್ರ ಸರ್ಕಾರದಲ್ಲಿ ಮಂತ್ರಿಯಾಗಿರುವ ನಮ್ಮ ಶಿಕ್ಷಣ ಸಚಿವರನ್ನು ಸಹ ವಿಶೇಷವಾಗಿ ಅಭಿನಂದಿಸುತ್ತೇನೆ. ಅದೇ ರೀತಿ ಸಚಿವರಾದ ಶ್ರೀ ಎಸ್.ಆರ್.ಶ್ರೀನಿವಾಸ್‌ರವರಿಗೂ ಹಾಗೂ ಆರ್.ಶಂಕರ್‌ರವರಿಗೂ ಅಭಿನಂದಿಸುತ್ತೇನೆ. ನನಗೆ ಬಹಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖುಷಿಯಾಗುತ್ತಿದೆ. ನಾನು ಕೆಳಮನೆಯ ಸದಸ್ಯನಾಗಿದ್ದಾಗ ಸನ್ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ 5 ತಿಂಗಳ ಹಿಂದೆ ರಾಜ್ಯಪಾಲರ ಮುಖಾಂತರ ಹತ್ತು-ಹಲವಾರು ಸಂಗತಿಗಳನ್ನು ಈ ಒಂದು ಪುಸ್ತಕದ ಮುಖಾಂತರ ದಯಪಾಲಿಸಿದ್ದರು. 5 ತಿಂಗಳು ಆದ ನಂತರ ಸಮ್ಮಿಶ್ರ ಸರ್ಕಾರದ ನೇತೃತ್ವ ವಹಿಸಿರುವಂಥ ಮಾನ್ಯ ಕುಮಾರಸ್ವಾಮಿಯವರ ಸರ್ಕಾರದ ಮುಖಾಂತರ ಈ ಒಂದು ರಾಜ್ಯಪಾಲರ ಭಾಷಣವನ್ನು ದಯಪಾಲಿಸಿದ್ದಾರೆ. ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕೆ ವಂದನಾ ನಿರ್ಣಯವನ್ನು ಅಂಗೀಕಾರ ಮಾಡಿ ಕಳುಹಿಸಿಕೊಡುವುದು ನಮ್ಮ ಕರ್ತವ್ಯವಾಗಿದೆ ಹಾಗೂ ಸಂಪ್ರದಾಯವೂ ಆಗಿದೆ. ಆದರೆ ನನಗೆ ಇಲ್ಲಿ ಒಂದು ವಿಚಾರ ಅರ್ಥವಾಗುತ್ತಿಲ್ಲ. ಮೇ 12ನೇ ತಾರೀಖಿನಂದು ಚುನಾವಣೆಯಾಗಿ 15ನೇ ತಾರೀಖಿನಂದು ಮತ ಎಣಿಕೆ ಆದ ನಂತರ ಭಾಜಪ ಪಕ್ಷಕ್ಕೆ 104 ಸ್ಥಾನ, ಕಾಂಗ್ರೆಸ್‌ಗೆ 80 ಹಾಗೂ ಜೆಡಿ(ಎಸ್)ಗೆ 37 ಸ್ಥಾನ ದೊರಕಿತು. ಸಂವಿಧಾನದ ಅಡಿಯಲ್ಲಿ ಅವಕಾಶವಿರುವುದರಿಂದ ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷ ಸೇರಿ ಸರ್ಕಾರವನ್ನು ರಚನೆ ಮಾಡಿದೆ. ಆದರೆ ಜನರ ಆಶಯಕ್ಕೆ ವಿರುದ್ಧವಾಗಿ ಸರ್ಕಾರವನ್ನು ರಚನೆ ಮಾಡಿದ್ದಾರೆ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ನಮಗೆ ಬಂದಿರುವುದು 38 ಪರ್ಸೆಂಟ್ ಮತ, ಅವರಿಗೆ ಬಂದಿರುವುದು 36 ಪರ್ಸೆಂಟ್ ಮತ.

**Sri Bojegowda:-** Mr. Chairman Sir, they have failed to prove the majority on the Floor of the House.

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಕಳೆದ ಅವಧಿಯಲ್ಲಿ ಕಾಂಗ್ರೆಸ್ ಗೆ 136 ಸೀಟ್ ಬಂದಿತ್ತು.

**ಸಭಾಪತಿಯವರು:-** ಸದಸ್ಯರು ತಮ್ಮಲ್ಲಿಯೇ ಮಾತನಾಡಿಕೊಂಡರೆ ಅದು ಯಾವುದೂ ಸಹ ರೆಕಾರ್ಡ್‌ಗೆ ಹೋಗಬಾರದು.

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಜನರು ಇವರನ್ನು ತಿರಸ್ಕಾರ ಮಾಡಿದ್ದಾರೆ.

**ಸಭಾಪತಿಯವರು:-** ದಯಮಾಡಿ ಸಚಿವರು ಕುಳಿತುಕೊಳ್ಳಿ. ಮಾನ್ಯ ನಾರಾಯಣಸ್ವಾಮಿಯವರೆ, ನೀವು ಪೀಠದ ಕಡೆ ನೋಡಿಕೊಂಡು ಮಾತನಾಡಿ. ಪದೇ ಪದೇ ನನ್ನ ಅನುಮತಿ ಇಲ್ಲದೇ ಮಾತನಾಡಬಾರದು. ಇದೇನು ಕೋರ್ಟ್ ಅಲ್ಲ. ಒಬ್ಬರು ಮಾತನಾಡಬೇಕಾದರೆ ಅವರಿಗೆ disturb ಮಾಡಬಾರದು. ಎಷ್ಟು ಸಾರಿ ಹೇಳುವುದು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ನಾನೇಕೆ ಈ ಮಾತನ್ನು ಹೇಳುತ್ತೇನೆಂದರೆ, ಕಳೆದ ಅವಧಿಯಲ್ಲಿ 14ನೇ ವಿಧಾನ ಸಭೆಯಲ್ಲಿ ಕಾಂಗ್ರೆಸ್‌ಗೆ 136 ಸೀಟ್ ಇತ್ತು, ಇವತ್ತು 80ಕ್ಕೆ ಬಂದಿದೆ, ಜೆಡಿ(ಎಸ್) ಗೆ 40 ಸೀಟ್ ಇತ್ತು, 37ಕ್ಕೆ ಬಂದಿದೆ. ಅದೇ ರೀತಿ ಬಿಜೆಪಿಗೆ 44 ಸೀಟ್ ಇದ್ದುದು 104 ಸೀಟ್‌ಗೆ ಬಂದಿದೆ. ಅಂದರೆ ಜನರ ಭಾವನೆ ಬಿಜೆಪಿಗೆ ಅಧಿಕಾರ ಕೊಡಬೇಕೆಂದು ಇತ್ತು.

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಇಂಡಿಯನ್ ಗೌರ್ನಮೆಂಟ್‌ನಲ್ಲಿ ಇವರದ್ದು 130 ಇದ್ದುದು 40ಕ್ಕೆ ಬಂದರು. ಅದನ್ನು ಸಹ ಮಾನ್ಯ ನಾರಾಯಣಸ್ವಾಮಿಯವರು ನೆನಪು ಮಾಡಿಕೊಳ್ಳಲಿ.

**ಶ್ರೀ ಆರ್.ಶಂಕರ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):-** ಮಾನ್ಯ ಸಭಾಪತಿಯವರೆ, ಪದೇ ಪದೇ 104 ಸೀಟ್ ಬಂತು, 103 ಸೀಟ್ ಬಂತು ಅಥವಾ 126 ಸೀಟ್ ಬಂತು ಎನ್ನುವ ಬಗ್ಗೆ ಚರ್ಚೆ ಬೇಡ. ಕೇವಲ ಅದೇ ವಿಚಾರವನ್ನು ಮಾತನಾಡುತ್ತಾರೆ. ಕಾಂಗ್ರೆಸ್‌ನಲ್ಲಿಯೂ ಸಹ ಹಿಂದೆ-ಮುಂದೆ ಆಗಿದೆ. ಬಿಜೆಪಿ ಯು ಸಹ ಸೀಟ್‌ಗಳನ್ನು ಗೆದ್ದಿದೆ. ಇವರು 20 ನಿಮಿಷಗಳ ಕಾಲ ಮಾತನಾಡುತ್ತೇನೆಂದು ಸಮಯವನ್ನು ಕೇಳುತ್ತಾರೆ. ಆದರೆ ಹೆಚ್ಚಿನ ಸಮಯ ಮಾತನಾಡಲು ಬೇಕೆನ್ನುತ್ತಾರೆ. ಇದೇ ವಿಚಾರದ ಬಗ್ಗೆ ಚರ್ಚೆ ಮಾಡಿ ಕಾಲ ಕಳೆದರೆ ಹೇಗೆ?

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಏಕೆ tension ಆಗುತ್ತಿದ್ದಾರೆ. ಅವರು ಹೊಸದಾಗಿ ಮಂತ್ರಿಯಾಗಿದ್ದಾರೆ, ಆರಾಮವಾಗಿ ಕುಳಿತುಕೊಳ್ಳಲಿ. ಅವರಿಗೆ ಇನ್ನು ಮಾತನಾಡಲು ಬಹಳ ಸಮಯವಿದೆ. ನಾವೆಲ್ಲರೂ seniors, ನಮಗೆ ಗೊತ್ತಿದೆ, ಅವರು ಕುಳಿತುಕೊಳ್ಳಲಿ.

**ಶ್ರೀ ಅರುಣ್ ಶಹಾಪೂರ:-** ಮಾನ್ಯ ಸಭಾಪತಿಯವರೆ,...

**ಸಭಾಪತಿಯವರು:-** ಮಾನ್ಯ ಅರುಣ್ ಶಹಪೂರ್‌ರವರೆ, ಒಂದು ಮಾತನ್ನು ಹೇಳುತ್ತೇನೆ. ಇನ್ನೂ 10 ಜನರು ಮಾತನಾಡುವವರು ಇದ್ದಾರೆ. ನಾನು ಮಾನ್ಯ ವೈ.ಎ.ನಾರಾಯಣಸ್ವಾಮಿಯವರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೇನೆ, ಅವರು ಮಾತನಾಡಲಿ, ನೀವು ನಡುವೆ interfere ಆಗಬೇಡಿ, ಕುಳಿತುಕೊಳ್ಳಿ.

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ನಾನು ಪಾಯಿಂಟ್‌ಗೆ ಬರುತ್ತೇನೆ. ಜನರ ಆಶಯ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಬೇಕೆಂದು ಇತ್ತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

(061)04.07.2018/1.20/ಎಂ.ಎಂ-ಎಂ.ಡಿ

**ಸಭಾಪತಿಯವರು:-** ಈಗ ಬಂದಿಲ್ಲವಲ್ಲ ಮಾತನಾಡಿ.

**ಶ್ರೀ ವೈ.ಎ. ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೇ, ಸಂವಿಧಾನದ ಅಡಿಯಲ್ಲಿ number game ಬಹಳ ಮುಖ್ಯವಾಗಿರುವುದರಿಂದ ಇವರಿಬ್ಬರೂ ಸೇರಿ ಸರ್ಕಾರವನ್ನು ರಚನೆ ಮಾಡಿರುವುದಕ್ಕೆ ನಮ್ಮ ಅಭ್ಯಂತರ ಇಲ್ಲ. ಆದರೆ ಸರ್ಕಾರ ರಚನೆ ಮಾಡುವುದಕ್ಕೆ ನೀವೆಲ್ಲರೂ ಹೋಗಿದ್ದಾಗ ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿ ಪದಗ್ರಹಣ ಮಾಡಿದ್ದು 23-5-2018ಕ್ಕೆ. ಅವರಿಗೆ 15 ದಿನಗಳಾದರೂ ಸಂಪುಟ ವಿಸ್ತರಣೆ ಮಾಡುವುದಕ್ಕಾಗಲಿಲ್ಲ. ದಿನಾಂಕ 26-5-2018ಕ್ಕೆ ವಿಶ್ವಾಸ ಮತವನ್ನು ಗಳಿಸಿದರು. 06ನೇ ತಾರೀಖಿನವರೆಗೆ ಸಚಿವ ಸಂಪುಟವನ್ನು ರಚಿಸಲು ಆಗಲಿಲ್ಲ. ಈ ನಡುವೆ ಮಾನ್ಯ ಮುಖ್ಯಮಂತ್ರಿಯವರಾದ ಹೆಚ್.ಡಿ. ಕುಮಾರಸ್ವಾಮಿಯವರು ಏನು ಹೇಳುತ್ತಾರೆಂದರೆ, ನನಗೆ ಜವಾಬ್ದಾರಿ ಕೊಟ್ಟಿದ್ದು ಕಾಂಗ್ರೆಸ್ ಪಕ್ಷವೇ ಹೊರತು ಜನರಲ್ಲ ಎಂದು ಹೇಳುತ್ತಾರೆ. ಆ statement ಇಲ್ಲಿಯೇ ಇದೆ.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಆ ರೀತಿ ಇದು ರಾಜ್ಯಪಾಲರ ಭಾಷಣದಲ್ಲಿ ಇದೆಯೇ?

**ಶ್ರೀ ಟಿ.ಎ. ಶರವಣ:-** ಮಾನ್ಯ ಸದಸ್ಯರೇ ಇದರಲ್ಲಿ ರಾಜಕೀಯವನ್ನು ಬಳಸಬೇಡಿ.

**ಶ್ರೀ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಈ ಮಾತನ್ನೇಕೆ ಹೇಳುತ್ತಿದ್ದೇನೆಂದರೆ, ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು 'ನಾನು ಕನಿಷ್ಟ ಒಂದು ವರ್ಷ ಅಧಿಕಾರದಲ್ಲಿ ಇರಬಹುದು. ಇನ್ನೂ ಒಂದು ವರ್ಷ ನನ್ನನ್ನು touch ಮಾಡುವುದಕ್ಕಾಗುವುದಿಲ್ಲ' ಎಂದು ಹೇಳುತ್ತಾರೆ.

**ಶ್ರೀ ಆರ್. ಶಂಕರ್ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ):-** ಪೇಪರ್‌ನಲ್ಲಿ ಬಂದಿರುವುದನ್ನು ಏಕೆ ಹೇಳುತ್ತೀರಿ? ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ. ಪೇಪರ್‌ನಲ್ಲಿ ಬಂದಿರುವುದನ್ನು ಇಲ್ಲ quote ಮಾಡಬೇಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಪುಸ್ತಕದಲ್ಲಿ ಉಪ್ಪು, ಹುಳಿ, ಕಾರವೂ ಇಲ್ಲ. ಈ ಭಾಷಣದಲ್ಲಿ ಏನಿದೆ ಹೇಳಿ? ಇದು ಖಾಲಿ ಡಬ್ಬದಂತೆ ಅಲ್ಲಾಡುತ್ತಿದೆ. ಅವರಿಗೆ ಅವರ ಮೇಲೇ ವಿಶ್ವಾಸ ಇಲ್ಲ, ಅವರಿಗೆ ವಿಶ್ವಾಸ ಇದ್ದಿದ್ದರೆ ಇಂತಹ ಭಾಷಣವನ್ನು ಕೊಡುತ್ತಾ ಇರಲಿಲ್ಲ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ನಾರಾಯಣಸ್ವಾಮಿಯವರೇ, ಅದು ಖಾಲಿ ಡಬ್ಬವೋ ಅಥವಾ ಪೂರ್ತಿ ಡಬ್ಬವೋ ಅದು ಬೇಡ.

(ಗೊಂದಲ)

**ಶ್ರೀ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರನ್ನು ಕುಳಿತುಕೊಳ್ಳಲು ಹೇಳಿ. ನನಗೆ ಮಾತನಾಡಲು ಅವಕಾಶ ಕೊಡಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ದಯಮಾಡಿ ನಮ್ಮನ್ನು ಕೂರಲು ಹೇಳುವುದನ್ನು ಬಿಡಿ, ಮಾನ್ಯ ಸದಸ್ಯರ ಮಾತುಗಳು ಇಡೀ ಸದನದ ದಾರಿಯನ್ನು ತಪ್ಪಿಸುತ್ತಿದೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನನ್ನ ಭಾವನೆ ಏನೆಂದರೆ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ . . .

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸದಸ್ಯರೇ, ನೀವು ಸದನದ ದಾರಿಯನ್ನು ತಪ್ಪಿಸಬೇಡಿ. ಇಲ್ಲಿ ಹಿರಿಯ ಶಾಸಕರಿದ್ದಾರೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ರಾಜ್ಯದ ದಿಕ್ಕು ದೆಸೆ, ದಿಕ್ಸೂಚಿ, ಮುಂದಿನ ಯೋಜನೆ, ಗುರಿ ಇದ್ದಿದ್ದರೆ ಅದರ ಬಗ್ಗೆ ಮಾತನಾಡಬಹುದಾಗಿತ್ತು. ಇದರಲ್ಲಿ ಏನೂ ಇಲ್ಲವಲ್ಲ? ಏಕೆ ಮಾನ್ಯ ಮುಖ್ಯಮಂತ್ರಿಯವರ ಕೈಯಲ್ಲಿ ಈ ಭಾಷಣ ಬರೆಸಿ ರಾಜ್ಯಪಾಲರ ಮುಖಾಂತರ ಸುಳ್ಳು ಹೇಳಿಸಬೇಕಾಗಿತ್ತು?

**ಶ್ರೀ ಟಿ.ಎ. ಶರವಣ:-** ಮಾನ್ಯ ಸದಸ್ಯರೇ, ನಿಮಗೆ ಇದನ್ನು ತಡೆದುಕೊಳ್ಳಲು ಆಗುತ್ತಿಲ್ಲ ಅದಕ್ಕೆ.

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೇ, ನಮ್ಮನ್ನು ಮಾತನಾಡುವುದಕ್ಕೆ ತಾವು ಹೇಳಿದ್ದೀರಿ, ದಯಮಾಡಿ ನಾವು ಮಾತನಾಡುವುದಕ್ಕೆ ವಾತಾವರಣ ನಿರ್ಮಾಣ ಮಾಡುವುದಕ್ಕೆ ಹೇಳಿ. ಸದಸ್ಯರು ಮಾತನಾಡುವಾಗ kindly listen to what he talks. ಮಾನ್ಯ ಸದಸ್ಯರುಗಳು ಮಾತನಾಡುವಾಗ ನಾವು ಹಾಗೆ ಕುಳಿತುಕೊಳ್ಳಬೇಕು. This is the procedure of the House. ದಯವಿಟ್ಟು ಮಾತನಾಡುವುದನ್ನು ಕೇಳಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಶಾಣಪ್ಪನವರೇ, ತಾವು ಹಿರಿಯ ಸದಸ್ಯರಾಗಿದ್ದೀರಿ. ಸ್ವಲ್ಪ ವಿಚಾರ ಮಾಡಿ.

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಅವರು ಮಾತನಾಡುವಾಗ objection ಮಾಡಿದರೆ ನಾವು ವಿರೋಧಪಕ್ಷದವರಾಗಿ ಸುಮ್ಮನೇ ಕುಳಿತುಕೊಳ್ಳಬೇಕೇ? ನೀವು ಅವರಿಗೆ ಹೇಳಿ.

**ಶ್ರೀ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಮಾತನಾಡಬೇಕೇ ಬೇಡವೇ ಹೇಳಿ. ನಾವು unparliamentary words ಮಾತನಾಡುತ್ತಿದ್ದೇವೆಯೇ, ಬೇರೆ ಮಾತನಾಡುತ್ತಿದ್ದೇವೆಯೇ ಹೇಳಿ?

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೇ, ತಮ್ಮ ಆದೇಶವನ್ನು ಬಿಟ್ಟು ನಾನು ಎಂದಿಗೂ ಅಲ್ಲಾಡಿಲ್ಲ. ನನ್ನ ಜೀವನದಲ್ಲಿ ಅದನ್ನು ಕಲಿತುಕೊಂಡಿದ್ದೇನೆ. ಆದರೆ ನಾವು ಮಾತನಾಡುವಾಗ ಇವರು ಇಷ್ಟು objection ಮಾಡಿದರೆ ನಾವು ಏನು ಮಾತನಾಡಬೇಕು?

**ಸಭಾಪತಿಯವರು:-** ಮಾನ್ಯ ಶಾಣಪ್ಪನವರೇ, ತಾವು ಹಿರಿಯ ಸದಸ್ಯರಾಗಿದ್ದೀರಿ, ಹೀಗೆ ಮಾಡುವುದು ಸರಿಯೇ ಎಂದು ಕೇಳುತ್ತಿದ್ದೇನೆ. ಮಂತ್ರಿಯಾದವರೂ ಕೂಡ ಕೇಳಬೇಕು. ಎಲ್ಲರೂ ಮಾತನಾಡಬೇಕು. ಕೇವಲ ಗಲಾಟೆ ಮಾಡಿದರೆ ಸದನವನ್ನು ಹೇಗೆ ನಡೆಸಬೇಕು?

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸ ಅವರು ಶ್ರೀ ಅಮಿತ್ ಶಾ, ಶ್ರೀ ನರೇಂದ್ರ ಮೋದಿಯವರ ಬಗ್ಗೆ ಮಾತನಾಡಿದರು.

**ಶ್ರೀ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗ ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಒಬ್ಬ ಮುಖ್ಯಮಂತ್ರಿಗೆ ನಂಬಿಕೆ ಎಂಬುದು ಬಹಳ ಮುಖ್ಯವಾಗಿದೆ. ಈ ರಾಜ್ಯದ ಜನರಿಗೆ ಒಂದು ಆಶಾದಾಯಕವಾದ ಗುರಿಯನ್ನು ಮತ್ತು ಆಸೆಯನ್ನು ಹುಟ್ಟಿಸಬೇಕಾದುದು ಸರ್ಕಾರದ ಧರ್ಮ. ಅದು ನಿಮಗೆ ಆಗುತ್ತಿಲ್ಲ ಎಂಬುದು ನನಗೆ ಆತಂಕವಾಗಿದೆ. ನಾನು ನಿಮ್ಮ ಮೇಲೆ ಅಸೂಯೆಯಿಂದ ಮಾತನಾಡುತ್ತಿಲ್ಲ. ಸರ್ಕಾರ ನಡೆಸುವವರು ನೀವು ಖುಷಿಯಾಗಿರಿ. ವಿರೋಧಪಕ್ಷದವರ ಆತಂಕವೇನೆಂದರೆ, ಈ ರಾಜ್ಯದ ಜನರ ಗತಿ ಏನು? ಮಾನ್ಯ ಮುಖ್ಯಮಂತ್ರಿಯವರು ಅಧಿಕಾರವನ್ನು ಸ್ವೀಕಾರ ಮಾಡಿ cabinet meeting ಮಾಡುವುದಕ್ಕೆ ಒಂದು ತಿಂಗಳ ಕಾಲಾವಕಾಶವನ್ನು ತೆಗೆದುಕೊಂಡರೆ ಈ ರಾಜ್ಯದ ಗತಿ ಏನು? ನೀವು ದಯವಿಟ್ಟು ಹೇಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಎ. ಶರವಣ:-** ಮಾನ್ಯ ಸದಸ್ಯರೇ, ಈಗ ಕೇಂದ್ರಸರ್ಕಾರ ವಿದೇಶಕ್ಕೆ landing ಆಗಿದೆ. ಈಗಾಗಲೇ 4 ವರ್ಷಗಳಾಗಿವೆ.

(ಗೊಂದಲ)

**ಶ್ರೀ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಈ ಗಲಾಟೆಯನ್ನು ನಿಲ್ಲಿಸಬೇಕು.

**ಸಭಾಪತಿಯವರು:-** ಸದನವನ್ನು ಮಧ್ಯಾಹ್ನ 2.30 ಗಂಟೆಯವರೆಗೆ ಮುಂದೂಡುತ್ತೇನೆ.

**(62)04/07/2018/ಎಸ್‌ಪಿಆರ್/ಎ.ಕೆ./2:40**

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 01 ಗಂಟೆ 25 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 02 ಗಂಟೆ 44 ನಿಮಿಷಕ್ಕೆ ಸಮಾವೇಶಗೊಂಡು)**

"ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಈಗ ನಿಯಮ 330ಎ ರಡಿ ಚರ್ಚೆಯನ್ನು ತೆಗೆದುಕೊಳ್ಳೋಣ.

**6. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ಚರ್ಚೆ**

**ವಿಷಯ: ಪದವಿ ಪೂರ್ವ ಶಿಕ್ಷಣ ಇಲಾಖೆಯು 2018-2019 ನೇ ಸಾಲಿನ ಶೈಕ್ಷಣಿಕ ವೇಳಾ ಪಟ್ಟಿಯ ಸುತ್ತೋಲೆ ಹೊರಡಿಸಿ, ತರಗತಿಗಳನ್ನು ಪ್ರಾರಂಭಿಸಿರುವುದರಿಂದ ಉಂಟಾದ ತೊಂದರೆ ಬಗ್ಗೆ.**

**(ಸಚಿವರ ಹೇಳಿಕೆಯನ್ನು ಲಗತ್ತಿಸಿದೆ)**

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಪದವಿ ಪೂರ್ವ ಶಿಕ್ಷಣ ವಿದ್ಯಾರ್ಥಿಗಳಿಗೆ ಅತ್ಯಂತ ಮಹತ್ವವಾದ ಶಿಕ್ಷಣವಾಗಿದೆ. ತಾವೂ ಸಹ ಈ ಹಿಂದೆ ಶಿಕ್ಷಣ ಇಲಾಖೆಯ ಸಚಿವರಾಗಿ ಕೆಲಸವನ್ನು ನಿರ್ವಹಿಸಿದ್ದೀರಿ. ಬಹಳ ದೀರ್ಘ ಕಾಲದಿಂದ ಪದವಿ ಪೂರ್ವ ಶಿಕ್ಷಣದ ಶೈಕ್ಷಣಿಕ ವೇಳಾಪಟ್ಟಿ ಬದಲಾವಣೆ ಆಗಿಯೇ ಇಲ್ಲ. ಆದರೆ, 2018-19 ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಯಾವುದೇ ರೀತಿಯಾದ ಮುನ್ಸೂಚನೆ, ಸಮಾಲೋಚನೆ, ಚರ್ಚೆಗಳಿಲ್ಲದೇ ಅಧಿಕಾರಿಗಳು ಏಕಾಏಕಿ 2018-19 ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯನ್ನು ದಿನಾಂಕ 11/04/2018 ರಂದು ಒಂದು ಸುತ್ತೋಲೆಯನ್ನು ಹೊರಡಿಸುವುದರ ಮೂಲಕ, ಮೇ ಮಾಹೆಯ 2 ನೇ ತಾರೀಖಿನಿಂದ

ಪದವಿ ಪೂರ್ವ ಕಾಲೇಜುಗಳ ತರಗತಿಗಳನ್ನು ಪ್ರಾರಂಭಿಸಿರುವುದಾಗಿ ಹೇಳಿ ಇಲಾಖೆಯ ನಿರ್ದೇಶಕಿಯು ಒಂದು ಸುತ್ತೋಲೆಯನ್ನು ಹೊರಡಿಸುತ್ತಾರೆ. ಆ ಸಂದರ್ಭದಲ್ಲಿ ರಾಜ್ಯದಲ್ಲಿ ಸಾರ್ವತ್ರಿಕ ಚುನಾವಣೆ ಘೋಷಣೆಗೊಂಡು ನೀತಿ ಸಂಹಿತೆಯು ಜಾರಿಯಲ್ಲಿರುತ್ತದೆ. ಯಾವುದೇ ಒಂದು ಸರ್ಕಾರ ಸದರಿ ದಿನಾಂಕದಂದು ಅಸ್ತಿತ್ವದಲ್ಲಿ ಇರುವುದಿಲ್ಲ. ಅದು ಸುಮಾರು ಒಂದು ತಿಂಗಳ ಮುಂಚಿತವಾಗಿ ಪದವಿ ಪೂರ್ವ ಕಾಲೇಜಿನ ಬಹಳಷ್ಟು ಉಪನ್ಯಾಸಕರನ್ನು ಚುನಾವಣಾ ಕಾರ್ಯಗಳಿಗೆ ನಿಯೋಜಿಸಿದಂತಹ ಸಂದರ್ಭವಾಗಿತ್ತು. ಆ ಸಂದರ್ಭದಲ್ಲಿ ನಾವು ಶಿಕ್ಷಕ ಸಂಘಟನೆಯ ಪದಾಧಿಕಾರಿಗಳು, ಶಾಸಕರುಗಳು ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳಿಗೆ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ನಾಲ್ಕು ಬಾರಿ ಮನವಿ ಪತ್ರಗಳನ್ನು ನೀಡಿದ್ದೇವೆ ಹಾಗೂ ಖುದ್ದಾಗಿ ಅವರನ್ನು ಭೇಟಿ ಸಹ ಮಾಡಲಾಗಿದೆ. ಅಲ್ಲದೇ, ಈ ವಿಚಾರದಲ್ಲಿ ಅವರೊಂದಿಗೆ ಒಂದಲ್ಲ ಎರಡು ಸಭೆಗಳನ್ನು ಮಾಡಲಾಗಿದೆ. ಆದರೆ ಈ ವಿಚಾರದಲ್ಲಿ ಯಾವುದೇ ಒಂದು ತೀರ್ಮಾನಕ್ಕೂ ಕೂಡ ಬಾರದೇ, ಏಕಾಏಕಿಯಾಗಿ ಖಡಕ್ಕಾಗಿ ಸುತ್ತೋಲೆಯ ಮೂಲಕ ಮೇ ಮಾಹೆಯ 2ನೇ ತಾರೀಖಿನಿಂದ ಪದವಿ ಪೂರ್ವ ಶಿಕ್ಷಣ ತರಗತಿಗಳನ್ನು ಪ್ರಾರಂಭ ಮಾಡುವುದಾಗಿ ತಿಳಿಸಿದರು. ನಾವು ಶಾಸಕರುಗಳು ಎಷ್ಟೆಲ್ಲಾ ಮನವಿ ಪತ್ರಗಳನ್ನು ಕೊಟ್ಟು, ಹೀಗೆ ಮಾಡಿದ್ದಲ್ಲಿ ವಿದ್ಯಾರ್ಥಿಗಳಿಗೆ, ಶಿಕ್ಷಕರುಗಳಿಗೆ ಆಗುವಂತಹ ತೊಂದರೆಗಳ ಬಗ್ಗೆ ಮನವರಿಕೆ ಮಾಡಿಕೊಟ್ಟರೂ ಸಹ ಯಾವುದೇ ರೀತಿಯ ಪ್ರಯೋಜನವಾಗಲಿಲ್ಲ. ಈ ಸುತ್ತೋಲೆಯನ್ವಯ ಮೇ ಮಾಹೆಯ 2ನೇ ತಾರೀಖಿನಿಂದ ಪದವಿ ಪೂರ್ವ ತರಗತಿಗಳನ್ನು ಪ್ರಾರಂಭ ಮಾಡಿರುವುದರಿಂದ, ಅವತ್ತಿನ ದಿವಸ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯಾದ ಬಸ್ ಪಾಸ್‌ಗಳು ವಿತರಣೆಯಾಗಿರಲಿಲ್ಲ, ಹಾಸ್ಟೆಲ್‌ಗಳು ಕೂಡ ತೆರೆದಿರಲಿಲ್ಲ. ಹಾಸ್ಟೆಲ್‌ಗಳನ್ನೇ ಅವಲಂಬಿತರಾದ ವಿದ್ಯಾರ್ಥಿಗಳು, ಬಸ್ ಪಾಸ್‌ಗಳನ್ನು ಅವಲಂಬಿಸಿದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಕಾಲೇಜುಗಳಿಗೆ ಹಾಜರಾಗುವುದಕ್ಕೆ ಸಾಧ್ಯವಾಗಲಿಲ್ಲ. ಚುನಾವಣೆ ಕೆಲಸಗಳಿಗಾಗಿ ಸಂಪೂರ್ಣವಾಗಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳನ್ನು ನಿಯೋಜನೆ ಮಾಡಿದಂತಹ ಸಂದರ್ಭದಲ್ಲಿ ಒಂದು ವಾರಗಳ ಕಾಲ ಎಲ್ಲಾ ಉಪನ್ಯಾಸಕರುಗಳು ಚುನಾವಣಾ ಕರ್ತವ್ಯದಲ್ಲಿದ್ದರು. ಈ ಎಲ್ಲಾ ಸಂಗತಿಗಳು ಗೊತ್ತಿದ್ದರೂ ಕೂಡ ಈಗಾಗಲೇ ಹೊರಡಿಸಲಾಗಿದ್ದ ಶೈಕ್ಷಣಿಕ ವೇಳಾಪಟ್ಟಿಯನ್ನು ಬದಲಾವಣೆ ಮಾಡಲಿಲ್ಲ. ತಾವು ಯಾವುದೇ ರೀತಿಯ ಮುನ್ಸೂಚನೆ, ಚರ್ಚೆ ಹಾಗೂ ತಜ್ಞರ ಅಭಿಪ್ರಾಯಗಳಿಲ್ಲದೆ ಏಕಾಏಕಿಯಾಗಿ ಈ ರೀತಿ ಸುತ್ತೋಲೆ ಹೊರಡಿಸಿರುವುದು ಸರಿಯಲ್ಲ. ಇದರಿಂದಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಈ ಶೈಕ್ಷಣಿಕ ವೇಳಾಪಟ್ಟಿಯನ್ನು ಯಥಾಸ್ಥಿತಿಯಂತೆ ಜೂನ್ ಮಾಹೆಯ ಒಂದನೇ ತಾರೀಖಿನಿಂದ ಪ್ರಾರಂಭ ಮಾಡಬೇಕೆಂದು ನಾವು ಶಾಸಕರುಗಳೆಲ್ಲರೂ ಒತ್ತಾಯ ಮಾಡಿದ್ದೆವು. ಆದರೆ, ಯಾವುದೇ ರೀತಿಯ ಪ್ರಯೋಜನವಾಗಲಿಲ್ಲ. ಈ ವಿಚಾರದಲ್ಲಿ ಮಾನ್ಯ ಮುಖ್ಯ ಕಾರ್ಯದರ್ಶಿಗಳೂ ಸಹ ಆಸಕ್ತಿ, ಒಲವುಗಳನ್ನು ತೋರಲಿಲ್ಲ. ಈಗ

ನಾನು ಕೇಳುವುದೇನೆಂದರೆ, ಇಲಾಖೆಯ ನಿರ್ದೇಶಕಿಯು ಹೊರಡಿಸಿರುವ ಸುತ್ತೋಲೆಯ ಪ್ರಕಾರ ಈಗ ತರಗತಿಗಳು ಪ್ರಾರಂಭವಾಗಿ ಎರಡು ತಿಂಗಳುಗಳು ಕಳೆದಿವೆ. ಎರಡು ತಿಂಗಳಿನಲ್ಲಿ ಮೇ ಮಾಹೆಯ 2ನೇ ತಾರೀಖಿನಿಂದ ಇದುವರೆವಿಗೆ ಬಹಳಷ್ಟು ವಿದ್ಯಾರ್ಥಿಗಳು ಬಸ್ ಪಾಸ್ ಇಲ್ಲದೆ ಹಾಗೂ ಹಾಸ್ಟೆಲ್ ಸೌಲಭ್ಯವಿಲ್ಲದ ಕಾರಣಗಳಿಗಾಗಿ ತರಗತಿಗೆ ಹಾಜರಾಗುವುದಕ್ಕೆ ಸಾಧ್ಯವಾಗಿರುವುದಿಲ್ಲ. ಈಗ ಸದರಿ ವಿದ್ಯಾರ್ಥಿಗಳಿಗೆಲ್ಲಾ ಎಲ್ಲಿಯೋ ಒಂದು ಕಡೆ ಅಗತ್ಯವಿರುವ ಶೇಕಡಾ 75 ರಷ್ಟು ಹಾಜರಾತಿಯ ಕೊರತೆ ಮುಂದಿನ ದಿನಗಳಲ್ಲಿ ಬರುತ್ತದೆ.

(ಮುಂದು)

(063) 04-7-2018 02.50 ಬಿಎಸ್‌ಡಿ/ಆರ್‌ಎನ್

ಶ್ರೀ ಮರಿತಿಬ್ಬೇಗೌಡ (ಮುಂದು)

ಮೊದಲನೆಯ ವರ್ಷದ ಪಿಯುಸಿ ಯಲ್ಲಿ ಅನುತೀರ್ಣರಾದ ವಿದ್ಯಾರ್ಥಿಗಳಿಗೆ ಪೂರ್ವ ಪರೀಕ್ಷೆ ನಡೆದು ಫಲಿತಾಂಶವನ್ನು ಪ್ರಕಟಿಸಿ ಇನ್ನೂ ಕೂಡ ಅವರು ಸೇರ್ಪಡೆಯಾಗುವವರಿದ್ದಾರೆ. ಅವರಿಗೂ ಶೇಕಡ ಹಾಜರಾತಿಯ ಕೊರತೆ ಕಂಡು ಬರುತ್ತದೆ. ಎರಡು ತಿಂಗಳಿಂದ ಬರದೇ ಈಗ ಸೇರಲು ಬರುವವರಿಗೆ ಪಾಠ-ಪ್ರವಚನಗಳಿಲ್ಲದೇ ತೊಂದರೆಯಾಗಿದೆ. ಉಪನ್ಯಾಸಕರು 2ನೇ ತಾರೀಖಿನಿಂದ ತರಗತಿಗಳನ್ನು ತೆಗೆದುಕೊಂಡಿದ್ದು, ಆಗ ಬರದಿದ್ದ ವಿದ್ಯಾರ್ಥಿಗಳಿಗೆ ಅಭ್ಯಾಸಕ್ಕೆ ತೊಂದರೆಯುಂಟಾಗಿದೆ. ಇಂತಹ ಸಮಸ್ಯೆಯನ್ನು ಜನಪರವಾದ ಸರ್ಕಾರ ಅಸ್ತಿತ್ವದಲ್ಲಿ ಇಲ್ಲದೇ ಇರುವಾಗ ಮತ್ತು ಚುನಾವಣಾ ಕಾಲದಲ್ಲಿ ಸುತ್ತೋಲೆ ಹೊರಡಿಸಿ ಶೈಕ್ಷಣಿಕ ವೇಳಾ ಪಟ್ಟಿಯನ್ನು ಬದಲಾವಣೆ ಮಾಡಿ ವಿದ್ಯಾರ್ಥಿಗಳಲ್ಲಿ ದೊಡ್ಡ ಗೊಂದಲ ಉಂಟಾಗಿದೆ. ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಇಲಾಖೆಯು ಬಹಳ ದೀರ್ಘಕಾಲದಿಂದ ತಜ್ಞರ ಸಲಹೆಯ ಮೇರೆಗೆ ಮಧ್ಯಂತರ ರಜೆ ಮತ್ತು ಬೇಸಿಕೆ ರಜೆಯನ್ನು ನಿಗದಿಗೊಳಿಸಿದೆ. ಈ ರಜೆಗಳನ್ನು ಆಗಾಗ್ಗೆ ಕಡಿತಗೊಳಿಸಿಕೊಂಡು ಬಂದಿದ್ದಾರೆ. ಆದರೆ ಇಂತಹ ಶೈಕ್ಷಣಿಕ ಬದಲಾವಣೆಯನ್ನು ಯಾರನ್ನೂ ಕೇಳದೇ ಮಾಡಿದ ಯಾವುದೇ ಉದಾಹರಣೆಗಳು ಇಲ್ಲ. ನಾವು ಈ ಬದಲಾವಣೆ ಮಾಡಲು ವಿರೋಧ ಮಾಡುವುದಿಲ್ಲ. ವಿದ್ಯಾರ್ಥಿಗಳ ಗುಣಮಟ್ಟದ ಶಿಕ್ಷಣಕ್ಕಾಗಿ ಇಲಾಖೆ ಮಾಡುತ್ತಿದೆ ಎಂದು ಅರ್ಥಪೂರ್ಣವಾಗಿ ಹೇಳಿದರೆ ನಾವು ವಿರೋಧ ಮಾಡುವುದಿಲ್ಲ. ಮಾನ್ಯ ಸಭಾಪತಿಯವರಾದ ತಾವುಗಳು ಬಹಳ ದೀರ್ಘಕಾಲ ಶಿಕ್ಷಣ ಸಚಿವರಾಗಿ ಕೆಲಸ ಮಾಡಿದ್ದು, ಯಾವ ಕಾರಣದಿಂದ ಶಿಕ್ಷಣ ಇಲಾಖೆಯಲ್ಲಿ ಮಧ್ಯಂತರ ರಜೆಯನ್ನು ಕೊಟ್ಟುಕೊಂಡು ಬಂದಿದ್ದಾರೆ. ಈ ಸಾಲಿನಲ್ಲಿಯೂ ಜೂನ್ 1ನೇ ತಾರೀಖಿನಿಂದ ತರಗತಿಗಳು ಪ್ರಾರಂಭವಾಗುತ್ತವೆ ಎಂದು ಪೋಷಕರು ಒಂದು ತಿಂಗಳ ರಜಾ ದಿನಗಳಲ್ಲಿ ಖಾಸಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಆದರೆ ಇಲಾಖೆಯು ಮುನ್ಸೂಚನೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲದೇ ಪ್ರಾರಂಭ ಮಾಡಿದ ಪರಿಣಾಮವಾಗಿ ವಿದ್ಯಾರ್ಥಿಗಳ ಮತ್ತು ಪೋಷಕರ ಖಾಸಗಿ ಬದುಕಿಗೆ ಅಡ್ಡಿಯುಂಟಾಯಿತು. ಪ್ರತಿ ವರ್ಷ ಸಿಗುತ್ತಿದ್ದ ಬೇಸಿಗೆ ರಜಾ ಉಪನ್ಯಾಸಕರಿಗೆ ಈ ಸಾರಿ ಸಂಪೂರ್ಣವಾಗಿ ಸಿಗಲಿಲ್ಲ. ಅವರಿಗೆ 8 ದಿನಗಳ ರಜಾ ಸಹ ಸಿಗಲಿಲ್ಲ. ಉಪನ್ಯಾಸಕರು ಪರೀಕ್ಷೆ ಮೌಲ್ಯಮಾಪನ ಕೆಲಸ, ಚುನವಣಾ ಕಾರ್ಯಗಳನ್ನು ಮುಗಿಸಿ ಮೇ 2ನೇ ತಾರೀಖು ತರಗತಿಗಳಿಗೆ ಬಂದಿದ್ದಾರೆ. ಅವರಿಗೆ ನಾಲ್ಕು ದಿನಗಳ ರಜಾ ಸಹ ಈ ಸಾಲಿನಲ್ಲಿ ಸಿಗಲಿಲ್ಲ. ಇಂತಹ ಅವಾಂತರ ಇಲಾಖೆಯಲ್ಲಿ ನಡೆದಿರುವುದರಿಂದ ವಿದ್ಯಾರ್ಥಿಗಳಿಗೆ ಯಾವ ಪ್ರಯೋಜನವೂ ಸಿಗಲಿಲ್ಲ. ಮಾನ್ಯ ಸಭಾಪತಿಯವರೇ, ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಇಲಾಖಾ ನಿರ್ದೇಶಕರು ಖಾಸಗಿ ಶಿಕ್ಷಣ ಸಂಸ್ಥೆಗಳು ಒಂದು ತಿಂಗಳು ಮುಂಚೆ ತರಗತಿಗಳನ್ನು ಪ್ರಾರಂಭ ಮಾಡುವುದರಿಂದ ಸರ್ಕಾರಿ ಶಾಲೆಗಳನ್ನು ತೆರೆಯಬೇಕು ಎಂದು ಹೇಳಿದರು. ಇವತ್ತು ಗುಣಾತ್ಮಕ ಶಿಕ್ಷಣದಿಂದ ಒಳ್ಳೆಯ ಫಲಿತಾಂಶ ತರಲು ಒಂದು ತಿಂಗಳು ಮುಂಚೆ ತೆರೆಯಬೇಕೆಂದು ಹೇಳಿದರು. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದುಕೊಳ್ಳುವ ವಿದ್ಯಾರ್ಥಿಗಳ ಶೇಕಡಾವಾರು ಅಂಕಗಳು 80ಕ್ಕಿಂತ ಕಡಿಮೆ ಇರುವುದಿಲ್ಲ. ಅವರು ಬಸ್ ಪಾಸ್ ಅಥವಾ ಹಾಸ್ಟೆಲ್‌ಗಾಗಿ ಕಾಯುವ ವಿದ್ಯಾರ್ಥಿಗಳಲ್ಲ. ಆದರೆ ಸರ್ಕಾರಿ ಶಾಲೆಗಳಿಗೆ ಬರುವ ವಿದ್ಯಾರ್ಥಿಗಳು ಶೇ. 35ರಷ್ಟು ಅಂಕ ಗಳಿಸಿದರೂ ಪ್ರವೇಶ ಕೊಡಬೇಕು. 50%ಗಿಂತ ಹೆಚ್ಚು ಬಂದಿರುವ ಯಾವ ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಿಗೆ ಬರುವುದಿಲ್ಲ. ಆದರೆ ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳು ಮತ್ತು ಆರ್ಥಿಕ ಸಂಕಷ್ಟದಲ್ಲಿರುವ ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಿಗೆ ಬರುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಹೋಲಿಕೆ ಮಾಡಿ ಒಂದು ತಿಂಗಳ ಮುಂಚೆ ಖಾಸಗಿ ಶಿಕ್ಷಣ ಸಂಸ್ಥೆಗಳು ಶಾಲೆಗಳನ್ನು ಪ್ರಾರಂಭಿಸುವುದರಿಂದ ಒಳ್ಳೆಯ ಫಲಿತಾಂಶ ಕೊಡುತ್ತಾರೆ, ಸರ್ಕಾರಿ ಶಾಲೆಗಳಲ್ಲಿ ಫಲಿತಾಂಶ ಬರುತ್ತಿಲ್ಲ ಎಂಬ ಕಾರಣವೊಡ್ಡಿ ಜನಪ್ರಿಯವಾದ ವ್ಯವಸ್ಥೆಯನ್ನು ಏಕಾಏಕಿ ಅಧಿಕಾರಿಗಳು ಬದಲಾವಣೆ ಮಾಡಿದರು. ದಯಮಾಡಿ ಈ ರೀತಿ ಜಾರಿಗೆ ತರುವುದು ಅನಿವಾರ್ಯ ಅಥವಾ ಅಗತ್ಯ ಎನ್ನುವುದಾದರೆ ಮುಂದಿನ ವರ್ಷದಿಂದ ಜಾರಿಗೆ ತನ್ನಿ ಎಂದು ಹೇಳಿದ್ದೇವೆ. ಇದರ ಬಗ್ಗೆ ವ್ಯಾಪಕವಾದ ಚರ್ಚೆ ಆಗಲಿ. ಮಾನಸಿಕವಾಗಿ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು ಹಾಗೂ ಉಪನ್ಯಾಸಕರೆಲ್ಲರೂ ಸಿದ್ಧವಾಗಲಿ. ರಜಾರಹಿತ ಇಲಾಖೆ ಎಂದು ಘೋಷಣೆ ಮಾಡಿ, ವರ್ಷವಿಡಿ ಶಾಲಾ-ಕಾಲೇಜುಗಳು ನಡೆಯುವಂತೆ ಮಾಡಲಿ. ಇದರಿಂದ ವಿದ್ಯಾರ್ಥಿಗಳಿಗೆ ಉಪಯೋಗ ಆಗುತ್ತದೆ ಎನ್ನುವುದಾದರೆ ಮಾಡಲಿ. ಈ ರೀತಿಯೆಲ್ಲಾ ಹೇಳಿದ್ದರೂ ಕೇಳದೇ ಈ ರೀತಿ ತೀರ್ಮಾನ ಮಾಡಿದ್ದಾರೆ. ಇದರಿಂದ 2 ತಿಂಗಳಲ್ಲಿ ಗೈರು ಹಾಜರಾಗಿದ್ದ ವಿದ್ಯಾರ್ಥಿಗಳಿಗೆ ಶೇ.70 ರಷ್ಟು ಹಾಜರಾತಿ ಸಿಗುವುದಿಲ್ಲ. ಈಗ ಸೇರಲು ಬಂದಿರುವವರಿಗೂ ಹಾಜರಾತಿ ಸಿಗುವುದಿಲ್ಲ. ಒಂದು ವರ್ಷದಲ್ಲಿ ಪಠ್ಯ ಕ್ರಮ ಬೋಧನೆ ಮಾಡಲು ಎಷ್ಟು ತರಗತಿಗಳು ನಡೆಯಬೇಕು? ಎಷ್ಟು ದಿನಗಳು ಕಾಲೇಜು ನಡೆಯಬೇಕು? ಒಬ್ಬ ಉಪನ್ಯಾಸಕರು ಎಷ್ಟು ಗಂಟೆಗಳ ತರಗತಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳಬೇಕೆಂದು ನಿಗದಿಯಾಗಿದೆ. ಆದರೆ ಆ ಪ್ರಕಾರದಲ್ಲಿ ಯಾವುದಾದರೂ ಕಾಲೇಜಿನಲ್ಲಿ ಯಾವುದಾದರೂ ವಿಷಯದಲ್ಲಿ ನಡೆಯುತ್ತಿದೆಯೇ? ಯಾವೂದೂ ನಡೆಯುತ್ತಿಲ್ಲ. ವರ್ಷದಲ್ಲಿ ನಡೆಯುವ 5 ಚುನಾವಣೆಗಳಿಗೂ ನಮ್ಮ ಉಪನ್ಯಾಸಕರು ಬೇಕು. ಇತರ ಕಾರ್ಯಗಳಿಗೆ ಉಪನ್ಯಾಸಕರು ಬೇಕು. ಇದರ ಜೊತೆಗೆ 10ರಿಂದ 12 ಸಾರಿ ತರಬೇತಿ ಎಂದು ಮಾಡಿ ಅದಕ್ಕೆ ಹಾಜರಾಗಬೇಕು. ಇದೆಲ್ಲವನ್ನೂ ತೆಗೆದು ಹಾಕಿದಾಗ ಅವರೇ ನಿಗದಿಗೊಳಿಸಿದ ಪಠ್ಯ ಕ್ರಮಗಳನ್ನು ಬೋಧನೆ ಮಾಡಲು ನಿಗದಿ ಮಾಡಿದ್ದ ಸಮಯಕ್ಕಿಂತ ಎಷ್ಟು ದಿನಗಳು ಹೊರಗಡೆ ಇಟ್ಟಿದ್ದಾರೆ ಎಂಬುದು ಗೊತ್ತಿದೆಯೇ? ಅವರಿಗೆ ಅವಧಿ ನಿಗದಿ ಮಾಡಿದ್ದರೂ ಪೂರ್ಣ ಅವಧಿ ಉಪನ್ಯಾಸ ನೀಡಲು ಬಿಡಲಿಲ್ಲ. ಅನ್ಯ ಕಾರ್ಯಗಳಿಗೆ ನಿಯೋಜನೆ ಮಾಡುತ್ತಾರೆ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಮಾನ್ಯ ಸಭಾಪತಿಯವರೇ, ಇವತ್ತು ಪದವಿಪೂರ್ವ ಶಿಕ್ಷಣ ವ್ಯವಸ್ಥೆಯಲ್ಲಿ ಸುಮಾರು 3 ಸಾವಿರ ಹುದ್ದೆಗಳು ಖಾಲಿ ಇವೆ. ಇವತ್ತು ಅತಿಥಿ ಉಪನ್ಯಾಸಕರನ್ನು ತೆಗೆದುಕೊಂಡು ಶಿಕ್ಷಣ ನೀಡುವ ವ್ಯವಸ್ಥೆ ಬಂದಿದೆ. ಕಾಲೇಜುಗಳು ಪ್ರಾರಂಭವಾಗಿ 2 ತಿಂಗಳಾಗಿದ್ದರೂ ಅತಿಥಿ ಉಪನ್ಯಾಸಕರ ನೇಮಕಾತಿ ಬಗ್ಗೆ ಒಂದೇ ಒಂದು ಸುತ್ತೋಲೆ ಇಲಾಖೆಯಿಂದ ಹೊರಬಿದ್ದಿಲ್ಲ. ಒಂದು ಜಿಲ್ಲೆಗೆ ಅಗತ್ಯವಾಗಿರುವ ಅತಿಥಿ ಉಪನ್ಯಾಸಕರನ್ನು ಇಲಾಖೆಯು ಕೊಡುವುದಿಲ್ಲ. ಉದಾಹರಣೆಗೆ ಮಂಡ್ಯ ಜಿಲ್ಲೆಗೆ 50 ಉಪನ್ಯಾಸಕರ ಅವಶ್ಯಕತೆಯಿದ್ದಲ್ಲಿ 20 ಜನರಿಗೆ ಮಂಜೂರಾತಿ ಕೊಡುತ್ತಾರೆ. ಅದೂ ಸಹ ಅಕ್ಟೋಬರ್ ನಂತರ ತೆಗೆದುಕೊಳ್ಳಲು ಅನುಮತಿ ನೀಡುತ್ತಾರೆ. ಹೆಚ್ಚಿನ ಕೆಲಸದಿಂದ ಅಲ್ಲಿ ಸ್ವಲ್ಪ ದಿನ ಮತ್ತು ಇಲ್ಲಿ ಸ್ವಲ್ಪ ದಿನ ಕೆಲಸ ಮಾಡಲು ನಿಯೋಜನೆ ಮಾಡುತ್ತಾರೆ. ಇದು ತೀರಾ ಅವೈಜ್ಞಾನಿಕವಾಗಿದೆ. ಇದರಿಂದ ಏನಾಗಿದೆ ಎಂದರೆ ಜಿಲ್ಲಾ ಉಪ ನಿರ್ದೇಶಕರ ಕಛೇರಿಯಲ್ಲಿ ಒಬ್ಬರು ಅಥವಾ ಇಬ್ಬರು ಗುಮಾಸ್ತರಿದ್ದು, ಅವರು ಕಾಸು ತೆಗೆದುಕೊಂಡು ಬೇಕಾದಂತೆ ನಿಯೋಜನೆ ಮಾಡುತ್ತಾರೆ. ಈ ನಿಯೋಜನೆಗೆ ಅರ್ಥ ಇಲ್ಲ ಮತ್ತು ನಿಯಮವೂ ಇಲ್ಲ. ಹಣ ತೆಗೆದುಕೊಂಡು ಇಷ್ಟ ಬಂದ ಹಾಗೆ ನಿಯೋಜನೆ ಮಾಡುವುದು ನಡೆಯುತ್ತಿದೆ. ಇವತ್ತಿನವರೆಗೂ ನಿಯೋಜನೆ ಆಗಿರುವವರು ಬಿಡುಗಡೆಯಾಗಿಲ್ಲ. ಅಲ್ಲಿ ಮೂರು ದಿನ ಹಾಗೂ ಇಲ್ಲಿ ಮೂರು ದಿನ ಕೆಲಸ ಮಾಡಿ ಎಂದಾಗ ಎರಡೂ ಕಡೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ಅಧಿಕಾರಿಗಳ ಉದ್ಧಟತನದಿಂದ ಎಂತಹ ಅನಾಹುತ ಈ ಸಾಲಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಆಗಿದೆ ಎಂಬುದನ್ನು ಮಾನ್ಯ ಸಚಿವರು ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಸಚಿವರು ಪರಿಚಯ ಮಾಡಿಕೊಳ್ಳುವಾಗ ಮೊದಲ ಸಾರಿ ಆಯ್ಕೆಯಾಗಿರುವ ಎಂಎಲ್ಎ ಮತ್ತು ಮೊದಲ ಸಾರಿ ಮಂತ್ರಿಯಾಗಿರುವ ಬಗ್ಗೆ ಹೇಳಿದರು. ಮಾನ್ಯ ಸಭಾಪತಿಯವರಾದ ತಾವು ಈ ಇಲಾಖೆಯನ್ನು ನಿರ್ವಹಿಸಿದ್ದು, ಮುಖ್ಯಮಂತ್ರಿಗಳ ಹುದ್ದೆಯ ನಂತರ ಈ ರಾಜ್ಯದಲ್ಲಿ ಅತ್ಯಂತ ಪ್ರಮುಖ ಹಾಗೂ ಕಾರ್ಯಭಾರವನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಹೊಂದಿದೆ. ಈ ನಾಡಿನ ಮಕ್ಕಳ ಭವಿಷ್ಯವನ್ನು ನಿರ್ಧಾರ ಮಾಡುವ ಇಲಾಖೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

64/04.07.2018/3.00/ಹೆಚ್‌ವಿಃಆರ್‌ಎನ್

**ಶ್ರೀ ಮರಿತಿಬ್ಬೇಗೌಡ (ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಈ ನಾಡಿನ ಮಕ್ಕಳ ಭವಿಷ್ಯವನ್ನು ನಿರ್ಧಾರ ಮಾಡುವಂತಹ ಶಿಕ್ಷಣ ಇಲಾಖೆಯ ಅಧಿಕಾರಿಗಳು ಈ ರೀತಿ ಮಾಡಿರುವುದರಿಂದ ಶೈಕ್ಷಣಿಕ ವ್ಯವಸ್ಥೆಯಲ್ಲಿ ಬಹಳಷ್ಟು ಅನಾಹುತಗಳು ಆಗಿವೆ. ಇಂತಹ ಬಹಳ ಗಂಭೀರವಾಗಿರುವ ವಿಷಯದ ಬಗ್ಗೆ ಸದನದಲ್ಲಿ ಚರ್ಚೆ ನಡೆಯುತ್ತಿದೆ. ಆದರೆ, ಈ ಇಲಾಖೆಯ ಕಾರ್ಯದರ್ಶಿಗಳು ಮತ್ತು ನಿರ್ದೇಶಕರು ಈ ಸದನದಲ್ಲಿ ಉಪಸ್ಥಿತರಿಲ್ಲ. ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರು ಮತ್ತು ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ಇಬ್ಬರೂ ಮಹಿಳೆಯರೇ ಆಗಿದ್ದಾರೆ. ಇವರಿಬ್ಬರು (XXX) ಜಗಳವಾಡುವ ರೀತಿಯಲ್ಲಿ 'ನಾನು ಹೆಚ್ಚು, ನನ್ನ ಅಧಿಕಾರ ಹೆಚ್ಚು' ಎಂದು ಜಗಳವಾಡುತ್ತಿದ್ದಾರೆ. ಇವರಿಬ್ಬರ ಜಗಳದಲ್ಲಿ ವಿದ್ಯಾರ್ಥಿಗಳು ಬಲಿಪಶುಗಳಾಗುತ್ತಿದ್ದಾರೆ. ಇವರಿಬ್ಬರಿಂದ ಶಿಕ್ಷಣ ಇಲಾಖೆಯಲ್ಲಿ ಸುಧಾರಣೆ-ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ವಿದ್ಯಾರ್ಥಿಗಳಿಗೆ ಒಳಿತಾಗುವ ಕಾರ್ಯಕ್ರಮಗಳಿಗೆ ಶಿಕ್ಷಕರೆಲ್ಲರೂ ಸಹಕರಿಸುತ್ತಾರೆ. ಈ ಶೈಕ್ಷಣಿಕ ವರ್ಷದಲ್ಲಿ ಶೈಕ್ಷಣಿಕ ವೇಳಾಪಟ್ಟಿಯನ್ನು ಬದಲಾವಣೆ ಮಾಡಿರುವುದರಿಂದ ವಿದ್ಯಾರ್ಥಿಗಳಿಗೆ ಆಗಿರುವ ನಷ್ಟಕ್ಕೆ ಮತ್ತು ತೊಂದರೆಗೆ ಸರ್ಕಾರ ಯಾವ ಪರಿಹಾರವನ್ನು ನೀಡುತ್ತದೆ ಎನ್ನುವುದು ನನ್ನ ಮೊದಲನೆಯ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಶೇಕಡಾ 75ರಷ್ಟು ಹಾಜರಾತಿ ದೊರೆಯುವುದರಲ್ಲಿ ತೊಂದರೆಯಾಗಿರುವ ವಿದ್ಯಾರ್ಥಿಗಳಿಗೆ ಯಾವ ಬದಲಿ ವ್ಯವಸ್ಥೆಯನ್ನು ಮಾಡಲಾಗುತ್ತದೆ ಮತ್ತು ಉಪನ್ಯಾಸಕರಿಗೆ ಒಂದು ತಿಂಗಳ ರಜೆ ಕಡಿತವಾಗಿರುವುದರ ಬಗ್ಗೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಳ್ಳುತ್ತದೆ ಎನ್ನುವುದು ನನ್ನ ಎರಡನೆಯ ಪ್ರಶ್ನೆಯಾಗಿದೆ. ಯಾವತ್ತಿನಿಂದ ಈ ಬಾರಿಯ ಶೈಕ್ಷಣಿಕ ವರ್ಷವನ್ನು ಪ್ರಾರಂಭ ಮಾಡಲಾಗುತ್ತದೆ ಎನ್ನುವ ವಿಚಾರವನ್ನು ಮಾನ್ಯ ಶಿಕ್ಷಣ ಸಚಿವರು ಈ ಸದನದಲ್ಲಿ ಘೋಷಣೆ ಮಾಡಿದರೆ, ಉಪನ್ಯಾಸಕರು, ಪೋಷಕರು ಮತ್ತು ವಿದ್ಯಾರ್ಥಿಗಳು ಮಾನಸಿಕವಾಗಿ ತಯಾರಾಗುತ್ತಾರೆ. 'ರಜಾ ರಹಿತ ಇಲಾಖೆ' ಎಂದು ಘೋಷಣೆ ಮಾಡಿದರೆ ನಮ್ಮ

---

ಸಭಾಪತಿಯವರ ಅಪ್ಪಣೆ ಮೇರೆಗೆ (XXX) ಕಡತದಿಂದ ತೆಗೆದು ಹಾಕಲಾಗಿದೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಪನ್ಯಾಸಕರು ವಿದ್ಯಾರ್ಥಿಗಳಗೋಸ್ಕರ ಕೆಲಸ ಮಾಡುತ್ತಾರೆ. ಈಗಲೂ ಸಹ ಉಪನ್ಯಾಸಕರು ವಿದ್ಯಾರ್ಥಿಗಳಗೋಸ್ಕರ ಭಾನುವಾರ ರಜಾ ದಿನದಲ್ಲಿಯೂ ಮತ್ತು ಉಳಿದ ದಿನಗಳಲ್ಲಿ ಸಂಜೆ 5 ಗಂಟೆಯ ನಂತರವೂ ಕೆಲಸ ಮಾಡಿದ್ದಾರೆ. 'ರಜಾ ರಹಿತ ಇಲಾಖೆ' ಎಂದು ಘೋಷಣೆ ಮಾಡಿದರೆ ಉಪನ್ಯಾಸಕರು ವಿದ್ಯಾರ್ಥಿಗಳಗೋಸ್ಕರ ವರ್ಷವಿಡೀ ದುಡಿಯುತ್ತಾರೆ. ಬೇರೆ ಇಲಾಖೆಯ ನೌಕರರಿಗೆ ಕೊಡುವಂತಹ ರಜಾ ಸೌಲಭ್ಯಗಳನ್ನು ಇವರಿಗೂ ಕೊಡಬೇಕೆಂದು ಕೇಳಿಕೊಳ್ಳುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಸಭಾಪತಿಯವರುಃ–** (XXX) ಎನ್ನುವ ಪದವನ್ನು ಕಡತದಿಂದ ತೆಗೆದು ಹಾಕಲಾಗಿದೆ.

**ಶ್ರೀ ಎನ್.ಮಹೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, .......

**ಸಭಾಪತಿಯವರುಃ–** ಮಾನ್ಯ ಸಚಿವರೇ, ಉತ್ತರವನ್ನು ತಾವು ಓದುವುದು ಬೇಡ. ಈಗಾಗಲೇ ಎಲ್ಲರಿಗೂ ಉತ್ತರ ತಲುಪಿದೆ. ಅದನ್ನು read and recorded ಎಂದು ಪರಿಗಣಿಸಲಾಗುವುದು. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಸ್ಪಷ್ಟೀಕರಣವನ್ನು ಹೇಳಿ.

**ಶ್ರೀ ಮರಿತಿಬ್ಬೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಉತ್ತರವನ್ನು ಮಾನ್ಯ ಸಚಿವರು ಓದಿಬಿಡಲಿ.

**ಸಭಾಪತಿಯವರುಃ–** ಮಾನ್ಯ ಸಚಿವರೇ, ಉತ್ತರ ಓದುವುದು ಬೇಡ. ಅದು ರೆಕಾರ್ಡ್‌ಗೆ ಹೋಗಿದೆ. ಸ್ಪಷ್ಟೀಕರಣವನ್ನು ನೀಡಿದರೆ ಸಾಕು.

**ಶ್ರೀ ಎನ್.ಮಹೇಶ್ಃ–** ಸನ್ಮಾನ್ಯ ಸಭಾಪತಿಯವರೇ, ತಾವು ಉತ್ತರವನ್ನು ಓದಿ ಎಂದರೆ, ಓದುತ್ತೇನೆ. ಇಲ್ಲದಿದ್ದರೆ ಅವರು ಪ್ರಸ್ತಾಪಿಸಿರುವ ಆಕ್ಷೇಪಣೆಗಳಿಗೆ ಸ್ಪಷ್ಟೀಕರಣವನ್ನು ನೀಡುತ್ತೇನೆ.

---

ಸಭಾಪತಿಯವರ ಅಪ್ಪಣೆ ಮೇರೆಗೆ (XXX) ಕಡತದಿಂದ ತೆಗೆದು ಹಾಕಲಾಗಿದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸಚಿವರೇ, ಉತ್ತರ ರೆಕಾರ್ಡ್‌ಗೆ ಹೋಗಿದೆ. ಅದನ್ನು read and recorded ಎಂದು ತಿಳಿದುಕೊಳ್ಳುತ್ತಾರೆ. ತಾವು ಸ್ಪಷ್ಟೀಕರಣವನ್ನು ನೀಡಿದರೆ ಸಾಕು.

**ಶ್ರೀ ಎನ್.ಮಹೇಶ್:-** ಸನ್ಮಾನ್ಯ ಸಭಾಪತಿಯವರೇ, ಕಳೆದ ಸಾಲಿನಲ್ಲಿ ಮೇ 02ನೇ ತಾರೀಖಿನಿಂದ ಹೆಚ್ಚುಕಡಿಮೆ 15-20 ದಿನಗಳ ಕಾಲ advance ಆಗಿ ಕಾಲೇಜುಗಳನ್ನು ಪ್ರಾರಂಭ ಮಾಡಲಾಗಿದೆ. ಖಾಸಗಿ ಕಾಲೇಜುಗಳು ಬೇಗ ಪ್ರಾರಂಭವಾಗುತ್ತವೆ. ಆಗ ಸರ್ಕಾರಿ ಕಾಲೇಜುಗಳಿಗೆ ದಾಖಲಾಗುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಕೊರತೆಯುಂಟಾಗುತ್ತದೆ ಎನ್ನುವ ಕಾರಣದ ಹಿನ್ನೆಲೆಯಲ್ಲಿ ಈ ರೀತಿ ಮಾಡಲಾಗಿದೆ. ಆದರೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ಆಕ್ಷೇಪಣೆಗಳನ್ನು ಪರಿಗಣನೆ ಮಾಡಬೇಕೆನ್ನುವುದು ನನ್ನ ಅನಿಸಿಕೆಯಾಗಿದೆ. ಈ ರೀತಿ advance ಆಗಿ ಕಾಲೇಜುಗಳನ್ನು ಪ್ರಾರಂಭ ಮಾಡಿರುವುದರಿಂದ ಹಾಜರಾತಿ ಕೊರತೆಯುಂಟಾದರೆ ಅದಕ್ಕೆ ಜವಾಬ್ದಾರರು ಯಾರು ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಎಸ್.ಎಸ್.ಎಲ್.ಸಿ. ಪೂರಕ ಪರೀಕ್ಷೆಯ ಫಲಿತಾಂಶ ಬಂದಿದ್ದು, ಆ ವಿದ್ಯಾರ್ಥಿಗಳು ಕಾಲೇಜಿಗೆ ದಾಖಲಾಗಬೇಕಾಗಿದೆ. ಈ ವಿದ್ಯಾರ್ಥಿಗಳಿಗೆ ಕನಿಷ್ಠ ಶೇಕಡಾ 75ರಷ್ಟು ಹಾಜರಾತಿ ಸಿಗುತ್ತದೆಯೇ ಎನ್ನುವ ಕಳಕಳಿಯನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಒಂದು ತಿಂಗಳು advance ಆಗಿ ಉಪನ್ಯಾಸಕರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ ಅವರಿಗೆ ಏನು ಪರಿಹಾರ ನೀಡಲಾಗುತ್ತದೆಂದು ಕೇಳಿದ್ದಾರೆ. ಶಿಕ್ಷಣ ಇಲಾಖೆಯನ್ನು 'ರಜೆ ರಹಿತ' ಅಥವಾ 'ರಜೆ ಸಹಿತ' ಇಲಾಖೆಯೆಂದು ಘೋಷಣೆ ಮಾಡುವ ಬಗ್ಗೆ ಮಾನ್ಯ ಸದಸ್ಯರು ಸಲಹೆಯ ರೂಪದಲ್ಲಿ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದಾರೆ. ಚುನಾವಣೆಯ ಸಂದರ್ಭದಲ್ಲಿ ತಜ್ಞರನ್ನು ಮತ್ತು ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕ್ರಮಕೈಗೊಂಡಿಲ್ಲ ಎನ್ನುವ ಕೊರತೆ ನನಗೆ ಕಾಣಿಸುತ್ತಿದೆ. ಇನ್ನು ಮುಂದೆ ಈ ಇಲಾಖೆಯನ್ನು ರಜೆ ರಹಿತ ಅಥವಾ ರಜೆ ಸಹಿತವೆಂದು ಘೋಷಣೆ ಮಾಡಬೇಕೇ ಎನ್ನುವುದರ ಬಗ್ಗೆ ತಜ್ಞರ ಜೊತೆಗೆ ಮತ್ತು ಮಾನ್ಯ ಶಾಸಕರುಗಳ ಜೊತೆಗೆ ಮಾತನಾಡಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ವಿದ್ಯಾರ್ಥಿಗಳ ಹಾಜರಾತಿ ಶೇಕಡಾ 75ಕ್ಕಿಂತ ಕಡಿಮೆಯಾಗದಂತೆ ನಾವು ನೋಡಿಕೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಪದವಿಪೂರ್ವ ಕಾಲೇಜುಗಳಲ್ಲಿ ಸುಮಾರು 3 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಅಲ್ಲಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವ ಪ್ರಕ್ರಿಯೆ ನಡೆದಿಲ್ಲ ಎನ್ನುವ ಆತಂಕವನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಆ ಪ್ರಕ್ರಿಯೆ ನಡೆದಿದೆ. ಸಧ್ಯದಲ್ಲಿಯೇ ನಾವು ಆದೇಶವನ್ನು ಹೊರಡಿಸುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ಮರಿತಿಬ್ಬೇಗೌಡರು ಉಲ್ಲೇಖ ಮಾಡಿರುವ ಆಕ್ಷೇಪಣೆಗಳಲ್ಲಿ ಈಗಿನ ಶಿಕ್ಷಣ ಸಚಿವರ ಪಾತ್ರವಿಲ್ಲ ಎನ್ನುವುದನ್ನು ನಾವು ನಂಬಬೇಕಾಗುತ್ತದೆ. ನಾನು ನೇರವಾಗಿ ಕೆಲವೊಂದು ಸ್ಪಷ್ಟೀಕರಣವನ್ನು ಕೇಳುವುದಕ್ಕೆ ಬಯಸುತ್ತಿದ್ದೇನೆ. ನಮ್ಮಲ್ಲಿ 'ರಜೆ ರಹಿತ' ಮತ್ತು 'ರಜೆ ಸಹಿತ' ನೌಕರರು ಎನ್ನುವ ವರ್ಗವಿದೆ. 'ರಜೆ ರಹಿತ' ನೌಕರರನ್ನು ವರ್ಷದ 365 ದಿನಗಳು 24 ಗಂಟೆಗಳ ಕಾಲ ದುಡಿಸಿಕೊಳ್ಳಲಿ ಅಡ್ಡಿ ಇಲ್ಲ. ಶಿಕ್ಷಕರನ್ನು ರಜೆ ರಹಿತವಾಗಿ ದುಡಿಸಿಕೊಳ್ಳುತ್ತೇವೆಂದರೆ ಅದಕ್ಕೂ ನಮ್ಮ ಅಡ್ಡಿ ಇಲ್ಲ. ಈಗ mid-term vacation ಒಂದು ತಿಂಗಳು ಮತ್ತು ಬೇಸಿಗೆ ರಜೆ ಒಂದು ತಿಂಗಳತ್ತು. ಒಟ್ಟು 60 ದಿನಗಳ ರಜೆಯನ್ನು vacation post ಗಳಿಗೆ ಕೊಡಬೇಕು.

**ಸಭಾಪತಿಯವರು:–** ಮಾನ್ಯ ಶ್ರೀಕಂಠೇಗೌಡರೇ, ಶಿಕ್ಷಣ ಇಲಾಖೆಯನ್ನು 'ರಜೆ ರಹಿತ' ಅಥವಾ 'ರಜೆ ಸಹಿತ' ಇಲಾಖೆಯೆಂದು ಘೋಷಣೆ ಮಾಡುವ ಬಗ್ಗೆ ತಜ್ಞರ ಜೊತೆಗೆ ಮತ್ತು ತಮ್ಮಗಳ ಜೊತೆಗೆ ಚರ್ಚೆ ಮಾಡಿ ತೀರ್ಮಾನ ಮಾಡಲಾಗುತ್ತದೆಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಆ ವಿಚಾರವನ್ನು ಬಿಟ್ಟು ಬೇರೆ ವಿಷಯದ ಬಗ್ಗೆ ಮಾತನಾಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, non-vacation ಎಂದು treat ಮಾಡಿದ ಮೇಲೆ ಎಷ್ಟೇ early ಮಾಡಿದರೂ ನಮ್ಮ ಅಡ್ಡಿ ಇಲ್ಲ. ಮಕ್ಕಳು ರಜಾ ದಿನಗಳಲ್ಲಿ NEET ಮತ್ತು CET ಪರೀಕ್ಷೆಗಳಿಗೆ ಬೇರೆ ಕಡೆಗಳಲ್ಲಿ coaching ಗೆ ಹೋಗುತ್ತಾರೆ. ಅದಕ್ಕೆ ನಮ್ಮ ಕಾಲೇಜುಗಳಲ್ಲಿಯೇ ಏರ್ಪಾಡು ಮಾಡಬೇಕಾಗುತ್ತದೆ. ಈಗ ಕಾಲೇಜುಗಳನ್ನು ಮೇ ಎರಡನೆ ದಿನಾಂಕಕ್ಕೆ ಪ್ರಾರಂಭ ಮಾಡಿದರೆ, ಜುಲೈ 7ನೇ ತಾರೀಖಿನವರೆಗೂ ದಾಖಲಾತಿಗಳನ್ನು ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ನೀಡಲಾಗಿದೆ. ಹೀಗಾದರೆ ಉಪನ್ಯಾಸಕರು ಪಾಠ ಮಾಡುವುದು ಹೇಗೆ? ಜೂನ್ ತಿಂಗಳ 14ನೇ ತಾರೀಖಿಗೆ ಪ್ರಥಮ ಪಿ.ಯು.ಸಿ. ತರಗತಿಗಳನ್ನು ಪ್ರಾರಂಭ ಮಾಡಿ, ಇನ್ನೂ ಜುಲೈ 07ನೇ ತಾರೀಖಿನವರೆಗೆ ದಾಖಲಾತಿಗಳಿಗೆ ಅವಕಾಶವನ್ನು ನೀಡಿದರೆ ವಿದ್ಯಾರ್ಥಿಗಳ ಮೇಲೆ 2480 ರೂಪಾಯಿಗಳಷ್ಟು penalty ಬಿತ್ತು. ಈ ಮಕ್ಕಳಿಗೆ ಪಾಠ ಮಾಡುವುದು ಯಾವಾಗ? ಒಂದು ಹಂತದಲ್ಲಿ ಹೊಸ ಕಾಲೇಜುಗಳನ್ನು ತೆರೆಯಲು ಅನುಮತಿಯನ್ನು ನೀಡಲಾಗಿದೆ. ಅಲ್ಲಿ ದಾಖಲಾತಿಗಳು ಆಗುತ್ತವೆಯೋ ಇಲ್ಲವೋ ಎನ್ನುವ ಡೋಲಾಯಮಾನದ ಸ್ಥಿತಿ ಇದೆ. ಇಲ್ಲಿ ದಾಖಲಾಗುವ ಮಕ್ಕಳಿಗೆ ಪಾಠ ಮಾಡುವುದು ಯಾವಾಗ? ಪರೀಕ್ಷೆಗಳನ್ನು ಮತ್ತು ಮೌಲ್ಯಮಾಪನವನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದು ಯಾವಾಗ? ಈಗ ಪೂರಕ ಪರೀಕ್ಷೆಗಳು ನಡೆಯುತ್ತಿವೆ. ಮೌಲ್ಯಮಾಪನ ಆಗುವುದು ಯಾವಾಗ? ದ್ವಿತೀಯ ಪಿ.ಯು.ಸಿ. ಪರೀಕ್ಷೆಯಾಗಿ ಅದರ ಮೌಲ್ಯಮಾಪನವಾಯಿತು. ನಂತರ ಪ್ರಥಮ ಪಿ.ಯು.ಸಿ. ಪರೀಕ್ಷೆ, ಅದರ ಮೌಲ್ಯಮಾಪನ ಆಯಿತು. ಒಂದು ದಿನವೂ ಉಪನ್ಯಾಸಕರಿಗೆ ಬಿಡುವು ಕೊಟ್ಟಿಲ್ಲ. Non-vacation ಮಾಡಿದರೆ ನಮ್ಮ ಅಡ್ಡಿಯೇನೂ ಇಲ್ಲ. ಮಕ್ಕಳನ್ನು NEET & CET ಪರೀಕ್ಷೆಗೆ ಸಿದ್ಧಗೊಳಸಬೇಕು. ಪ್ರತಿ ಭಾನುವಾರ ಉಪನ್ಯಾಸಕರನ್ನು English coaching ಮತ್ತು PCMB ಪಾಠ ಮಾಡುವುದಕ್ಕೆ ಬಳಸಿಕೊಳ್ಳಲಾಗಿದೆ, ರಜಾ ದಿನದಲ್ಲಿ 15 ದಿನ ಅವರನ್ನು orientation trainingಗೆ ಬಳಸಿಕೊಳ್ಳಲಾಗಿದೆ. ಇಡೀ ವರ್ಷ ಇಲಾಖೆ ಉಪನ್ಯಾಸಕರನ್ನು ದುಡಿಸಿಕೊಂಡಿದೆ. ದುಡಿಯುವುದಕ್ಕೆ ಅವರು ತಯಾರಿದ್ದಾರೆ. ಆದರೆ, ಮಕ್ಕಳು ಅವರ ವ್ಯಕ್ತಿತ್ವವನ್ನು ಉಳಸಿಕೊಳ್ಳಬೇಕಾಗಿದೆ. ಅವರಿಗೂ ಕನಿಷ್ಠ 15 ದಿನಗಳ ರಜಾ ಬೇಕಾಗಿದೆ. ಸರ್ಕಾರ ಅವೈಜ್ಞಾನಿಕವಾದ ನಿರ್ಧಾರಗಳನ್ನು ಕೈಬಿಟ್ಟು, ವೈಜ್ಞಾನಿಕವಾಗಿ ಶಿಕ್ಷಣ ತಜ್ಞರು ಮತ್ತು ಸಂಬಂಧಪಟ್ಟ ಶಾಸಕರುಗಳ ಜೊತೆಗೆ ಸಮಾಲೋಚನೆ ಮಾಡಿ ಶೈಕ್ಷಣಿಕ ವರ್ಷ ಪ್ರಾರಂಭವಾಗುವುದಕ್ಕೂ ಮುಂಚೆ ಒಂದು ತೀರ್ಮಾನವನ್ನು ತೆಗೆದುಕೊಂಡು, ಆಮೇಲೆ ಜಾರಿಗೊಳಸಿದರೆ ಅದಕ್ಕೊಂದು ಬೆಲೆ ಬರುತ್ತದೆ. ಮಾನ್ಯ ಸಚಿವರು ಈ ಸಮಸ್ಯೆಗೆ ಪರಿಹಾರ ನೀಡಬೇಕೆಂದು ಕೇಳಕೊಳ್ಳುತ್ತಿದ್ದೇನೆ.

**ಶ್ರೀ ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಇರುವಂತಹ ಸುತ್ತೋಲೆಯನ್ನು ಕಾಯಿದೆ ಪ್ರಕಾರ ಉಪಯೋಗ ಮಾಡುತ್ತಿರುವುದು ಶಾಸನಬದ್ಧವಾಗಿ ಸರಿಯಾಗಿದೆಯೇ ಎನ್ನುವುದು ಮಾನ್ಯ ಸಚಿವರು ಹೇಳಬೇಕಾಗಿದೆ. ಕಾಯಿದೆ ಬೇರೆ, ಸುತ್ತೋಲೆ ಬೇರೆ. ಇಲಾಖಾ ಅಧಿಕಾರಿಗಳು ಎಲ್ಲದಕ್ಕೂ ಸುತ್ತೋಲೆಗಳನ್ನು ಹೊರಡಿಸಿ ಅನುಷ್ಠಾನಗೊಳಸುವಂತಹ ಪ್ರಯತ್ನವನ್ನು ಮಾಡುತ್ತಿರುವುದರಿಂದ ಮಾನ್ಯ ಮರಿತಿಬ್ಬೇಗೌಡರು ಗ್ರಾಮೀಣ ಭಾಷೆಯಲ್ಲಿ ಒಂದು ಮಾತನ್ನು ಹೇಳಿದರು.

(ಮುಂದುವರಿದಿದೆ)

(65) 4.7.2018 3.10 ಪಿಕೆ:ವಿಕೆ

**ಶ್ರೀ ಭೋಜೇಗೌಡ** :- ಮಾನ್ಯ ಸಭಾಪತಿಯವರೇ, ಶಿಕ್ಷಣ ಇಲಾಖೆಯ ವಿಷಯಗಳನ್ನು ತಾವು ಅರೆದು ಕುಡಿದಿದ್ದೀರಿ, ಈ ವಿಷಯದಲ್ಲಿ ತಾವು ಭೀಷ್ಮರಿದ್ದಂತೆ ಎಂದು ಹೇಳದರೆ ತಪ್ಪಾಗಲಾರದು. ನೀವಾದರೂ ದಯವಿಟ್ಟು ಸರ್ಕಾರಕ್ಕೆ ಸಲಹೆಯನ್ನು ಕೊಟ್ಟುಬಿಡಿ. ನಾವು ಸುಮ್ಮನೆ ಕುಳತುಕೊಳ್ಳುತ್ತೇವೆ. ಇಂತಹ ಒಂದು ಅವೈಜ್ಞಾನಿಕ ತೀರ್ಮಾನ ತೆಗೆದುಕೊಂಡಿರುವುದರ ಹಿನ್ನೆಲೆಯಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾವು ದಯವಿಟ್ಟು ಸರ್ಕಾರಕ್ಕೆ ಸಲಹೆ ಕೊಡಬೇಕು, ನಿರ್ದೇಶನ ಕೊಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಪದವಿಪೂರ್ವ ಶಿಕ್ಷಣ ಇಲಾಖೆಯ ವತಿಯಿಂದ ಇಂತಹ ಒಂದು ತೀರ್ಮಾನ ತೆಗೆದುಕೊಂಡಿರುವುದು ವಿದ್ಯಾರ್ಥಿಗಳ ಮೇಲೆ ದೊಡ್ಡ ಮಟ್ಟದಲ್ಲಿ ಪರಿಣಾಮ ಬೀರುತ್ತದೆ. ನಾನು ಕೂಡ one of the victim. ನನ್ನ ಮಕ್ಕಳು ಕೂಡ ಊರಿನಲ್ಲಿ ಇರಲಿಲ್ಲ. 1ನೇ ಪಿಯುಸಿ ಮುಗಿಸಿ ಸ್ಟಡಿಸ್‌ಗೆಂದು ಬೇರೆ ಬೇರೆ ಕಡೆ ಹೋಗಿದ್ದರು. ಈ ರೀತಿ ತೀರ್ಮಾನ ತೆಗೆದುಕೊಳ್ಳುವುದರಿಂದ ವಿದ್ಯಾರ್ಥಿಗಳ ಮೇಲೆ ಮತ್ತು ಪೋಷಕರ ಮೇಲೆ ತುಂಬಾ ಪರಿಣಾಮ ಬೀಳುತ್ತದೆ. ಅಲ್ಲದೇ, ಕಾಲೇಜಿನವರು ಕಾಲೇಜು ಪ್ರಾರಂಭ ಮಾಡಲು ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ. ಉಪನ್ಯಾಸಕರೂ ಕೂಡ ಇರುವುದಿಲ್ಲ. ಇಂತಹ ಒಂದು arbitrary decision ತೆಗೆದುಕೊಳ್ಳುವವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಮತ್ತು different system ಮಾಡಬೇಕು and calendar of events ಯಾವಾಗ ಪ್ರಾರಂಭವಾಗುತ್ತದೆ, ಯಾವಾಗ ಮುಕ್ತಾಯವಾಗುತ್ತದೆ ಎನ್ನುವುದನ್ನು ಸದನದಲ್ಲಿ ಘೋಷಣೆ ಮಾಡಬಹುದು ಅಥವಾ ನಿರ್ದಿಷ್ಟ ದಿನಾಂಕದಂದು ಘೋಷಣೆ ಮಾಡಿದರೂ ಸರಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾನ್ಯ ಸದಸ್ಯರುಗಳ ಸಲಹೆಗಳನ್ನು ಗಣನೆಗೆ ತೆಗೆದುಕೊಂಡು ನಮ್ಮೆಲ್ಲರ ಜೊತೆ ಮತ್ತು ತಜ್ಞರ ಜೊತೆಯಲ್ಲಿ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ನಾನು ಮತ್ತು ಸನ್ಮಾನ್ಯ ಮರಿತಿಬ್ಬೇಗೌಡರು ಒಂದು ಮನವಿಯನ್ನು ಕೊಟ್ಟಿದ್ದೆವು. ಹೈದರಾಬಾದ್-ಕರ್ನಾಟಕದ ಭಾಗದಲ್ಲಿ ಬೇಸಿಗೆ ಕಾಲದಲ್ಲಿ ಸುಮಾರು 45 ರಿಂದ 50 ಡಿಗ್ರಿ ಸೆಲ್ಸಿಯಸ್ ಬಿಸಿಲು ಇರುತ್ತದೆ. ನಾನು ಈ ನೋಟಿಫಿಕೇಷನನ್ನನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ. This Notification was issued without any application of mind and also without mentioning any provision of law. I also agree with the Department, ಗುಣಾತ್ಮಕ ಶಿಕ್ಷಣವನ್ನು ಕೊಡಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ, ಶೇಕಡ 75ಕ್ಕಿಂತ ಹೆಚ್ಚು ಅಂಕ ಬಂದಿರುವ ವಿದ್ಯಾರ್ಥಿಗಳನ್ನು ಖಾಸಗಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿದ್ಯಾ ಸಂಸ್ಥೆಗಳಿಗೆ ಸೇರಿಸುತ್ತಾರೆ, ಸರ್ಕಾರಿ ವಿದ್ಯಾ ಸಂಸ್ಥೆಗಳಿಗೆ ಶೇಕಡ 35 ರಿಂದ 50ರ ತನಕ ಅಂಕವನ್ನು ಪಡೆದುಕೊಂಡಿರುವವರು ಬರುತ್ತಾರೆ. ಇವರು ಮೊದಲೇ ಬಡತನ ರೇಖೆಗಿಂತ ಕೆಳಗಿರುತ್ತಾರೆ. ಇವರಿಗೆಂದು ಹಾಸ್ಟೆಲ್ ಇರುವುದಿಲ್ಲ, ಬಸ್ ಪಾಸ್ ಇರುವುದಿಲ್ಲ. ವಿಶೇಷವಾಗಿ ಯಾವುದೇ ಒಂದು ಆದೇಶಗಳಾಗಿರಬಹುದು, ನೋಟಿಫಿಕೇಷನ್ಸ್ ಆಗಿರಬಹುದು ಅಥವಾ ಸುತ್ತೋಲೆಗಳನ್ನು ಹೊರಡಿಸುವಾಗ ಎಲ್ಲಾ ಇಲಾಖೆಗಳಿಗೆ provision of law mention ಮಾಡುವುದನ್ನು ಕಲಿಸಬೇಕಾಗಿದೆ. ತಮ್ಮ "whims and fancies" orders ಅನ್ನು ಈ ರೀತಿ Director ರವರು ನೇರವಾಗಿ issue ಮಾಡಿದರೆ, without having consultation with the Principal Secretary or the Chief Secretary ಅಂದರೆ ಏನರ್ಥ ಇರುತ್ತದೆ? ಈಗಾಗಲೇ 20 ದಿನದ ಪಠ್ಯಕ್ರಮವನ್ನು ಮುಗಿಸಿದ್ದಾರೆ, ಮುಂದೆ ಸೇರುವ ವಿದ್ಯಾರ್ಥಿಗಳ ಕಥೆ ಏನು? ನಾನು ಮಾನ್ಯ ಮಂತ್ರಿಗಳಲ್ಲಿ, ಮೊದಲು ಎಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಬಂದಿದ್ದರು ಮತ್ತು ಮುಂದೆ ಬರುವ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಪಠ್ಯಕ್ರಮವನ್ನು ಹೇಗೆ cover ಮಾಡುತ್ತೀರಿ ಎಂಬ ಬಗ್ಗೆ ಕೇಳಬಯಸುತ್ತೇನೆ.

ಸಭಾಪತಿಯವರು:- ಮಾನ್ಯ ಸಚಿವರೇ, ಅನೇಕ ಸದಸ್ಯರು ಈ ಕುರಿತು ಮಾತನಾಡಿದ್ದಾರೆ. ತಾವು ಆ ಅಂಶಗಳನ್ನು ತಿಳಿದುಕೊಂಡಿದ್ದೀರಿ. ಆದ್ದರಿಂದ ತಾವು ಒಂದು ಸಭೆಯನ್ನು ಕರೆಯಿರಿ. ನಾನೂ ಕೂಡ ಅದರಲ್ಲಿ ಭಾಗವಹಿಸುತ್ತೇನೆ, ಅಲ್ಲಿ ಸವಿಸ್ತಾರವಾಗಿ ಚರ್ಚೆ ಮಾಡಬಹುದು. ರಜೆಯನ್ನು ಬೇರೆ ಬೇರೆ ದಿನಾಂಕಗಳಲ್ಲಿ ಕೊಡುತ್ತಾರೆ. ಹಿಂದೆ ಒಂದು ಕಾನೂನು ಇತ್ತು. ಅಕ್ಟೋಬರ್ 2 ರಿಂದ 30 ನೇ ತಾರೀಖು ಮತ್ತು ಏಪ್ರಿಲ್ 10 ರಿಂದ ಮೇ 30ರ ತನಕ ರಜೆ ಕೊಡಬೇಕು ಎಂಬ ಕಾನೂನು ಇತ್ತು. ಆದರೆ ನಂತರ, ಮಧ್ಯದಲ್ಲಿ ಸುತ್ತೋಲೆಗಳನ್ನು ತಂದು ಬದಲಾವಣೆ ಮಾಡಿದರು. ಹಾಗೆ ಬದಲಾವಣೆ ಮಾಡುವುದು ಸರಿಯಲ್ಲ. ಮಾನ್ಯ ಸಚಿವರೇ ತಾವು ತಮ್ಮ ಅಧ್ಯಕ್ಷತೆಯಲ್ಲಿ ಒಂದು ಸಭೆ ಮಾಡಿ. ನಾನೂ ಬರುತ್ತೇನೆ. ಒಟ್ಟಿಗೆ ಕುಳಿತು ಸೂಕ್ತ ರೀತಿಯಲ್ಲಿ ತೀರ್ಮಾನ ಮಾಡೋಣ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ತಾವು ಹೇಳಿದ್ದು ಮತ್ತು ಮಾನ್ಯ ಮಂತ್ರಿಗಳು ಹೇಳಿದ್ದನ್ನು ನಾವು ಕೇಳುತ್ತೇವೆ, ನಾವು ಅದನ್ನು ಸ್ವಾಗತ ಮಾಡುತ್ತೇವೆ. ತಮ್ಮ ಮಾತಿಗೆ ಮತ್ತು ಮಾನ್ಯ ಸಚಿವರ ಮಾತಿಗೆ ಗೌರವ ಕೊಡುತ್ತೇವೆ. ಆದರೆ ಈ ಸಂದರ್ಭದಲ್ಲಿ ತುರ್ತಾಗಿ ಆಗಬೇಕಾಗಿರುವುದು ಒಂದಿದೆ. ನನಗೆ ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:- ಇವತ್ತು 4 ಗಂಟೆಗೆ ಸರ್ಕಾರ ಉತ್ತರ ಕೊಡುತ್ತದೆ. ರಾಜ್ಯಪಾಲರ ಭಾಷಣದ ಮೇಲೆ ಇನ್ನೂ 5 ಜನ ಮಾತನಾಡುವವರಿದ್ದಾರೆ. ಮಾನ್ಯ ಮರಿತಿಬ್ಬೇಗೌಡರೆ ನೀವು, ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಕೇಳುತ್ತೀರಿ, ಬೇರೆ ಬೇರೆಯದನ್ನು ಹೇಳುತ್ತೀರಿ. ಮಾನ್ಯ ಸಚಿವರು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಲಿ. ಮಾನ್ಯ ಸಚಿವರೇ, ಈ ಅಧಿವೇಶನ ಮುಗಿಯುವುದರೊಳಗೆ ಒಂದು ಸಭೆಯನ್ನು ಕರೆಯಿರಿ, ನಾವು-ನೀವು ಎಲ್ಲರೂ ಕುಳಿತು ಚರ್ಚೆ ಮಾಡಿ ಸೂಕ್ತ ತೀರ್ಮಾನ ಕೈಗೊಳ್ಳೋಣ, ನೀತಿ-ನಿಯಮಗಳನ್ನು ಮಾಡೋಣ.

**ಶ್ರೀ ಮರಿತಿಬ್ಬೇಗೌಡಃ-** ತಮ್ಮಗಳ ಅಧ್ಯಕ್ಷತೆಯಲ್ಲಿ ಕರೆಯುವ ಸಭೆಗೆ ನಾವು ಬರುತ್ತೇವೆ. ಆದರೆ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಸರ್ಕಾರಿ ಕಾಲೇಜುಗಳ ವಿದ್ಯಾರ್ಥಿಗಳು ಉಪನ್ಯಾಸಕರಿಲ್ಲದೇ ಪರದಾಡುತ್ತಿದ್ದಾರೆ. ಅತಿಥಿ ಉಪನ್ಯಾಸಕರನ್ನು ತೆಗೆದುಕೊಳ್ಳುವುದಕ್ಕೆ ಆದೇಶ ಇದೆ, ಆದರೆ ಅವರಿಗೆ ಒಂಭತ್ತು ಸಾವಿರ ರೂಪಾಯಿಗಳ ಗೌರವಧನ ಕೊಡುತ್ತಾರೆ. ಇಷ್ಟು ಮೊತ್ತಕ್ಕೆ ಯಾವ ಅತಿಥಿ ಉಪನ್ಯಾಸಕರು ಬರುತ್ತಿಲ್ಲ. ಅತಿಥಿ ಉಪನ್ಯಾಸಕರನ್ನು ತೆಗೆದುಕೊಳ್ಳಲು ಇಲಾಖೆಯಿಂದ ಇದುವರೆಗೂ ಆದೇಶ ಕೊಟ್ಟಿಲ್ಲ.

**ಸಭಾಪತಿಯವರು**:- ಕೆಲವು ಕಡೆ ಅತಿಥಿ ಉಪನ್ಯಾಸಕರು ಕೆಲಸ ಮಾಡುತ್ತಿದ್ದಾರೆ. ಮಾನ್ಯ ಸಚಿವರೇ, ಸಭೆಯ ದಿನಾಂಕವನ್ನು ನಿಗದಿ ಮಾಡಿ. ಆ ಸಭೆಯಲ್ಲಿ, ಮಾನ್ಯ ಸದಸ್ಯರು ನೀಡಿದಂತಹ ಸಲಹೆಗಳನ್ನು ಗಣನೆಗೆ ತೆಗೆದುಕೊಂಡು ಸೂಕ್ತ ತೀರ್ಮಾನ ಮಾಡಿ.

**7. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ**

ಶ್ರೀ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಾನು ನೇರವಾಗಿ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬಯಸುತ್ತೇನೆ. ಸಭಾಪತಿಗಳಾದ ಮಾನ್ಯ ಹೊರಟ್ಟಿಯವರು ಹಿಂದೆ, ಈ ಸರ್ಕಾರ 5 ವರ್ಷ ಇರುವುದು ಅನುಮಾನ ಎಂಬ ಹೇಳಿಕೆಯನ್ನು ಕೊಟ್ಟಿದ್ದರು. ಮಾನ್ಯ ಕುಮಾರಸ್ವಾಮಿಯವರು, ಒಂದು ವರ್ಷ ಈ ಸರ್ಕಾರ ಗಟ್ಟಿಯಾಗಿರುತ್ತದೆ ಎಂಬ ಮಾತನ್ನು ಹೇಳಿದ್ದರು. ಮಾನ್ಯ ರೇವಣ್ಣನವರು, ಸರ್ಕಾರ ಎಷ್ಟು ದಿನ ನಡೆಯುತ್ತಿದೆಯೋ ಗೊತ್ತಿಲ್ಲ ಎಂಬ ಮಾತನ್ನು ಹೇಳಿದ್ದರು.

ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣವನ್ನು ಪ್ರಿಪೇರ್ ಮಾಡಬೇಕಾದರೆ, ಮುಖ್ಯಮಂತ್ರಿಗಳಿಗೆ ಪರಮಾಧಿಕಾರ ಕೊಟ್ಟು, ಅವರು ತಮ್ಮ ಗೊತ್ತು-ಗುರಿಗಳನ್ನು ಮತ್ತು ಯೋಜನೆಗಳನ್ನು ತಿಳಿಸಬೇಕಾಗುತ್ತದೆ. ಒತ್ತಡದ ಕಾರಣದಿಂದ ಗೊತ್ತು-ಗುರಿಗಳನ್ನಾಗಲಿ ಅಥವಾ ಯೋಜನೆಗಳನ್ನಾಗಲಿ ಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈ ರಾಜ್ಯಪಾಲರ ಭಾಷಣ ಉಪ್ಪು,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹುಳಿ, ಖಾರ ಇಲ್ಲದ ಸಪ್ಪೆ ಭಾಷಣವಾಗಿದೆ ಎಂದು ಹೇಳಬೇಕಾಗಿದೆ. ಇಂತಹ ಭಾಷಣವನ್ನು ನಮ್ಮ ಮುಂದೆ ಇಟ್ಟು ತೌಡು ಕುಟ್ಟುವ ಕೆಲಸ ಮಾಡಿದ್ದೀರಿ. ಈ ಭಾಷಣದಲ್ಲಿ, ರಾಜ್ಯದಲ್ಲಿ ಅನ್ನದಾತರ ಬಗ್ಗೆ ಬಹಳ ಕಾಳಜಿ ವಹಿಸಿದ್ದಾರೆ. ರಾಜ್ಯದಲ್ಲಿ 4300 ಜನ ಆತ್ಮಹತ್ಯೆ ಮಾಡಿಕೊಂಡರು. ಅದನ್ನು ರಾಜ್ಯಪಾಲರ ಮುಖಾಂತರ ಹೇಳಿಸಬೇಕಾಗಿತ್ತು. ಹಿಂದೆ ಕಾನೂನಿನ ಪ್ರಕಾರ ಒಂದು 'ಕೃಷಿ ಬೆಲೆ ಆಯೋಗ'ವನ್ನು ಮಾಡಿದ್ದೆವು. ಇವತ್ತು ಮಾವಿನ ಹಣ್ಣಿನ ಬೆಳೆಗಾರರು ಮಾವಿನ ಹಣ್ಣಿಗೆ ಬೆಲೆ ಇಲ್ಲ ಎಂದು ರಸ್ತೆಗಳಲ್ಲಿ ಟನ್‌ಗಟ್ಟಲೆ ಮಾವಿನ ಹಣ್ಣುಗಳನ್ನು ಸುರಿಯುತ್ತಿದ್ದಾರೆ. ಆ ಬೆಲೆ ಆಯೋಗ ಎಲ್ಲಿ ಹೋಯಿತು? ಅವರ ರಕ್ಷಣೆಗೆ ಯಾರು ಬರುತ್ತಾರೆ? ಇದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಇಲ್ಲ.

ಮಾನ್ಯ ಸಭಾಪತಿಯವರೇ, ನೂತನ ಶಿಕ್ಷಣ ಮಂತ್ರಿಗಳು ಈ ಸದನದಲ್ಲಿದ್ದಾರೆ. ಶಾಲಾ-ಕಾಲೇಜುಗಳು ಪ್ರಾರಂಭವಾಗಿ ಒಂದೂವರೆ ತಿಂಗಳಾಗಿದ್ದರೂ ಇನ್ನೂ ಪಠ್ಯ ಪುಸ್ತಕಗಳನ್ನು ಕೊಟ್ಟಿಲ್ಲ, ಸಮವಸ್ತ್ರಗಳನ್ನು ಕೊಟ್ಟಿಲ್ಲ. ಹಿಂದಿನ ಸರ್ಕಾರ ಲ್ಯಾಪ್‌ಟಾಪ್ ಕೊಟ್ಟಿದ್ದೇವೆ ಎಂದು ಹೇಳಿದರೂ ಅವುಗಳನ್ನೂ ಕೂಡ ಸರಿಯಾಗಿ ಕೊಟ್ಟಿಲ್ಲ. ಇವುಗಳ ಬಗ್ಗೆ ಮಾನ್ಯ ಸಚಿವರ ನಿಲುವೇನು ಎಂಬುದನ್ನು ತಿಳಿಸಬೇಕು. ಶಾಲಾ-ಕಾಲೇಜುಗಳ ಮೂಲಭೂತ ಸೌಕರ್ಯಗಳನ್ನು ಕೊಡುವುದರ ಬಗ್ಗೆ ಏನು ಹೇಳುತ್ತೀರಿ? ಈ ಕುರಿತು ಕೂಡ ಪ್ರಸ್ತಾಪ ಮಾಡಿಲ್ಲ. ಶಾಲಾ-ಕಾಲೇಜುಗಳ ಶಿಕ್ಷಣದ ಗುಣಮಟ್ಟವನ್ನು ವೃದ್ಧಿ ಮಾಡುವುದಕ್ಕೆ ನಿಮ್ಮ ಯೋಜನೆಳೇನು ಎಂಬುದು ರಾಜ್ಯಪಾಲರ ಭಾಷಣದಲ್ಲಿ ಪ್ರತಿಬಿಂಬವಾಗಿಲ್ಲ. ಅಂದರೆ, ಶಿಕ್ಷಣ ವ್ಯವಸ್ಥೆ ಬಗ್ಗೆ ನಿಮಗೆ ಕಾಳಜಿ ಇಲ್ಲ, ಮಾನವ ಸಂಪನ್ಮೂಲ ಅಭಿವೃದ್ಧಿಗೆ ಒತ್ತು ಕೊಡುವ ಮನಸ್ಥಿತಿ ಸರ್ಕಾರಕ್ಕಿಲ್ಲ ಎಂದು ಹೇಳಲೇ ಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಪುಟ 4ರಲ್ಲಿ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಬಹಳ ಚೆನ್ನಾಗಿದೆ ಎಂದು ಹೇಳಿದ್ದಾರೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಡಿ.ಜಿ.ಯವರೂ ಸೇರಿದಂತೆ ಇತರ ದೊಡ್ಡ ಅಧಿಕಾರಿಗಳ ಜೊತೆ ಸಭೆ ಮಾಡಿದರು. ಮಾನ್ಯ ಮುಖ್ಯ ಮಂತ್ರಿಗಳು ಎ.ಡಿ.ಜಿ.ಪಿ. ಅವರನ್ನು, ಎನ್‌ಕೌಂಟರ್ ಮಾಡುವುದಕ್ಕೂ ನೀವು ಲಂಚ ತೆಗೆದುಕೊಳ್ಳುತ್ತೀರಾ ಎನ್ನುವ ಪ್ರಶ್ನೆಯನ್ನು ಕೇಳಿದರು. ಇದು ಪತ್ರಿಕೆಯಲ್ಲಿ ಬಂದಿತ್ತು, ಬೇಕಾದರೆ ನಾನು ಆ ಪತ್ರಿಕೆಗಳನ್ನು ತೋರಿಸುತ್ತೇನೆ. ಮಾನ್ಯ ಸಭಾಪತಿಯವರೇ, ಆ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಇನ್ನು ಮುಂದೆ ಮಾಮೂಲು ತೆಗೆದುಕೊಳ್ಳುವುದನ್ನು ಸಹಿಸುವುದಿಲ್ಲ ಎಂಬ ಮಾತನ್ನು ಹೇಳಿದ್ದಾರೆ. ಅಂದರೆ ಗೃಹ ಮಂತ್ರಿಗಳಿಗೆ ಮತ್ತು ಮುಖ್ಯಮಂತ್ರಿಗಳಿಗೆ ಪೋಲೀಸ್ ಇಲಾಖೆಯಲ್ಲಿ ನಡೆಯುವಂತಹ ಇಂತಹ ಎಲ್ಲಾ ವಿಚಾರಗಳ ಬಗ್ಗೆ ಗೊತ್ತಿದೆ. ಬೆಂಗಳೂರು ಮತ್ತು ದೊಡ್ಡ ದೊಡ್ಡ ನಗರಗಳಲ್ಲಿ ಪೋಲೀಸ್ ಠಾಣೆಗಳನ್ನು ಪೋಲೀಸರು ನಡೆಸುತ್ತಿಲ್ಲ, ರೌಡಿಗಳು ನಡೆಸುತ್ತಿದ್ದಾರೆ. ಸಂಜಯ ನಗರ ಮತ್ತು ಆರ್.ಟಿ.ನಗರಗಳ ಪೋಲೀಸ್

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಟೇಷನ್‌ಗಳಲ್ಲಿ ನಾನೇ ಸಿ.ಸಿ.ಟಿವಿ ಕ್ಯಾಮೆರಾಗಳನ್ನು ಹಾಕಿಸಿ ಕೊಟ್ಟಿದ್ದೇನೆ. ನಾನು ಒಟ್ಟು 150 ಸಿ.ಸಿ.ಟಿವಿ ಕ್ಯಾಮೆರಾಗಳನ್ನು ಹಾಕಿಸಿದ್ದೇನೆ, ಬೇಕಿದ್ದರೆ ಎನ್‌ಕ್ವೈರಿ ಮಾಡಿಸಿ. ಮಧ್ಯಾಹ್ನದ ಹೊತ್ತು ರೌಡಿಗಳು ಸ್ಟೇಷನ್‌ಗೆ ಹೋಗಿ ಪೋಲೀಸರ ಜೊತೆ ಕುಳಿತುಕೊಂಡು ಊಟ ಮಾಡುತ್ತಾರೆ. ಯಾರು ಏಜೆಂಟ್‌ಗಿರಿ ಕೆಲಸ ಮಾಡುತ್ತಿದ್ದಾರೆ, ಬ್ರೋಕರ್‌ಗಿರಿ ಮಾಡುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಬೆಂಗಳೂರಿನಲ್ಲಿ, ಗಾಂಜಾ, ಅಫೀಮು, ಡ್ರಗ್ಸ್ ಅವ್ಯಾಹತವಾಗಿ ಮಾರಾಟವಾಗುತ್ತಿದೆ. ಇದನ್ನು ಯಾರೂ ನಿಯಂತ್ರಣ ಮಾಡುತ್ತಿಲ್ಲ. (ಮುಂದು . . .)

(066) 04-06-2018 3:20 ಡಿಎಸ್:ವಿಕೆ

**ಶ್ರೀ ಕೆ.ಜೆ.ಜಾರ್ಜ್( ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಕ್ಕರೆ ಹಾಗೂ ಐಟಿ ಮತ್ತು ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೆ, ಬೆಂಗಳೂರು ನಗರವನ್ನು ಪ್ರತಿನಿಧಿಸತಕ್ಕ ಶಾಸಕರಾದ ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರು ಇಡೀ ರಾಜ್ಯದಲ್ಲಿ ಬೆಂಗಳೂರಿನ ಸ್ಥಿತಿ ಹಾಳಾಗಿದೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಎಲ್ಲಾ ಕಾಲದಲ್ಲಿಯೂ ಎಲ್ಲಾ ಕಡೆಗಳಲ್ಲಿಯೂ ಸಹ ರೌಡಿಗಳಿರುತ್ತಾರೆ. ಆದರೆ ಪೋಲೀಸಿನವರು ಅವರನ್ನು ನಿಯಂತ್ರಿಸಿ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಕಾನೂನು ಸುವ್ಯವಸ್ಥೆಯು ಹದ್ದುಬಸ್ತಿನಲ್ಲಿರುವಂತೆ ನೋಡಿಕೊಳ್ಳಬೇಕಾಗುತ್ತದೆ. ಸ್ಥಿತಿ ಹಾಳಾಗಿಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಇಡೀ ಪೋಲೀಸ್ ಇಲಾಖೆಯನ್ನೇ demoralise ಮಾಡತಕ್ಕ ಒಂದು ಹೇಳಿಕೆಯನ್ನು ನಾನು ಮಾನ್ಯ ನಾರಾಯಣಸ್ವಾಮಿಯವರಿಂದ ಅಪೇಕ್ಷೆ ಪಡುವುದಿಲ್ಲ. ಒಂದು ದಿವಸ ಏನಾದರೂ ಪೋಲೀಸಿನವರ ಸೇವೆ ಸ್ಥಗಿತಗೊಂಡರೆ ಏನಾಗುತ್ತದೆ ಎನ್ನುವುದನ್ನು ಮಾನ್ಯ ಸದಸ್ಯರು ಚಿಂತನೆ ಮಾಡಬೇಕು. ಹರಿಯಾಣದಲ್ಲಿ ಒಂದು ದಿವಸ police inaction ನಿಂದ ಎಷ್ಟು ಜನರು ಸಾವನ್ನಪ್ಪಿದ್ದರು? ಇವತ್ತು ನಮ್ಮ ರಾಜ್ಯದಲ್ಲಿ ಪೋಲೀಸಿನವರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಯಾರೋ ಕೆಲವರು ತಪ್ಪು ಮಾಡುವುದರಿಂದ ಇಡೀ ಇಲಾಖೆಯನ್ನೇ ಸರಿಯಿಲ್ಲವೆನ್ನುವುದು ಸರಿಹೋಗುವುದಿಲ್ಲ. ಯಾರೋ ಕೆಲವರು ತಪ್ಪು ಮಾಡುತ್ತಾರೆ, ಅವರ ಮೇಲೆ ಕ್ರಮ ಕೈಗೊಳ್ಳೋಣ. ಈ ಕೆಲಸವನ್ನು ನಾವು ನೀವೆಲ್ಲರೂ ಸೇರಿ ಮಾಡೋಣ. ದಯಮಾಡಿ ಈ ರಾಜ್ಯದಲ್ಲಿ ಯಾವುದು ಸರಿಯಿಲ್ಲ ಎನ್ನುವ ಮಾತನ್ನು ಹೇಳುವುದು ಸರಿಯಲ್ಲ.

ಶ್ರೀ ವೈ.ಎ.ನಾರಾಯಣಸ್ವಾಮಿ:- ಮಾನ್ಯ ಸಭಾಪತಿಗಳೇ, ಈ ರಾಜ್ಯದಲ್ಲಿ ಪೋಲೀಸ್ ಇಲಾಖೆಯ ವ್ಯವಸ್ಥೆ ಸರಿಯಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತಿಲ್ಲ, ಮಾನ್ಯ ಉಪ ಮುಖ್ಯಮಂತ್ರಿಗಳೇ ಈ ಮಾತನ್ನು ಹೇಳಿದ್ದಾರೆ. ನಾನು ಪೋಲೀಸ್ ಇಲಾಖೆಯನ್ನು demoralise

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದಕ್ಕಾಗಿ ಈ ಮಾತುಗಳನ್ನು ಹೇಳುತ್ತಿಲ್ಲ. ಪೋಲೀಸ್ ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಮತ್ತು ಅವ್ಯವಹಾರಗಳಿಗೆ ಕಡಿವಾಣ ಹಾಕಬೇಕೆ ಬೇಡವೇ? ಇವತ್ತು ಶಾಲಾ-ಕಾಲೇಜುಗಳ ಪಕ್ಕದಲ್ಲಿಯೇ ಗಾಂಜಾ ಮಾರಾಟ ಮಾಡುತ್ತಿರುವ ವಿಚಾರದ ಬಗ್ಗೆ ಈ ಸದನದಲ್ಲಿಯೇ ಚರ್ಚೆ ನಡೆದಿದೆ. ಈ ವಿಚಾರದಲ್ಲಿ ಎಷ್ಟು ಜನರ ಮೇಲೆ ಕೇಸ್ ಹಾಕಿ, ತಪ್ಪಿತಸ್ಥರನ್ನು ಜೈಲಿಗೆ ಹಾಕಲಾಗಿದೆ? ಪಂಜಾಬ್ ರಾಜ್ಯದಲ್ಲಿ ಗಾಂಜಾ ಮತ್ತು ಅಫೀಮ್ ಮಾರುವವರನ್ನು ಕಂಡಲ್ಲಿ ಗುಂಡು ಹಾಕಬೇಕೆಂದು ಆದೇಶ ಮಾಡಿದ್ದಾರಲ್ಲ, ಅಂತಹ ಆದೇಶಗಳನ್ನು ಜಾರಿಗೆ ತರುವ ಬಗ್ಗೆ ನಮ್ಮ ರಾಜ್ಯದಲ್ಲಿಯೂ ಸಹ ನಾವೆಲ್ಲರೂ ಚಿಂತನೆಯನ್ನು ಮಾಡಬೇಕಲ್ಲವೇ?

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಗಳೇ, ನಮ್ಮ ನಗರದಲ್ಲಿ ಆ ರೀತಿಯ ಆದೇಶಗಳನ್ನು ತರಲು ಸಾಧ್ಯವಾಗುವುದೇ?

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಹಾಗಾದರೆ 10ನೇ ತರಗತಿಯನ್ನು ಓದುತ್ತಿರುವ ಮಕ್ಕಳಿಗೆ ಗಾಂಜಾ ಕೊಡುತ್ತಾರಲ್ಲ, ಅವರಿಗೆ ಯಾವ ಶಿಕ್ಷೆ ನೀಡಬೇಕು. ಮಕ್ಕಳ ಭವಿಷ್ಯ ಹಾಳಾಗುತ್ತಿರುವುದರ ಬಗ್ಗೆ ಸರ್ಕಾರಕ್ಕೆ ಗಮನ ಇಲ್ಲವೇ?

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಗಳೇ, ಕಾನೂನು ವ್ಯವಸ್ಥೆಯ ಬಗ್ಗೆ ಚರ್ಚೆಯನ್ನು ಮಾಡಲಿ. ಗಲಾಟೆ, ಗಲಭೆ ಹಾಗೂ ಕೊಲೆಗಳು ನಡೆಯುತ್ತಿರುತ್ತವೆ. ನಡೆಯುವುದೇ ಇಲ್ಲವೆಂದು ನಾನು ಹೇಳುವುದಿಲ್ಲ. ಇದನ್ನೆಲ್ಲ ಸುಧಾರಣೆ ಮಾಡುವುದಕ್ಕೆ ಏನು ಮಾಡಬೇಕೆನ್ನುವುದನ್ನು ಹೇಳಲಿ. ಅದನ್ನು ಬಿಟ್ಟು, ಈ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದುಬಿದ್ದಿದೆ ಎಂದು ಹೇಳಿದರೆ ನಮ್ಮ ರಾಜ್ಯಕ್ಕೆ ಹೊರಗಿನಿಂದ ಜನರು ಬರುವರೇ? Nobody will come to invest here. ಸರ್ಕಾರದ ಆಡಳಿತದ ಬಗ್ಗೆ ಟೀಕೆ ಮಾಡುವುದು ಸದಸ್ಯರುಗಳ ಹಕ್ಕು. ಅದನ್ನು ಬಿಟ್ಟು ಗುಂಡು ಹಾರಿಸಿ ಎನ್ನುವುದು ಸರಿಯಾಗುವುದಿಲ್ಲ.

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೇ, ನಮ್ಮ ರಾಜ್ಯದಲ್ಲಿ ಗೂಂಡಾ ಕಾಯಿದೆಯನ್ನು ತರಬೇಕು. ಮಾನ್ಯ ಜಾರ್ಜ್‌ರವರು ಸಹ ಈ ರಾಜ್ಯದಲ್ಲಿ ಗೃಹಮಂತ್ರಿಯಾಗಿದ್ದವರು, ಅವರ ಬಗ್ಗೆ ನನಗೆ ಬಹಳ ಗೌರವವಿದೆ. ಅವರ ಅಧಿಕಾರವಧಿಯಲ್ಲಿ ಎಷ್ಟು ಜನ goonda ಗಳನ್ನು ಮತ್ತು drug peddlers ಗಳನ್ನು ಗೂಂಡಾ ಆಕ್ಟ್ ಕೆಳಗೆ ತಂದಿದ್ದರು ಎನ್ನುವುದನ್ನು ಹೇಳಬೇಕು.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಗಳೇ, ಇನ್ನು ಮುಂದೆ ಮಾನ್ಯ ನಾರಾಯಣಸ್ವಾಮಿಯವರು ಸಹ ಈ ರಾಜ್ಯದ ಗೃಹಮಂತ್ರಿಗಳಾಗಬಹುದು, ಆದರೆ ಗೃಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಂತ್ರಿಯಾಗಿ ಒಂದೇ ದಿನದಲ್ಲಿ ಎಲ್ಲವನ್ನು ಸರಿ ಮಾಡುತ್ತೇನೆ ಎನ್ನುವುದು ಸಾಧ್ಯವಿಲ್ಲ. ಪ್ರತಿಯೊಂದು ಸಮಾಜದಲ್ಲಿಯೂ ಸಹ ದಿನಕ್ಕೊಂದು ಈ ರೀತಿಯ ಘಟನೆಗಳು ನಡೆಯುತ್ತಾ ಇರುತ್ತವೆ. ಯಾರು drugs ಮಾರಾಟ ಮಾಡುತ್ತಾರೆ ಅವರ ಮೇಲೆ ನಮ್ಮ ಸರ್ಕಾರ ಸೂಕ್ತ ಕ್ರಮವನ್ನು ಕೈಗೊಳ್ಳುತ್ತದೆ.

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೇ, ಕಾನೂನು ಸುವ್ಯವಸ್ಥೆಯ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಬಹಳ ಗಂಭೀರವಾಗಿ ಪ್ರಸ್ತಾಪವನ್ನು ಮಾಡಬೇಕಾಗಿತ್ತು, ಆದರೆ ಮಾಡಿಲ್ಲ ಎನ್ನುವುದು ನಮ್ಮ ಆತಂಕ. ಅದಕ್ಕೆ ಪೂರಕವಾಗಿ ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳು ಹೇಳಿಕೆಗಳನ್ನು ನೀಡಿದಾಗ ಆತಂಕ ಇನ್ನೂ ಹೆಚ್ಚಾಗುತ್ತದೆ. ಅದನ್ನೆಲ್ಲ ನಿವಾರಣೆ ಮಾಡುವ ನಿಟ್ಟಿನಲ್ಲಿ ಸರ್ಕಾರದ ಮುಂದಿನ ಹೆಜ್ಜೆ ಏನು ಎಂದು ಕೇಳುತ್ತಿದ್ದೇನೆಯೇ ಹೊರತು ಸರ್ಕಾರದ ಮೇಲೆ ಆರೋಪವನ್ನು ಮಾಡುವುದಕ್ಕೆ ನಾನು ಈ ಮಾತುಗಳನ್ನು ಹೇಳುತ್ತಿಲ್ಲ. ಹಾಗೆಯೇ ಪೋಲೀಸ್ ಇಲಾಖೆಯನ್ನು demoralise ಕೂಡ ಮಾಡುತ್ತಿಲ್ಲ. ಆದರೆ ಪೊಲೀಸ್ ಇಲಾಖೆಯಲ್ಲಿ ಎಷ್ಟು ಜನ ಒಳ್ಳೆಯವರಿದ್ದಾರೋ ಅಷ್ಟೇ ಕೆಟ್ಟವರು ಇದ್ದಾರೆ ಎನ್ನುವ ಬಗ್ಗೆ ಮಾತ್ರ ಆರೋಪವನ್ನು ಮಾಡುತ್ತಿದ್ದೇನೆ. ಅದರ ಬಗ್ಗೆ ಸರ್ಕಾರ ಗಮನವನ್ನು ಹರಿಸಬೇಕು.

ಹಾಗೆಯೇ ನೀರಾವರಿ ಯೋಜನೆಗಳಿಗಾಗಿ 50,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಾಗಿ ಹೇಳಿದ್ದಾರೆ. ಆದರೆ ರಾಜ್ಯಪಾಲರ ಭಾಷಣದಲ್ಲಿ ನೀರಾವರಿಯ ಬಗ್ಗೆ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ನಮಗೆಷ್ಟು ನೀರು allotment ಆಗಿದೆ, ಅದನ್ನು ಬಳಸಿಕೊಳ್ಳುವುದಕ್ಕೆ ಯಾವುದಾದರೂ ಕಾಮಗಾರಿ ಅಥವಾ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡಿರುವುದಿಲ್ಲ. ಈ ಯೋಜನೆಗಳ ಬಗ್ಗೆ ಮಾನ್ಯ ಸಿದ್ದರಾಮಯ್ಯನವರ ಪುಸ್ತಕದಲ್ಲಿದೆ, ಆದರೆ ಮಾನ್ಯ ಕುಮಾರಸ್ವಾಮಿಯವರ ಪುಸ್ತಕದಲ್ಲಿಲ್ಲ. ಈ ರಾಜ್ಯದಲ್ಲಿನ ಸಮಗ್ರ ನೀರಾವರಿ ಯೋಜನೆಗಳ ಬಗ್ಗೆ ಪ್ರಸ್ತಾಪವಿಲ್ಲ.

**ಡಾ॥ ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಗಳೇ, ರಾಜ್ಯಪಾಲರ ಭಾಷಣದಲ್ಲಿ ಒಂದು ನೀರಾವರಿ ಯೋಜನೆಯ ಬಗ್ಗೆ ಪ್ರಸ್ತಾಪಿಸಲಾಗಿದೆ. ಪುಟ 2ರಲ್ಲಿ " ನನ್ನ ಹೊಸ ಸರ್ಕಾರವು ಹಿಂದಿನ ಪರಿಣಾಮಕಾರಿ ಯೋಜನೆಗಳ ಜೊತೆಗೆ ಹೊಸ ಯೋಜನೆಗಳನ್ನು ಸಹ ಮುಂದಿನ ದಿವಸಗಳಲ್ಲಿ ಜಾರಿಗೊಳಿಸಲಾಗುವುದು" ಎಂದು ಹೇಳಿದ್ದಾರೆ.

**ಸಭಾಪತಿಯವರು:-** ಅದನ್ನು ನೀವು ಸರ್ಕಾರದ ಪರವಾಗಿ ಉತ್ತರ ನೀಡುವಂತಹ ಸಂದರ್ಭದಲ್ಲಿ ಹೇಳಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವೈ.ಎ.ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಗಳೇ, ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಹಾಹಾಕಾರ ಹೆಚ್ಚಾಗಿದೆ. ಅಂತರ್ಜಲದ ಕುಸಿತ ಹೆಚ್ಚಾಗಿದೆ. ಅದರ ಬಗ್ಗೆ ಸರ್ಕಾರದ ನಿಲುವು ಏನು? ಬೆಂಗಳೂರು ನಗರಕ್ಕೆ ಅಂತರರಾಷ್ಟ್ರೀಯ ಮಟ್ಟದ ಖ್ಯಾತಿ ಇದೆ. ಎಲ್ಲರೂ ಬಂದು ಬೆಂಗಳೂರು ನಗರದಲ್ಲಿ ನೆಲೆಸುತ್ತಿದ್ದಾರೆ. ಇದರಿಂದ ಇಲ್ಲಿ ವಾಹನ ದಟ್ಟಣೆಯ ಸಮಸ್ಯೆ ಹೆಚ್ಚಾಗುತ್ತಿದೆ. ಈ ನಗರದ ಮಾಲಿನ್ಯದ ಬಗ್ಗೆ, ಅಂತರ್ಜಲ ಕುಸಿತದ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟಗೊಂಡಿದೆ. 2020ಕ್ಕೆ ಬೆಂಗಳೂರು ನಗರದಲ್ಲಿ ಕುಡಿಯುವ ನೀರು ದೊರೆಯುವುದಿಲ್ಲ. 2031 ಕ್ಕೆ ಭೂಮಿ ಪೂರ್ತಿ ಒಣಗುತ್ತದೆ. ಅಂದರೆ ಬೆಂಗಳೂರು ನಗರ ಕೇಪ್ ಟೌನ್ ಮಾದರಿ ಆಗುವ ಲಕ್ಷಣಗಳು ಕಂಡು ಬರುತ್ತಿದೆ. ಪತ್ರಿಕೆಗಳಲ್ಲಿ ಬಂದಿರುವ ವಿಚಾರವನ್ನು ನಾನಿಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಈ ವಿಚಾರದ ಬಗ್ಗೆ ವೈಜ್ಞಾನಿಕವಾಗಿ ಸರ್ಕಾರ ನಿಲುವು ಏನು ಎನ್ನುವುದನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪನೆ ಮಾಡಬೇಕಾಗಿತ್ತು ಎನ್ನುವುದು ನಮ್ಮ ಆಗ್ರಹ. ಜೊತೆಗೆ ಆಹಾರ ಇಲಾಖೆಯಿಂದ ಎಪಿಎಲ್ ಕಾರ್ಡ್‌ಗಳಿಗೆ ಸರಬರಾಜು ಮಾಡುತ್ತಿರುವ ಆಹಾರದ ಗುಣಮಟ್ಟದ ಬಗ್ಗೆ ಈ ಸರ್ಕಾರದ ನಿಲುವು ಏನೆಂಬುದನ್ನು ಹೇಳಬೇಕಾಗಿತ್ತು. ಕೋಳಿಯೂ ತಿನ್ನಲು ಸಾಧ್ಯವಿಲ್ಲದಂತಹ ಅಕ್ಕಿ-ರಾಗಿಯನ್ನು ಈ ಕಾರ್ಡುಗಳ ಮೂಲಕ ವಿತರಣೆ ಮಾಡಲಾಗುತ್ತಿದೆ ಎನ್ನುವ ವಿಚಾರ ಟಿವಿಗಳಲ್ಲಿ ಪ್ರಸಾರವಾಗುತ್ತಿತ್ತು. ಸುಮಾರು ಜನರು ಇದನ್ನು ನೋಡಿರಬಹುದೆಂದು ನಾನು ಭಾವಿಸುತ್ತೇನೆ. ಇದರ ಬಗ್ಗೆ ಪ್ರಸ್ತಾಪಿಸಿಲ್ಲ. ಕೊನೆಯದಾಗಿ ಹೇಳುವುದೇನೆಂದರೆ ಆಡಳಿತ ಸುಧಾರಣಾ ಇಲಾಖೆಯಲ್ಲಿ ಭ್ರಷ್ಟಾಚಾರ ಬಹಳ ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ ಎನ್ನುವ ಮಾತನ್ನು ನಾನು ಹೇಳುತ್ತಿಲ್ಲ, ಮಾನ್ಯ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರೇ ಹೇಳಿದ್ದಾರೆ. ವಿಧಾನಸೌಧದಲ್ಲಿ ಅಧಿಕಾರಿಗಳ ವರ್ಗಾವಣೆಗೆ ಲಕ್ಷಾಂತರ ರೂಪಾಯಿಗಳ ಚಲಾವಣೆ ಆಗುತ್ತಿದೆ ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರೇ ಹೇಳಿದ್ದಾರೆ. ಇದರಿಂದ ಜನರಿಗೆ ಯಾವ ಸಂದೇಶ ಹೋಗುತ್ತದೆ? ತಾಲ್ಲೂಕು ಆಫೀಸ್‌ನಲ್ಲಿ RTC, Revenue Sketch ಪಡೆಯಲು ಒಬ್ಬ ರೈತ ಹೋದರೆ ಅಲ್ಲಿ ಹಣ ಕೊಡದೇ ಯಾವುದೇ ಕೆಲಸವನ್ನು ಮಾಡಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ.

(ಗೊಂದಲ)

ಮಾನ್ಯ ಸಭಾಪತಿಗಳೇ, ಗೌರವಾನ್ವಿತ ಮುಖ್ಯಮಂತ್ರಿಗಳು ಈ ರಾಜ್ಯದಲ್ಲಿ ಭ್ರಷ್ಟಾಚಾರ ಇದೆ ಎಂದು ಒಪ್ಪಿಕೊಳ್ಳುವಂತಹ ಹೇಳಿಕೆಯನ್ನು ನೀಡಿದ್ದಾರೆ. ಅದಕ್ಕೆ ಮಾಜಿ ಮುಖ್ಯಮಂತ್ರಿಗಳು ನಾನಿರುವಾಗ ಇದು ನಡೆದಿರುವುದಿಲ್ಲ, ಹಾಗಾಗಿ ನನ್ನ ಗಮನಕ್ಕೆ ಬಂದಿಲ್ಲವೆನ್ನುವ ಉತ್ತರವನ್ನು ನೀಡಿದ್ದಾರೆ. ಒಂದು ವೇಳೆ ಈಗ ನಡೆಯುತ್ತಿದ್ದರೆ ಅದರ ಬಗ್ಗೆ ಕ್ರಮ ಕೈಗೊಳ್ಳಲಿ ಎಂದು ಹೇಳಿದ್ದಾರೆ. ಅಂದರೆ ಈ ಸರ್ಕಾರದಲ್ಲಿ ಭ್ರಷ್ಟಾಚಾರವನ್ನು ನಿಗ್ರಹ ಮಾಡುವುದಕ್ಕೆ ಯಾವುದೇ ಬದ್ಧತೆ ಇಲ್ಲ. ಸರ್ಕಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನೂ ICU ನಲ್ಲಿದೆ. ಸರ್ಕಾರ ಇನ್ನೂ take-off ಆಗಿಲ್ಲ. ಸರ್ಕಾರದ ನೀತಿ ನಿಯಮಗಳು ಜನರ ಆಶೋತ್ತರಗಳಿಗೆ ಪೂರಕವಾಗಿಲ್ಲ ಎನ್ನುವ ಮಾತುಗಳನ್ನು ಆಡಳಿತ ಪಕ್ಷದವರು ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದಾರೆ. ನಾವೆಲ್ಲರೂ ಬಹಳ ಗೌರವವಾಗಿ ರಾಜ್ಯಪಾಲರು ದಯಪಾಲಿಸಿದ ಭಾಷಣ ಎಂದು ಹೇಳುತ್ತೇವೆ, ಇಂತಹ ದಯಪಾಲಿಸಿದ ಭಾಷಣದಲ್ಲಿ ಸುಳ್ಳಿನ ಕಂತೆಗಳನ್ನು ಹೇಳಿ, ನೀರಸವಾದ ಭಾಷಣವನ್ನು ತುಂಬಿ, ಜನರ ಆಸೆಗೆ ತಣ್ಣೀರೆರೆಚುವ ಭಾಷಣವನ್ನು ನಮ್ಮ ಮುಂದಿಟ್ಟು, ಈ ರಾಜ್ಯದ ಭವಿಷ್ಯವನ್ನು ಡೋಲಾಯಮಾನ ಸ್ಥಿತಿಗೆ ತಂದಿಟ್ಟ. ರಾಜ್ಯಪಾಲರ ಈ ಭಾಷಣವನ್ನು ನಾವು ಧಿಕ್ಕರಿಸುತ್ತೇವೆ.

**ಶ್ರೀ ಕೆ.ಹರೀಶ್ ಕುಮಾರ್(ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಘನತೆವೆತ್ತ ರಾಜ್ಯಪಾಲರು ರಾಜ್ಯ ವಿಧಾನಮಂಡಲದ ಉಭಯಸದನಗಳನ್ನು ಉದ್ದೇಶಿಸಿ ಮಾಡಿರುವ ಜಂಟಿ ಭಾಷಣಕ್ಕೆ ಅಭಿನಂದನೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಘನತೆವೆತ್ತ ರಾಜ್ಯಪಾಲರು ಮುಂದೆ ನಮ್ಮ ಸರ್ಕಾರ ಯಾವ ರೀತಿ ಸಾಗಬೇಕೆನ್ನುವ ಬಗ್ಗೆ ತಮ್ಮ ಅನಿಸಿಕೆಗಳನ್ನು ಈ ನಿಟ್ಟಿನಲ್ಲಿ ವ್ಯಕ್ತಪಡಿಸಿದ್ದಾರೆ.

(ಮುಂದು . . .)

067/04-07-2018/bkp-bns/3-30

**ಶ್ರೀ ಕೆ. ಹರೀಶ್ ಕುಮಾರ್(ಮುಂದು):-**

ಮುಂದಿನ ಕೆಲವು ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗುತ್ತದೆ. ವಿಶೇಷವಾಗಿ ರೈತರ ಮೇಲೆ ಸರ್ಕಾರಕ್ಕಿರುವ ಕಾಳಜಿಯ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ರೈತ ನಮ್ಮ ದೇಶದ ಬೆನ್ನೆಲುಬು, ನಮ್ಮ ಅನ್ನದಾತ. ರೈತನ ಹಿತವನ್ನು ಕಾಪಾಡುವುದು ನಮ್ಮ ಸರ್ಕಾರದ ಜವಾಬ್ದಾರಿ. ಆದರೆ, ಇವತ್ತು ನಮ್ಮ ರೈತನ ಬದುಕು ಸಂಕಷ್ಟದಲ್ಲಿದೆ ಎನ್ನುವುದನ್ನು ನಾವು ಕಂಡುಕೊಂಡಿದ್ದೇವೆ. ನಮ್ಮ ಭಾರತ ದೇಶದಲ್ಲಿ ರೈತ ಸಾಲದಲ್ಲಿಯೇ ಹುಟ್ಟಿ, ಸಾಲದಲ್ಲಿಯೇ ಬದುಕಿ, ಸಾಲದಲ್ಲಿಯೇ ಸಾಯುವುದನ್ನು ನಾವು ನೋಡುತ್ತಿದ್ದೇವೆ. ಇವತ್ತು ನಮ್ಮ ಈ ಮೈತ್ರಿ ಸರ್ಕಾರ, ಅನ್ನದಾತ ಸುಖೀಭವ ಎನ್ನುವಂತೆ ರಾಜ್ಯದ ರೈತರ ಬದುಕಿನ ಸಂತೃಪ್ತಿಗೆ ಈ ಸರ್ಕಾರ ಮುಂದಿನ ಯೋಜನೆಗಳನ್ನು ರೂಪಿಸಿಕೊಂಡಿದ್ದು, ನಮ್ಮ ಸರ್ಕಾರದ ಗುರಿಯೂ ಸಹ ಅದೇ ಆಗಿರುತ್ತದೆ. ಇವತ್ತು ರೈತ ಆತ್ಮಹತ್ಯೆಗೆ ಶರಣಾಗುವುದನ್ನು ನೋಡುತ್ತಿದ್ದೇವೆ. ಕಳೆದ ಸಾಲಿನಲ್ಲಿ ಸುಮಾರು 3000 ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿರುವುದನ್ನು ನಾವು ತಿಳಿದುಕೊಂಡಿದ್ದೇವೆ. ಈ ಬಗ್ಗೆ ಘನತೆವೆತ್ತ ರಾಜ್ಯಪಾಲರು ರೈತರಿಗೆ ಅಭಯವನ್ನು ನೀಡಿದ್ದಾರೆ. "ರೈತರಿಗೆ ನ್ಯಾಯಬೆಲೆ ಖಚಿತಪಡಿಸುವ ಮಾದರಿ ಹಾಗೂ ಪ್ರಾಯೋಜಿತ ಯೋಜನೆಯನ್ನು ಇಡೀ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಷ್ಟ್ರದಲ್ಲೇ ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಜಾರಿಗೆ ತರಲು ನನ್ನ ಸರ್ಕಾರ ಉತ್ಸುಕವಾಗಿದೆ, ಆತಂಕದ ದಿನಗಳು ಇನ್ನಿಲ್ಲ, ಧ್ವನಿ ಇಲ್ಲದ ರೈತರಿಗೆ ಧ್ವನಿಯಾಗಬೇಕೆನ್ನುವುದು ನಮ್ಮ ಸರ್ಕಾರದ ಆಶಯವಾಗಿದೆ. ಯಾವುದೇ ಕಾರಣಕ್ಕೂ ರೈತರು ಆತ್ಮಹತ್ಯೆಗೆ ಶರಣಾಗಬಾರದು" ಎನ್ನುವಂತಹ ಮಾತನ್ನು ರಾಜ್ಯಪಾಲರು ಹೇಳುವ ಮೂಲಕ ನಮ್ಮ ಇಡೀ ರಾಜ್ಯದ ರೈತರಿಗೆ ಅಭಯವನ್ನು ನೀಡಿದ್ದಾರೆ. ಒಂದು ಕಡೆ ನಾವು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಬಹಳ ಜವಾಬ್ದಾರಿಯುತ ವ್ಯಕ್ತಿಗಳು ಕೂಡ ರೈತನು ಜೂಜಾಟವಾಡಲಿಕ್ಕೆ ಸಾಲ ಮಾಡಿ ಅವನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ ಎನ್ನುವ ಮಾತನ್ನು ಹೇಳುತ್ತಿದ್ದಾರೆನ್ನುವುದನ್ನು ನಾವು ಪತ್ರಿಕೆಗಳಲ್ಲಿ ಕಾಣುತ್ತಿದ್ದೇವೆ. ರೈತ ತಾನು ಮಾಡಿದ ಸಾಲವನ್ನು ತೀರಿಸಲಾಗದೇ ಕಷ್ಟಕರ ಪರಿಸ್ಥಿತಿಯನ್ನು ಎದುರಿಸುವಂತಹ ಪರಿಸ್ಥಿತಿಯಲ್ಲಿ ಅವನ ಬಗ್ಗೆ ನಮ್ಮ ಲಘುವಾದ ಮಾತು ಮತ್ತಷ್ಟು ಕೆರಳಿಸಬಹುದು. ಅದಕ್ಕೋಸ್ಕರವೇ ಶೂನ್ಯ ಬಡ್ಡಿದರದಲ್ಲಿ ಹಿಂದಿನ ಸರ್ಕಾರಗಳು ಸಾಲ ಕೊಡುವಂತಹದ್ದು ಮತ್ತು ಶೇಕಡ 3 ರ ಬಡ್ಡಿದರದಲ್ಲಿ ಸಾಲ ಕೊಡುವಂತಹ ಕಾರ್ಯಕ್ರಮಗಳು, ಅದಕ್ಕೆ ನಾನಾ ರೀತಿಯ ಸಬ್ಸಿಡಿಗಳು, ಗಂಗಾ ಕಲ್ಯಾಣದಂತಹ ಯೋಜನೆಗಳು, ಕೆರೆಗಳನ್ನು ತುಂಬಿಸುವಂತಹ ಕಾರ್ಯಕ್ರಮಗಳು, ರೈತ ಬೆಳೆದಂತಹ ಬೆಳೆಗಳಿಗೆ ಬೆಲೆ ಕುಸಿದಂತಹ ಸಂದರ್ಭದಲ್ಲಿ ಬೆಂಬಲ ಬೆಲೆಯನ್ನು ಕೊಡುವಂತಹದ್ದು, ಆವರ್ತ ನಿಧಿಯನ್ನು ಸ್ಥಾಪಿಸುವಂತಹದ್ದು, ಅದಕ್ಕಿಂತ ಹೆಚ್ಚಿನದಾಗಿ ಕಳೆದ ಬಾರಿ ನಮ್ಮ ಮಾನ್ಯ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ರೈತರ ಸುಮಾರು 50 ಸಾವಿರ ರೂಪಾಯಿಗಳವರೆಗಿನ ಸಾಲವನ್ನು ಮನ್ನಾ ಮಾಡುವುದರ ಮೂಲಕ ರೈತನ ಬದುಕಿಗೆ ಮರು ಹುಟ್ಟು ಕೊಡುವಂತಹ ವ್ಯವಸ್ಥೆಯಲ್ಲಿ ನಮ್ಮ ಹಿಂದಿನ ಸರ್ಕಾರ ಕ್ರಮ ತೆಗೆದುಕೊಂಡಿತ್ತು. ಈ ಎಲ್ಲಾ ನೆರವುಗಳನ್ನು ಕೊಡುವುದು ಏತಕ್ಕೆಂದರೆ ರೈತ ಹತಾಶನಾಗಬಾರದು ಮತ್ತು ಉಳಿದ ವ್ಯಾಪಾರಿಗಳಿಗೆ ಲಾಭದಾಯಕವಾದಂತಹ ವ್ಯವಸ್ಥೆಗಳಿರುವಾಗ ರೈತ ಕೂಡ ಲಾಭದಾಯಕವಾಗಿರಬೇಕು. ಅವನು ಆತಂಕದ ದಿನಗಳಿಂದ ದೂರವಾಗಿರಬೇಕೆನ್ನುವ ನಿಟ್ಟಿನಲ್ಲಿ ಈ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಹಮ್ಮಿಕೊಂಡಿದೆ. ರೈತ ಆತ್ಮಹತ್ಯೆಯ ದಾರಿಯನ್ನು ತುಳಿಯಬಾರದು ಎಂದು ಹೇಳಿ ಸರ್ಕಾರ ಅವನ ನೆರವಿಗೆ ಬರುತ್ತದೆ.

**(ಈ ಹಂತದಲ್ಲಿ ವೈಸ್ ಚೇರ್ಮನ್ ಶ್ರೀ ಕೆ.ಬಿ.ಶಾಣಪ್ಪನವರು ಸಭಾಪೀಠದಲ್ಲಿ ಉಪಸ್ಥಿತರಾದರು)**

ಘನತೆವೆತ್ತ ರಾಜ್ಯಪಾಲರು ಇಸ್ರೇಲ್ ಮಾದರಿಯ ಕೃಷಿ ಪದ್ಧತಿಯ ಬಗ್ಗೆ ಸಹ ಹೇಳಿದ್ದಾರೆ. ಈ ವಿಚಾರದಲ್ಲಿ ಕೆಲವು ಮಾನ್ಯ ಸದಸ್ಯರುಗಳು ಇಸ್ರೇಲ್‌ಗೆ ಹೋಗಿ ಅಧ್ಯಯನ ಮಾಡಿ ಬಂದು, ಅಲ್ಲಿನ ಕೃಷಿ ಚಟುವಟಿಕೆಗಳ ಬಗ್ಗೆ ತಮಗಾದ ಅನುಭವಗಳನ್ನು ಇಲ್ಲಿ ವ್ಯಕ್ತ ಮಾಡಿದ್ದಾರೆ. ಇವತ್ತು ನೀರಿನ ಅಭಾವವನ್ನು ನಮ್ಮ ಕೃಷಿಗೆ ಕಾಣುತ್ತಿದ್ದೇವೆ. ರೈತನು ತಮ್ಮ ಜಮೀನುಗಳಲ್ಲಿ 1000 ಅಡಿ ಆಳದ ಕೊಳವೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾವಿಗಳನ್ನು ಕೊರೆದರೂ ಸಹಿತ ನೀರು ಸಿಕ್ಕುತ್ತಿಲ್ಲ. ಇವತ್ತು ಹನಿ ನೀರಾವರಿ ಎನ್ನುವಂತಹ ಮಿತ ನೀರು ಬಳಕೆಯ ವ್ಯವಸ್ಥೆಗಳು, ಬರಡು ಭೂಮಿಯನ್ನು ಅಭಿವೃದ್ಧಿ ಪಡಿಸುವಂತಹ ಕಾರ್ಯಕ್ರಮಗಳು ಕೂಡ ಈ ಸರ್ಕಾರದಿಂದ ಹೇಳಿಕೆಯಲ್ಲಿ ಬಂದಿದೆ. ಅದೇ ರೀತಿಯಲ್ಲಿ ರೈತನ ಉಪ ಕಸುಬುಗಳು ಅಂದರೆ, ಅದು ಹೈನುಗಾರಿಕೆ, ಕೋಳಿ ಸಾಕಾಣಿಕೆ, ಕುರಿ–ಆಡು ಸಾಕಾಣಿಕೆ ಇಂತಹ ಉಪ ಕಸುಬುಗಳಲ್ಲಿಯೂ ಸಹ ರೈತ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಾನೆ. ಅವರ ನೆರವಿಗೂ ಸಹ ಇವತ್ತು ಸರ್ಕಾರ ಧಾವಿಸುತ್ತಿದೆ. ಹೈನುಗಾರಿಕೆಗೆ ಸಂಬಂಧಪಟ್ಟಂತೆ ಒಂದು ಲೀಟರ್ ಹಾಲಿಗೆ 5 ರೂಪಾಯಿಗಳ ಬೆಂಬಲ ಬೆಲೆಯನ್ನು ಕೊಡುವಂತಹ ಒಂದು ವ್ಯವಸ್ಥೆಯಲ್ಲಿ, ನಷ್ಟದಲ್ಲಿರುವಂತಹ ಒಂದು ಉದ್ಯಮವನ್ನು ಉಳಿಸುವಲ್ಲಿ, ಆ ಮೂಲಕ ರೈತನಿಗೆ ಕಿಂಚಿತ್ತಾದರೂ ಸಹಾಯ ಮಾಡುವಂತಹ ಕೆಲಸದಲ್ಲಿ ನಮ್ಮ ಸರ್ಕಾರ ತೊಡಗಿದೆ ಎಂದು ಹೇಳಲಿಕ್ಕೆ ನಮಗೆ ಸಂತೋಷವಾಗುತ್ತಿದೆ. ಹೀಗಾಗಿ, ಹೆಚ್ಚುವರಿ ಹಾಲು ಉತ್ಪಾದನೆಯಾಯಿತು. ಹೆಚ್ಚುವರಿಯಾದ ಹಾಲು ಉತ್ಪಾದನೆಯನ್ನು ಅಂಗನವಾಡಿಯ ಮಕ್ಕಳು ಸೇರಿದಂತೆ ಶಾಲೆಯ ಮಕ್ಕಳಿಗೆ ವಿತರಿಸುವ ಮೂಲಕ ಅದನ್ನು ಸದುಪಯೋಗ ಪಡಿಸಿಕೊಳ್ಳುವಂತಹ ಕೆಲಸ ಮಾಡಿದೆ. ಇದರಿಂದಾಗಿ, ಹಾಲು ಉತ್ಪಾದನೆಯಲ್ಲಿ ನಮ್ಮ ರಾಜ್ಯ ದೇಶದಲ್ಲಿ ಎರಡನೆಯ ಸ್ಥಾನಕ್ಕೆ ಬಂದಿದೆ ಮತ್ತು ಮೊಟ್ಟೆಯ ಉತ್ಪಾದನೆಯಲ್ಲಿ ದೇಶದಲ್ಲಿ ನಮ್ಮ ರಾಜ್ಯ ಏಳನೆಯ ಸ್ಥಾನದಲ್ಲಿದೆ ಎನ್ನುವ ಅಂಶವನ್ನು ನಮ್ಮ ಘನತೆವೆತ್ತ ರಾಜ್ಯಪಾಲರು ತಮ್ಮ ಭಾಷಣದ ಮೂಲಕ ನಮ್ಮೆಲ್ಲರ ಗಮನಕ್ಕೆ ತಂದಿದ್ದಾರೆ. ಈ ಎಲ್ಲಾ ವ್ಯವಸ್ಥೆಗಳ ಮಧ್ಯದಲ್ಲಿ ರೈತನಿಗೆ ಸರ್ಕಾರ ಕೊಡಬೇಕಾದ ಎಲ್ಲಾ ಬೆಂಬಲಗಳು ಮತ್ತು ಸವಲತ್ತುಗಳ ಮಧ್ಯ ರೈತನಿಗೆ ಒಂದು ದೊಡ್ಡ ಹೊರೆಯಾಗಿರುವುದು ಏನೆಂದರೆ ಅದು ಬೆಳೆ ವಿಮೆ. ಬೆಳೆ ವಿಮೆಯನ್ನು ಕಡ್ಡಾಯ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಈ ವಿಚಾರವಾಗಿ ಮಾತನಾಡುತ್ತಾ ಮಾನ್ಯ ಸದಸ್ಯರು ಕೋರ್ಟ್‌ನಿಂದ ತಡೆಯಾಜ್ಞೆಯನ್ನು ತಂದಿರುವುದಾಗಿ ಹೇಳಿದರು. ಇವತ್ತು ಈ ವಿಚಾರವಾಗಿ ಸೊಸೈಟಿಯವರಿಗೆ ಸಹ ಸರಿಯಾದ ಮಾಹಿತಿ ಇರುವುದಿಲ್ಲ. 4–5 ದಿವಸಗಳಲ್ಲಿ ಆ ವಿಮಾ ಕಂತನ್ನು ಪಾವತಿ ಮಾಡಿ, ಅದನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕೆಂದು ಕೇಂದ್ರ ಸರ್ಕಾರ ಹೇಳಿದಂತಹ ಸಂದರ್ಭ ಆಗಿದೆ. ಈ ವಿಚಾರದಲ್ಲಿ ಸುಮಾರು ಕಡೆ ಹಣ ಪಾವತಿಯಾಗಿದೆ. ಆದರೆ, ಎಷ್ಟು ಕಡೆ ಹಣ ಪಾವತಿಯಾಗಿದೆ, ಎಷ್ಟು ಕಡೆ ಹಣ ಪಾವತಿಯಾಗಿಲ್ಲವೆನ್ನುವುದು ನಮಗೆ ನಿಖರವಾದ ಮಾಹಿತಿ ಇರುವುದಿಲ್ಲ. ಆದರೆ, ಈ ಬೆಳೆ ವಿಮೆ ಹೇಗೆ, ಏನು ಎನ್ನುವಂಥದ್ದರ ಬಗ್ಗೆ ಸರಿಯಾದ ಮಾಹಿತಿ ಅಧಿಕಾರಿಗಳಿಗೂ ಸಹ ಗೊತ್ತಿರುವುದಿಲ್ಲ. ಸೊಸೈಟಿಗಳಿಗೆ ಇದರ ಯಾವುದೇ ಮಾಹಿತಿಯೂ ಇಲ್ಲ. ಆದರೆ, ನಮಗೆ ವಿಮೆ ಅಗತ್ಯ ಹೌದಾಗಿದೆ. ಇದು ರೈತನಿಗೆ ಅನುಕೂಲವಾಗುವ ರೀತಿಯಲ್ಲಿ ಇರಬೇಕೇ ಹೊರತು, ಅದರಿಂದ ಅನಾನುಕೂಲವಾಗಬಾರದು. ಉದಾಹರಣೆಗೆ ಹೇಳುವುದಾದರೆ, ಒಬ್ಬ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಡಿಕೆ ಬೆಳೆಗಾರ ಒಂದು ಹೆಕ್ಟೇರ್‌ನಲ್ಲಿ ಸುಮಾರು 1250 ರಿಂದ 1500 ಅಡಿಕೆ ಗಿಡಗಳನ್ನು ಬೆಳೆಯುತ್ತಾನೆ. ಅವನಿಗೆ ವಿಮೆಯ ಅಂದಾಜು 50688 ರೂಪಾಯಿಗಳು. ಅದರಲ್ಲಿ ರೈತನ ಪಾಲು 6400 ರೂಪಾಯಿಗಳು. ಸರ್ಕಾರದ ಪಾಲು 44,288 ರೂಪಾಯಿಗಳು. ಅ ವಿಮಾ ಹಣವೂ ಸಹ ರೈತನಿಗೆ ಬೆಳೆ ನಷ್ಟವಾದಾಗ ಸಿಕ್ಕುತ್ತದೋ ಇಲ್ಲವೋ ಎನ್ನುವಂತಹ ಖಾತರಿಯೂ ಸಹ ಇರುವುದಿಲ್ಲ. ವಿಮೆ ಹಣ ಅವನ ಕೈಗೆ ಸಿಗಬೇಕಾದರೆ, ಒಂದು ಹೆಕ್ಟೇರ್‌ನಲ್ಲಿನ ಒಂದು ಅಡಿಕೆ ಗಿಡದಲ್ಲಿ ಸುಮಾರು 2 ರಿಂದ 3 ಕೆ.ಜಿ. ಅಡಿಕೆಯನ್ನು ಬೆಳೆದರೆ 500 ರೂಪಾಯಿಗಳಿಂದ 600 ರೂಪಾಯಿಗಳು ಅವನಿಗೆ ಬರುತ್ತದೆ.

**ವೈಸ್ ಛೇರ್ಮನ್:-** ತಾವು ಬೇಗ ತಮ್ಮ ಭಾಷಣವನ್ನು ಮುಗಿಸಬೇಕು. ಏಕೆಂದರೆ, ಇನ್ನು ಕೆಲವು ಮಾನ್ಯ ಸದಸ್ಯರುಗಳು ಮಾತನಾಡುವವರಿದ್ದಾರೆ.

**ಶ್ರೀ ಕೆ.ಹರೀಶ್ ಕುಮಾರ್:-** ಮಾನ್ಯ ಸಭಾಪತಿಯವರೇ, 1250 ರಿಂದ 1500 ಗಿಡಗಳನ್ನು ಒಂದು ಹೆಕ್ಟೇರ್‌ನಲ್ಲಿ ಬೆಳೆದರೆ ಈ ವಿಮೆಯ ಪಾಲಿನಲ್ಲಿ ಅವನಿಗೆ ಸಿಕ್ಕುವಂತಹ ಹಣ ಒಂದು ಗಿಡಕ್ಕೆ 40 ರಿಂದ 50 ರೂಪಾಯಿಗಳು ಮಾತ್ರ. ಅದೂ ಕೂಡ ಹೇಗೆ ಸಿಕ್ಕುತ್ತದೆಂದರೆ, ಆತನಿಗೆ ಬೆಳೆ ವಿಮೆ ಸಿಗಬೇಕಾದರೆ, ಇಡೀ ಆ ಕಂದಾಯ ಗ್ರಾಮದ ಸಂಪೂರ್ಣ ಬೆಳೆ ನಾಶವಾಗಬೇಕು. ಆ ಕಂದಾಯ ಗ್ರಾಮದ ಸಂಪೂರ್ಣ ಬೆಳೆ ನಾಶವಾಗದ ಪಕ್ಷದಲ್ಲಿ ಅವನಿಗೆ ಬೆಳೆ ವಿಮೆ ಸಿಕ್ಕುವುದಿಲ್ಲ. ನಾವು ಇವತ್ತು ಒಂದು ಕುಟುಂಬದ ಒಬ್ಬ ಸದಸ್ಯ ಜೀವ ವಿಮೆ ಮಾಡಿದರೆ, ಅವನು ತೀರಿಕೊಂಡ ಸಂದರ್ಭದಲ್ಲಿ ಅವನ ಅವಲಂಬಿತರಿಗೆ ವಿಮಾ ಕಂತು ಸಿಕ್ಕುತ್ತದೆ. ಇವತ್ತು ನಿಮ್ಮ ಕುಟುಂಬದ ಎಲ್ಲಾ ಸದಸ್ಯರು ಸತ್ತರೆ ಮಾತ್ರ ನಿಮಗೆ ವಿಮಾ ಹಣ ಕೊಡುವಂತಹ ಸಂದರ್ಭವನ್ನು ಇವತ್ತು ಸರ್ಕಾರ ತಂದಲ್ಲಿ ರೈತ ಯಾವ ರೀತಿಯಲ್ಲಿ ಬದುಕಬೇಕು? ಈ ರೀತಿಯ ಕಾನೂನಿನಲ್ಲಿ ಯಾವ ರೀತಿಯಲ್ಲಿ ಬದುಕಬೇಕೆನ್ನುವುದನ್ನು ನಾನು ಕೇಳಲಿಕ್ಕೆ ಬಯಸುತ್ತೇನೆ. ಈ ರೀತಿಯಲ್ಲಿ ಇದ್ದರೆ ರೈತ ತನ್ನ ಬೆಳೆ ವಿಮೆಯನ್ನು ನಿರೀಕ್ಷೆ ಮಾಡುವಂತಿಲ್ಲ.

ಮುಂದು. .

**(69) 04.07..2018 3.40 ಎಸ್‌ವಿ-ಬಿಎನ್‌ಎಸ್**

**ಶ್ರೀ ಕೆ.ಹರೀಶ್ ಕುಮಾರ್ (ಮುಂದು):-**

ಅವನ ಹಣ ವ್ಯರ್ಥವಾಗುತ್ತಿದೆ. ಅದು ವೈಜ್ಞಾನಿಕವಾಗಿಲ್ಲ. ಇದರಿಂದ ಯಾರು ಲಾಭ ಮಾಡಿಕೊಳ್ಳುತ್ತಾರೆ ಎಂಬುದನ್ನೂ ಸಹ ನಾವು ಗಮನಿಸಬೇಕಾಗಿದೆ. ಯಾವುದೋ ಒಂದು ವಿಮಾ ಕಂಪನಿಗೆ ಈ ಒಂದು ಅವಕಾಶವನ್ನು ಕೇಂದ್ರ ಸರ್ಕಾರ ಕಲ್ಪಿಸಿಕೊಟ್ಟಿದೆ. ಆ ಕಂಪನಿಯವರು ಇಲ್ಲಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇರೆ ಬೇರೆ National Insurance Company ಗಳ ಏಜೆಂಟರು ಊರೂರಿನಲ್ಲಿಯೂ ಇರುತ್ತಾರೆ. ಆದರೆ ಈ ಕಂಪನಿಯನ್ನು ಕೇಳುವವರು ಯಾರು ಎಂಬ ವಿಚಾರವೇ ನಮಗೆ ಗೊತ್ತಿಲ್ಲ.

**ವೈಸ್ ಛೇರ್‌ಮನ್:-** ಮಾನ್ಯ ಹರೀಶ್‌ರವರೆ, ದಯಮಾಡಿ ಬೇಗ ಮುಗಿಸಿ.

**ಶ್ರೀ ಕೆ.ಹರೀಶ್ ಕುಮಾರ್:-** ಇದು ಸಂಪೂರ್ಣ ಅವೈಜ್ಞಾನಿಕವಾಗಿದೆ. ಕೇಂದ್ರ ಸರ್ಕಾರವು ಇದನ್ನು ವಾಪಸ್ ಪಡೆಯಬೇಕು. ಇಲ್ಲವಾದಲ್ಲಿ ಇದರ ಆಮೂಲಾಗ್ರ ಬದಲಾವಣೆಯಾಗಬೇಕು. ಇವತ್ತು 0% ಬಡ್ಡಿ ದರದಲ್ಲಿ ಸಾಲವನ್ನು ನೀಡಲಾಗಿದೆ. 3% ಬಡ್ಡಿ ದರದಲ್ಲಿ ಸಾಲವನ್ನು ನೀಡಲಾಗಿದೆ. ಆದರೆ ಇದೆಲ್ಲಾ ವ್ಯರ್ಥವಾಗುವಂಥ ಪರಿಸ್ಥಿತಿ. ಈ ಬೆಳೆ ವಿಮೆಯಲ್ಲಿ ಅವನಿಗೆ ಶೇ.5ರಷ್ಟು ಬಡ್ಡಿ ಬರುತ್ತದೆ. ರೈತನು ಪಾವತಿ ಮಾಡಿದಂತಹ ಕಂತಿಗೆ ಶೇ.5ರಷ್ಟು ಸಾಲದ ಬಡ್ಡಿಯನ್ನು ಕಟ್ಟಿದಂತಹ ವ್ಯವಸ್ಥೆಗೆ ಈ ಒಂದು ವಿಮೆ ಬಂದರೆ ಅವನಿಗೆ ನಾವು ಧರ್ಮಾರ್ಥವಾಗಿ ಶೂನ್ಯ ಬಡ್ಡಿ ದರದಲ್ಲಿ ಅಥವಾ 3% ಬಡ್ಡಿ ದರದಲ್ಲಿ ಸಾಲ ಕೊಟ್ಟು ಅದು ಏನೂ ಪ್ರಯೋಜನವಾಗುತ್ತಿಲ್ಲ.

**ವೈಸ್ ಛೇರ್‌ಮನ್:-** ಮಾನ್ಯ ಹರೀಶ್‌ರವರೆ, ದಯಮಾಡಿ ಬೇಗ ಮುಗಿಸಿ. ಇನ್ನೂ ಹಲವರು ಮಾತನಾಡಬೇಕಿದೆ. Even though, it is the maiden speech of Sri K. Harish Kumar, there are many other Members to speak. The Member will be in this House for six years and he has to speak a lot. ಆದುದರಿಂದ, ದಯಮಾಡಿ ಬೇಗ ಮುಗಿಸಿ.

**ಶ್ರೀ ಕೆ.ಹರೀಶ್ ಕುಮಾರ್:-** ಮಾನ್ಯ ಸಭಾಪತಿಯವರೆ, ನಾಳೆ ಆಯವ್ಯಯ ಮಂಡನೆಯಾಗಲಿದೆ. ಎಲ್ಲಾ ಆತಂಕಗಳಿಗೆ ಕೊನೆ ಬೀಳಲಿದೆ. ಮುಂದಿನ ಐದು ವರ್ಷಗಳ ಕಾಲ ಈ ಮೈತ್ರಿ ಸರ್ಕಾರ ಯಾವುದೇ ಅಡ್ಡಿ ಆತಂಕಗಳಿಲ್ಲದೆ ಸಾಗುತ್ತದೆ. ನವಕರ್ನಾಟಕ ನಿರ್ಮಾಣದ ಗುರಿಯನ್ನು ನಮ್ಮ ಸರ್ಕಾರ ಸಾಧಿಸಬೇಕಿದೆ. ನಾವು ಸುಭದ್ರ ಸರ್ಕಾರವನ್ನು ನೀಡುತ್ತೇವೆ. ಇದರಲ್ಲಿ ಯಾರಿಗೂ ಸಂಶಯ ಬೇಡ. ಘನತೆವೆತ್ತ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಮಿತವಾಗಿ ಉಪ್ಪು, ಹುಳಿ, ಖಾರವನ್ನು ಬೆರೆಸಿ ಹೆಚ್ಚು ಮಸಾಲೆ ಹಾಕದೆ ಅದನ್ನು ಅತ್ಯಂತ ಕಡಿಮೆ ಪುಟಗಳಲ್ಲಿ ಓದಿ ನಮಗೆ ಕೊಟ್ಟಿರುತ್ತಾರೆ. ಅದಕ್ಕಾಗಿ ಮಾನ್ಯ ರಾಜ್ಯಪಾಲರಿಗೆ ವಂದಿಸುತ್ತೇನೆ. ಅವಕಾಶಕ್ಕಾಗಿ ಮಾನ್ಯ ಸಭಾಪತಿಯವರಿಗೂ ಸಹ ವಂದಿಸುತ್ತೇನೆ.

**ಶ್ರೀ ಆರ್.ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ತಮಗೆ ವಂದನೆಗಳು. 02ನೇ ತಾರೀಖಿನಂದು ವಿಧಾನ ಮಂಡಲದ ಜಂಟಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಧಿವೇಶನವನ್ನು ಉದ್ದೇಶಿಸಿ ಗೌರವಾನ್ವಿತ ರಾಜ್ಯಪಾಲರು ಮಾಡಿದಂತಹ ಭಾಷಣಕ್ಕೆ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಪ್ರಸ್ತಾಪಿಸಿದ ವಂದನಾ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸಿ, ಕೆಲವು ವಿಚಾರಗಳನ್ನು ಮಾತನಾಡುವುದಕ್ಕೆ ನಾನು ಇಚ್ಛಿಸುತ್ತೇನೆ.

ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸಂಖ್ಯೆ ಬಹಳ ಮುಖ್ಯ. ಕಳೆದ ಚುನಾವಣೆಯಲ್ಲಿ ಎಲ್ಲಾ ಪಕ್ಷಕ್ಕಿಂತ ಕಾಂಗ್ರೆಸ್ ಪಕ್ಷ ಶೇ.2 ರಷ್ಟು ಹೆಚ್ಚು ಮತಗಳನ್ನು ಪಡೆದರೂ ಸಹ ಸ್ಥಾನ ಕಡಿಮೆ ಬಂದಿತ್ತು. ಆ ಸ್ಥಾನ ಕಡಿಮೆ ಬಂದಿದ್ದರಿಂದ ಇಂದು ನಾವು ಸಮ್ಮಿಶ್ರ ಸರ್ಕಾರವನ್ನು ಮಾಡಿ ಮಾನ್ಯ ಕುಮಾರಸ್ವಾಮಿಯವರು ಇಂದು ಮುಖ್ಯಮಂತ್ರಿಗಳಾಗಿ ತಮ್ಮ ಸರ್ಕಾರದ ಮುಂದಿನ ಹಾದಿ ಯಾವ ರೀತಿ ಇರುತ್ತದೆ ಎಂಬುದನ್ನು ರಾಜ್ಯಪಾಲರ ಭಾಷಣದ ಮೂಲಕ ಜನತೆಗೆ ತಿಳಿಸಿರುತ್ತಾರೆ.

ಈ ಸರ್ಕಾರ ಬಂದ ನಂತರ ರೈತರ ಸಾಲ ಮನ್ನಾ ಆಗುತ್ತದೆ ಎಂದು ಜನ ಮತ್ತು ರೈತರು ಬಹಳ ಮುಖ್ಯವಾಗಿ ನಿರೀಕ್ಷೆ ಮಾಡುತ್ತಿದ್ದಾರೆ. ಎಷ್ಟು ಸಾಲ ಮನ್ನಾ ಆಗಬಹುದು ಎನ್ನುವುದರ ಬಗ್ಗೆ ಈಗಾಗಲೇ ಮಾಧ್ಯಮಗಳಲ್ಲಿ, ಜನರಲ್ಲಿ ಚಿಂತನೆಗಳು ಆರಂಭವಾಗಿದೆ. ಅದೆಷ್ಟು ಆಗುತ್ತದೆ ಎಂಬುದನ್ನು ಮಾನ್ಯ ಮುಖ್ಯಮಂತ್ರಿಯವರು ನಾಳಿನ ಬಜೆಟ್‌ನಲ್ಲಿ ಹೇಳಲಿದ್ದಾರೆ. ರೂ.8,500 ಕೋಟಿ ರೈತರ ಸಾಲ ಮನ್ನಾ ಮಾಡುವಂತಹ ಕೆಲಸವನ್ನು ಹಿಂದಿನ ಸರ್ಕಾರದ ಆಗಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಸಿದ್ದರಾಮಯ್ಯನವರು ಮಾಡಿದ್ದರು. ಕಾರಣ ಈ ರಾಜ್ಯದ ರೈತರು ಬರದ ಸಂಕಷ್ಟದಲ್ಲಿದ್ದಾರೆ. ಸರಿಯಾದ ಸಮಯಕ್ಕೆ ಮಳೆ ಆಗಲಿಲ್ಲ, ಬೆಳೆ ಆಗಲಿಲ್ಲ. ಆದ್ದರಿಂದ ರೈತ ಆತ್ಮಹತ್ಯೆಯ ದಾರಿಯನ್ನು ಹಿಡಿದಿದ್ದಾನೆಂಬ ಕಾರಣದಿಂದ ರೈತರಿಗೆ ಅನುಕೂಲವಾಗಬೇಕೆನ್ನುವ ಉದ್ದೇಶವಿಟ್ಟುಕೊಂಡು ಸಾಲ ಮನ್ನಾ ಮಾಡಿದರು. ರೈತನ ಜೀವಕ್ಕೆ ಎಷ್ಟು ಬೆಲೆಯನ್ನು ಕಟ್ಟಿದರೂ ಸಹ ಕಡಿಮೆ. ಆದರೂ ಸಹ ರೂ.2 ಲಕ್ಷ ಇದ್ದಂತಹ ಪರಿಹಾರ ಧನವನ್ನು ರೂ.5 ಲಕ್ಷಗಳಿಗೆ ಏರಿಸಿ, ಆತ್ಮಹತ್ಯೆ ಮಾಡಿಕೊಂಡಂತಹ ರೈತನ ಮಕ್ಕಳಿಗೆ ಉಚಿತವಾಗಿ ವಿದ್ಯಾಭ್ಯಾಸ ನೀಡಿ, ಅವರ ಕುಟುಂಬಕ್ಕೆ ಮಾಸಿಕ ಭತ್ಯೆಯನ್ನು ಕೊಡುವ ಕೆಲಸವನ್ನು ಮಾಡಿದೆ. ರೈತನಿಗೆ ಎಷ್ಟೇ ಸಾಲ ಮನ್ನಾ ಮಾಡಿದರೂ ರೈತನ ಪರವಾಗಿ ಬೇರೆ ರೀತಿಯಲ್ಲಿ ಯೋಚನೆ ಮಾಡುವಂತಹ ಕೆಲಸ ಆಗಬೇಕಾಗಿದೆ.

ಶಿವಮೊಗ್ಗ ಜಿಲ್ಲೆ ಮಲೆನಾಡಿಗೆ ಒಳಪಡುತ್ತದೆ. ಮಲೆನಾಡಿನಲ್ಲಿ ಮೂರು ವರ್ಷ ಸತತವಾಗಿ ಮಳೆ ಬರದೆ ಇರುವಂತಹ ಪರಿಸ್ಥಿತಿ ಉದ್ಭವವಾಯಿತು. ಶಿವಮೊಗ್ಗ ಜಿಲ್ಲೆ ಭತ್ತದ ಕಣಜ. ಆದರೆ ಭತ್ತವನ್ನು ಬೆಳೆಯಲು ಸಾಧ್ಯವಾಗದೆ ಭತ್ತವನ್ನು ಬೆಳೆಯುವ ಪ್ರದೇಶದಲ್ಲಿ ಮೆಕ್ಕೆ ಜೋಳವನ್ನು ಬೆಳೆಯುವ ಕೆಲಸವನ್ನು ರೈತರು ಮಾಡಿದರು. ಮೆಕ್ಕೆ ಜೋಳವನ್ನು ಬೆಳೆದ ಮೇಲೆ ಸರಿಯಾದ ರೀತಿಯಲ್ಲಿ ಅದನ್ನು ಮಾರುಕಟ್ಟೆಗೆ ತರಲಾಗದೆ ಮತ್ತೊಮ್ಮೆ ತೊಂದರೆಗೆ ಸಿಲುಕಿಕೊಳ್ಳುವಂತಾಯಿತು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದಕ್ಕೆ ಕೇಂದ್ರ ಸರ್ಕಾರ ಮೆಕ್ಕೆ ಜೋಳವನ್ನು ಖರೀದಿ ಮಾಡಲು ಅವಕಾಶ ಮಾಡಿಕೊಡದೆ ಇದ್ದದ್ದು ಒಂದು ದೊಡ್ಡ ಕಾರಣವಾಯಿತು. ಇಂದಿನ ಗ್ರಾಮೀಣಾಭಿವೃದ್ಧಿ ಸಚಿವರು ಹಾಗೂ ಹಿಂದಿನ ಕೃಷಿ ಸಚಿವರ ಬಳಿಯೂ ಸಹ ನಾನು ಈ ವಿಷಯವನ್ನು ಪ್ರಸ್ತಾಪಿಸಿದ್ದೆನು. ಆ ಸಂದರ್ಭದಲ್ಲಿ ಅವರು "ಕೇಂದ್ರ ಸರ್ಕಾರದ ಮುಂದೆ ನಾವು ಹಲವಾರು ಬಾರಿ ಮನವಿಯನ್ನು ಮಾಡಿದೆವು. ಆದರೆ ಅದಕ್ಕೆ ಕೇಂದ್ರ ಸರ್ಕಾರ ಸ್ಪಂದಿಸಲಿಲ್ಲ. ರಾಜ್ಯವೇ ಅದನ್ನು ಖರೀದಿ ಮಾಡಿ ಪಡಿತರಕ್ಕೆ ಉಪಯೋಗಿಸಿಕೊಳ್ಳಲಿ ಎಂದು ಕೇಂದ್ರ ಸರ್ಕಾರ ಹೇಳಿತು" ಎಂದು ಹೇಳಿದರು. ಆ ರೀತಿ ಪಡಿತರಕ್ಕೆ ಉಪಯೋಗಿಸಿಕೊಳ್ಳುವಂಥ ಪರಿಸ್ಥಿತಿ ನಮ್ಮ ಕರ್ನಾಟಕದಲ್ಲಿ ಇರಲಿಲ್ಲ. ಕಾರಣವೇನೆಂದರೆ ನಾವು ಅದನ್ನು ಪಶು ಆಹಾರವಾಗಿ, ಕೋಳಿಗಳಿಗೆ ಆಹಾರವಾಗಿ ಉಪಯೋಗಿಸುತ್ತಿದ್ದೇವೆ. ಜನ ಅದನ್ನು ತಿನ್ನುವುದಿಲ್ಲ. ಹಾಗಾಗಿ ಅದನ್ನು ಖರೀದಿ ಮಾಡಲು ಆಗಲಿಲ್ಲ. ಅದಕ್ಕೆ ರೂ.1300/- ಬೆಂಬಲ ಬೆಲೆಯಿದ್ದರೂ ಸಹ ರೂ.1000, 1100, 1050 ಗಳಿಗೆ ಮಾರಾಟವಾಯಿತು. ಇದರಿಂದ ಮತ್ತೊಮ್ಮೆ ರೈತ ಸಾಲದ ಸುಳಿಯಲ್ಲಿ ಸಿಲುಕಿ ಸಂಕಷ್ಟದಲ್ಲಿದ್ದಾನೆ. ಜೊತೆಗೆ ನಮ್ಮ ರೈತರಿಗೆ ರೂ.1000, 1100, 1300 ಮೆಕ್ಕೆ ಜೋಳದ ಬೆಲೆ ಇದ್ದರೆ ಬೀಜದ ಜೋಳ 4 ಕೆಜಿಯ ಒಂದು ಪ್ಯಾಕೆಟ್‌ಗೆ ರೂ.1200 ರಿಂದ 1300 ಇದೆ. ಸುಮಾರು ರೂ.250 ರಿಂದ 300 ಒಂದು ಕೆ.ಜಿ. ಜೋಳದ ಬೀಜದ ಬೆಲೆ ಇದೆ. ಅದೇ ರೈತ ಬೆಳೆದಂತಹ ಜೋಳಕ್ಕೆ ರೂ.10 ರಿಂದ 12. ಇದು ರೈತನಿಗೆ ಸಿಕ್ಕುತ್ತಿರುವ ನ್ಯಾಯ. ಹಾಗಾಗಿ ಇಂದು ರೈತ ತಾನು ಬೆಳೆದ ಬೆಳೆಯನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಬೆಲೆ ದೊರೆಯುವಂತಾಗುವ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆ.

**(...ಮುಂದು)**

(069)04.07.2018 3.50 ಕೆಜಿ.ಜಿಆರ್

**ಶ್ರೀ ಆರ್.ಪ್ರಸನ್ನಕುಮಾರ್ (ಮುಂದು..):-** ನಮ್ಮ ಮಲೆನಾಡು ಶಿವಮೊಗ್ಗ ಜಿಲ್ಲೆಯಲ್ಲಿ ನದಿಗಳು ಹುಟ್ಟಿ ಹರಿಯುತ್ತವೆ. ನಾವು ನಮ್ಮ ನೀರನ್ನು ಆಂಧ್ರಪ್ರದೇಶದವರೆಗೂ ಕಳುಹಿಸುತ್ತಿದ್ದೇವೆ. ಆದರೆ, ನಮ್ಮ ನೀರನ್ನು ನಾವು ಬಳಸಿಕೊಳ್ಳುವುದರಲ್ಲಿ ನಾವು ಎಲ್ಲೋ ಒಂದು ಕಡೆ, ಹಿಂದೆ ಬಿದ್ದಿದ್ದೇವೆಂದು ನನಗೆ ಅನಿಸುತ್ತದೆ. ಈ ಹಿಂದೆ ಮಲೆನಾಡು ಪ್ರದೇಶದಲ್ಲಿ ಯಾವಾಗಲೂ ಮಳೆ ಹೆಚ್ಚಾಗಿ ಬೀಳುತ್ತಿತ್ತು. ಹಾಗಾಗಿ, ನಮಗೆ ನೀರಿನ ಬಗ್ಗೆ ಅಷ್ಟೊಂದು ಪ್ರಾಮುಖ್ಯತೆ ಗೊತ್ತಿರಲಿಲ್ಲ. ಇವತ್ತು ನಾವು ನಮ್ಮ ಕೆರೆಗಳನ್ನು ತುಂಬಿಸಿಕೊಳ್ಳದಿದ್ದರೆ ಕುಡಿಯುವುದಕ್ಕೂ ಸಹ ನೀರು ಇಲ್ಲದಂತಹ ಪರಿಸ್ಥಿತಿ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿದೆ. ನಾವು ಜಪಾನ್ ದೇಶದ ಮಾದರಿಯಲ್ಲಿ ನೀರಿನ ಸೋರಿಕೆಯನ್ನು ತಡೆಗಟ್ಟಬೇಕು. ಆ ನೀರನ್ನು ಸರಿಯಾಗಿ ಬಳಸಿಕೊಳ್ಳಬೇಕೆಂದು ರಾಜ್ಯಪಾಲರ ಭಾಷಣದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಲ್ಲೇಖವಾಗಿದೆ. ಆ ನೀರನ್ನು ಬಳಸಿಕೊಳ್ಳುವಂತಹ ಕೆಲಸವಾಗಬೇಕೆಂದರೆ, ನಮ್ಮ ಜಿಲ್ಲೆಯಲ್ಲಿ ಹರಿಯುತ್ತಿರುವಂತಹ ನದಿಗಳಿಂದ ನೀರನ್ನು ಕೆರೆಗಳಿಗೆ ತುಂಬಿಸಿದರೆ ಮಾತ್ರ ನಮ್ಮ ರೈತರ ಬದುಕು ಹಸನಾಗುತ್ತದೆ. ಆ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆ. ಆದರೆ, ನಾನು ಶಿವಮೊಗ್ಗ ಜಿಲ್ಲೆಗೆ ಆ ಕೆಲಸ ಆಗಬೇಕೆಂದು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ಇದರ ಜೊತೆಗೆ ನಮ್ಮ ಜಿಲ್ಲೆಯ ಇನ್ನೊಂದು ಮುಖ್ಯವಾದಂತಹ ಬೆಳೆ ಎಂದರೆ, ಅಡಿಕೆ ಬೆಳೆ. ಅಡಿಕೆ ಬೆಳೆಯನ್ನು ಶಿವಮೊಗ್ಗ ಜಿಲ್ಲೆಯಲ್ಲಿ ಬಹಳಷ್ಟು ಬೆಳೆಯುತ್ತಿದ್ದೇವೆ. ನಮ್ಮ ಶಿವಮೊಗ್ಗ ಜಿಲ್ಲೆಯ ಪಕ್ಕದ ದಾವಣಗೆರೆ ಜಿಲ್ಲೆಯಲ್ಲಿಯೂ ಸಹಾ, ಅಡಿಕೆ ಬೆಳೆಯನ್ನು ಬೆಳೆಯುತ್ತಿದ್ದಾರೆ. 'ಚನ್ನಗಿರಿ ತಾಲ್ಲೂಕ್' ಅಡಿಕೆಯ ನಾಡು ಎಂಬ ಹೆಸರನ್ನು ಪಡೆದುಕೊಂಡಿದೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಅಡಿಕೆ ಬೆಳೆಗೆ ಕೊಳೆ ರೋಗ ಮತ್ತು ಮಂಡಿಗೆ ರೋಗಗಳು ಬಂದು ರೈತರು ಒದ್ದಾಡುವಂತಹ ಪರಿಸ್ಥಿತಿಯಲ್ಲಿದ್ದಾರೆ. ಈಗ ಮಾನ್ಯ ಸದಸ್ಯರಾದ ಹರೀಶ್‌ಕುಮಾರ್‌ರವರು ಮಾತನಾಡುವಾಗ ಒಂದು ಗಿಡದಿಂದ ಎಷ್ಟು ಫಸಲು ಸಿಗುತ್ತದೆ ಮತ್ತು ಆ ಗಿಡದ ಮೇಲೆ ಆ ರೈತ ಎಷ್ಟು ಅವಲಂಬಿತನಾಗಿರುತ್ತಾನೆಂದು, ರೈತ ನಿರೀಕ್ಷಿಸಿದಷ್ಟು ಫಲ ಸಿಕ್ಕಿದರೆ ಪರವಾಗಿಲ್ಲ. ಇಲ್ಲವೆಂದರೆ, ಅದು ಸಹ ಕಷ್ಟವೆಂಬ ಮಾತನ್ನು ಹೇಳಿದ್ದಾರೆ. ಇವತ್ತು ಅಡಿಕೆಯ ಬೆಲೆ ದಿವಸದಿಂದ ದಿವಸಕ್ಕೆ ಕಡಿಮೆ ಆಗುತ್ತಾ ಬರುತ್ತಿದೆ. ಹಾಗಾಗಿ, ನಮ್ಮ ರೈತರಿಗೆ ಬಲ ತುಂಬುವಂತಹ ಕೆಲಸವಾಗಬೇಕಾಗಿರುವುದರಿಂದ, ಇವತ್ತು ಸರ್ಕಾರ ಇಸ್ರೇಲ್ ಮಾದರಿಯಲ್ಲಿ ನಾವು ನೀರನ್ನು ಬಳಸಬೇಕು ಮತ್ತು ಇಸ್ರೇಲ್ ಮಾದರಿಯಲ್ಲಿ ಬೇಸಾಯ ಪದ್ಧತಿಯನ್ನು ಮಾಡಬೇಕೆಂದು ಹೇಳುತ್ತಿರುವುದು ಸರಿಯಾದ ಕ್ರಮ. ನಮ್ಮ ರೈತರು ಸಹ ಇದರ ಬಗ್ಗೆ ಯೋಜನೆ ಮಾಡಬೇಕು. ನಾವು ನಮ್ಮ cropping pattern ಏನು ಇರುತ್ತದೆ, ನಾವು ಅದನ್ನು ಎಲ್ಲೂ ಅಳವಡಿಸಿಕೊಳ್ಳುವುದಿಲ್ಲ. ನಮಗೆ ಎಷ್ಟು ನೀರು ಸಿಗುತ್ತದೆ. ಆ ನೀರಿಗೆ ಯಾವ ಬೆಳೆಯನ್ನು ಬೆಳೆಯ ಬೇಕು? ಯಾವ ಬೆಳೆಯನ್ನು ಬೆಳದರೆ ನಮಗೆ ಅನುಕೂಲವಾಗುತ್ತದೆ ಎಂದು ಸರ್ಕಾರ ತಿಳುವಳಿಕೆ ಕೊಡುತ್ತಿರುತ್ತದೆ. ಆದರೆ, ಅದಕ್ಕೆ ವಿರುದ್ಧವಾಗಿ ರೈತರು ಹೋಗುತ್ತಾರೆ. ರೈತರು ಎಂದರೆ, ನಾವು ಸಹ ಸೇರಿದ್ದೇವೆ. ನಾವು ಎಲ್ಲೋ ಒಂದುಕಡೆ ನೀರು ಸಿಗುತ್ತದೆ, ನಾವು ಇಳಿಜಾರು ಭೂಮಿಯಲ್ಲಿ ಇದ್ದೇವೆಂದು ತಿಳಿದು ಭತ್ತ ಬೆಳೆಯುವುದಕ್ಕೆ ಹೋಗುತ್ತೇವೆ. ಆ ಬೆಳೆಯ ಪದ್ಧತಿಯನ್ನು ಅಳವಡಿಸಿಕೊಳ್ಳದಿರುವುದಕ್ಕೆ ಇವತ್ತಿನ ದಿವಸ ರೈತರು ಸಮಸ್ಯೆಗಳಿಗೆ ಸಿಕ್ಕಿಹಾಕಿಕೊಳ್ಳುತ್ತಿದ್ದಾರೆ. ಇವತ್ತು ಬಹಳ ಮುಖ್ಯವಾಗಿ ರೈತರಿಗೆ ಆದಷ್ಟು ಮಾರುಕಟ್ಟೆ ಬೆಲೆ ಸಿಗಬೇಕು. ಮಾರುಕಟ್ಟೆ ಬೆಲೆ ಸಿಕ್ಕರೆ ರೈತರು ಸರ್ಕಾರವನ್ನು ಯಾವ ಸಾಲವನ್ನು ಮತ್ತು ಬಡ್ಡಿಯನ್ನು ಮನ್ನಾ ಮಾಡಿ ಎಂದು ಕೇಳವುದಿಲ್ಲ. ಇವತ್ತು ಆ ಬಗ್ಗೆ ಸರ್ಕಾರ ಇನ್ನೊಂದು ಸಲ ಗಮನವನ್ನು ಹರಿಸಬೇಕೆಂದು ಹೇಳುತ್ತೇನೆ. ಮಾನ್ಯ ಸಭಾಪತಿಯವರು ಸಮಯದ ಅಭಾವ ಇದೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ, ಮಾನ್ಯ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಭಾಪತಿಯವರಿಗೆ ಗೌರವವನ್ನು ಕೊಟ್ಟು ಇವತ್ತು ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ. ಎಲ್ಲರಿಗೂ ಧನ್ಯವಾದಗಳು.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ನೂತನವಾಗಿ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಸಮ್ಮಿಶ್ರ ಸರ್ಕಾರ ಯಾವ ರೀತಿ ಯ್ಾವ ದಿಕ್ಕಿನಲ್ಲಿ ನಡೆಯುತ್ತದೆ ಮತ್ತು ಯಾವ ರೀತಿಯ ಯೋಜನೆಗಳನ್ನು ಜಾರಿಗೆ ತರುತ್ತದೆ ಎನ್ನುವ ಬಗ್ಗೆ ಸೂಕ್ಷ್ಮವಾಗಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿಸುತ್ತಾರೆಂದು ನನ್ನ ಭಾವನೆ ಇತ್ತು. ಜೊತೆಗೆ ಕ್ರಾಂಗೆಸ್ ಪಕ್ಷ ಇರಬಹುದು, ಜನತಾ ದಳ ಇರಬಹುದು ಇವರೆಡು ಪಕ್ಷದವರು ಒಪ್ಪಿಕೊಂಡಂತಹ ಕೆಲವು Common Programme ಗಳನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿಸುತ್ತಾರೆ ಎನ್ನುವ ಭಾವನೆ ಇತ್ತು. ನಾನು ಈ ಸಮ್ಮಿಶ ಸರ್ಕಾರದಲ್ಲಿ ಇನ್ನೂ ಸಮನ್ವಯತೆ ಮೂಡಿಲ್ಲವೆಂದು ಹಾಗೂ ಹೊಂದಾಣಿಕೆ ಆಗಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ರಾಜ್ಯದ ಮುಖ್ಯಮಂತ್ರಿಯಾಗಿರುವಂತಹ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಚುನಾವಣೆ ಪೂರ್ವದಲ್ಲಿ ಪ್ರಣಾಳಿಕೆಯಲ್ಲಿ ಏನು ಘೋಷಣೆ ಮಾಡಿದ್ದರು ಅದರಲ್ಲಿ ಕೆಲವೊಂದನ್ನಾದರೂ ಸಹ ಜಾರಿಗೆ ತರುವಲ್ಲಿ ಏನೇನು ಜಾರಿಗೆ ತರುತ್ತೇವೆ ಎನ್ನುವುದರ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪವಾಗಿರುತ್ತದೆ ಎನ್ನುವಂತಹ ಭಾವನೆ ನನ್ನಲ್ಲಿ ಇತ್ತು. ಆದರೆ, ಅದು ಸಹ ಆಗಿಲ್ಲ. ನಾನು ಇಲ್ಲಿ ಕೆಲವೊಂದು ವಿಷಯಗಳನ್ನು ಇದಕ್ಕೆ ಸಂಬಂಧಪಟ್ಟಂತೆ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಈಗ ಮಾನ್ಯ ಸದಸ್ಯರಾದ ಆರ್.ಪ್ರಸನ್ನಕುಮಾರ್‌ರವರು ನಾವೆಲ್ಲ ರಾಜ್ಯದ ಜನತೆ ಹಾಗೂ ರೈತರು ಎಂದು ಹೇಳಿದರು. ರೈತರ ಸಾಲ ಮನ್ನಾದ ಬಗ್ಗೆ ಏನಾದರೂ ಸೂಕ್ಷ್ಮವಾಗಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಆಗುತ್ತದೆ ಎಂದು ಭಾವಿಸಿದ್ದೆ. ಎಷ್ಟು ಸಾಲ ಮನ್ನಾ ಮಾಡುತ್ತೇವೆಂದು ಹೇಳುವುದು ಬೇಡ. ಆದರೆ, ಅದರ ಬಗ್ಗೆ ಒಂದು ಸೂಚನೆಯನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಬೇಕಲ್ಲವೇ?

**ಶ್ರೀ ಆರ್.ವಿ.ದೇಶಪಾಂಡೆ(ಕಂದಾಯ ಸಚಿರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಒಂದು ಮಾಹಿತಿಯನ್ನು ಸದನಕ್ಕೆ ಕೊಡುತ್ತೇನೆ. In the United States of America, the Budget cannot be kept secret. ಸೀಕ್ರೆಟ್ ಆಗಿ ಇಡುವುದಿಲ್ಲ. In India, you have to keep the Budget secret. You have to understand this. ಬಜೆಟ್ ಲೀಕ್ ಆಗಬಾರದು. ಹಿಂದೆ ಒಮ್ಮೆ ಬಜೆಟ್ ಲೀಕ್

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿತ್ತು. ಹಾಗಾಗಿ, ಬಜೆಟ್ ಏನು ಬರುತ್ತದೆ. ಅದರ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು broader line ಕೊಡಬಹುದೇ ವಿನಃ, ಸಾಲ ಮಾನ್ನಾ ಮಾಡುತ್ತೇವೆ, ಮತ್ತೊಂದು ಮಾಡುತ್ತೇವೆ ಎಂದು that cannot be disclosed.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ರಾಜ್ಯಪಾಲರ ಭಾಷಣ ಪುಸ್ತಕದ ಪುಟ ಸಂಖ್ಯೆ 4 ರ ಪ್ಯಾರ 6 ರಲ್ಲಿ "ಆತಂಕದ ದಿನಗಳು ಇನ್ನಿಲ್ಲ. ಧ್ವನಿ ಇಲ್ಲದ ರೈತರಿಗೆ ಧ್ವನಿಯಾಗಬೇಕು ಎಂಬುದು ನನ್ನ ಸರ್ಕಾರದ ಆಶಯ. ಯಾವುದೇ ಕಾರಣಕ್ಕೂ ರೈತರು ಆತ್ಮಹತ್ಯೆಗೆ ಶರಣಾಗಬಾರದು" ಎಂದು ಈ ಸದನದ ಮೂಲಕ ರೈತ ಸಮುದಾಯಕ್ಕೆ ಮನವಿ ಮಾಡುತ್ತೇನೆಂದು ಮಾನ್ಯ ರಾಜ್ಯಪಾಲರ ಮೂಲಕ ಹೇಳಿಸಿದ್ದಾರೆ. ಮಾನ್ಯ ಸಭಾಪತಿಯವರೇ, ಒಂದು ಹೆಜ್ಜೆ ಮುಂದೆ ಹೋಗಿ ಸಾಲ ಮನ್ನಾಕ್ಕೆ ಈ ಸರ್ಕಾರ ಬದ್ಧವಾಗಿದೆ ಎಂದು ಒಂದು ಶಬ್ದ ಹೇಳಿದ್ದರೆ ಏನಾಗುತ್ತಿತ್ತು ಎನ್ನುವುದು ನನ್ನ ಭಾವನೆ. ಇದರಲ್ಲಿ ಘೋಷಣೆ ಮಾಡುವುದಕ್ಕೆ ಮಾನ್ಯ ರಾಹುಲ್ ಗಾಂಧಿಯವರು ಮತ್ತು ಮಾನ್ಯ ಸಿದ್ದರಾಮಯ್ಯನವರು ಅನುಮತಿ ಕೊಟ್ಟಿದ್ದಾರೋ ಅಥವಾ ಇಲ್ಲವೋ ಎಂದು ನನಗೆ ಸಂಶಯ ಬರುತ್ತದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನಾಳೆ ಬಜೆಟ್‌ನಲ್ಲಿ ಎಲ್ಲಾ ಗೊತ್ತಾಗುತ್ತದೆ ಬಿಡಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರಾದ ಹೆಚ್.ಡಿ.ಕುಮಾರಸ್ವಾಮಿಯವರು ಚುನಾವಣೆಯ ಪೂರ್ವ ಭಾಷಣದಲ್ಲಿ ರೈತರ ಎಲ್ಲಾ ಸಾಲಗಳನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದರು. ಆದ್ದರಿಂದ, ಅವರು ಎಷ್ಟು ಸಾಲ ಮಾನ್ನಾ ಮಾಡುತ್ತಾರೆಂದು ಕಾದುನೋಡಬೇಕಾಗಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಇವತ್ತು ರಾತ್ರಿ ಕಾಯಿರಿ. ನಾಳೆ ಎಲ್ಲಾ ನಿಮಗೆ ಗೊತ್ತಾಗುತ್ತದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ಚುನಾವಣೆಯ ಪ್ರಾಣಾಳಿಕೆಯು ಎಲ್ಲಾ ದಿನಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ. ಅದು ಯಾವ ವಿಷಯವೆಂದರೆ, ನಮ್ಮ ರಾಜ್ಯ ಸರ್ಕಾರಿ ನೌಕರರಿಗೆ New Pension Scheme (N.P.S.,) ಅನ್ನು ರದ್ದುಗೊಳಿಸಿ ಪುನಃ Old Pension Scheme ಅನ್ನು ಜಾರಿಗೆ ತರುತ್ತೇವೆಂದು ಹೇಳಿದ್ದರು. ಅದರ ಬಗ್ಗೆಯೂ ಸಹ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಇಲ್ಲ. New Pension Scheme ರದ್ದುಗೊಳಿಸಿ Old Pension Scheme ಅನ್ನು ಜಾರಿಗೆ ತರುವುದಕ್ಕೆ ಆಗುತ್ತದೆಯೋ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಥವಾ ಇಲ್ಲವೋ ಅದು ಬೇರೆ ವಿಷಯ. ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮ್ಮ ರಾಜ್ಯ ಸರ್ಕಾರದ ನೌಕರರಿಗೆ New Pension Scheme ಏನು ಜಾರಿಗೆ ತಂದಿದ್ದಾರೆ. ಅದರಲ್ಲಿ 10% ರಷ್ಟು contribution ಅನ್ನು ಸರ್ಕಾರವು ಕೊಡುತ್ತದೆ. ಅದನ್ನು ಕೊಡಲೇ ಬೇಕಾಗುತ್ತದೆ. ಆದರೆ, Aided Institutions Employees ಗಳಿಗೆ New Pension Scheme ಅನ್ನು ಜಾರಿಗೆ ತಂದಿಲ್ಲ. ಸರ್ಕಾರ ಯಾವ ರೀತಿ ರಾಜ್ಯ ಸರ್ಕಾರಿ ನೌಕರರಿಗೆ 10% contribution ಕೊಡುತ್ತಿದೆ, ಅದನ್ನೇ ಖಾಸಗೀ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವಂತಹ ನೌಕರರಿಗೂ ಸಹ ಮಾಡಬೇಕೆಂದು ನನ್ನ ಕಳಕಳಿಯ ಮನವಿ.

(070):04.07.2018-04.00-ಎಂವಿ-ಜಿಆರ್

**ಶ್ರೀ ಎಸ್.ವ್ಹಿ.ಸಂಕನೂರ (ಮುಂದು...):-**

ಇವತ್ತಿನ ದಿವಸ ಮಾನ್ಯ ಸುಪ್ರೀಂ ಕೋರ್ಟ್ ಸಮಾನ ಕೆಲಸಕ್ಕೆ ಸಮಾನ ವೇತನ ಕೊಡಬೇಕೆಂದು ಒಂದು decision ಕೊಡುವುದರ ಜೊತೆಗೆ ಇನ್ನು ಒಂದು ಮಾತನ್ನು ಹೇಳಿದೆ. ಸರ್ಕಾರದ ಪ್ರೈಮರಿ ಮತ್ತು ಸೆಕೆಂಡರಿ ಸ್ಕೂಲ್ ಟೀಚರ್ಸ್‌ಗೆ ಏನೇನು ಸೌಲಭ್ಯ ಕೊಡುತ್ತಾರೆ, ಅದೇ ರೀತಿ ಎಲ್ಲಾ ಸೌಲಭ್ಯಗಳನ್ನು ಯಥಾವತ್ತಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೂ ಸಹ ಕೊಡಬೇಕೆಂದು ಮಾನ್ಯ ಸುಪ್ರೀಂ ಕೋರ್ಟ್ decision ಕೊಟ್ಟಿದೆ. ಇವತ್ತು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಸರ್ಕಾರಿ ನೌಕರರಿಗೆ ನೂತನ ಪಿಂಚಣಿ ಯೋಜನೆಯನ್ನು ಯಾವ ರೀತಿ ಜಾರಿಗೆ ತಂದಿದ್ದಾರೆ, ಅದೇ ರೀತಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವಂತಹ ಎಲ್ಲಾ ಶಿಕ್ಷಕರಿಗೂ ಕೂಡ ಅನ್ವಯವಾಗುವಂತೆ ಅದನ್ನು ಜಾರಿಗೆ ತರಬೇಕು. ನಾಳೆ ಬಜೆಟ್ ಮಂಡನೆ ಆಗುತ್ತದೆ, ಅದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಪ್ರಸ್ತಾಪ ಮಾಡಬೇಕೆಂದು, ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಅಧಿಕಾರವನ್ನು ವಹಿಸಿಕೊಂಡ ನಂತರ, ಸರ್ಕಾರಿ ನೌಕರರಿಗೆ ಏನು ನೂತನ ಪಿಂಚಣಿ ಯೋಜನೆಯನ್ನು ಅಳವಡಿಸಿದ್ದಾರೆ, ಅವರಿಗೆ Gratuityಯನ್ನು declare ಮಾಡಿದರು. ಆದರೆ, ಖಾಸಗಿ ಶಿಕ್ಷಣ ಸಂಸ್ಥೆಯ ನೌಕರರಿಗೆ Gratuityಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

declare ಮಾಡಲಿಲ್ಲ. ಸರ್ಕಾರ ಏಕೆ ಈ ರೀತಿಯ ತಾರತಮ್ಯ ಮಾಡುತ್ತದೆ, ಅದರಲ್ಲೂ ಮಾನ್ಯ ಮುಖ್ಯಮಂತ್ರಿಗಳಾದ ಕುಮಾರ ಸ್ವಾಮಿಯವರು ಏಕೆ ಈ ರೀತಿ ಮಾಡುತ್ತಿದ್ದಾರೆ? ಇವತ್ತಿನ ದಿವಸ ನೂತನ ಪಿಂಚಣಿ ಯೋಜನೆಯಲ್ಲಿ ಹೊಸದಾಗಿ Gratuityಯನ್ನು ಏನು declare ಮಾಡಿದ್ದಾರೆ, ಅದನ್ನು ಖಾಸಗಿ ಶಿಕ್ಷಣ ಸಂಸ್ಥೆಯ ನೌಕರರಿಗೂ ಸಹ ವಿಸ್ತರಿಸಬೇಕಂದು, ನಾನು ತಮ್ಮ ಮೂಲಕ ಕಳಕಳಿಯ ವಿನಂತಿಯನ್ನು ಮಾಡುತ್ತಿದ್ದೇನೆ.

**ವೈಸ್‌ಛೇರ್ಮನ್:-** ದಯಮಾಡಿ ಬೇಗ ಮುಗಿಸಿ. Please conclude as early as possible. ಇನ್ನು ಮಾತನಾಡುವವರು ಬಹಳ ಇದ್ದಾರೆ ಮತ್ತು ನಿಮ್ಮ ನಾಯಕರು ಸಹ ಮಾತನಾಡಬೇಕು.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಬಹಳ ಮುಖ್ಯವಾಗಿ ರಾಜ್ಯಪಾಲರ ಭಾಷಣದಲ್ಲಿ ನಾನು ಏನು ನಿರೀಕ್ಷೆ ಇಟ್ಟುಕೊಂಡಿದ್ದೆ ಎಂದರೆ, ಇವತ್ತು ನಮ್ಮ ರಾಜ್ಯದೊಳಗೆ ನಿರುದ್ಯೋಗ ಸಮಸ್ಯೆ ಬಹಳ ದೊಡ್ಡದಿದೆ. ಯಾವುದೇ ಸರ್ಕಾರ ಇದ್ದರೂ ಅದನ್ನು ಒಂದೇ ಬಾರಿ ಬಗೆಹರಿಸುವುದಕ್ಕೆ ಆಗುವುದಿಲ್ಲ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಮ್ಮಲ್ಲಿ ನಿವೃತ್ತಿ ಮತ್ತು ನಿಧನದಿಂದ ಸುಮಾರು 2.40 ಲಕ್ಷ ಹುದ್ದೆಗಳು ಖಾಲಿ ಇವೆ. ನಾನು ಇದನ್ನು ಕಳೆದ ಅಧಿವೇಶನದಲ್ಲಿ ಪ್ರಶ್ನೆ ಮಾಡಿದ್ದೆ. ಸುಮಾರು 2.40 ಲಕ್ಷ ಹುದ್ದೆಗಳಲ್ಲಿ ನಿವೃತ್ತಿ ಮತ್ತು ನಿಧನದ ಹುದ್ದೆಗಳಲ್ಲಿ ಕೆಲವೊಂದನ್ನಾದರೂ ತುಂಬುವಂತಹ ಪ್ರಸ್ತಾವನೆ ರಾಜ್ಯಪಾಲರ ಭಾಷಣದಲ್ಲಿ ಇರುತ್ತದೆ ಎಂದು ನಾನು ತಿಳಿದಿದ್ದೆ. ಆದರೆ, ಅದು ಕೂಡ ಆಗಿಲ್ಲ. ನಾನು ಏನನ್ನು ಹೇಳುತ್ತಿದ್ದೇನೆಂದರೆ, ನಿವೃತ್ತಿ ಮತ್ತು ನಿಧನದಿಂದ ಏನು ಹುದ್ದೆಗಳು ಖಾಲಿಯಾಗಿವೆ ಅವುಗಳನ್ನು ತುಂಬಲಿಲ್ಲವೆಂದರೆ, ಸರ್ಕಾರದ ಆಡಳಿತದ ಮೇಲೆ ಪೆಟ್ಟು ಬೀಳುತ್ತದೆ. ನೀವು ನಿಮ್ಮ ಯೋಜನೆಗಳನ್ನು ಸರಿಯಾಗಿ ಜಾರಿಗೆ ಮಾಡುವುದಕ್ಕೆ ಆಗುವುದಿಲ್ಲ. ಆದಷ್ಟು ಬೇಗನೆ ಎಷ್ಟು ಸಾಧ್ಯವಿದೆಯೋ ಅಷ್ಟು ಹುದ್ದೆಗಳನ್ನು; ಅಂದರೆ, ಇವತ್ತಿನ ದಿವಸ 2.40 ಲಕ್ಷ ಹುದ್ದೆಗಳನ್ನು ತುಂಬಬೇಕು ಎಂದು ಹೇಳುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಇದರ ಜೊತೆಗೆ ಅತಿಥಿ ಉಪನ್ಯಾಸಕರ ಬಗ್ಗೆ ಪ್ರಸ್ತಾಪವಿಲ್ಲ. ಮಾನ್ಯ ಸಚಿವರಾದ ಆರ್.ವಿ.ದೇಶಪಾಂಡೆಯವರು ಇದ್ದಾರೆ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಸಹ ಇಲ್ಲೇ ಇದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು 25 ರಿಂದ 30 ಸಾವಿರ ಜನ ಅತಿಥಿ ಉಪನ್ಯಾಸಕರು ಇದ್ದಾರೆ. ಅವರಿಗೆ ಸೇವಾಭದ್ರತೆ ಏನಾದರೂ ಒದಗಿಸುತ್ತಾರೆ ಮತ್ತು ಅದರ ಪ್ರಸ್ತಾಪ ರಾಜ್ಯಪಾಲರ ಭಾಷಣದಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುತ್ತದೆ ಎಂದು ಭಾವಿಸಿದ್ದೆ. ಅದರ ಬಗ್ಗೆ ಮಾನ್ಯ ಶ್ರೀಕಂಠೇಗೌಡರು ಹಾಗೂ ಹಿರಿಯ ಸದಸ್ಯರಾದ ಮಾನ್ಯ ಆಯನೂರ ಮಂಜುನಾಥರವರು ಸಹ ಮಾತನಾಡಿದ್ದಾರೆ. ಈಗ ಸುಮಾರು 15 ವರ್ಷಗಳಿಂದ ಅತಿಥಿ ಉಪನ್ಯಾಸಕರು ಎಲ್ಲಾ ಸರ್ಕಾರಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನೀವು ಅವರ ಬಳಿ 15 ವರ್ಷಗಳಿಂದ ಕೆಲಸವನ್ನು ತೆಗೆದುಕೊಂಡಿದ್ದೀರಿ. ಆದರೆ, ಇವತ್ತು ಮೆರಿಟ್‌ನ ಮೇಲೆ ಉಪನ್ಯಾಸಕರನ್ನು ನೇಮಕ ಮಾಡುವುದಕ್ಕೆ ಹೊರಟ್ಟಿದ್ದಾರೆ, ಇದರಿಂದ ಸುಮಾರು 15 ವರ್ಷಗಳಿಂದ ಕೆಲಸ ಮಾಡಿದ ಅತಿಥಿ ಉಪನ್ಯಾಸಕರು ಬೀದಿಗೆ ಬರುವಂತಹ ಪರಿಸ್ಥಿತಿ ಬಂದಿದೆ. ಆ ದಿಶೆಯೊಳಗೆ ಈ ಶೈಕ್ಷಣಿಕ ವರ್ಷದಲ್ಲಿ ಏನು ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುತ್ತಿದ್ದಾರೆ ಅದಕ್ಕೆ ಒಂದು criteria ಮಾಡಿ. ಸುಮಾರು 10 ವರ್ಷದಿಂದ ಮತ್ತು 15 ವರ್ಷಗಳವರೆಗೆ ಯಾರ್‍ಯಾರು ಸೇವೆಯನ್ನು ಮಾಡಿದ್ದಾರೆ, ಅವರನ್ನು ಹುದ್ದೆಯಿಂದ ತೆಗೆಯಬಾರದು. ಆ ಕೆಲಸವನ್ನು ಸರ್ಕಾರ ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ಶಿಕ್ಷಣದ ಗುಣಮಟ್ಟದ ಬಗ್ಗೆ ಮಾತನಾಡಿದ್ದಾರೆ. ಶಿಕ್ಷಣದ ಗುಣಮಟ್ಟವನ್ನು ಎತ್ತರಿಸುವುದಕ್ಕೆ ಎಲ್ಲಾ ಕಾರ್ಯಕ್ರಮವನ್ನು ಸರ್ಕಾರ ರೂಪಿಸುತ್ತದೆ ಎಂದು ರಾಜ್ಯಪಾಲರ ಭಾಷಣದಲ್ಲಿ ಇದೆ. ಮಾನ್ಯ ಸಭಾಪತಿಯವರೆ, ಇದು ತಮಗೂ ಸಹ ಗೊತ್ತಿದೆ. ಪ್ರೈಮರಿ ಮತ್ತು ಸೆಕೆಂಡರಿ ಶಾಲೆಗಳಲ್ಲಿ ಸುಮಾರು 40 ಸಾವಿರ ಹುದ್ದೆಗಳು ಖಾಲಿ ಇವೆ. ಶಿಕ್ಷಕರೇ ಇಲ್ಲದೆ, ಶಿಕ್ಷಣದ ಗುಣಮಟ್ಟವನ್ನು ಯಾವ ರೀತಿ ಸುಧಾರಿಸುವುದಕ್ಕೆ ಸಾಧ್ಯವಿದೆ? ಆ ದಿಶೆಯೊಳಗೆ ನಾಳೆ ಏನು ಬಜೆಟ್ ಅನ್ನು ಮಂಡನೆ ಮಾಡಲಿದ್ದಾರೆ, ಏನು ಪ್ರೈಮರಿ ಶಾಲೆಗಳಲ್ಲಿ ಉದ್ಯೋಗಗಳು ಖಾಲಿ ಇವೆ, ಆ ಹುದ್ದೆಗಳನ್ನು ತುಂಬುವಂತಹ ಕೆಲಸ ಆಗಬೇಕೆಂದು ನಾನು ಸರ್ಕಾರವನ್ನು ಆಗ್ರಹಿಸುತ್ತೇನೆ.

ನಾನು ಇನ್ನೊಂದನ್ನು ಬಹಳ ನಿರೀಕ್ಷೆ ಮಾಡಿದ್ದೆ. ಅದು ಏನೆಂದರೆ, ಈ ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯನವರ ಸರ್ಕಾರ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಅನ್ನು ಕೊಡುತ್ತೇವೆಂದು ಹೇಳಿದ್ದರು. ಆ ಕೆಲಸ ಆಗಬೇಕಾಗಿತ್ತು, ಇಲ್ಲಿ ಅದರ ಬಗ್ಗೆ ಪ್ರಸ್ತಾಪವಿಲ್ಲ. ಅದನ್ನು ಕೂಡ ನಾನೂ ಈ ವೇದಿಕೆಯ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ. ನಾಳೆಯ ಬಜೆಟ್‌ನಲ್ಲಿ, ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಅನ್ನು ಈ ಹಿಂದಿನ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಏನು ಘೋಷಣೆ ಮಾಡಿತ್ತು, ಅದನ್ನು ಜಾರಿಗೆ ತರುವಂತಹ ಕೆಲಸ ಈ ಸರ್ಕಾರದಿಂದ ಆಗಬೇಕೆಂದು ನಾನು ಕಳಕಳಿಯ ವಿನಂತಿಯನ್ನು ಮಾಡುತ್ತೇನೆ.

ಇದರ ಜೊತೆಗೆ ಸದಸ್ಯರಾದ ಮಾನ್ಯ ರವಿಕುಮಾರ್ ರವರು ಮಾತನಾಡಿದರು. ಇವತ್ತು ನಮ್ಮ ರಾಜ್ಯದೊಳಗೆ ಎಸ್.ಸಿ. ಮತ್ತು ಎಸ್.ಟಿ. ಸಮುದಾಯದವರ ವಸತಿ ಶಾಲೆಗಳು ಇರಬಹುದು, ಹಿಂದುಳಿದ ವರ್ಗಗಳ ವಸತಿ ಶಾಲೆಗಳ ಪರಿಸ್ಥಿತಿ ಎಷ್ಟು ಕೆಟ್ಟದಾಗಿದೆ ಎಂದು ಪ್ರತಿದಿನ ಪತ್ರಿಕೆಗಳಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುತ್ತಿದೆ. ಎಲ್ಲಾ ಪತ್ರಿಕೆಯವರಿಗೂ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಯಾವ್ಯಾವ ತಾಲ್ಲೂಕುಗಳಲ್ಲಿ ಮತ್ತು ಯಾವ್ಯಾವ ಜಿಲ್ಲೆಗಳಲ್ಲಿ ವಸತಿ ಶಾಲೆಗಳ ಪರಿಸ್ಥಿತಿ ಎಷ್ಟು ಕೆಟ್ಟಿದೆ ಎಂಬುದನ್ನು ಗಮನಿಸಿ, ಇವತ್ತು ಬಹಳಷ್ಟು ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ಇಲ್ಲ. ಅವರು ಬಾಡಿಗೆ ಕಟ್ಟಡದಲ್ಲಿ ವಸತಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಅವುಗಳೆಲ್ಲವು ಹಳೇ ಕಟ್ಟಡಗಳು, ಈಗ ಅಲ್ಲಿ ಮಳೆ ಬಂದರೆ ಎಲ್ಲಾ ಕೊಠಡಿಗಳು ಸೋರುತ್ತಿವೆ. ಎರಡನೆಯದಾಗಿ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಮಲಗುವುದಕ್ಕೆ ಕಾಟ್, ಬೆಡ್ ಮತ್ತು ತಲೆದಿಂಬು ಅವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಡಬೇಕಾಗಿತ್ತು. ಆದರೆ, ನೀವು ಅವುಗಳನ್ನು ಕೊಟ್ಟಿಲ್ಲ ಮತ್ತು ಮಕ್ಕಳು ತಮ್ಮ ಬಟ್ಟೆಗಳನ್ನು ಸ್ವಚ್ಛಗೊಳಿಸಿಕೊಳ್ಳುವುದಕ್ಕೆ ತೊಟ್ಟಿಯ ವ್ಯವಸ್ಥೆ ಇಲ್ಲ. ಇನ್ನು ಬಾಲಕಿಯರ ವಸತಿ ಶಾಲೆಗಳ ಪರಿಸ್ಥಿತಿಯಂತೂ ಬಹಳ ಗಂಭೀರವಾಗಿದೆ. ಬಾಲಕಿಯರ ವಸತಿ ಶಾಲೆಗಳಿಗೆ ಪುರುಷ ವಾರ್ಡನ್ ಅನ್ನು ನೇಮಕ ಮಾಡಿದ್ದಾರೆ. ಈ ರೀತಿಯ ಪರಿಸ್ಥಿತಿಯಾದರೆ ಹೇಗೆ? ಹೆಣ್ಣು ಮಕ್ಕಳ ವಸತಿ ಶಾಲೆಗಳು ಇದ್ದರೆ, ಹೆಣ್ಣು ಮಕ್ಕಳನ್ನೇ ವಾರ್ಡನ್ ಆಗಿ ನೇಮಿಸಿಬೇಕೆಂದು ನಿಯಮವಿದೆ. ಆದರೆ, ನಮ್ಮ ಜಿಲ್ಲೆಯ ಮೂರು ಮಹಿಳಾ ವಸತಿ ಶಾಲೆಗಳಲ್ಲಿ ಪುರುಷರನ್ನು ವಾರ್ಡನ್ ಆಗಿ ನೇಮಕ ಮಾಡಿದ್ದಾರೆ. ದಯವಿಟ್ಟು ಈ ರೀತಿ ಆಗಬಾರದು. ವಿಶೇಷವಾಗಿ ಎಲ್ಲಿ ಮಹಿಳಾ ವಸತಿ ಶಾಲೆಗಳು ಇವೆ, ಅಲ್ಲಿಗೆ ಮಹಿಳೆಯರನ್ನು ವಾರ್ಡನ್ ಆಗಿ ನೇಮಿಸುವಂತಹ ಕಾರ್ಯ ಆಗಬೇಕೆಂದು ಹೇಳುತ್ತೇನೆ. ಕೆಲವೊಂದು ಶೌಚಾಲಯಗಳಿಗೆ ಬಾಗಿಲುಗಳೇ ಇರುವುದಿಲ್ಲವೆಂದು ಮಾನ್ಯ ಸದಸ್ಯರು ನಿನ್ನೆಯ ದಿವಸ ಪ್ರಸ್ತಾಪ ಮಾಡಿದ್ದಾರೆ. ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಶೌಚಾಲಯಗಳು ಮತ್ತು ಸ್ನಾನಗೃಹಗಳು ಇಲ್ಲ. ಹೀಗಾಗಿ ಈಗ ಎರಡೇ ಎರಡು ಕೊಠಡಿಗಳು ಇರುತ್ತವೆ, 20 ಜನ ವಿದ್ಯಾರ್ಥಿಗಳು ಸರದಿಯಲ್ಲಿ ನಿಂತಿರುತ್ತಾರೆ. ಇವತ್ತಿನ ದಿವಸ ವಸತಿ ಶಾಲೆಗಳ ಸ್ಥಿತಿ ಬಹಳ ಶೋಚನಿಯವಾಗಿದೆ, ಆ ದಿಶೆಯಲ್ಲಿ ಇವುಗಳೆಲ್ಲವನ್ನು ಸರಿಯಾಗಿ ಮಾಡುವುದಕ್ಕೆ ಸರ್ಕಾರ ಕೈಗೊಳ್ಳಬೇಕೆಂದು ಹೇಳುತ್ತಾ, ಸನ್ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ನನ್ನ ಅನಿಸಿಕೆಗಳನ್ನು ವ್ಯಕ್ತಪಡಿಸಿ, ವಂದನೆಗಳನ್ನು ಸಲ್ಲಿಸುತ್ತಿದ್ದೇನೆ.

## **8. ಮುಖ್ಯಮಂತ್ರಿಗಳ ಪರಿಚಯ**

**ಡಾ: ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಭೆಗೆ ಮಾನ್ಯ ಮುಖ್ಯಮಂತ್ರಿಗಳು ಆಗಮಿಸಿದ್ದಾರೆ. ನಾನು ಅವರಿಗೆ ಸ್ವಾಗತವನ್ನು ಕೋರುತ್ತೇನೆ. ತಮ್ಮೆಲ್ಲರಿಗೂ ಸಹ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರ ಬಗ್ಗೆ ಗೊತ್ತಿದೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಮಾನ್ಯ ಭೋಜೇಗೌಡರ ಬಗ್ಗೆ ತಾವು ಬಹಳ ತಲೆ ಕೆಡಿಸಿಕೊಳ್ಳುವುದು ಬೇಡ. ಈಗ ಮಾನ್ಯ ಆ.ದೇವೆಗೌಡರು ಮಾತನಾಡಲಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 9.ರಾಜ್ಯಪಾಲರ ಭಾಷಣದಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ

**ಶ್ರೀ ಆ.ದೇವೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ ಮತ್ತು ಮಾನ್ಯ ಮುಖ್ಯಮಂತ್ರಿಗಳೆ, ಕೃಷಿ ಕ್ಷೇತ್ರದ ಸಮಸ್ಯೆಗಳನ್ನು ಪರಿಹರಿಸಲು ಹೇಳಿರುವ ಮಾತು ಸ್ವಾಗತಾರ್ಹ. ರೈತರ ಸಾಲ ಮನ್ನಾ ವಿಚಾರದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ಸೂಚನೆಯನ್ನು ಕೊಟ್ಟಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದ 24 ಗಂಟೆಗಳಲ್ಲಿ ರೈತರ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದರು. ದಯಮಾಡಿ ಅವರು ನಾಳಿನ ಬಜೆಟ್‌ನಲ್ಲಿ ಕ್ರಮ ಕೈಗೊಳ್ಳಬೇಕೆಂದು ನಾನು ಅವರಲ್ಲಿ ವಿನಂತಿಸುತ್ತೇನೆ. ಆಧುನಿಕ ವಿಜ್ಞಾನದಲ್ಲಿ ಕೃಷಿಯನ್ನು ಅಳವಡಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಮತ್ತು ಬರಗಾಲ ಮತ್ತು ನೆರೆ ಹಾವಳಿಯಿಂದ ಬೆಳೆ ಹಾನಿಯಾದವರಿಗೆ ನಿಗದಿತ ಬೆಲೆಗೆ ಅವಕಾಶ ಮಾಡಿಕೊಡಬೇಕು. ಇಸ್ರೇಲ್ ಮಾದರಿಯ ಕೃಷಿ ಅಳವಡಿಕೆಗೆ ಮತ್ತು ನೀರನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡುವ ಬಗ್ಗೆ ಬಜೆಟ್‌ನಲ್ಲಿ ತರುವಂತಹ ಕೆಲಸ ಆಗಬೇಕು. ಇದಕ್ಕಿಂತ ಮುಖ್ಯವಾಗಿ ನೀರಾವರಿ ಯೋಜನೆಗಳನ್ನು ಕಲ್ಪಿಸುವಾಗ ಅವುಗಳಿಗೆ ಕಾಲಮಿತಿಯನ್ನು ಹಾಕಬೇಕು. ಈಗ ಮಳೆಗಾಲ ಬಂದರೂ ಸಹ ಕೆರೆಗಳಲ್ಲಿ ನೀರು ನಿಲ್ಲುತ್ತಿಲ್ಲ. ವಾಟರ್ ಮ್ಯಾನೇಜ್‌ಮೆಂಟ್ ಸರಿ ಇಲ್ಲ. ನಮ್ಮ ಕಡೆ ಕೆರೆಗಳ ತೂಬುಗಳು ಮತ್ತು ಅದರ ಕೋಡಿಗಳು ಇಲ್ಲವೇ ಇಲ್ಲ.

**(ಮುಂದು...)**

(071) 04.07.2018 4.10 ವೈಎಲ್-ಎಂಡಿ

**ಶ್ರೀ ಅ.ದೇವೇಗೌಡ(ಮುಂದು):-**

ಆದ್ದರಿಂದ ಹೂಳೆತ್ತುವ ಕ್ರಮವನ್ನು ಕೈಗೊಂಡು ರೈತರ ಹಿತಕೋಸ್ಕರ ಕೆರೆಗಳಿಗೆ ನೀರು ತುಂಬಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಹಿಂದಿನ ಸರ್ಕಾರ ರೈತರ ಮತ್ತು ಕೃಷಿ ಕ್ಷೇತ್ರದ ಹಲವಾರು ಯೋಜನೆಗಳನ್ನು ರೂಪಿಸಲಾಗಿತ್ತು. ಆದರೆ ಅದ್ಯಾವುದನ್ನು ಜಾರಿಗೊಳಿಸಲಿಲ್ಲ. ಈ ಸಮಸ್ಯೆಗಳನ್ನು ಆಯವ್ಯಯದಲ್ಲಿ ಕಾರ್ಯಗತಗೊಳಿಸಬೇಕು. ಸರ್ಕಾರವು ರಾಜ್ಯದಲ್ಲಿ ತೃಪ್ತಿಕರವಾದ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಯ್ದುಕೊಂಡಿದೆ ಎಂದು ಹೇಳಿದ್ದಾರೆ. ಜನಪ್ರತಿನಿಧಿಗಳು ಅಂದರೆ, ಎಂಎಲ್‌ಎ ಗಳು ಅವರಿಗೆ ಬೇಕಾದಂತಹ ಸರ್ಕಲ್ ಇನ್ಸ್‌ಪೆಕ್ಟರ್‌ಗಳನ್ನು ನಿಯೋಜಿಸಿಕೊಂಡು, ಕಾನೂನನ್ನು ಅವರ ಕೈಯಲ್ಲಿಯೇ ನಡೆಸುತ್ತಿರುತ್ತಾರೆ. ಆದ್ದರಿಂದ ಅಲ್ಲಿರುವಂತಹ ಪೋಲೀಸ್ ಅಧಿಕಾರಿಗಳನ್ನು ಬದಲಾಯಿಸಬೇಕು. ಉದಾಹರಣೆಗೆ ನಾನು ವಿಧಾನಸೌಧದಲ್ಲಿ ಕೆಲಸ ಮಾಡುತ್ತಿದ್ದಂತಹ ಸಂದರ್ಭದಲ್ಲಿ ನನಗೆ Atrocity Case ಹಾಕಿಸಿದ್ದರು. ನಾನು ಆ ಸಂದರ್ಭದಲ್ಲಿ ಕರ್ತವ್ಯದ ಮೇಲಿದ್ದೆ, ಆದ್ದರಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನು ತೆಗೆದುಕೊಂಡು ಹೋಗಿ ಕೊಟ್ಟಿದ್ದಕ್ಕೆ ನನ್ನನ್ನು ಬಿಟ್ಟಿದ್ದಾರೆ. ಭಾರತ ಸಂವಿಧಾನದ ಅನುಚ್ಛೇದ 371(ಜೆ) ಅನುಸಾರವಾಗಿ ಮೀಸಲಾತಿಯನ್ನು ಹೈದ್ರಾಬಾದ್-ಕರ್ನಾಟಕಕ್ಕೆ ಕೊಟ್ಟಿರುವುದು ಸ್ವಾಗತಾರ್ಹ. ಈ ನೇಮಕಾತಿ ಆಗುತ್ತಿದೆ. ಆದರೆ, ಹೈದ್ರಾಬಾದ್-ಕರ್ನಾಟಕಕ್ಕೆ ಆಯ್ಕೆಯಾದಂತಹ ನೌಕರರು ಹೈದ್ರಾಬಾದ್-ಕರ್ನಾಟಕಕ್ಕೆ ಹೋಗದೇ ಬೆಂಗಳೂರಿನಲ್ಲಿಯೇ ಉಳಿದುಕೊಳ್ಳುತ್ತಿದ್ದಾರೆ. ದಯಮಾಡಿ ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಎಲ್ಲಿ ಹುದ್ದೆ ಖಾಲಿ ಇದೆ ಅಲ್ಲಿಗೆ ಕಳುಹಿಸಿಕೊಡುವಂತಹ ಕೆಲಸ ಮಾಡಬೇಕು. ಶಿಕ್ಷಣವೇ ಶಕ್ತಿ ಎಂಬುದರ ಅರಿವು ನಮ್ಮ ಸರ್ಕಾರಕ್ಕೆ ಇದೆ. ಶಿಕ್ಷಣದಲ್ಲಿ ಕೌಶಲ್ಯ ಸಹಿತ ವೃತ್ತಿ ತರಬೇತಿಯನ್ನು ಕಾಯ್ದುಕೊಂಡು ಕಡ್ಡಾಯಗೊಳಿಸಲು ನಮ್ಮ ಸರ್ಕಾರ ಚಿಂತಿಸಿದೆ ಎಂದು ಸರ್ವರಿಗೂ ಶಿಕ್ಷಣ, ಸರ್ವರಿಗೂ ಆರೋಗ್ಯ, ಸರ್ವರಿಗೂ ವಸತಿ ಮತ್ತು ಸರ್ಕಾರದ ಆಧ್ಯತೆ ವಲಯಗಳನ್ನು ರಾಜ್ಯಪಾಲರ ಭಾಷಣದಲ್ಲಿ ತಿಳಿಸಿದ್ದಾರೆ.

ಮಾನ್ಯ ಸಭಾಪತಿಯವರೇ, ತಮಗೆ ಶಿಕ್ಷಣದ ಬಗ್ಗೆ ಬಹಳ ಜ್ಞಾನವುಳ್ಳವರು. ಕಾಲ್ಪನಿಕ ವೇತನದ ನಗದೀಕರಣದ ಬಗ್ಗೆ ತಮ್ಮ ವರದಿಯನ್ನು ಮಾನ್ಯ ಮುಖ್ಯಮಂತ್ರಿಗಳ ಮುಖಾಂತರ ಅನುಷ್ಠಾನಗೊಳಿಸಲು ತಾವು ಕ್ರಮಕೈಗೊಳ್ಳಬೇಕು. ಹೊಸ ಪಿಂಚಣಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಳೆಯ ಪಿಂಚಣಿ ವ್ಯವಸ್ಥೆಯನ್ನು ಜಾರಿಗೆ ತರುತ್ತೇನೆ ಎಂದು ಹೇಳಿದ್ದಾರೆ. ಹಳೆಯ ಪಿಂಚಣಿಯನ್ನು ಜಾರಿಗೊಳಿಸದಿದ್ದರೆ ಹೊಸ ಪಿಂಚಣಿಯಲ್ಲಿ ತೆಗೆದುಕೊಂಡು ಬಂದ ಹಣವನ್ನು ಗಂಡು ಮಕ್ಕಳು ಅಥವಾ ಹೆಣ್ಣು ಮಕ್ಕಳು ಅವರ ಮಕ್ಕಳ ಮದುವೆಗಾಗಿ ಕಿತ್ತುಕೊಂಡು ಬಿಡುತ್ತಾರೆ. ನಿವೃತ್ತಿ ಹೊಂದಿದ ಮೇಲೆ ಅವರು ಜೀವನ ಸಾಗಿಸಲು ಕಷ್ಟವಾಗುತ್ತದೆ. ಆದ್ದರಿಂದ ದಯಮಾಡಿ ಹಳೆಯ ಪಿಂಚಣಿ ವ್ಯವಸ್ಥೆಯನ್ನು ಜಾರಿಗೆ ತರುವಂತಹ ವ್ಯವಸ್ಥೆಯಾಗಬೇಕು. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣರವರ ಕಾಲದಲ್ಲಿ ಒಂದು ಆದೇಶವನ್ನು ಹೊರಡಿಸಿ, ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಣದವರಿಗೆ ಕನ್ನಡವನ್ನು ಕಡ್ಡಾಯ ಮಾಡಿದವರಿಗೆ ಒಂದು ಇಂಕ್ರಿಮೆಂಟನ್ನು ನೀಡಿದ್ದರು. ನಂತರ medical allowance ಒದಗಿಸಿದ್ದರು. ಆದರೆ, ಸರ್ಕಾರಿ ಶಾಲೆಗಳಿಗೆ ಮಾತ್ರ ಅಳವಡಿಸಿಕೊಂಡು, ಅನುದಾನಿತ ಶಾಲೆಗಳಿಗೆ ಇಲ್ಲಿಯವರೆಗೂ ಒದಗಿಸಿಲ್ಲ. ಅದರ ಕಡೆ ಗಮನ ಹರಿಸಿ ಕ್ರಮಕೈಗೊಳ್ಳಬೇಕು. Universal Health Card ನ್ನು ಅನುದಾನಿತ ಶಾಲಾ-ಕಾಲೇಜುಗಳ ಉಪನ್ಯಾಸಕರಿಗೂ ಒದಗಿಸುವುದಕ್ಕೆ ಸರ್ಕಾರಕ್ಕೆ ಒತ್ತಾಯ ತರಬೇಕೆಂದು ಈ ಮೂಲಕ ಪ್ರಾರ್ಥಿಸುತ್ತೇನೆ. ಮುಖ್ಯವಾಗಿ ಪ್ರಾಥಮಿಕ ಮತ್ತು ಪ್ರೌಢ ಪದವಿ ಪೂರ್ವ ಕಾಲೇಜುಗಳಲ್ಲಿ ತಕ್ಷಣ ಖಾಲಿ ಇರುವ ಹುದ್ದೆಗಳನ್ನು ಅನುದಾನಿತ ಶಾಲೆಗಳಲ್ಲಿಯೂ ತರುವಂತಹ ವ್ಯವಸ್ಥೆಯಾಗಬೇಕು. ಹಾಗೆ ಮಾಡದಿದ್ದರೆ ಶಿಕ್ಷಣವೇ ಶಕ್ತಿ ಇಲ್ಲದಂತಾಗುತ್ತದೆ. ತಾವು ನೋಡುತ್ತಿರುವಂತೆ ಯೂನಿವರ್ಸಿಟಿಯಲ್ಲಿ Vice Chancellor ಮಾಡುವುದಕ್ಕೆ ಅವರವರ ಜಾತಿಯವರನ್ನೇ ಅವರವರೆಗೆ ಬೇಕಾದವರನ್ನೇ ಹುಡುಕುತ್ತಿದ್ದಾರೆ. ಆಡಳಿತ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯವಸ್ಥೆ ಏನಾಗಿದೆ? ಅತಿಥಿ ಉಪನ್ಯಾಸಕರ ಅವಶ್ಯಕತೆಯೇ ಇರಲಿಲ್ಲ. ಏಕೆಂದರೆ, ಸರಿಯಾಗಿ ಬಡ್ತಿ ನೀಡದೇ ಇರುವುದು. ಇದು ತಮ್ಮ ಗಮನಕ್ಕೂ ಬಂದಿದೆ, ಸಚಿವರ ಗಮನಕ್ಕೂ ಬಂದಿದೆ. ಈಗ ಕೆಪಿಎಸ್‌ಸಿ ನಲ್ಲಿ ಪ್ರಥಮ ದರ್ಜೆ ಕಾಲೇಜು ಉಪನ್ಯಾಸಕರ waiting list ನಲ್ಲಿ ನೂರಾರು ಜನರಿದ್ದಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರೆ ಒಂದು ನಿಮಿಷ. Vice Chancellor ರವರನ್ನು ಜಾತಿಯ ಆಧಾರದ ಮೇಲೆ ನೇಮಕ ಮಾಡಿಕೊಳ್ಳುತ್ತಾರೆ ಎಂದು ಹೇಳುತ್ತಿದ್ದೀರಿ. ಆದರೆ, Guidelines ನಲ್ಲಿ Vice Chancellor ರವರನ್ನು ಯಾವ ರೀತಿ ಆಯ್ಕೆ ಮಾಡಬೇಕೆಂದು ಇದೆ ಎಂಬುದನ್ನು ತಿಳಿಸಿ.

**ಶ್ರೀ ಅ.ದೇವೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನುರಿತ ಆಡಳಿತ ನಡೆಸುವಂಥವರು.

**ಸಭಾಪತಿಯವರು:-** ಅದರಲ್ಲಿಯೂ ಸಹ ಅವರ ಜಾತಿಯವರು ಇರುತ್ತಾರಲ್ಲ.

**ಶ್ರೀ ಅ.ದೇವೇಗೌಡ:-** ಮಾನ್ಯ ಸಭಾಪತಿಯವರೇ, ತಜ್ಞರನ್ನು ಒಂದು ಸಮಿತಿ ಮುಖಾಂತರ ಅವರಿಗೆ ಬೇಕಾದವರನ್ನು ಆಯ್ಕೆ ಮಾಡಿಕೊಳ್ಳುವಂತಹ ಕೆಲಸ ನಡೆಯುತ್ತಿರುವುದು ತಮಗೂ ಗೊತ್ತಿದೆ. ದಯಮಾಡಿ Search Committee ಗೆ ಸರಿಯಾಗಿರುವವರನ್ನು ನೇಮಿಸಬೇಕು. ಯಾರ್‍ಯಾರನ್ನು Vice Chancellor ರಾಗಿ ಆಯ್ಕೆ ಮಾಡಿದ್ದಾರೆ ಎಂಬುದನ್ನು ಇಲ್ಲಿಯವರೆಗೂ ನೋಡಿದ್ದೀರಿ.

ಮಾನ್ಯ ಸದಸ್ಯರು ವಸತಿ ನಿಲಯದ ಬಗ್ಗೆ ಮಾತನಾಡಿದ್ದಾರೆ. ಯೂನಿವರ್ಸಿಟಿ ಹಾಸ್ಟೆಲ್‌ಗಳಲ್ಲಿ ತಮಗೂ ಗೊತ್ತಿದೆ. ಐದು ಸಲ ಎಂ.ಎ. ಪದವಿ ಪಡೆದು, ಇನ್ನೊಂದು ಸಲ Philosophy or Psychology ತೆಗೆದುಕೊಂಡು ಸುಮ್ಮನೆ ಕಾಲ ಕಳೆಯುವುದಕೋಸ್ಕರ ಮುಂದುವರೆಸಿದ್ದಾರೆ. ತುರ್ತಾಗಿ ಕ್ರಮ ತೆಗೆದುಕೊಂಡು ಅವರನ್ನು ಹೊರಗೆ ಹಾಕಿ. ಏನೇನು ಸೌಲಭ್ಯ ಕೊಡಿಸಬೇಕೆಂದು ಕ್ರಮ ಕೈಗೊಳ್ಳಬೇಕು. ಖಾಲಿ ಇರುವ ಯೂನಿವರ್ಸಿಟಿನಲ್ಲಿ ಅತಿಥಿ ಉಪನ್ಯಾಸಕರ ಹುದ್ದೆಯನ್ನು ಅವರಲ್ಲಿಯೇ Ph.D ಮಾಡಿರುವಂಥವರನ್ನು ನೇಮಕ ಮಾಡಿಕೊಳ್ಳುವುದಾಗುತ್ತಿದೆ. ಸರಿಯಾದ ರೀತಿಯಲ್ಲಿ ಉನ್ನತ ಶಿಕ್ಷಣವು ನಡೆಯುತ್ತಿಲ್ಲ. ದಯಮಾಡಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿ ಕ್ರಮ ಕೈಗೊಂಡರೆ, ನಮ್ಮ ಉದ್ದೇಶ ಸಫಲವಾಗುತ್ತದೆ ಎಂಬುದು ನನ್ನ ಅನಿಸಿಕೆ. ನಾನು ಕಾರ್ಪೋರೇಷನ್ ಚುನಾವಣೆಗೆ ನಿಂತುಕೊಂಡಿದಾಗ ಸ್ಕೂಲ್‌ಗಳಿಗೆ ಭೇಟಿ ನೀಡಿದ್ದೆ. ಅಲ್ಲಿ ಶಿಕ್ಷಕರನ್ನು ಏಜೆನ್ಸಿ ಮುಖಾಂತರ ನೇಮಕ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದೆ. ಆ ಶಾಲೆಯಲ್ಲಿ ಓದಿದಂಥವರೆಲ್ಲಾ ಬಡ ಮಕ್ಕಳು. ದಯಮಾಡಿ ಪಿ.ಯು.ಸಿ ಕಾಲೇಜಿನಲ್ಲಿ Ph.D, NET, SLET ಮಾಡಿರುವಂತಹ ಉಪನ್ಯಾಸಕರು, ಶಿಕ್ಷಕರಿದ್ದಾರೆ. ಕೂಡಲೇ ನೇಮಕಾತಿ ಮಾಡಿಕೊಳ್ಳುವುದಕ್ಕೆ ಒಂದು ವಿಶೇಷ ಆದೇಶವನ್ನು ಹೊರಡಿಸಿ, ಅಲ್ಲಿರತಕ್ಕಂಥವರನ್ನೇ ಶಿಕ್ಷಕರನ್ನೇ ಖಾಯಂ ಮಾಡುವಂತಹ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡುತ್ತೇನೆ.

ರಾಜ್ಯಪಾಲರ ಭಾಷಣದಲ್ಲಿ ಪಡಿತರ ಚೀಟಿಯ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಆದರೆ, ಅದರಲ್ಲಿರತಕ್ಕಂಥ ನಕಲಿ ಪಡಿತರ ಚೀಟಿಯನ್ನು ತೆಗೆಯುವಂತಹ ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಬೆಂಗಳೂರು ಒಂದು ವಿಶ್ವಮಾನ್ಯತೆ ಪಡೆದಿರುವಂತಹ ನಗರ. 'Silicon City' ಎಂದು ಖ್ಯಾತಿ ಪಡೆದಿರುವಂಥ ನಗರವೂ ಹೌದು. ಆದರೆ, ಇಲ್ಲಿನ ವ್ಯವಸ್ಥೆ ಯಾವ ರೀತಿ ಇದೆ ಎಂದರೆ, ಈಗಾಗಲೇ ಮಾನ್ಯ ಹಿರಿಯ ಸದಸ್ಯರುಗಳೆಲ್ಲರೂ ಟ್ರಾಫಿಕ್, ನೀರಾವರಿ ಸಮಸ್ಯೆ, ನೀರಿನ ಸಮಸ್ಯೆ ಯಾವ ರೀತಿ ಇದೆ ಎಂದು ಮಾತನಾಡಿದ್ದಾರೆ. ಹೊಸ ಬಡಾವಣೆಗಳನ್ನು ನಿರ್ಮಿಸಿ, ಖಾಸಗಿ ಲೇಔಟ್‌ಗಳನ್ನು ನಿರ್ಮಿಸುವಂತಹ ಕ್ರಮವನ್ನು ತಕ್ಷಣ ನಿಲ್ಲಿಸುವಂತೆ ಕ್ರಮ ಕೈಗೊಳ್ಳಬೇಕು. ಒಂದು ವಿಚಾರ ತಮ್ಮ ಗಮನಕ್ಕೆ ತರುತ್ತೇನೆ. ಪ್ರವಾಸಿಗರತಾಣದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಆಗಲೇ ಹೇಳಿದ್ದಾರೆ. ನಾಡಪ್ರಭು ಕೆಂಪೇಗೌಡ ಕಟ್ಟಿದಂತಹ ಮಾಗಡಿ, ಹುಲಿಯೂರು ದುರ್ಗ, ಹುತ್ರಿದುರ್ಗ, ಸಾವನದುರ್ಗದಲ್ಲಿ ಅವರ ವಿಶೇಷವಾದ ಅವಶೇಷಗಳಿರುವುದರಿಂದ ಪ್ರವಾಸಿಗರು ಅಲ್ಲಿಗೆ ತೆರಳುವಂತಹ ಕೆಲಸ ಮಾಡಬೇಕು. ಪಾಂಡವಪುರ ತಾಲ್ಲೂಕಿನಲ್ಲಿ ಪ್ರವಾಸಿ ಮಂದಿರವನ್ನು ಮಾಡಿ, ಹೆಚ್ಚಿನ ಮೆಚ್ಚುಗೆ ಪಡೆಯುವಂತಹ ಕೆಲಸ ಮಾಡಬೇಕು. ಕೊನೆಯದಾಗಿ ಮಾನ್ಯ ಸದಸ್ಯರಾದ ಡಾ॥ ತೇಜಸ್ವಿನಿ ಗೌಡರವರು ಚುನಾವಣೆ ಸುಧಾರಣೆ ಬಗ್ಗೆ ಮಾತನಾಡಿದ್ದಾರೆ. ನಾನು 3, 4 ಬಾರಿ ಚುನಾವಣೆಯಲ್ಲಿ ನಿಂತಿರುವುದರಿಂದ ನಿಜವಾಗಿಯೂ ಚುನಾವಣೆಯಲ್ಲಿ ಗೆಲ್ಲಬೇಕಾದರೆ ಜಾತಿ ಬಲ, ಹಣ ಬಲ ಮತ್ತು ಕೈ ಬಲ ಇರಬೇಕೆಂದು ನನಗೆ ಅನುಭವವಾಗಿದೆ. ಈ ಬಾರಿ ಎಲ್ಲರ ಆಶೀರ್ವಾದದಿಂದ ಆಯ್ಕೆಯಾಗಿ ಈ ಸದನಕ್ಕೆ ಬಂದಿದ್ದೇನೆ. ಯಾವ ರೀತಿ ಚುನಾವಣೆ ವ್ಯವಸ್ಥೆ ಇದೆ ಎಂದರೆ ಮತದಾರರ ಹೆಸರನ್ನು ಪಟ್ಟಿಯಲ್ಲಿ ಸೇರಿಸುವುದಿಲ್ಲ. ಶಿಕ್ಷಕರಾಗದಿದ್ದರೂ ಶಿಕ್ಷಕರ ಪಟ್ಟಿಯಲ್ಲಿ ಹಾಗೂ ಪದವೀಧರರಾಗದಿದ್ದರೂ ಪದವೀಧರರ ಪಟ್ಟಿಯಲ್ಲಿ ಅವರ ಹೆಸರನ್ನು ನಮೂದಿಸಿಕೊಂಡಿರುತ್ತಾರೆ. ನಾನು ಪದವೀಧರನಾಗಿದ್ದರೂ ನನ್ನ ಹೆಸರನ್ನು ಪದವೀಧರರ ಪಟ್ಟಿಗೆ ಸೇರಿಸದೇ ಹಾಗೆ ಬಿಟ್ಟಿದ್ದರು. ವಿರೋಧ ಪಕ್ಷದವರು ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದೇ ಇದ್ದರೆ ಚುನಾವಣೆಗೆ contest ಮಾಡುವ ಆಗಿಲ್ಲವೆಂದು ಭಾವಿಸಿಕೊಂಡಿದ್ದರು. ನನ್ನ ಹೆಸರು ಪಟ್ಟಿಯಲ್ಲಿಯೇ ನಮೂದಾಗದಿರುವಂತೆ ನೋಡಿಕೊಂಡಿದ್ದರು. ಇದರಿಂದಾಗಿ Election Commission ಗೆ ಹಾಗೂ ದೆಹಲಿಗೆ ಹಾಗೂ ರಾಜ್ಯದಲ್ಲಿಯೂ ಪತ್ರ

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬರೆಯಲಾಗಿತ್ತು. ಅದೇ ರೀತಿ Returning Officer ಗೂ ಪತ್ರ ಬರೆಯಲಾಗಿತ್ತು. ಅನಂತರ verify ಮಾಡಿ ಎಂದು ಯಾರು ಮಾಡಿರುತ್ತಾರೋ ಅವರ ಹತ್ತಿರ ಕಳುಹಿಸುತ್ತಾರೆ. Compassionate Grounds ಮೇಲೆ ನೇಮಕವಾದಂತಹವರು ಚುನಾವಣಾ ಕಾರ್ಯದಲ್ಲಿದ್ದಾರೆ. ಆತನಿಗೆ ಕನ್ನಡವಾಗಲಿ, ಆಂಗ್ಲ ಭಾಷೆಯಾಗಲಿ ಓದುವುದಕ್ಕೆ ಬರುವುದಿಲ್ಲ. ನಮ್ಮಲ್ಲಿ ಇಂತಹ ಪರಿಸ್ಥಿತಿ ಇದೆ.

ದಯವಿಟ್ಟು ಕಾಲಾವಕಾಶವನ್ನು ನೀಡಿ, ಇದರ ಮೇಲೆ ತನಿಖೆ ನಡೆಸಬೇಕು. 5000 ನಕಲಿ ಮತದಾರರು ಪದವೀಧರರ ಪಟ್ಟಿಗೆ ಸೇರಿಕೊಂಡಿರುತ್ತಾರೆ. ನಾವು ಚುನಾವಣಾ ಸಂದರ್ಭದಲ್ಲಿ ಮನವಿ ಪತ್ರವನ್ನು ಕಳುಹಿಸಿದಾಗ ಅವೆಲ್ಲಾ ಹಿಂದಿರುಗಿ ಬಂದಿರುತ್ತದೆ. ಅದಕ್ಕಾಗಿ ಇದನ್ನು ಸುಧಾರಣೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ತಾವು ಸರ್ಕಾರದ ಮೂಲಕ ಮತ್ತೊಮ್ಮೆ ಚರ್ಚೆ ನಡೆಸಲು ಅವಕಾಶ ಮಾಡಿಕೊಡಬೇಕು. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ರಾಮನಗರದಲ್ಲಿ ಮಾವಿನ ಬೆಳೆಗಾರರು ಮತ್ತು ಕೋಲಾರದಲ್ಲಿನ ಬೆಳೆಗಾರರು ಮಳೆ ನೀರಿನಿಂದ ಅನೇಕ ಸಮಸ್ಯೆಗಳು ಉದ್ಭವಿಸಿ ಬಹಳ ನಷ್ಟವನ್ನು ಅನುಭವಿಸಿದ್ದಾರೆ. ಅದಕ್ಕಾಗಿ ತಕ್ಷಣ ಸರ್ಕಾರ bulk industries ತೆರೆದು, ತಕ್ಷಣ ಸರ್ಕಾರದಿಂದ ಹಣವನ್ನು ನಿಗದಿಪಡಿಸಬೇಕೆಂದು ಮನವಿ ಮಾಡುತ್ತೇನೆ. ಹಿಂದಿನ ಸರ್ಕಾರ ನಿರುದ್ಯೋಗಿಗಳಿಗೆ 15 ಲಕ್ಷ ಉದ್ಯೋಗವನ್ನು ಸೃಷ್ಠಿಸಿದೆ ಎಂದು ಹೇಳಿದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯದ ಪದವೀಧರರು ಎಷ್ಟು ಜನ ನಿರುದ್ಯೋಗಿಗಳಿದ್ದಾರೆ, ಎಷ್ಟು ಜನರಿಗೆ ಉದ್ಯೋಗವನ್ನು ಘೋಷಿಸಿದ್ದಾರೆ ಎಂದು ಹೇಳಿದ್ದಾರೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿಯೇ ಇರುವುದರಿಂದ ತಮ್ಮ ಮುಖಾಂತರ ಅವರಿಗೆ ಮನವಿ ಮಾಡುವುದೇನೆಂದರೆ, ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವವರೆಗೂ ಉದ್ಯೋಗ ಭತ್ಯೆಯನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇಷ್ಟು ಮಾತನಾಡಲು ಅವಕಾಶ ಒದಗಿಸಿದ್ದಕ್ಕೆ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(072)/04.07.2018/4.20/ಎಸ್‌ಕೆ-ಎಂಡಿ.

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೇ ದಯವಿಟ್ಟು, ಮಾತನಾಡಬೇಡಿ. ನಾನು ಸದಸ್ಯರನ್ನು ಮಾತನಾಡುವುದಕ್ಕೆ ಕರೆದಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ ಬಹುತೇಕವಾಗಿ ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ನಾನು ಮಾತನಾಡೋಣ ಎಂದು ಇದ್ದೆ. ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ.

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಬಿಟ್ಟರೆ, ನಿಮಗೆ ಸಮಯ ಸಿಗುವುದಿಲ್ಲ. ಅದಕ್ಕೆ ನಿಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಇವತ್ತು ಮಾನ್ಯ ರಾಜ್ಯಪಾಲರ ಈ ಭಾಷಣವು ಸರ್ಕಾರದ ಒಂದು ಮುಖದ ಕನ್ನಡಿ ಇದ್ದ ಹಾಗೆ. ಆದರೆ ಇದು ವಿಸ್ತಾರವಾಗಿಲ್ಲ, ಸಂಕ್ಷಿಪ್ತವಾಗಿದೆ. ವಿಸ್ತಾರವಾಗಿ ಹಾಕುವುದಕ್ಕೆ ಹೋದರೆ ಸಾವಿರ ಎರಡು ಸಾವಿರ ಪುಟ ರಾಜ್ಯಪಾಲರ ಕೈಯಲ್ಲಿ ಓದುವುದಕ್ಕೆ ಆಗುವುದಿಲ್ಲ. ಅವರು ಸುಸ್ತಾಗಿ ಕುಳಿತುಕೊಂಡು ಬಿಡುತ್ತಾರೆ. ಇವತ್ತಿನ ದಿವಸ ಸರ್ಕಾರ ಹೇಳಿರುವಂತಹ ಅನೇಕ ವಿಷಯಗಳು ನಮಗೆಲ್ಲರಿಗೂ ಒಂದು ಆತ್ಮವಿಶ್ವಾಸ ತುಂಬುವಂಥದ್ದೆಂದರೆ, ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡ ಮೇಲೆ ಇದು ಪ್ರಥಮ ಭಾಷಣ. ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಪ್ರಾರ್ಥನೆ ಮಾಡುವಂತಹದ್ದು ಇಷ್ಟೇ. ಇವತ್ತು ನಮ್ಮೆಲ್ಲರ ಒಟ್ಟಾರೆ ಅಭಿಪ್ರಾಯವೇನೆಂದರೆ, ಜನತೆಗೆ ಮತ್ತು ರಾಷ್ಟ್ರಕ್ಕೆ ಒಳ್ಳೆಯದಾಗಬೇಕು. ಮೂಲತಃ ಇವತ್ತು ಕೃಷಿಯ ಬಗ್ಗೆ ಏನು ಹೇಳಿದ್ದಾರೆ? ನಮ್ಮ ದೇಶದ ಪರಂಪರೆ ಮತ್ತು ಧರ್ಮದ ಪರಂಪರೆ ಏನಿದೆ? ದುರ್ದೈವ! 'ಧರ್ಮ' ಎಂದರೆ, ನಾವು 'ಜಾತಿ' ಎಂದು ತಿಳಿದುಕೊಂಡಿದ್ದೇವೆ. ನಮ್ಮ ದೇಶದ ಮೂಲ ಆರ್ಥಿಕ ನೀತಿ ಏನು?

**ಕೃಷಿಕ ನಾಸ್ತಿ ದುರ್ಭಿಕ್ಷಃ**
**ಧರ್ಮತೋ ನಾಸ್ತಿ ಪಾಪ ನಾಶಃ**

ಕೃಷಿಯನ್ನು ಹೆಚ್ಚು ಮಾಡು. ದುರ್ಭಿಕ್ಷೆಯನ್ನು ದೂರ ಮಾಡು; ಧರ್ಮವನ್ನು ಹೆಚ್ಚು ಮಾಡು. 'ಧರ್ಮ' ಎಂದರೆ ಏನು? ಬರಿ ವಿಭೂತಿ ಧರಿಸಿಕೊಂಡು, ಬರಿ ನಮಾಜ್ ಮಾಡಿಕೊಂಡು ಗಂಟೆಯನ್ನು ಹೊಡೆಯುವಂತಹದ್ದೇ ಧರ್ಮ ಅಲ್ಲ. ಧರ್ಮ ಎಂದು ಹೇಳಿದರೆ,

**ದಯವೇ ಧರ್ಮದ ಮೂಲವಯ್ಯ**
**ದಯವಿಲ್ಲದ ಧರ್ಮ ಬೇರೆ ಅದು ಯಾವುದಯ್ಯ**

ಭಕ್ತಿ ಭಂಡಾರಿಯಾದ ಶ್ರೀ ಬಸವಣ್ಣನವರು ಧರ್ಮದ ಸಾರಾಂಶವನ್ನು ಇಡೀ ಮಾನವ ಕುಲಕ್ಕೆ ಹೇಳಿಕೊಟ್ಟಿದ್ದಾರೆ. ಇವತ್ತು ಯಾರು ನೋವಿನಿಂದ ಬಳಲುತ್ತಿದ್ದಾರೆ, ಯಾರು ಅಶಕ್ತರಿದ್ದಾರೋ ಅವರಿಗೆ ಶಕ್ತಿ ತುಂಬುವಂತಹದ್ದೇ ಧರ್ಮ. ನನ್ನ ಹತ್ತಿರವಿದ್ದು ಪಕ್ಕದವನ ಹತ್ತಿರ ಇಲ್ಲದೇ ಇದ್ದರೆ ನನ್ನಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವುದನ್ನು ಆತನಿಗೂ ಕೊಡುವಂತಹದೇ ಒಂದು ಧರ್ಮ. ಇವತ್ತು ಮಾನ್ಯ ಕುಮಾರಸ್ವಾಮಿಯವರನ್ನು ನಾನು ಅಭಿನಂದಿಸುತ್ತೇನೆ. ಕೃಷಿ ಮತ್ತು ನೀರಾವರಿಯ ಬಗ್ಗೆ ಅವರ ಮೇಲೆ ನನಗೆ double confidence ಏಕೆ ಇದೆ ಎಂದು ಹೇಳಿದರೆ ಬಿತ್ತಿರುವ ಬೀಜ ದೇವೇಗೌಡರ ಬೀಜ. ಅದು ದೊಡ್ಡ ಕಲ್ಪವೃಕ್ಷ. ನೀವು ಮೂವತ್ತೇಳು ಸ್ಥಾನಗಳನ್ನು ಗೆದ್ದು ಇವತ್ತು ಮುಖ್ಯ ಮಂತ್ರಿಯಾಗಿದ್ದೀರಿ. ನೀವು ಒಂದು ಮಾತನ್ನು ಹೇಳಿದಿರಿ. ಆದರೆ ನಾವು ಹದಿನಾರು ಸ್ಥಾನವನ್ನು ಗೆದ್ದು ಪ್ರಧಾನ ಮಂತ್ರಿಯಾಗಿದ್ದವರು. ಈ ಇತಿಹಾಸ ನಿಮಗೆ ಗೊತ್ತಿರಬಹುದು. ಆ ದಿನ ನಿಮ್ಮ ಹತ್ತಿರ ಶಾಸಕರ ಸಂಖ್ಯೆಯೂ ಕೂಡ ಜಾಸ್ತಿ ಇತ್ತು. ನಮ್ಮ ಹತ್ತಿರ ಬರೀ ಹದಿನಾರು ಶಾಸಕರೇ ಇದ್ದಿದ್ದು. ಕೇಳಲಿಲ್ಲ- ಮಾಡಲಿಲ್ಲ, ಬರೀ ಒಂದು ಜುಬ್ಬಾ ಮತ್ತು ಒಂದು ಪಂಚೆ. ಆಗ ತೀರ್ಮಾನ ಮಾಡಿ ಗೌಡರು ಪ್ರಧಾನ ಮಂತ್ರಿಯಾಗಬೇಕಾದರೆ ನಾವು ಹೇಳಿದ್ದೆವು; ಸರ್ ಇದು Beauty Queen, Mother India ಅಲ್ಲ. ಒಂದು ವರ್ಷವಾದರೂ ಚಿಂತೆ ಇಲ್ಲ. ಕೆಂಪೇಗೌಡನ ಮಗ ಕೆಂಪುಕೋಟೆಯಲ್ಲಿ ಒಂದು ಬಾರಿ ಬಾವುಟವನ್ನು ಹಾರಿಸಿದರೆ ಸಾಕು, ಕರ್ನಾಟಕದ ಇತಿಹಾಸವಾಗುತ್ತದೆ. ನೀವು ಒಪ್ಪಿಕೊಳ್ಳಿ ಎಂದು ಹೇಳಿ ಒಂದು ವರ್ಷ ಅವರು ಕೃಷಿಗಾಗಿ ಮಾಡಿರುವಂತಹ ಕೆಲಸವನ್ನು ನಾವು ಎಂದಿಗೂ ಮರೆಯುವಂತಿಲ್ಲ.

ನಾನು ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಅವತ್ತು Cabinet Secretary ಆಗಿದ್ದಂತಹ ಶ್ರೀ ಬಾಲಸುಬ್ರಹ್ಮಣ್ಯಮ್‌ರವರು ಅವರ ಬಗ್ಗೆ ಒಂದು ಪುಸ್ತಕವನ್ನು ಬರೆದಿದ್ದಾರೆ. ಆ ಪುಸ್ತಕದ ಬಗ್ಗೆ ಹೇಳುವುದಕ್ಕೆ ನನಗೆ ಸಮಯವಿಲ್ಲ. ಬಜೆಟ್ ಮಂಡನೆಯಾದ ನಂತರ ನಾನು ಅದರ ಬಗ್ಗೆ ಚರ್ಚೆ ಮಾಡುತ್ತೇನೆ. ಮುಖ್ಯಮಂತ್ರಿಯಾಗಿ ಬಂದ ಮೇಲೆ ನಾನು ಇಪ್ಪತ್ನಾಲ್ಕು ಗಂಟೆಯೊಳಗೆ 'ಸಾಲ ಮನ್ನಾ' ಮಾಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಇದು ಅವರ ದೊಡ್ಡ ಮನಸ್ಸು ಮತ್ತು ಕಾಳಜಿಯನ್ನು ತೋರಿಸುತ್ತದೆ. ಇದು ನಮ್ಮ ಮನಸ್ಸಿನಲ್ಲಿಯೂ ಇದೆ. ನಾನು ಅಧಿಕಾರ ವಹಿಸಿಕೊಂಡ ತಕ್ಷಣ ನನ್ನ ಭಾಷಣದಲ್ಲಿ ಯಾರೂ ಉಪವಾಸದಿಂದ ಮಲಗಬಾರದು ಎಂದು ಹೇಳಿ, ಹತ್ತು ಸಾವಿರ ಜನ ಕರೆದುಕೊಂಡು ಬಂದು ನನ್ನ ಮನೆಯ ಹತ್ತಿರ ಕೂರಿಸಿ, ಅವರು ಉಪವಾಸ ಇದ್ದಾರೆ, ಅವರಿಗೆ ಅನ್ನ ಕೊಡಿ ಎಂದು ಕೇಳಿದರೆ ಅದು practical ಆಗಿದೆಯೇ? ಇವತ್ತು ಮುಖ್ಯಮಂತ್ರಿಯವರು ಬಿಚ್ಚು ಮನಸ್ಸಿನಿಂದ ಒಪ್ಪಿಕೊಂಡು ವರ್ಗಾವಣೆಗಳಲ್ಲಿ ಭ್ರಷ್ಟಾಚಾರ ಇದೆ. ಅದು ಈಗಿನ ಭ್ರಷ್ಟಾಚಾರವಲ್ಲ ಅದು ಪಾರಂಪರ್ಯವಾಗಿ ಬಂದಿರುವಂಥದ್ದು. ನೀವಿದ್ದಾಗಲೂ ನಡೆಯುತ್ತಿತ್ತು, ಇವರಿದ್ದಾಗಲೂ ನಡೆಯುತ್ತಿದೆ, ಮುಂದೆಯೂ ನಡೆಯುತ್ತದೆ ಎಂದು ಹೇಳುತ್ತಿದ್ದಾರೆ. ಅವರಿಗೆ ನಾವೆಲ್ಲರೂ ಅಭಿನಂದಿಸಬೇಕಾಗುತ್ತದೆ. ದುರ್ದೈವ, ನಮ್ಮ ರಾಜಕಾರಣಿಗಳ ಪರಿಸ್ಥಿತಿ ಏನಾಗಿದೆ ಎಂದರೆ, ಅವರದು ಏನು ತಪ್ಪು ಹಿಡಿಯಬೇಕು ಮತ್ತು ಕಾರ್ಯಾಂಗದಲ್ಲಿ ಅಧಿಕಾರಿಗಳು ಇತರೆ ರಾಜ್ಯಗಳಲ್ಲಿ ಏನಾದರೂ ಮಾಡಿದ್ದಾರೆಯೇ ಎನ್ನುವಂತಹದ್ದು ನೋಡಿ, ನಾವು ಅದರ ಬಗ್ಗೆ ಚಿಂತನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದೇವೆಯೇ? ಇಲ್ಲ. ಪ್ರಥಮ ಬಾರಿಗೆ ಮಾನ್ಯ ಮುಖ್ಯಮಂತ್ರಿಗಳು ಅದನ್ನು ಬಾಯಿ ಬಿಟ್ಟು ಇವತ್ತಿನ ದಿವಸ ಹೇಳಿದ್ದಾರೆ. ಅಧಿಕಾರಿಗಳು ಇಪ್ಪತ್ತೆಂಟು ವರ್ಷ ಆರಾಮವಾಗಿ ಇರುತ್ತಾರೆ. ಅಧಿಕಾರಿಗಳು ಗ್ಯಾಲರಿಯಲ್ಲಿ ಕುಳಿತು, ನೀವು ನಮ್ಮನ್ನು ನಿಂದಿಸಿದಾಗ ನಾವು ನಿಮ್ಮನ್ನು ನಿಂದಿಸಿದಾಗ ಅದನ್ನು ಕೇಳಿ ಅವರು ನುಗುತ್ತಲೇ ಇರುತ್ತಾರೆ. ಅವರು ಐದು ವರ್ಷಕ್ಕೆ ಒಂದು ಸಲ ಅಧಿಕಾರದಿಂದ ಹೋಗಬೇಕೆಂಬುದು ಇಲ್ಲ ಮತ್ತು ಹಣದ ಖರ್ಚು ಸಹ ಇಲ್ಲ. ಮೂರು ವರ್ಷ ಮುಗಿದ ಕೂಡಲೇ ಒಂದಲ್ಲಾ ಒಂದು ಕಛೇರಿಗೆ ವರ್ಗಾವಣೆಯಾಗುತ್ತಲೇ ಇರುತ್ತಾರೆ. ಅಧಿಕಾರಿಗಳು ಇಪ್ಪತ್ತೆಂಟು ವರ್ಷ assured ಆಗಿ ಇರುತ್ತಾರೆ. ನಾವು 'ಹುಚ್ಚು ನನ್ನ ಮಕ್ಕಳು' ಇಲ್ಲಿ ಬೈದುಕೊಂಡು ಮತ್ತು ತಿರುಗಾಡಿಕೊಂಡು ಚುನಾವಣೆಗೆ ಹೋದ ಮೇಲೆ ಪರಿಸ್ಥಿತಿ ಏನಾಗುತ್ತದೆಂಬುದು ನಿಮಗೆಲ್ಲರಿಗೂ ಗೊತ್ತಿದೆ.

**ಸಭಾಪತಿಯವರು:–** ***'ಹುಚ್ಚ ನನ್ನ ಮಕ್ಕಳು'*** ಎಂಬುದನ್ನು ಕಡತದಿಂದ ತೆಗೆದು ಹಾಕಿ.

**ಶ್ರೀ ಸಿ.ಎಂ. ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಅದು ಹಳ್ಳಿಯ ಭಾಷೆಯಲ್ಲಿ ಬಂದಿರುವಂತಹದು.

**ಸಭಾಪತಿಯವರು:–** ಆ ಪದವನ್ನು ಇಲ್ಲಿ ಬಳಸುವುದು ಬೇಡ.

**ಶ್ರೀ ಸಿ.ಎಂ. ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಇವತ್ತು ವಿರೋಧ ಪಕ್ಷದ ನಾಯಕರಿಗೂ ಮತ್ತು ವಿರೋಧ ಪಕ್ಷಕ್ಕೂ ನಾವು ಪ್ರಾರ್ಥನೆ ಮಾಡುತ್ತೇವೆ. ಯಾವುದೇ ಟೀಕೆ–ಟಿಪ್ಪಣೆ ಮಾಡದೇ ಅವರಿಗೆ ಒಂದು ವರ್ಷ ಅವಕಾಶ ಕೊಡಿ. ದೇವರು ಅವರಿಗೆ ಒಂದು ಅವಕಾಶವನ್ನು ಕೊಟ್ಟಿದ್ದಾನೆ. ಹೌದು, ಕಾಂಗ್ರೆಸ್ ಪಕ್ಷಕ್ಕೂ ಅಧಿಕಾರವನ್ನು ನೀಡಲಾಗಿ ಇದೆಲ್ಲಕ್ಕಿಂತಲೂ *ಯದ್ಭಾವಂ ತದ್ಭವತಿ* ಅಂದರೆ, ಹಣೆಬರಹ ಇರಬೇಕಲ್ಲವೆ. ಅವರಿಗೆ ಅಧಿಕಾರ ಕೊಡಿ ಎಂದು ಇವರು ಕೇಳುವುದಕ್ಕೆ ಹೋಗಿಲ್ಲ. ಅದೇ ಹುಡುಕಿಕೊಂಡು ಬಂತು. ಇವತ್ತು ಅಧಿಕಾರ ಹುಡುಕಿಕೊಂಡು ಬಂದಿರಬೇಕಾದರೆ, '104 ಶಾಸಕರು ಇದ್ದೇವೆ, ನಮಗೆ ಅಧಿಕಾರ ಸಿಗಲಿಲ್ಲ' ಎನ್ನುತ್ತಾರೆ. ನೀವು ಅಧಿಕಾರ ಸಿಗಬೇಕೆಂದು ಪ್ರಯತ್ನ ಪಟ್ಟಿರಿ, ಆದರೆ ಅದು ಸಿಗಲಿಲ್ಲ ಮತ್ತು ದಕ್ಕಲಿಲ್ಲ. ತಾಳಿ ಕಟ್ಟಿ ಮದುವೆ ಎಂಬ ಸಂಸಾರದ ಅಧಿಕಾರ ನಡೆಯುತ್ತಿದೆ. ಈಗಲೂ ಏನಾದರೂ ಮಾಡಿ ಎತ್ತುಕೊಂಡು ಬರುವುದಕ್ಕೆ ಸಾಧ್ಯವೇ ಎನ್ನುವ ಪ್ರಯತ್ನಕ್ಕೆ ಕೈ ಹಾಕಬೇಡಿ ಎಂದು ಹೇಳುತ್ತೇನೆ. ಒಂದು ವರ್ಷ ಅಧಿಕಾರವೆಂಬ ಸಂಸಾರ ನಡೆಸಲಿ. ಫಲಿತಾಂಶ ಬಂದಾಗ, ಮುಂದೆ ನೀವೇ ಹೇಳುವಂತಹ ಕಾಲ ಬರಬಹುದು. ಆದ್ದರಿಂದ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕೊಡುವ ಸಲಹೆ ಇಷ್ಟೆ. ಅಧಿಕಾರಿಗಳ ಮೇಲೆ ನೀವು ಎರಡು ಸದನದ ವಿರೋಧ ಪಕ್ಷದ ನಾಯಕರುಗಳನ್ನಿಟ್ಟುಕೊಂಡು ಐದು ಜನರ ಕಮಿಟಿಯನ್ನು ಮಾಡಿ. ಯಾವ ಅಧಿಕಾರಿಗಳ ಸಿಆರ್

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ಎಸ್‌ಆರ್ ಹೇಗಿದೆ? ಇದನ್ನು ನೀವು ಯಾವಾಗಿನವರೆಗೂ ಕಠಿಣವಾದ ಪರೀಕ್ಷೆ ತರುವುದಿಲ್ಲವೋ; ನಿಮಗೆ ಹೇಳುತ್ತೇನೆ, ನಾವು ಒಂದು ಪತ್ರ ಬರೆದರೆ ಹೇಗಿದೆ ಎಂದರೆ, 'ಗಸ್ದೆ ಎಂದರೆ ಎಸ್ದೆ' ಎಂದು ಹೇಳುವಂತಹದು.

ನಾನು 1980 ರಲ್ಲಿ ಮಂತ್ರಿಯಾಗಿದ್ದವನು. ಶ್ರೀ ಲಕ್ಷ್ಮಣ್ ರಾಯರು, ಶ್ರೀ ನರಸಿಂಹ ರಾಯರು, ಶ್ರೀ ಹನುಮಾನ್, ಶ್ರೀ ಆನ್‌ರವರು, ಶ್ರೀ ಮೇಲುಕೋಟೆಯವರು ಎಂತಹ ಅಧಿಕಾರಿಗಳಿದ್ದರು ಎಂದರೆ, ಮಾನ್ಯ ಸಭಾಪತಿಯವರೇ ಆಗ ಮನೆಯಿಂದ ಡಬ್ಬಿಯಲ್ಲಿ ಊಟ ಕಟ್ಟಿಕೊಂಡು ಬಂದು ಹದಿನಾಲ್ಕು-ಹದಿನಾರು ಗಂಟೆಗಳ ಕಾಲ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳಂತೆ ಕೆಲಸ ಮಾಡುತ್ತಿದ್ದರು. ಇವತ್ತು ನಮ್ಮ ದುರ್ದೈವ. ನಾನು ಕೇಂದ್ರದಲ್ಲಿ ಮಂತ್ರಿಯಾಗಿ ಕೆಲಸ ಮಾಡಿ, ಇಲ್ಲಿ ಏನು ವ್ಯವಸ್ಥೆಯಾಗಿದೆ ಎಂಬುದನ್ನು ನಾನು ಮಂತ್ರಿಯಾಗಿ ನೋಡುವುದಕ್ಕೆ ಆಗಿಲ್ಲ. ಆದರೆ ನಾನು ಹೊರಗಿನ ವ್ಯವಸ್ಥೆಯನ್ನು ನೋಡಿದಾಗ ಮನಸ್ಸಿಗೆ ಬಾರಿ ದೊಡ್ಡ ಆಘಾತವಾಗುತ್ತದೆ. ಈ ಪರಿಸ್ಥಿತಿಯನ್ನು ಸರಿ ಮಾಡಬೇಕಾದರೆ ಆಡಳಿತ ಪಕ್ಷ ಒಂದೇ ಅಲ್ಲ, ಅವರ ಜೊತೆಗೆ ವಿರೋಧ ಪಕ್ಷದವರ ಸಹಕಾರವೂ ಸಹ ಬೇಕಾಗುತ್ತದೆ. ಅದು ಹೇಗೆ ಸಹಕಾರ ಕೊಡಬೇಕಾಗುತ್ತದೆ ಎಂದರೆ, ಒಬ್ಬ ಅಧಿಕಾರಿ ಕೆಟ್ಟವನೆಂದು ಕ್ರಮ ತೆಗೆದುಕೊಂಡ ತಕ್ಷಣ, ಅಲ್ಲಿ ಎದ್ದು ನಿಂತು ಕೊಂಡು 'ಇವರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ, ಅದು ಸರಿಯಲ್ಲ'. ಅಲ್ಲಿ ಅದಕ್ಕೊಂದು ಸರಿಯಾದ CAT (*Central Administrative Tribunal)* ಎಂದು ಮಾಡಿಟ್ಟಿದ್ದೀರಿ. ಅದು ಅವರಿಗೆ ಬೇಕಾದಾಗ stay ಕೊಡುತ್ತದೆ. ರಾಜಕಾರಣಿಗಳಿಗೆ discipline ಬಂದಿದೆ; ಅಧಿಕಾರಿಗಳಿಗೆ ಎಲ್ಲಿಯವರೆಗೆ discipline ಬರುವುದಿಲ್ಲವೋ, ಅಲ್ಲಿಯವರೆಗೆ ಸುಧಾರಣೆ ಆಗುವುದಿಲ್ಲ. ನಾವು ಮತ್ತು ನೀವು ಕಾಫಿ ಕುಡಿಯುವುದಕ್ಕೆ ಹೆದರುತ್ತೇವೆ. ಟಿ.ವಿಯವರು ನಮ್ಮ ಬಗ್ಗೆ ಹೆಚ್ಚಿನದಾಗಿ ವಿಶ್ಲೇಷಣೆ ಮಾಡುತ್ತಾರೆ. ದೂರದರ್ಶನದ ಮೂವತ್ತು-ನಲವತ್ತು ಚಾನಲ್ ಆಗಿವೆ. ಅವರು ಅಲ್ಲಿ ಇಲ್ಲಿ ಏನು ವಿಷಯ ಸಿಗುತ್ತದೆಂಬುದನ್ನು ಕಾಯುತ್ತಾ ಕುಳಿತಿದ್ದಾರೆ. ಅದೇ ರೀತಿ ಅಧಿಕಾರಿಗಳ ಮೇಲೆ ಒಂದು ಅಂಕುಶ ತರಬೇಕೆಂದರೆ ಮಾನ್ಯ ಮುಖ್ಯಮಂತ್ರಿಗಳು ನಿರ್ದಾಕ್ಷಿಣ್ಯವಾಗಿ ಕ್ರಮ ವಹಿಸಬೇಕು. ಇವತ್ತು ರಾಜ್ಯದ ಜನರ ಬೆಂಬಲ ನಿಮ್ಮ ಮೇಲಿದೆ. ಅದರಲ್ಲಿ ಯಾವುದೇ ಅನುಮಾನ ವ್ಯಕ್ತಪಡಿಸುವಂತಹ ಅವಶ್ಯಕತೆ ಇಲ್ಲ. ದೇವರು ನಿಮಗೆ ಆರೋಗ್ಯ ಕೊಡಲಿ ಎಂದು ಹೇಳಿ, ನಾವು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇವೆ.

ಎರಡನೆಯದಾಗಿ, ಇವತ್ತು ಅನೇಕ ಸಲಹೆಗಳು ಇವೆ. ಆದರೆ ಮುಖ್ಯವಾಗಿರುವಂಥದ್ದು, ನೀವು ನಮ್ಮ ರಾಜ್ಯದಲ್ಲಿ ಪ್ರವಾಸೋದ್ಯಮದ ಬಗ್ಗೆ ಏನು ಹೇಳಿದ್ದೀರಿ? ಇವತ್ತಿನ ದಿವಸ 'ಆಯುರ್ವೇದ' ನಮ್ಮ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪುರಾತನವಾದಂತಹ ವೈದ್ಯ ಪದ್ಧತಿ. ಇದಕ್ಕಾಗಿ ಇವತ್ತು Middle-East Countreis ಮತ್ತು ಅಮೇರಿಕಾದಿಂದ ಸಹ ಜನರು ಇಲ್ಲಿಗೆ ಬರುತ್ತಿದ್ದಾರೆ. ಆದರೆ ದುರ್ದೈವ ಏನಾಗಿದೆ ಎಂದರೆ, ಈ ಆಯುರ್ವೇದಕ್ಕೆ AYUSH (Ayurveda, Yoga and Naturopathy, Unani, Siddha and Homoeopathy) ಎಂದು ಹೆಸರಿಟ್ಟಿದ್ದೀರಿ. ಇವತ್ತಿನ ದಿವಸ ಅದು ಬೆಳೆಯುವುದಕ್ಕೆ ಅವಕಾಶ ಕೊಡುತ್ತಿಲ್ಲ. ಮಾನ್ಯ ಸಭಾಪತಿಯವರೇ, ಈ ಆರವತ್ತೆಂಟನೇ ವಯಸ್ಸಿನಲ್ಲಿ ಸಹ ನಾನು ಮತ್ತು ಮಾನ್ಯ ದೇವೇಗೌಡರು ಆರೋಗ್ಯವಂತರಾಗಿದ್ದರೆ ಅದಕ್ಕೆ ಕಾರಣ ನಾವು ಆ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿರುವುದರಿಂದ ಇವತ್ತಿನವರೆಗೂ ಕೂಡ ನಾವು ಆರೋಗ್ಯವನ್ನು ಕಾಪಾಡಿಕೊಂಡಿದ್ದೇವೆ.

(ಮುಂದು...)

<u>(073)04.7.2018/4.30/ಎಂ.ಎಂ-ಎ.ಕೆ</u>

**ಶ್ರೀ ಸಿ.ಎಂ. ಇಬ್ರಾಹಿಂ (ಮುಂದು)**

ಆದ್ದರಿಂದ ಇದನ್ನು ನೀವು ಬಜೆಟ್‌ನಲ್ಲಿ ಪ್ರತ್ಯೇಕವಾಗಿ ಆಯುಷ್ ಇಲಾಖೆಯ ನಿರ್ದೇಶನಾಲಯವನ್ನು ಅಲೋಪತಿಯಿಂದ ಬೇರ್ಪಡಿಸಿ ಇದಕ್ಕೆ ಒಬ್ಬ ಮಂತ್ರಿಯನ್ನು ನೇಮಿಸಿದರೂ ಕೂಡ ಯಾವುದೇ ತಾಪತ್ರಯ ಇಲ್ಲ. ಏಕೆಂದರೆ, ಇವತ್ತು ವಿದೇಶದಿಂದ ಸಾವಿರಾರು ಜನರು ಕೇರಳಕ್ಕೆ ಹೋಗುತ್ತಿದ್ದಾರೆ ಕರ್ನಾಟಕದಲ್ಲಿ ಇದನ್ನು ಆಕರ್ಷಣೆ ಮಾಡುವುದಕ್ಕೆ ಇಲ್ಲೊಂದು ಅವಕಾಶವಿದೆ. ಎರಡನೆಯದಾಗಿ ಆಯುರ್ವೇದದ ಗಿಡಮೂಲಿಕೆಗಳನ್ನು ಬೆಳೆಯುವ ಕಾಡುಗಳು ನಾಶವಾಗುತ್ತಿವೆ. ಇವತ್ತು ಬಾಬಾಬುಡನ್‌ಗಿರಿಯಲ್ಲಿರುವ ದತ್ತಾತ್ರೇಯ ಪೀಠದಲ್ಲಿ ಸಿಗುವಂತಹ ಗಿಡಮೂಲಿಕೆಗಳು ಭಾರತ ದೇಶದಲ್ಲಿ ಹಿಮಾಲಯ ಬಿಟ್ಟರೆ ಅದು ಎರಡನೇ ಜಾಗವಾಗಿದೆ. ಅದನ್ನು ಸಂರಕ್ಷಣೆ ಮಾಡಬೇಕಾಗಿದೆ ಇದು ಮೊದಲನೆಯದು. ಮಾನ್ಯ ಅರಣ್ಯ ಸಚಿವರು ಕೂಡ ಇಲ್ಲಿದ್ದಾರೆ, ಅವರು ಅರಣ್ಯಗಳಲ್ಲಿ . . .

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕಪ್ಪತ್ತಗುಡ್ಡದ ಬಗ್ಗೆಯೂ ಕೂಡ ಹೇಳಲಿ.

**ಸಭಾಪತಿಯವರು:-** ಆಗಲಿ, ಅವರು ಹೇಳುತ್ತಾರೆ ಕುಳಿತುಕೊಳ್ಳಿ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಕಪ್ಪತ್ತಗುಡ್ಡ ಸಹಿತ ಯಾವುದೇ ಗುಡ್ಡಗಳಿದ್ದರೂ ಅವೆಲ್ಲಾ ಉಳಿಯಬೇಕೆಂದು ಹೇಳುತ್ತಿದ್ದೇನೆ. ಕಪ್ಪತ್ತಗುಡ್ಡವಾಗಲೀ ಅಥವಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಪ್ಪತ್ತುಗುಡ್ಡವಾಗಲೀ ಒಟ್ಟಿನಲ್ಲಿ ದೊಡ್ಡಗುಡ್ಡವೊಂದು ಉಳಿದರೆ ಎಲ್ಲಾ ಗುಡ್ಡಗಳೂ ಉಳಿಯುತ್ತವೆ. ಮೊದಲು ಈ ಗುಡ್ಡವನ್ನು ಉಳಿಸಿಕೊಳ್ಳಬೇಕು. ಅರಣ್ಯ ಇಲಾಖೆಯಲ್ಲಿ ನೀಲಗಿರಿ ಗಿಡಗಳನ್ನು ಬೆಳೆಸಿ ನೀರನ್ನು ಹಾಳುಮಾಡುವ ಬದಲು ಮೀಸಲು ಅರಣ್ಯ ಪ್ರದೇಶಗಳಲ್ಲಿ ಇಂತಿಷ್ಟು ಜಾಗವನ್ನು ಆಯುರ್ವೇದ ಗಿಡಗಳನ್ನು ಬೆಳೆಯುವುದಕ್ಕೆ ಮೀಸಲಿಟ್ಟರೆ ರೈತರು ಬೆಳೆಯುತ್ತಾರೆ ಮತ್ತು ಹೈನುಗಾರಿಕೆ ಬಗ್ಗೆ ಹೇಳುವಾಗ ನಾವು ಇಸ್ರೇಲ್‌ಗೆ ಹೋಗಿದ್ದೆವು;

**ಸಭಾಪತಿಯವರು**:- ಮಾನ್ಯ ಇಬ್ರಾಹಿಂರವರೇ, ಮಾನ್ಯ ಸದಸ್ಯರು ಕಪ್ಪತ್ತಗುಡ್ಡದಲ್ಲಿ ಈ ರಾಜ್ಯದಲ್ಲಿ ಅಧಿಕವಾಗಿ ಬೆಳೆಯುವಂತಹ ಔಷಧಿ ಗಿಡಗಳು ಬೆಳೆಯುತ್ತವೆ ಎಂದು ಹೇಳಿದರು.

**ಶ್ರೀ ಸಿ.ಎಂ. ಇಬ್ರಾಹಿಂ**:- ಮಾನ್ಯ ಸಭಾಪತಿಯವರೇ, ಅದು ಗೊತ್ತು, ಅಲ್ಲಿಗೆ ನಾನು ಹೋಗಿದ್ದೆನು. 45 ವರ್ಷಗಳಿಂದ 'ಶಂಭೋ ಶಂಕರ' ಎಂದು ನಾನು ತಿರುಗಾಡುತ್ತಿದ್ದೇನೆ. ನಮ್ಮದು ಹಳೆಯ 'ಭೂ ಕೈಲಾಸ', ದಿ: ಎಸ್. ನಿಜಲಿಂಗಪ್ಪನವರ ಕಾಲದಿಂದ ಇವತ್ತಿನವರೆಗೂ ಹೊಸ ಪ್ರಿಂಟ್ ಹಾಕಿಕೊಂಡು ಹೊರಡುತ್ತೇವೆ. ನನಗೆ ಎಲ್ಲಾ ಗುಡ್ಡಗಳನ್ನು ತಿರುಗಾಡಿ ಗೊತ್ತಿದೆ. 'ಹಲ್ಲು ಇದ್ದವರಿಗೆ ಕಡಲೆ ಇಲ್ಲ, ಕಡಲೆ ಇದ್ದವರಿಗೆ ಹಲ್ಲಿಲ್ಲ'. ಇಂದು ಆ ಪರಿಸ್ಥಿತಿ ಇದೆ ಆದ್ದರಿಂದ ಇಂತಹ ಅರಣ್ಯಗಳನ್ನು ಮೀಸಲಿಡಬೇಕಿದೆ. ಹೈನುಗಾರಿಕೆ ಕಾರ್ಯಕ್ರಮದ ಮೇಲೆ ನಾವು ಇಸ್ರೇಲ್‌ಗೆ ಹೋಗಿದ್ದೆವು. ಅಲ್ಲಿ ಹಸುಗಳನ್ನು ನೋಡಿದೆವು, ಹಸು ಹಾಲು ಕೊಡುವುದನ್ನು ನಿಲ್ಲಿಸಿದ ಮೇಲೆ ಅದನ್ನು ಏನು ಮಾಡುತ್ತಾರೆ ಎನ್ನುವುದನ್ನು ಹೇಳಲಿಲ್ಲ. ನಾನು ಯೋಜನಾ ಆಯೋಗದ ಉಪಾಧ್ಯಕ್ಷನಾದಾಗ ನೀತಿ ಆಯೋಗದ ಮುಂದೆ ಕೇಳಿದೆ. ನಾನು ಒಬ್ಬ ರೈತನಾಗಿದ್ದು, ಎಮ್ಮೆ ಮತ್ತು ಹಸುವನ್ನು ತೆಗೆದುಕೊಂಡಿದ್ದೇನೆ. ಅವು ಹಾಲು ಕೊಡುವುದನ್ನು ನಿಲ್ಲಿಸಿಬಿಡುತ್ತದೆ, ಆಗ ಅದನ್ನು ಮಾರಬೇಕಾಗುತ್ತದೆ. ಮಾರಾಟ ಮಾಡಿದರೆ ಅರ್ಧ ಹಣ ಬರುತ್ತದೆ. ಅರ್ಧ ಹಣವನ್ನು ಹಾಕಿ ಬೇರೆ ಹಸುವನ್ನು ತರಬೇಕು. ಇದಕ್ಕೆ ಪರಿಹಾರವೇನೆಂದು ಕೇಳಿದರೆ ಅವರು ಬೇಚ್ ದೋ ಎಂದು ಹೇಳಿದ್ದರು. ಆಗ ನಾನು ಖರೀದ್ ನೇ ವಾಲಾ ಕೌನ್ ಹೈ ಎಂದು ಹೇಳಿದೆ. ನೀವು circular ತೆಗೆದರೆ ಯಾರೂ ಮಾರಾಟಕ್ಕೆ ತೆಗೆದುಕೊಳ್ಳಬಾರದು. ಇವತ್ತಿನ ದಿವಸ ಇಡೀ ಉತ್ತರ ಹಿಂದೂಸ್ತಾನ, ಮಹಾರಾಷ್ಟ್ರದಲ್ಲಿ ರಸ್ತೆಯ ಮೇಲೆಲ್ಲಾ ದನಗಳು, ಎಮ್ಮೆಗಳು. ಎಲ್ಲಿಯೂ ಗೋ ಹತ್ಯೆ ಆಗಬಾರದು ಎಂದು ಹೇಳುತ್ತಾರೆ. ಇದರ ಬಗ್ಗೆ ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಯೋಜನೆಯೇನಾದರೂ ಮಾಡಿದೆಯೇ? ಎಷ್ಟು ಜನ ರೈತರಿಗೆ ಅನ್ಯಾಯವಾಗಿದೆ ಎಂಬ ಬಗ್ಗೆ ಏನಾದರೂ ಚಿಂತನೆ ಮಾಡಿದ್ದೇವೆಯೇ? ನಾನು ಕೂಡ ಒಬ್ಬ ರೈತನಾಗಿದ್ದೇನೆ. ಒಂದು ಹಸು ಗಂಡು ಕರುವನ್ನು ಹಾಕಿದರೆ ಅದನ್ನು ಮನೆಯಲ್ಲಿ ಇಟ್ಟುಕೊಳ್ಳುವುದೇ ಇಲ್ಲ. ಏಕೆಂದರೆ, ಗೋಮಾಳವಂತೂ ಇಲ್ಲವೇ ಇಲ್ಲ ಇನ್ನು ಅವನ್ನು ಹೂಳುವುದಕ್ಕೆ ಜಾಗ ಎಲ್ಲಿದೆ? ಅದಕ್ಕೆ ಸ್ಮಾರ್ಟ್‌ಸಿಟಿ ಮಾಡುವುದನ್ನು ಬಿಟ್ಟು ಸ್ಮಾರ್ಟ್ ವಿಲೇಜ್ ಅಂದರೆ ಗ್ರಾಮ ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದನ್ನೇ ಮಹಾತ್ಮ ಗಾಂಧಿಯವರು ಹೇಳಿರುವುದು. ಮಾನ್ಯ ಹೆಚ್.ಡಿ.ದೇವೇಗೌಡರು ಬಯಸಿದ್ದೂ ಸ್ಮಾರ್ಟ್ ವಿಲೇಜ್. ಆದರೆ ಇಂದು ಸ್ಮಾರ್ಟ್‌ಸಿಟಿ ಮಾಡುತ್ತಿದ್ದಾರೆ. ಸ್ಮಾರ್ಟ್ ಸಿಟಿ ಮಾಡಿದರೆ ಏನಾಗುತ್ತದೆ ಎಂದರೆ ಹಳ್ಳಿಯವರೆಲ್ಲಾ ಪೇಟೆಗೆ ಬಂದು ವಾಸ ಮಾಡುತ್ತಿರುವುದರಿಂದ ಬೆಂಗಳೂರಿನಲ್ಲಿ ಇಂದು ತಿರುಗಾಡುವುದಕ್ಕೆ ಎಷ್ಟೇ ಫ್ಲೈ-ಓವರ್‌ಗಳನ್ನು ಮಾಡಿದರೂ ಕೂಡ ನಡೆದುಕೊಂಡು ಹೋಗುವುದಕ್ಕೆ ಕೂಡ queue ಮಾಡಬೇಕಾಗುತ್ತದೆ. ಇನ್ನು ಕಾರುಗಳು ಬಸ್ಸುಗಳು ಓಡಾಡುವುದು ಅಸಾಧ್ಯವಾಗುತ್ತದೆ. ಕುಡಿಯುವ ನೀರು ಅಸಾಧ್ಯವಾಗುತ್ತದೆ. ಎಲ್ಲಿಯವರೆಗೆ ಗ್ರಾಮ ಕಲ್ಯಾಣ ಮಾಡುವ ಮೂಲಕ ಎಲ್ಲಾ ವ್ಯವಸ್ಥೆಗಳನ್ನು ಹಳ್ಳಿಗೆ ಕೊಡುವುದಿಲ್ಲವೋ ಅಲ್ಲಿಯವರೆಗೆ ಸಿಟಿ ಮೇಲಿರುವ ಭಾರವನ್ನು ತಡೆಯುವುದಕ್ಕೆ ಸಾಧ್ಯವಿಲ್ಲ.

ಇನ್ನು law and order ಬಗ್ಗೆ ಹೇಳುವುದಾದರೆ ಸುಮಾರು ಆರೂವರೆ ಕೋಟಿ ಜನಸಂಖ್ಯೆ ಇರುವ ಈ ರಾಜ್ಯದಲ್ಲಿ ಭಾರತದೇಶದಲ್ಲಿರುವ ಎಲ್ಲಾ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕವು ಸೌಮ್ಯವಾದ, ಶಾಂತಿಯುತವಾದಂತಹ ರಾಜ್ಯವೆಂದು ಹೆಸರಾಗಿದೆ. ಬೇಕಾದರೆ ಅಂಕಿಸಂಖ್ಯೆಗಳನ್ನು ತೆಗೆದು ನೋಡಿ. ಉತ್ತರ ಪ್ರದೇಶದಲ್ಲಿ, ಬಿಹಾರದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಹೇಗಿದೆ ಎಂಬುದನ್ನು ಗಮನಿಸಿದರೆ, ವಿರೋಧಪಕ್ಷದವರಿದ್ದಾರೆ ಅದರಿಂದ ಹೇಳಬೇಕೆಂದಲ್ಲ.

ಎರಡನೆಯದಾಗಿ ಮಾನ್ಯ ಮುಖ್ಯಮಂತ್ರಿಯವರಿಗೆ ನಾನು ಸಲಹೆ ಕೊಡುವುದೇನೆಂದರೆ, ಪೊಲೀಸ್ ಇಲಾಖೆ ಬಗ್ಗೆ ಎಂ.ಎಲ್.ಎ ಸರ್ಕಲ್ ಇನ್ಸ್‌ಪೆಕ್ಟರ್‌ಗಳನ್ನು ಹಾಕಿಸುತ್ತಾರೆ ಎಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಯವರೇ, ನಿಮ್ಮ ಕಾಲದಲ್ಲಿ ಐ.ಜಿ, ಡಿ.ಜಿ ಮತ್ತು ಲೋಕಲ್ ಎಸ್.ಪಿ ಇವರು ಯಾರನ್ನು ಸೂಚಿಸುತ್ತಾರೋ, ಅಂತಹ ಅಧಿಕಾರಿಯನ್ನು ಹಾಕಿ, ಎಲ್ಲಿ ಗಲಭೆ ನಡೆದರೂ ನೀವೇ ಕಾರಣಕರ್ತರಾಗುತ್ತೀರಿ ಎಂದು ಅವರ ತಲೆ ಮೇಲೆ ಹೊಣೆ ಹೊರಿಸಿಬಿಟ್ಟರೆ ಸುಮಾರು ಶೇ.50 ರಿಂದ 60ರಷ್ಟು ಆಡಳಿತ ನಿಯಂತ್ರಣಕ್ಕೆ ಬರುತ್ತದೆ. ಎಸ್.ಪಿ ಹೇಳಿದ್ದು ಒಂದು ಅಧಿಕಾರಿಯಾದರೆ, ನಾವು ಮತ್ತೊಂದು ಅಧಿಕಾರಿಯನ್ನು ಹಾಕಿದರೆ ಸರ್ಕಲ್ ಇನ್ಸ್‌ಪೆಕ್ಟರ್ ಮಾತನ್ನು ಸಬ್-ಇನ್ಸ್‌ಪೆಕ್ಟರ್ ಕೇಳುವುದಿಲ್ಲ ಮತ್ತು ಸಬ್-ಇನ್ಸ್‌ಪೆಕ್ಟರ್ ಮಾತನ್ನು ಕಾನ್ಸ್‌ಟೇಬಲ್ ಕೇಳುವುದಿಲ್ಲ. ಈ ವ್ಯವಸ್ಥೆಯಿಂದ ಆಡಳಿತ ಸಡಿಲವಾಗುತ್ತದೆ. ಅದನ್ನು ಮಾಡುವುದಕ್ಕೆ ರಾಜಕೀಯ ಒತ್ತಡವನ್ನು ತಡೆದುಕೊಂಡು ಸಾಮಾಜಿಕ ನ್ಯಾಯವನ್ನು ಕೊಟ್ಟರೆ, ಅದರಲ್ಲಿ ದಲಿತರು, ಹಿಂದುಳಿದವರು, ಮುಂದುವರಿದವರು ಯಾರು ಪ್ರಾಮಾಣಿಕರಾಗಿದ್ದಾರೋ ಅಂತಹ ಅಧಿಕಾರಿಯನ್ನು ಕೆಲಸಕ್ಕೆ ತೆಗೆದುಕೊಂಡರೆ ಉತ್ತಮವಾಗುತ್ತದೆ ಎನ್ನುವುದು ನನ್ನ ಭಾವನೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

4-5 ವರ್ಷಗಳ ಹಿಂದೆ ಮಾಜಿ ಮುಖ್ಯಮಂತ್ರಿಯವರಾದ ಶ್ರೀ ಸಿದ್ಧರಾಮಯ್ಯನವರು ಅನೇಕ ಯೋಜನೆಗಳನ್ನು ಮಾಡಿದರು, ರೈತರ ಭಾಗ್ಯ, ಕ್ಷೀರ ಭಾಗ್ಯ, ಅನ್ನ ಭಾಗ್ಯ ಇಷ್ಟೆಲ್ಲಾ ಮಾಡಿದರೂ ಕೂಡ 224 ರಿಂದ 80 ಕ್ಷೇತ್ರಗಳಿಗೆ ಬಂದರು ಎಂದು ಹೇಳಿದರು. ಅದಕ್ಕೆ ಅನೇಕ ಕಾರಣಗಳು ಇವೆ, ಇಲ್ಲವೆಂದಲ್ಲ. ಈಗ ಆ ಕಾರಣಗಳನ್ನು ವಿವರಣೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಹೇಳುತ್ತೇನೆ, ಅದು ಈ ಸದನದಲ್ಲಿ ರೆಕಾರ್ಡ್ ಆಗಲಿ. ಎಲ್ಲಿಯವರೆಗೆ ಬ್ಯಾಲೆಟ್ ಪೇಪರ್ ಬರುವುದಿಲ್ಲವೋ ಅಲ್ಲಿಯವರೆಗೆ ಈ ಮತಯಂತ್ರದ ಮೇಲೆ ನಮಗೆ ವಿಶ್ವಾಸವಿಲ್ಲ. ಏಕೆಂದರೆ, ಬ್ಯಾಲೆಟ್ ಪೇಪರ್ ಖಾತರಿ, ತಾಯಿ ಇದ್ದ ಹಾಗೆ. ಮತಯಂತ್ರ ಅಪ್ಪ ಇದ್ದ ಹಾಗೆ ಇರುತ್ತದೆ. ತಾಯಿ ಸತ್ಯ, ಅಮ್ಮ ಹೇಳಿದ್ದಕ್ಕೆ ಅಪ್ಪ ಇದೇ ಸಾಕ್ಷಿ. ಈ ಮತಯಂತ್ರದಲ್ಲಿ ಮತವನ್ನು ಒತ್ತಿದರೆ ಶಬ್ದ ಹೇಗೆ ಬರುತ್ತದೆ? ಉದಾಹರಣೆಗೆ ನನ್ನ ಬಳಿ ಮೊಬೈಲ್ ಇದೆ. ಸಾವಿರಾರು ಮೈಲಿಗಳ ದೂರದಿಂದ ಕುಳಿತುಕೊಂಡು ಈ ಮೊಬೈಲ್ ಅನ್ನು ಕಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಆನ್ ಮಾಡುವುದಕ್ಕೂ ಸಾಧ್ಯವಾಗುತ್ತದೆ. ಜಗತ್ತಿನ ಯಾವುದೇ ದೇಶಗಳಲ್ಲಿ ಈ ಯಂತ್ರಗಳನ್ನು ಎಲ್ಲರೂ dismantle ಮಾಡಿ ಹೊರಗೆ ಹಾಕಿದ್ದಾರೆ. ಆದ್ದರಿಂದ ಇವತ್ತು ಈ ಬ್ಯಾಲೆಟ್ ಪೇಪರ್‌ಗೆ ಕೇಂದ್ರದ ಮೇಲೆ

**ಶ್ರೀ ಕೆ.ಬಿ. ಶಾಣಪ್ಪ**:- ಮಾನ್ಯ ಇಬ್ರಾಹಿಂರವರೇ, 2013 ರಿಂದ ಮೆಷಿನ್ ಚೆನ್ನಾಗಿತ್ತೇ?

**ಶ್ರೀ ಸಿ.ಎಂ. ಇಬ್ರಾಹಿಂ**:- ಮಾನ್ಯ ಶಾಣಪ್ಪನವರೇ, ನನ್ನ ಅಭಿಪ್ರಾಯವನ್ನು ನಿಮಗೆ ಹೇಳಿದ್ದೇನೆ. ಬ್ಯಾಲೆಟ್ ಪೇಪರ್ ಮಾಡಿದರೆ ನಿಮಗೆ ತೊಂದರೆಯೇನು? ಮೆಷಿನ್ ಶಬ್ಧವನ್ನೇ ಕೇಳಬೇಕೇ?

**ಶ್ರೀ ಆ. ದೇವೇಗೌಡ**:- ಮಾನ್ಯ ಸಭಾಪತಿಯವರೇ, ಪದವೀಧರರು 4000 ಅಮಾನ್ಯ ಮಾಡಿದ್ದಾರೆ.

(ಗೊಂದಲ)

**ಸಭಾಪತಿಯವರು**:- ಒಂದು ನಿಮಿಷ ಕೇಳಿ, ಎಲ್ಲರೂ ಕುಳಿತುಕೊಳ್ಳಿ. ಶ್ರೀ ಪ್ರಾಣೇಶ್‌ರವರೇ ಒಂದು ನಿಮಿಷ ಕೇಳಿ.

**ಶ್ರೀ ಐವನ್ ಡಿ'ಸೋಜಾ**:- ಬ್ಯಾಲೆಟ್ ಪೇಪರ್ ತಂದರೆ ನಿಮಗೆ ತೊಂದರೆ ಏನು?

**ಶ್ರೀ ಸಿ.ಎಂ. ಇಬ್ರಾಹಿಂ**:- ಮಾನ್ಯ ಸಭಾಪತಿಯವರೇ, ಬ್ಯಾಲೆಟ್ ಪೇಪರ್ ತರುವುದು ಉತ್ತಮ ಎನ್ನುವುದು ನನ್ನ ಅಭಿಪ್ರಾಯ.

**ಶ್ರೀ ಆ. ದೇವೇಗೌಡ**:- 4000 ಮತಗಳನ್ನು ಅಮಾನ್ಯ ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ದೇವೇಗೌಡರೇ, ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ ಕುಳಿತುಕೊಳ್ಳಿ.

**ಶ್ರೀ ಸಿ.ಎಂ. ಇಬ್ರಾಹಿಂ:-** ಇದರ ಬಗ್ಗೆ ದೇಶದಲ್ಲಿ ಕೂಗು ಬರುತ್ತದೆ, ಇಲ್ಲವೆಂದಲ್ಲ.

(ಗೊಂದಲ)

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ಅಲೋ ಮಾಡುವುದಿಲ್ಲ ಮಾತನಾಡಬೇಡಿ ಎಂದು ಹೇಳಿದ್ದೇನೆ, ಅವರಿಗೆ ಅಲೋ ಮಾಡಿದ್ದೇನೆ, ಅವರು ಮಾತನಾಡುತ್ತಿದ್ದಾರೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ನಾನು ಇಷ್ಟು ಹೊತ್ತು ಮಾತನಾಡಿದೆನಲ್ಲ ಯಾರಿಗಾದರೂ ಟೀಕೆ ಮಾಡಿದೆನೇ? ಏನಾದರೂ ತಪ್ಪು ಹೇಳಿದೆನೇ, ಇಲ್ಲ. ಶೇ.38 ರಷ್ಟು voting rate ಜಾಸ್ತಿ ಬಂದಿದೆ. ನಮಗೆ 124 ಸ್ಥಾನಗಳು ಬಂದಿವೆ, 104 ಸ್ಥಾನಗಳಲ್ಲಿ ನೀವು ಇದ್ದೀರಿ. ಆದ್ದರಿಂದ ಐದು ವರ್ಷ ಆಡಳಿತ ನಡೆಸಬೇಕು ಎನ್ನುವುದು ನಮ್ಮೆಲ್ಲರ ಅಪೇಕ್ಷೆಯಾಗಿದೆ. ಯಾರಿಗೂ ಚುನಾವಣೆಗೆ ಹೋಗುವ ಇಚ್ಛೆ ಇಲ್ಲ. ಏಕೆಂದರೆ, ಈ ದೇಶದಲ್ಲಿ ಮಹಾತ್ಮ ಗಾಂಧಿಯವರು ಚುನಾವಣೆಗೆ ನಿಂತರೂ 10 ಕೋಟಿ ರೂಪಾಯಿಗಳು ಬೇಕಾಗಿದೆ ಅಂತಹ ಪರಿಸ್ಥಿತಿ ಬಂದಿದೆ. ಹಾಗಾಗಿ ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರಿಗೆ ಅದರ ಅನುಭವ ಆಗಿರಬೇಕೆಂದು ಕಾಣುತ್ತದೆ. ಆದ್ದರಿಂದ ಇದನ್ನು ಬಿಡಿಸಿ ಹೇಳುವ ಅವಶ್ಯಕತೆ ಇಲ್ಲ. ಇದು ನಿಜ. ಮಾನ್ಯ ಶಾಣಪ್ಪನವರೇ ನಿಮ್ಮ ನಮ್ಮ ಬಳಿ ಹಣವಿಲ್ಲ ಅದಕ್ಕೆ ನಾವು ಸುಮ್ಮನಿದ್ದೇವೆ.

**Sri K.B. SHANAPPA:** We appreciate it. 10 ಕೋಟಿ ರೂಪಾಯಿಯವರೆಗೆ ಈಗ ರೆಕಾರ್ಡ್ ಆಯಿತು.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, Election Commissioner ಗೂ ಗೊತ್ತಿದೆ, ನಾವು ಬಂದು ಅರ್ಜಿಯೊಂದರಲ್ಲಿ ನಾವು ಮಾಡಿರುವುದು 25 ಲಕ್ಷ ಎಂದು ಇಬ್ಬರೂ ಅರ್ಜಿ ಕೊಡುತ್ತಾ ಇದ್ದೇವೆ. ನಮ್ಮ ದೇಶದ ಪರಿಸ್ಥಿತಿ ಹೇಗಾಗಿದೆ ಎಂದರೆ 'My children and your children are quarrelling with our children' ಎನ್ನುವಂತಹ ಪರಿಸ್ಥಿತಿ ಆಗಿದೆ. ಆದ್ದರಿಂದ ಇವತ್ತು ನಾವೆಲ್ಲ ಸೇರಿ ಇದನ್ನು ಸರಿಪಡಿಸುವುದು ಹೇಗೆ? ಇದಕ್ಕೆಲ್ಲಾ ಒಂದು ವ್ಯವಸ್ಥೆ ಬರಬೇಕಲ್ಲವೇ? ಒಂದು ವ್ಯವಸ್ಥೆ ಬಂದಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು ..

(74) 04-07-2018/4-40/ಕೆಹೆಚ್/ಎಕೆ

**ಶ್ರೀ ಸಿ.ಎಂ. ಇಬ್ರಾಹಿಂ (ಮುಂದು):-** ಇವತ್ತಿನ ದಿವಸ ನಾವೆಲ್ಲಾ ಸೇರಿ ಇದನ್ನು ಸರಿಪಡಿಸುವುದು ಹೇಗೆ? ಇದಕ್ಕೆ ಏನಾದರೂ ಒಂದು ವ್ಯವಸ್ಥೆ ಬರಬೇಕಲ್ಲವೇ, ಇದಕ್ಕೆ ಒಂದು ವ್ಯವಸ್ಥೆ ಬಂದಿತು. ಇದನ್ನು ಹೋಗು ಎಂದರೆ ಹೋಗುವುದಕ್ಕೆ ಆಗುವುದಿಲ್ಲ. ಎಲ್ಲರೂ ನೀನು ಯಾವ ಜಾತಿ ಎಂದು ಕೇಳುತ್ತಾರೆ. ಹೌದು, ನಾನು ಮುಸಲ್ಮಾನ ಜಾತಿಯಲ್ಲಿ ಹುಟ್ಟಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರಾದ ಕುಮಾರ ಸ್ವಾಮಿಯವರು ಒಕ್ಕಲಿಗರ ಜಾತಿಯಲ್ಲಿ ಹುಟ್ಟಿದ್ದಾರೆ. ಇವರು ವೈಶ್ಯ ಜಾತಿಯಲ್ಲಿ ಹುಟ್ಟಿದ್ದಾರೆ. ನಾವು ಏನಾದರೂ ದೇವರಿಗೆ ಈ ಜಾತಿಯಲ್ಲಿ ಹುಟ್ಟಬೇಕೆಂದು ಅರ್ಜಿಯನ್ನು ಕೊಟ್ಟಿದ್ದೇವೆಯೇ, ಈ ಜಾತಿಯಲ್ಲಿ ಹುಟ್ಟಿದ್ದೇವೆ. ಈ ಜಾತಿಯಲ್ಲಿ ಹುಟ್ಟಿದ ಮೇಲೆ ವಾಪಸ್ಸು ಎಲ್ಲರೂ ಸುಡುಗಾಡಿಗೆ ಹೋಗಬೇಕು. ಮತ್ತೆ ಇನ್ನು ಎಲ್ಲಿಗೂ ಹೋಗುವುದಕ್ಕೆ ಆಗುವುದಿಲ್ಲ. ನಾವು ಇರುವಷ್ಟು ದಿವಸವಾದರೂ ಜನರ ಸೇವೆ ಮಾಡೋಣ. ಈಗ ಚುನಾವಣೆ ಮುಗಿಯಿತು. ಮುಂದೆ ಲೋಕಸಭೆ ಚುನಾವಣೆ ಬಂದಾಗ ಹೊರಗಡೆ ಹೋಗುವುದಕ್ಕೆ ನೋಡೋಣ. ಹಿಂದೆ ಜನರು ಭಾಷಣವನ್ನು ಕೇಳುವುದಕ್ಕೆ ಬರುವಂತಹ ಪರಿಸ್ಥಿತಿ ಇತ್ತು. ಆದರೆ ಈಗ ತಂದ ಜನರು ಭಾಷಣವನ್ನು ಕೇಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕಾಗಿ ಭಾಷಣವನ್ನು ಮಾಡುವುದನ್ನೆ ಬಿಟ್ಟುಬಿಟ್ಟೆ. ಒಂದೆರಡು ಕಡೆಗಳಲ್ಲಿ ನಾನು ಮತ್ತು ಶ್ರೀ ಸಿದ್ಧರಾಮಯ್ಯನವರು ಸಭೆಗಳಿಗೆ ಹೋದೆವು. ಒಂದು ಸಭೆಯನ್ನು ನೋಡಿದೆವು, ಎರಡನೇ ಸಭೆಯನ್ನು ನೋಡಿದೆವು, ಮೂರನೇ ಸಭೆಗೆ ನಾನು ಬರುವುದಿಲ್ಲವೆಂದು ಶ್ರೀ ಸಿದ್ಧರಾಮಯ್ಯನವರಿಗೆ ಹೇಳಿದೆ. ಅವರು ಏಕೆ ಎಂದು ಕೇಳಿದರು. ಈ ಬಾರಿ ನಾವು ಚುನಾವಣೆಯಲ್ಲಿ ಗೆಲ್ಲುವುದಿಲ್ಲ ಎಂಬುದು ನನಗೆ ಖಾತ್ರಿಯಾಯಿತು. ಅವರು ಏಕೆ ಈ ರೀತಿಯಲ್ಲಿ ಹೇಳುತ್ತೀರಿ ಎಂದು ಕೇಳಿದರು. ಮೊದಲನೇ ಸಭೆಗೆ ಬಂದ ಜನರೇ ಮೂರನೇ ಸಭೆಗೂ ಬಂದಿದ್ದಾರೆ ಎಂದು ಹೇಳಿದೆ. ನಿಮ್ಮ ಹಣೆಬರಹದಂತೆಯೆ ನಮ್ಮ ಹಣೆಬರಹವೂ ಆಗಿದೆ.

**(ಸದನದಲ್ಲಿ ನಗುವಿನ ಅಲೆ)**

ಈಗ ಎಲ್ಲಾ ಪಕ್ಷಗಳ ಹಣೆಬರಹವೂ ಅದೇ ಆಗಿದೆ. ಈಗ ಜನರಿಗೂ ಕೂಡ ಬೇಜಾರಾಗಿದೆ. ಓ ನಡಿಯೋ ಮಹಾರಾಯ ಇವನ ಭಾಷಣವನ್ನು ಏನು ಕೇಳುವುದು. ಜನರಿಗೆ ಏನು ಭಾಗ್ಯ ಕೊಟ್ಟರೂ ಕೂಡ ಚುನಾವಣೆಯ ಸಮಯದಲ್ಲಿ ಇವತ್ತಿನ ಭಾಗ್ಯ ಏನು ಎಂದು ಜನರು ಕೇಳುತ್ತಾರೆ. ನಮಗೆ 4 ವರ್ಷದ ಭಾಗ್ಯ ಬೇಡ. ನಾಳೆ ಬೆಳಗ್ಗೆ ಟೊಯ್ ಎಂದು ಒತ್ತಬೇಕಲ್ಲವೇ, ನನಗೆ ಸುಯ್ ಎನಿಸುತ್ತದೆ ಈ ಭಾಗ್ಯ ಯಾವುದು? ಇದು ದುರ್ದೈವದ ಸಂಗತಿಯಾಗಿದೆ. ನಾವು, ನೀವು ಒಂದು ಕಡೆ ಸೇರಿದರೆ, ಆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಾಯಿಗೆ ಹೇಳುತ್ತೇನೆ. ಶ್ರೀಮತಿ ತೇಜಸ್ವಿನಿ ಗೌಡರಿಗೆ ನಾನೊಂದು ಕಾಲದಲ್ಲಿ ಬಾರಿ ಬೆಂಬಲವನ್ನು ಕೊಟ್ಟಿದ್ದೇನೆ. She knows it. When I was the Janata Dal(S) President, she was a very good reporter. ಈ ಪಕ್ಷದಲ್ಲಿ, ಆ ಪಕ್ಷದಲ್ಲಿ ಈ ರೀತಿಯಲ್ಲಿ ನಡೆಯುತ್ತಿರುತ್ತವೆ. ಇದು ಸಂತೆ ಇದ್ದಂತೆ. ರಾಜಕೀಯ ವಾತಾವರಣ ಹಳ್ಳಿಯ ಡ್ರಾಮವನ್ನು ಟೆಂಟ್‌ನಲ್ಲಿ ಸಿನಿಮಾವನ್ನು ನೋಡಿದ ಹಾಗಾಗುತ್ತದೆ. ಸಿನಿಮಾ ಟೆಂಟ್‌ಗೆ ಬೆಂಕಿ ಬಿದ್ದರೆ ನಾಲ್ಕಾಣೆ ಕೊಟ್ಟು ಟಿಕೇಟ್ ತೆಗೆದುಕೊಂಡಿರುವವನು 12ನೇ ಗೇಟ್‌ನಲ್ಲಿ ಓಡುತ್ತಾನೆ. ಹನ್ನೆರಡಾಣೆ ಕೊಟ್ಟು ಟಿಕೇಟ್ ತೆಗೆದುಕೊಂಡಿರುವವನು 3ನೇ ಗೇಟಿನಲ್ಲಿ ಓಡುತ್ತಿದ್ದಾನೆ. ಅವನಿಗೆ ಪ್ರಾಣ ಉಳಿದರೆ ಸಾಕಾಗಿದೆ.

**(ಸದನದಲ್ಲಿ ನಗುವಿನ ಅಲೆ)**

ಯಾವುದಾದರೂ ಪಕ್ಷ ಸಿಕ್ಕಿದರೆ ಸಾಕು, ಈ ಸದನದಲ್ಲಿ ಬಂದು ಕುಳಿತರೆ ಸಾಕು ಎಂದು ಅನಿಸುತ್ತದೆ. ತತ್ವ-ಸಿದ್ಧಾಂತ ಎನ್ನುವುದು ಆಮೇಲಿನ ಮಾತು. ಈ ಪರಿಸ್ಥಿತಿಯಲ್ಲಿ ಇವತ್ತಿನ ದಿವಸ ನಾನು ಈ ಸದನಕ್ಕೆ main gate ನಿಂದ ಬಂದಿದ್ದೇನೆ. ಹೋಗುವ ಗೇಟು ಯಾವುದು ಎಂದು ನೋಡಬೇಕಷ್ಟೆ. ಕೊನೆಯದಾಗಿ

"ಸಾರ ಸಜ್ಜನರ ಸಂಗವದು,
ದುರದುರ್ಜನರ ಸಂಗ ಬೇಡವಯ್ಯ,
ಹಾವ ಹಾವಾದರೇನು ವಿಷವೊಂದೇ,
ಅಂತಹವರ ಸಂಗ ಬೇಡವಯ್ಯ,
ಅಂತರಂಗ ಶುದ್ಧಿ ಇಲ್ಲದವರ ಸಂಗ,
ಸಿಂಗಿ ಕಾಳ ಕೂಟವು ವಿಷವು ಕೂಡಲ ಸಂಗಮದೇವಾ." ಎಂದು ಬಸವಣ್ಣನವರು ಹೇಳುತ್ತಾರೆ.

ಆದ್ದರಿಂದ ಶತೃತ್ವವನ್ನು ಇಟ್ಟುಕೊಳ್ಳಬಾರದು. ಮಿತೃತ್ವವನ್ನು ಇಟ್ಟುಕೊಳ್ಳೋಣ. ಶ್ರೀ ಅಡ್ವಾನಿಯವರು ನಮ್ಮ ಜೊತೆಯಲ್ಲಿಯೇ 18 ತಿಂಗಳುಗಳ ಕಾಲ ಜೈಲಿನಲ್ಲಿ ಇದ್ದವರು. ಇವತ್ತಿಗೂ ಕೂಡ ನಾನು ದೆಹಲಿಗೆ ಹೋದಾಗ ಶ್ರೀ ಅಡ್ವಾನಿಯವರ ಮನೆಗೆ ಹೋಗುತ್ತೇನೆ. ಶ್ರೀ ವಾಜಪೇಯಿರವರ ಮನೆಗೂ ಕೂಡ ಹೋಗುತ್ತೇನೆ. ಶ್ರೀ ಬಾಳ ಸಾಹೇಬ್ ದೇವರಸ್, ನಾನಾಜಿ ದೇಶಮುಖ್ ಇವರುಗಳು ನನ್ನ ಮನೆಗೆ ಈಗಲೂ ಊಟಕ್ಕೆ ಬರುತ್ತಾರೆ. ಇವತ್ತಿನ ದಿವಸ ವ್ಯಕ್ತಿಗತವಾದ ಸಂಬಂಧ ಏನಿದೆ? ಅದರ ಬಗ್ಗೆ ನಾವು ತಲೆಕೆಡಿಸಿಕೊಳ್ಳಬಾರದು. ಸದನದಲ್ಲಿ ತಾತ್ವಿಕವಾಗಿ ಮತ್ತು ಸೈದ್ಧಾಂತಿಕವಾಗಿ ಮಾತನಾಡೋಣ. ಹೊರಗಡೆಯಲ್ಲಿರುವ ಮಹಾಪ್ರಭುಗಳು, ಮಹಾಜನತೆ ಇದರ ಬಗ್ಗೆ ತೀರ್ಮಾನ ಮಾಡುವಂತಹವರು. ಸದನದಲ್ಲಿ ಮಾತನಾಡುವುದಕ್ಕೆ ಅವಕಾಶ ಸಿಕ್ಕಿದೆ. ಮಾನ್ಯ ಮುಖ್ಯಮಂತ್ರಿಯವರ ಮೇಲೆ ಹೆಚ್ಚು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನಸಿಕ ಒತ್ತಡವನ್ನು ಹಾಕದೆ, ಇದರ ಬಗ್ಗೆ ಸಮಯವನ್ನು ತೆಗೆದುಕೊಳ್ಳಲಿ. ಒಂದು ವರ್ಷ ಅಧಿಕಾರ ನಡೆಸಿದ ಮೇಲೆ ಇದರ ಬಗ್ಗೆ ಫಲಿತಾಂಶವನ್ನು ಕೊಡಿ. ಫಲಿತಾಂಶವನ್ನು ಕೊಟ್ಟರೆ ಸರಿ, ಫಲಿತಾಂಶ ಬರಲಿಲ್ಲವೆಂದರೆ ಮುಂದಿನ ವರ್ಷ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಬರುತ್ತದೆ. ೮೦ ಜನ unconditional ಆಗಿ . . .

**ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸ್ವಾಮಿ, unconditional ಎಂದು ಹೇಳಿ ತಾವು ಏನು ಮಾಡಿದ್ದೀರಿ?

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸದಸ್ಯರೇ, ನಿಮಗೆ ಇನ್ನೂ ಆ ಹೆಸರಿನ . . .

**ಶ್ರೀ ಅ. ದೇವೇಗೌಡ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸದಸ್ಯರೇ, ತಾವು ಏನು ಮಾಡಿದ್ದೀರಿ.

**(ಗೊಂದಲ)**

**ಶ್ರೀ ಅ. ದೇವೇಗೌಡ:-** ಮಾನ್ಯ ಸಭಾಪತಿಯವರೇ, . . .

**Dr. TEJASWINI GOWDA:** NOC…

**(ಗೊಂದಲ)**

**ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹೌದು, ಶ್ರೀ ದೇವೇಗೌಡರ ಮಕ್ಕಳಿಗೆ ನೀವು ಫ್ರೀ ಆಗಬೇಕು ಎಂದು ಹೇಳಬೇಕಾಗಿಲ್ಲ. ಎಲ್ಲ ಕಡೆಯಿಂದ ಹರಿದು ಬರುವಂತಹ ಶಕ್ತಿ ಅವರಿಗಿದೆ. ಅದೆಲ್ಲಾ ಅವರಿಗೆ ಬೇಕಾಗಿಲ್ಲ. ಶ್ರೀ ಕುಮಾರಸ್ವಾಮಿಯವರು ದಿಲ್ಲಿಯ ತನಕ ಹೋಗಿ ಬಂದಿದ್ದಾರೆ. ಅವರು ಅಂದುಕೊಂಡಿರುವುದನ್ನು ಮಾಡುತ್ತಾರೆ ಎನ್ನುವ ವಿಶ್ವಾಸ ನನಗಿದೆ. ಶ್ರೀ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾದ ಮೇಲೆ ಅವರು ಮಾಡಿದ ಎಲ್ಲಾ ಭಾಷಣಗಳನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ಅದನ್ನು ಓದಿದ ಮೇಲೆ ನನ್ನ ಮನಸ್ಸಿಗೆ ಸಂತೋಷವಾಯಿತು. ಇವರು ವಾಸ್ತವಾಂಶವಾಗಿ ಮುಖ್ಯಮಂತ್ರಿಗಳಾಗಿ ಅಧಿಕಾರವನ್ನು ನಡೆಸುತ್ತಾರೆ. ನಾನು ಅವರ ಸ್ನೇಹಿತರ ಹತ್ತಿರ ಹೇಳಿ ಕಳುಹಿಸಿದೆ. ಏಕೆಂದರೆ ಶ್ರೀ ಸಿದ್ಧರಾಮಯ್ಯನವರು ಮುಖ್ಯಮಂತ್ರಿಗಳಾದಾಗ 5 ವರ್ಷಗಳ ಕಾಲ ನಾನು ಇರಲಿಲ್ಲ. ಕಛೇರಿಯನ್ನು ನಾವು ಕಟ್ಟುವುದು ಅಷ್ಟೆ. ಮನೆ ಕಟ್ಟಿದ ಮೇಲೆ ಹೊರಗೆ ಬಂದರೆ ನೀವು ನಾವು ಆಚಾರ್ಯರು ಇದ್ದ ಹಾಗೆ. Administration ನಲ್ಲಿ 'no'.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮುಂದಿನ ಶಾಂತಿವನ ಯಾವಾಗ?

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಇನ್ನು ನನಗೆ 68 ವರ್ಷವಾಗಿದೆ. ಈಗಾಗಲೇ 11 ಮಕ್ಕಳಾಗಿವೆ. ಇನ್ನು ಮುಂದೆ ಇದ್ದೇವೆ. ನಾನು ಏಕೆ ಶಾಂತಿ ವನಕ್ಕೆ ಹೋಗಲಿ? **(ಸದನದಲ್ಲಿ ನಗುವಿನ ಅಲೆ)** ಇನ್ನು ನಿವೃತ್ತಿಯನ್ನು ಹೊಂದಬೇಕು. ಆದರೆ ಇನ್ನೂ ಗಟ್ಟಿಯಾಗಿದ್ದೇನೆ. ಶ್ರೀ ಸಿದ್ಧರಾಮಯ್ಯನವರು ಮತ್ತು ಶ್ರೀ ಕುಮಾರಸ್ವಾಮಿಯವರು ಹಳೆ company ಪಾತ್ರದಾರರು. ಹೊರಗಡೆ ಏನೇ ವಿವಾದ ಬಂದರೂ ಒಂದು ಗಂಟೆಯಲ್ಲಿ ಆ ವಿವಾದವು ಬಗೆಹರಿಯುತ್ತಿತ್ತು. ಏಕೆಂದರೆ ನಾನು ಸ್ವಾಮೀಜಿಯವರಿಗೆ ಹೇಳಿದೆ. ವಿನಾಃಕಾರಣ ರಾಜಕಾರಣದಲ್ಲಿ ಕೈ ಹಾಕುವುದಕ್ಕೆ ಹೋಗಬೇಡಿ. ತಾವು ಖಾದಿಯವರು ಖಾದಿ ಬಟ್ಟೆಗೆ ಸ್ವಲ್ಪ ಗಂಜಿಯನ್ನು ಹಾಕಿದರೆ ಬಟ್ಟೆ ಖಡಕ್ ಆಗುತ್ತದೆ. ಖಾವಿ ಬಟ್ಟೆಗೆ ಗಂಜಿ ಹಾಕುವುದಕ್ಕೆ ಆಗುವುದಿಲ್ಲ. ಸುಮ್ಮನೆ ಖಾದಿ ಬಟ್ಟೆಯನ್ನು ತೊಳೆದುಕೊಳ್ಳಬೇಕು. **(ಸದನದಲ್ಲಿ ನಗುವಿನ ಅಲೆ)** ಈ ಬಟ್ಟೆಗೆ ಗಂಜಿ ಬಿದ್ದಷ್ಟೂ ಬಟ್ಟೆ ಖಡಕ್ ಆಗುತ್ತದೆ. ಆದ್ದರಿಂದ ತಾವು ಖಡಕ್‌ನವರು ಕೈ ಹಾಕಿದರೆ ನೀವು ಕೈ ಸುಟ್ಟುಕೊಳ್ಳುತ್ತೀರಿ. ಆದ್ದರಿಂದ ಅವರನ್ನು ಅವರ ಪಾಡಿಗೆ ಬಿಟ್ಟುಬಿಡಿ. ತಾವು ಏನು ಎಂದು ಹೇಳಿದರೆ, ಯಾರೇ ಬಂದರೂ ತಥಾಸ್ತು, ಆಶೀರ್ವಾದ, ಶುಭವಾಗಲಿ, ಒಳ್ಳೆಯದಾಗಲಿ ಎಂದು ಹೇಳಲಾಗುತ್ತದೆ. ಬಂದವರಿಗೆಲ್ಲಾ 2 ನಿಂಬೆ ಹಣ್ಣು, ಒಂದು ಆಪಲ್ ಅನ್ನು ಕೊಟ್ಟು ಒಂದು ಶಾಲನ್ನು ಹೊದಿಸಿ ಅವರನ್ನು ಕಳುಹಿಸುತ್ತೀರಿ. ಅದನ್ನು ಬಿಟ್ಟು ತಾವು ಏನಾದರೂ ಹೇಳಿಕೆಯನ್ನು ಕೊಟ್ಟರೆ, ನಮ್ಮ ರಾಜ್ಯವು ಅನೇಕ ತಪಸ್ವಿಗಳು, ಸೂಫಿಸಂತರಿಂದ ತುಂಬಿದ ರಾಜ್ಯವಾಗಿದೆ. ಇದರ ಬಗ್ಗೆ ನನಗೆ ತುಂಬಾ ಅಭಿಮಾನವಿದೆ. ಈ ರಾಜ್ಯದಲ್ಲಿ ನಡೆಯುವಷ್ಟು ಅನ್ನ ದಾಸೋಹವು ದೇಶದ ಯಾವುದೇ ರಾಜ್ಯದಲ್ಲಿ ನಡೆಯುವುದಿಲ್ಲ. ಅದರಲ್ಲೂ ಕೂಡ ವೀರಶೈವ ಮಠವಾಗಿರಬಹುದು. ಧರ್ಮಸ್ಥಳವಾಗಿರಬಹುದು, ಒಕ್ಕಲಿಗರಾಗಿರಬಹುದು. ಇವತ್ತಿನ ದಿವಸ ಸಾವಿರಾರು ಬಡ ಮಕ್ಕಳಿಗೆ ಅನ್ನ ದಾಸೋಹ ನಡೆಯುತ್ತಿದೆ. ಸಿದ್ಧಗಂಗಾ ಮಠದ ಸ್ವಾಮಿಗಳಿಗೆ 109 ವರ್ಷ ವಯಸ್ಸಾಗಿದೆ. ಇದು Guinness World Record ಗೆ ಸೇರಿದೆ. ಅಂತಹ ಸ್ವಾಮಿಗಳನ್ನು ಪಡೆದಿರುವಂತಹ ರಾಜ್ಯದಲ್ಲಿರುವ ಪ್ರತಿನಿಧಿಗಳಾದಂತಹ ನಾವು ಹೇಗಿರಬೇಕು. ನಮ್ಮನ್ನು ಜನರು ನೋಡಿದರೆ, ಕರ್ನಾಟಕ್ ಸೆ ಆಯಾ ಹೈ yes ಎಂದು ಎದ್ದು ನಿಂತುಕೊಂಡು ಕೈ ಮುಗಿಯುವಂತಹ ವಾತಾವರಣವನ್ನು ನಾವು ನಿರ್ಮಾಣ ಮಾಡಿಕೊಳ್ಳೋಣ ಎಂದು ಹೇಳುತ್ತೇನೆ. ಆಯವ್ಯಯ ಭಾಷಣದಲ್ಲಿ ತಾವು ಸಮಾಯವಕಾಶವನ್ನು ಕೊಟ್ಟರೆ ಇನ್ನೂ ಅನೇಕ ವಿಷಯಗಳ ಬಗ್ಗೆ ಮಾತನಾಡುತ್ತೇನೆ. ರಾಜ್ಯಪಾಲರ ಭಾಷಣವನ್ನು ಹೃತ್ಪೂರ್ವಕವಾಗಿ ಮತ್ತು ಸರ್ವಾನುಮತದಿಂದ ಅಭಿನಂದಿಸಿ, ಇದು ಮೇಲ್ಮನೆಯಾಗಿರುವುದರಿಂದ, ಕೆಳಮನೆಯಲ್ಲಿ ಏನು ನಡೆಯುತ್ತದೆ ಎಂಬುದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮಗೆ ಬೇಡ. ಸಂವಿಧಾನವನ್ನು ಬರೆದಿರುವಂತಹ ಮಹಾಶಿಲ್ಪಿಯಾದ ಶ್ರೀ ಬಾಬ ಸಾಹೇಬ್ ಅಂಬೇಡ್ಕರ್ ರವರು ಮೇಲ್ಮನೆ ಬಗ್ಗೆ ಏನು ಹೇಳಿರುವುದನ್ನು ಇವತ್ತು ನಾವು ಸರ್ವಾನುಮತದಿಂದ ಅದನ್ನು ಮಾಡೋಣ. ಮಾನ್ಯ ಮುಖ್ಯಮಂತ್ರಿಯವರಿಗೆ ಪೂರ್ಣವಾದ ಶಕ್ತಿಯನ್ನು ತುಂಬುವುದಕ್ಕೆ ಸಹಕಾರವನ್ನು ನೀಡೋಣ ಎಂದು ತಾವೆಲ್ಲರೂ ಇದಕ್ಕೆ ಸಹಕರಿಸಬೇಕೆಂದು ಕೈಮುಗಿದು ಮಾನ್ಯ ವಿರೋಧಪಕ್ಷದ ಸದಸ್ಯರನ್ನು ಕೇಳುತ್ತೇನೆ.

"ಇವನಾರವ, ಇವನಾರವ, ಇವನಾರವ ನೆಂದಿನಸದಿರಯ್ಯಾ,
ಇವ ನಮ್ಮವ, ಇವ ನಮ್ಮವ, ಇವ ನಮ್ಮವ ನೆಂದಿಸಯ್ಯಾ,
ಕೂಡಲಸಂಗಮದೇವಾ ನಿಮ್ಮ ಮಹಾಮನೆಯ ಮಗನೆಂದೆನಿಸಯ್ಯ".

ಎಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ. 'ಜೈ ಹಿಂದ್', 'ಜೈ ಕರ್ನಾಟಕ ಮಾತೆ.'

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಮ್ಮ ಅಭ್ಯಂತರವೇನು ಇಲ್ಲ. ತಾವು ಮೊದಲು ಕೊಡಿ. ತಾವು ಮೊದಲು ಅವರ ಹೆಗಲ ಮೇಲೆ ಗನ್ ಇಡಬೇಡಿ.

**(ಗೊಂದಲ)**

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ಕಡೆಯಿಂದ ಗ್ಯಾರಂಟಿ ಬರುತ್ತದೆ. ನಿಮ್ಮ ಕಡೆಯ ಪಕ್ಷದವರಿಂದ ನಮಗೆ ಏನು ಬರುತ್ತದೆ?

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಿಮಗೆ ಸಂಶಯ ಬೇಡ.

**(ಗೊಂದಲ)**

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಶ್ರೀ ನಾರಾಯಣಸ್ವಾಮಿಯವರೇ, ದಯಮಾಡಿ ಕುಳಿತುಕೊಳ್ಳಿ. ಶ್ರೀಮತಿ ಜಯಮ್ಮನವರೇ ಕೇವಲ 5 ನಿಮಿಷದಲ್ಲಿ ತಾವು ಮಾತನಾಡಿ ಮುಗಿಸಬೇಕು. ಮಾತನಾಡುವುದಕ್ಕೆ ಯಾರು ಪಟ್ಟಿಯಲ್ಲಿ ಹೆಸರನ್ನು ಕೊಟ್ಟಿಲ್ಲವೋ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಪಟ್ಟಿಯಲ್ಲಿ ಹೆಸರನ್ನು ಕೊಟ್ಟಿರುವ ಸುಮಾರು 19 ಜನರು ಈಗಾಗಲೇ ಮಾತನಾಡಿದ್ದಾರೆ. ತಾವು ಕೇವಲ 5 ನಿಮಿಷ ಮಾತನಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಾರಾಯಣಸ್ವಾಮಿಯವರು ಮಾತನಾಡಬೇಕೆಂದು ಕೇಳಿಕೊಂಡಿದ್ದಾರೆ.

**ಸಭಾಪತಿಯವರು:-** ತಾವು ಮೊದಲೇ ಹೆಸರನ್ನು ಕೊಡಬೇಕಾಗಿತ್ತು. ನಿನ್ನೆಯ ದಿವಸ ಪಟ್ಟಿಯಲ್ಲಿ 15 ಜನರ ಹೆಸರನ್ನು ಕೊಡಲಾಗಿದೆ. ಆದರೆ ಇವತ್ತು 20 ಜನರು ಮಾತನಾಡಲು ಅವಕಾಶವನ್ನು ಕೊಡಿ ಎಂದು ಕೇಳುತ್ತೀರಿ. ಅವಕಾಶವನ್ನು ಹೇಗೆ ಕೊಡುವುದಕ್ಕಾಗುತ್ತದೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ನಿಮ್ಮ ಪಕ್ಕದಲ್ಲಿ ಕುಳಿತುಕೊಂಡಿರುವವರಿಗೆ ಬೇರೆಯವರು ಮಾತನಾಡುವಾಗ ಮಧ್ಯದಲ್ಲಿ ಹೋಗಬೇಡಿ ಎಂದು ಹೇಳಿ.

**ಶ್ರೀಮತಿ ಜಯಮ್ಮ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಈಗಾಗಲೇ ನನಗೆ ಮಾತನಾಡಲು 5 ನಿಮಿಷಗಳ ಕಾಲಾವಕಾಶವನ್ನು ಕೊಟ್ಟಿದ್ದೀರಿ. ಎಲ್ಲಾ ಸದಸ್ಯರು ಗ್ರಾಮೀಣ ಪ್ರದೇಶದ, ರೈತರ, ಕೆರೆಗಳ ಬಗ್ಗೆ ಅನೇಕ ವಿಚಾರಗಳನ್ನು ಮಾತನಾಡಿದ್ದಾರೆ. ನಮ್ಮ ಸಹೋದರರಾದಂತಹ ಶ್ರೀ ಸಿದ್ಧರಾಮಯ್ಯನವರು ಕೂಡ ಒಳ್ಳೆಯ ಸಲಹೆಗಳನ್ನು, ಸ್ವಾರಸ್ಯಕರವಾದ ಮನೋರಂಜನೆ ಕಾರ್ಯಕ್ರಮ . . . **(ಸದನದಲ್ಲಿ ನಗುವಿನ ಅಲೆ)** ಅಂದರೆ ಯಾವಾಗಲೂ ಸಿಟ್ಟಾಗಿ ಇರಬಾರದು.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಹೌದು, ತಾವು ಹೇಳಿದ್ದು ಸರಿ, ಸಿಟ್ಟಾಗಬಾರದು.

**ಶ್ರೀಮತಿ ಜಯಮ್ಮ:-** ಮಾನ್ಯ ಸಭಾಪತಿಯವರೇ, ಎಲ್ಲರ ಮನಸ್ಸಿಗೆ ಉಲ್ಲಾಸವಿದ್ದಾಗ ಮಾತ್ರ ಏನಾದರೂ ಪ್ರಯತ್ನಪಡುವುದಕ್ಕಾಗಲಿ, ಮಾತನಾಡುವುದಕ್ಕಾಗಲಿ ಒಂದು ಅವಕಾಶ ದೊರೆಯಬೇಕಾದರೆ, ನಮ್ಮ ಮನಸ್ಸಿನೊಳಗೆ ಆತ್ಮವಿಶ್ವಾಸ, ಪ್ರೀತಿ ಬಂದಾಗ ಮಾತ್ರ ಮಾತನಾಡುವುದಕ್ಕೆ ಸಾಧ್ಯವಾಗುತ್ತದೆ. ಅಂತಹ ಸಲಹೆಯನ್ನು ನಮ್ಮ ಸದಸ್ಯರುಗಳು ಕೊಟ್ಟಿದ್ದಾರೆ. ನಿಜವಾಗಿಯೂ ಬಹಳ ಸಂತೋಷವಾಗುತ್ತದೆ. ಏಕೆಂದರೆ ನಾನು ಹೆಚ್ಚಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಸರ್ಕಾರವು ನೀರಾವರಿ ಸೌಲಭ್ಯವನ್ನು ಕಲ್ಪಿಸಲು ನಿರ್ದಿಷ್ಟ ಯೋಜನೆಯನ್ನು ರೂಪಿಸಲಿದೆ. ಕಿರು ನೀರಾವರಿ ಯೋಜನೆಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೈಗೆತ್ತಿಕೊಳ್ಳಲಾಗುವುದು ಮತ್ತು ಕೆರೆಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತುಂಬಿಸುವ ಯೋಜನೆಯನ್ನು ರಾಜ್ಯಾದ್ಯಂತ ವಿಸ್ತರಿಸಲಾಗುವುದು ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ.

(ಮುಂದು)

**(75)04/07/2018/ಎಸ್‌ಪಿಆರ್/ಆರ್.ಎನ್./4:50**

**ಶ್ರೀಮತಿ ಜಯಮ್ಮ(ಮುಂದು):-**

ಈಗ ರೈತ, ಬೆಳೆ ವಿಮೆ, ಬಿತ್ತನೆ ಬೀಜ, ರಸಗೊಬ್ಬರ, ರೈತರು ಬೆಳೆಯುವ ಬೆಳೆಗಳು ಇತ್ಯಾದಿ ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ಆದರೆ, ರಾಜ್ಯದಾದ್ಯಂತ ಖಾಲಿಯಿರುವ ಕೆರೆಗಳನ್ನು ತುಂಬಿಸುವ ಪ್ರಯತ್ನ ಸರ್ಕಾರ ತುರ್ತಾಗಿ ಮಾಡಬೇಕಾಗಿದೆ. ಏಕೆಂದರೆ, ರೈತರ ಜೀವ ಜಲ ಎಂದರೆ ಕೆರೆ. ರೈತರ ಒಡನಾಡಿ ಎಂದರೆ ಕೆರೆಗಳು. ರಾಜ್ಯದಾದ್ಯಂತ ಕೆಲವು ಭಾಗಗಳಲ್ಲಿ ಮಳೆ ಬರುತ್ತದೆ, ಕೆಲವು ಭಾಗಗಳಲ್ಲಿ ಕಡಿಮೆ ಮಳೆ ಬರುತ್ತದೆ. ಅದರಲ್ಲಿಯೂ ಸಹ ವಿಶೇಷವಾಗಿ ಚಿತ್ರದುರ್ಗ ಜಿಲ್ಲೆಯು ಬಯಲು ಪ್ರದೇಶವಾಗಿದ್ದು, ಅಲ್ಲಿ ಸಾಕಷ್ಟು ಕಡಿಮೆ ಪ್ರಮಾಣದಲ್ಲಿ ಮಳೆ ಬರುತ್ತದೆ. ಅದರಲ್ಲಿಯೂ ವಿಶೇಷವಾಗಿ ಮೊಳಕಾಲ್ಮೂರು ಮತ್ತು ಚಳ್ಳಕೆರೆ ತಾಲ್ಲೂಕುಗಳ ಕೆರೆಗಳಲ್ಲಿ ನೀರು ಇರುವುದೇ ಇಲ್ಲ. ಕಳೆದ ಬಾರಿ ಹಾಗೂ ಈ ಬಾರಿ ಅಲ್ಪ-ಸ್ವಲ್ಪ ಪ್ರಮಾಣದಲ್ಲಿ ಕೆರೆಗಳಿಗೆ ನೀರು ಬಂದಿರಬಹುದು. ಇಂತಹ ಕೆರೆಗಳನ್ನು ತುಂಬಿಸಿದರೆ, ರೈತರ ಜೀವನ ಹಸನಾಗಬಹುದು ಎನ್ನುವುದು ನನ್ನ ಭಾವನೆಯಾಗಿದ್ದು, ಇದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಹಿಂದಿನ ಬಾರಿಯೂ ಸಹ ನಾನು ಮಾತನಾಡಿದ್ದೇನು. ಒಂದಾನೊಂದು ಕಾಲದಲ್ಲಿ, ನಮ್ಮ ಭಾಗದಲ್ಲಿ ಕೆರೆಗಳು ತುಂಬಿದಾಗ ಯಾವ ರೀತಿಯಾಗಿ ರೈತರು ಸಂತೋಷ, ನೆಮ್ಮದಿಗಳಿಂದ ಇದ್ದರು ಎಂದು ನನ್ನ ಬಾಲ್ಯದ ನೆನಪುಗಳನ್ನು ನಾನು ಜ್ಞಾಪಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ, ಆ ಭಾಗದಲ್ಲಿ 40 ವರ್ಷಗಳ ಕಾಲ ಕೆರೆಗಳು ತುಂಬದೇ ದೊಡ್ಡ-ದೊಡ್ಡ ರೈತರುಗಳು ಕೂಡ ಕಷ್ಟ ಅನುಭವಿಸಿದ್ದಾರೆ. ಆ ಭಾಗದಲ್ಲಿ ಅಡಿಕೆ, ತೆಂಗು, ಬಾಳೆ, ಬದನೆ, ಭತ್ತ, ರಾಗಿ, ಜೋಳ, ನವಣೆ, ವಿಳೆದೆಲೆ ಇತ್ಯಾದಿ ರೀತಿಯ ಬೆಳೆಗಳೆಲ್ಲವೂ ಕೂಡ ಹಾಳಾಗಿ ಹೋಗಿರುವಂತಹದನ್ನು ನಾವು ಇವತ್ತಿನ ದಿವಸ ಕಣ್ಣಿನಿಂದ ನೋಡುತ್ತಿದ್ದೇವೆ. ದೊಡ್ಡ ದೊಡ್ಡ ರೈತರುಗಳೂ ಸಹ ಇವತ್ತಿನ ದಿವಸ ಗುಳೆ ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಈ ವಿಚಾರದಲ್ಲಿ ನಾನು ಸದನದ ಮೂಲಕ ಸರ್ಕಾರದ ಗಮನಕ್ಕೆ ತರುವುದೇನೆಂದರೆ, ತುರ್ತಾಗಿ ಕೆರೆಗಳಿಗೆ ನೀರು ತುಂಬಿಸುವ ಕಾರ್ಯವನ್ನು ಕೈಗೊಳ್ಳಬೇಕು. ರೈತ ಇನ್ನೇನು ಸವಲತ್ತುಗಳನ್ನು ಕೇಳುವುದಿಲ್ಲ. ಅವರ ಬದುಕಿನ ಭವಿಷ್ಯವನ್ನು ಅವರೇ ರೂಪಿಸಿಕೊಳ್ಳುತ್ತಾರೆ. ಹೀಗಾಗಿ ನೀರು ಇಲ್ಲವೆಂದರೆ ಏನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಬೇರೆ ಭಾಗಗಳಲ್ಲಿ ನೀರು ಪೋಲಾಗಿ ಹೋಗುವಂತಹ ಸ್ಥಿತಿಗಳನ್ನು ನಾವು ನೋಡಿದ್ದೇವೆ. ಆ ರೀತಿಯಾಗಿ ಪೋಲಾಗುವ ನೀರನ್ನು ಎಲ್ಲಿ ಕೆರೆಗಳು

ಖಾಲಿಯಿವೆಯೋ ಅವುಗಳನ್ನು ತುಂಬಿಸಬೇಕೆಂದು ಈ ಸದನದ ಮುಖಾಂತರ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ನಮ್ಮ ಮಾನ್ಯ ಸದಸ್ಯರು ಪ್ರಸ್ತಾಪಿಸಿದಂತೆ ಸ್ಮಾರ್ಟ್ ಸಿಟಿ ಆಗಬೇಕು. ಅವರು ಹೇಳಿರುವುದು ಸರಿಯಾಗಿದೆ. ನಾನೂ ಸಹ ಈ ಅಂಶಕ್ಕೆ ಪೂರಕವಾಗುವಂತೆ ಸ್ಮಾಟ್ ವಿಲೇಜ್ ಆಗಬೇಕೆಂದು ನಮೂದು ಮಾಡಿಕೊಂಡಿದ್ದೇನು. ಅಂದರೆ ಮಾದರಿ ಗ್ರಾಮವಾಗಬೇಕು. ಇವತ್ತಿನ ದಿವಸ ಗ್ರಾಮ ಪಂಚಾಯಿತಿಗಳಲ್ಲಿ ಸ್ವಚ್ಛತಾ ಕಾರ್ಯಕ್ರಮದಡಿ ಸ್ವಚ್ಛತೆಯನ್ನು ಮಾಡಲಿಕ್ಕೆ ಡಿ ದರ್ಜೆಯ ನೌಕರರ ಅವಶ್ಯಕತೆಯಿದೆ. ಏಕೆಂದರೆ ಗ್ರಾಮಗಳ ಸ್ವಚ್ಛತೆಯನ್ನು ಮಾಡಬೇಕಾಗುತ್ತದೆ. ಅದೇ ರೀತಿಯಾಗಿ 'ಡ್ರೆಸ್ಸೆ ನಿನ್ನ ಅಡ್ರೆಸ್' ಎನ್ನುವ ಹಾಗೆ ಅಗಸರ ದೋಬಿಗಳಿಗೆ ಪ್ರತಿಯೊಂದು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ನೀರಿನ ವ್ಯವಸ್ಥೆಯನ್ನು ಮಾಡಿದರೆ, ಅಲ್ಲಿ ಬಟ್ಟೆ ಒಗೆತದ ಕಾರ್ಯಗಳನ್ನು ಮಾಡುತ್ತಾರೆ. ಅವುಗಳನ್ನು ದೋಬಿ ಘಾಟ್ ಎಂಬುದಾಗಿ ಹೇಳುತ್ತಾರೆ. ಇದರ ವ್ಯವಸ್ಥೆಯನ್ನು ಸರ್ಕಾರವು ಮಾಡಬೇಕಾಗುತ್ತದೆ. ಗ್ರಾಮೀಣ ಭಾಗದಲ್ಲಿ ವಿದ್ಯುತ್ ಸಮಸ್ಯೆ ಇದೆ. ನಾನು ಕೆಲವು ಗ್ರಾಮಗಳಿಗೆ ಭೇಟಿ ನೀಡಿದಾಗ, ಕೆಲವೊಂದು ಬೀದಿ ದೀಪಗಳನ್ನು ಆನ್ ಮಾಡಿದರೆ, ಅವುಗಳನ್ನು ಆಫ್ ಮಾಡದಿರುವುದನ್ನು ಗಮನಿಸಿರುತ್ತೇನೆ. ಬೀದಿ ದೀಪಗಳನ್ನು ಆನ್-ಆಫ್ ಮಾಡುವಂತಹ ಸ್ವೀಚ್‌ಗಳ ವ್ಯವಸ್ಥೆ ಮಾಡಿದರೆ, ಅನವಶ್ಯಕವಾಗಿ ವ್ಯಯವಾಗುವ ವಿದ್ಯುತ್‌ನ್ನು ಉಳಿತಾಯ ಮಾಡಬಹುದು. ಹೀಗಿ ಉಳಿತಾಯ ಮಾಡಿದ ವಿದ್ಯುತ್‌ನ್ನು ರೈತನಿಗೆ ನೀಡಿದರೆ, ಅವರ ಬದುಕು ಹಸನಾಗುತ್ತದೆ. ಕೆಲವು ಕಡೆಗಳಲ್ಲಿ ರೈತರಿಗೆ ಬೋರ್‌ವೆಲ್‌ಗಳಲ್ಲಿ 1½ ಅಥವಾ 2 ಇಂಚು ದಪ್ಪದಷ್ಟು ನೀರು ಬರುತ್ತದೆ. ರಾತ್ರಿ ವೇಳೆಯಲ್ಲಿ ಬ್ಯಾಟರಿಗಳನ್ನು ಹಿಡಿದುಕೊಂಡು ರೈತರು ಹೊಲ-ಜಮೀನುಗಳಿಗೆ ಹೋಗಿ ನೀರು ಹಾಯಿಸುವ ಪರಿಸ್ಥಿತಿ ನಮ್ಮ ಭಾಗದಲ್ಲಿದೆ. ಆದ್ದರಿಂದ ರೈತರ ಹೊಲ-ಜಮೀನುಗಳಲ್ಲಿ ಸಿಮೆಂಟ್ ತೊಟ್ಟಿಗಳನ್ನು ನಿರ್ಮಿಸಿದರೆ, ರೈತರು ಹಗಲು ಹೊತ್ತಿನಲ್ಲಿ ನೀರನ್ನು ಹಾಯಿಸುವ ಕೆಲಸವನ್ನು ಮಾಡುತ್ತಾರೆ. ಅದೇ ರೀತಿಯಾಗಿ ರೈತರಿಗೆ ಟಾರ್ಪಾಲ್‌ಗಳ ಅವಶ್ಯಕತೆಯಿದೆ. ಹೋಬಳಿಗೆ ಒಂದರಂತೆ 200 ಟಾರ್ಪಾಲ್‌ಗಳನ್ನು ಮಾತ್ರವೇ ಕೊಡುತ್ತಾರೆ. ಇದನ್ನು ಪಡೆಯಲು 1000-2000 ರೈತರು ಅರ್ಜಿಗಳನ್ನು ಸಲ್ಲಿಸುತ್ತಾರೆ. ಪರಿಸ್ಥಿತಿ ಹೀಗಿರುವಾಗ ಯಾವ ರೀತಿಯಾಗಿ ಟಾರ್ಪಾಲ್‌ಗಳನ್ನು ಹಂಚಿಕೆ ಮಾಡಬೇಕು?

NREGA (National Rural Employment Guarantee Act) ಅಡಿ ಗ್ರಂಥಾಲಯ ಕೇಂದ್ರಗಳಿರುತ್ತವೆ. ಆದರೆ ಅಲ್ಲಿ ಗ್ರಂಥಾಲಯಕ್ಕಾಗಿ ಯಾವುದೇ ರೀತಿಯಾದ ಕಟ್ಟಡಗಳಿರುವುದಿಲ್ಲ. ಇದನ್ನು ಉದ್ಯೋಗ ಖಾತ್ರಿಯಡಿ ಸೇರ್ಪಡೆಗೊಳಿಸಿ ಗ್ರಂಥಾಲಯ ಕಟ್ಟಡಗಳನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರ್ಮಿಸುವ ಬಗ್ಗೆ ಮಾರ್ಗಸೂಚಿಗಳನ್ನು ನೀಡಿದರೆ, ಎಲ್ಲಾ ಕಡೆಗಳಲ್ಲಿಯೂ ಸಹ ಗ್ರಂಥಾಲಯ ಕಟ್ಟಡಗಳನ್ನು ನಿರ್ಮಿಸಬಹುದು. ಇದರ ಅವಶ್ಯಕತೆಯೂ ಸಹ ಇದೆ.

ಗೊಲ್ಲರ ಹಟ್ಟಿಗಳ ಬಗ್ಗೆಯೂ ಸಹ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲಚ್ಛಿಸುತ್ತೇನೆ. ಏಕೆಂದರೆ ಇವತ್ತಿನ ದಿವಸ ಗೊಲ್ಲರ ಹಟ್ಟಿಗಳು ಹೇಗೆ ಇದೆ ಎಂದರೆ, ಅಲ್ಲಿ ವಾಸಿಸುತ್ತಿರುವ ಜನರ ಸ್ಥಿತಿಗತಿ ಏನೆಂಬ ವಿಚಾರವು ಇಲ್ಲಿನ ನನ್ನ ಸಹೋದರ ಸಹೋದರಿ ಸದಸ್ಯರುಗಳಿಗೆ ತಿಳಿದಿರುವ ವಿಚಾರವಾಗಿದೆ. ಇಲ್ಲಿ ಮೂಲಭೂತ ಸೌಕರ್ಯಗಳಿಲ್ಲ. ಹೀಗಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಗೊಲ್ಲರ ಹಟ್ಟಿಗಳಿಗೆ ವಿಶೇಷವಾದ ಪ್ಯಾಕೇಜ್‌ನ್ನು ನೀಡಿ, ಆಗ ನಿಜವಾಗಿಯೂ ಸಹ ಅಲ್ಲಿ ಒಳ್ಳೆಯ ಅಭಿವೃದ್ಧಿ ಆಗುತ್ತದೆ. ನಾಗರೀಕತೆಯ ವಿಚಾರದಲ್ಲಿ ಅಲ್ಲಿನ ಜನರು ಮುಂದೆ ಇದ್ದಾರೆ. ಶಿಕ್ಷಣದಲ್ಲಿ ಅವರುಗಳು ಹಿಂದುಳಿದವರಾಗಿದ್ದಾರೆ. ಹೀಗಾಗಿ ಗೊಲ್ಲರ ಜಾತಿಯನ್ನು ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರ್ಪಡೆಗೊಳಿಸಬೇಕೆಂದು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ ಶಿಫಾರಸ್ಸಿಗೆ ಸ್ಪಷ್ಟೀಕರಣ ಕೇಳಿ ವಾಪಸ್ಸು ಕಳುಹಿಸಿದ್ದಾರೆ. ಬೆಳಿಗ್ಗೆ ನಾನು ಮಾತನಾಡಿದ್ದೆನು. ನಿಜವಾಗಿಯೂ ಈ ರೀತಿಯಾಗಿ ಶಿಫಾರಸ್ಸನ್ನು ಕಳುಹಿಸಿದರೆ, ಮುಂದಿನ ದಿನಗಳಲ್ಲಿ ಗೊಲ್ಲ ಜನಾಂಗದ ಮಕ್ಕಳಿಗೆ ಇನ್ನು ಹೆಚ್ಚಿನ ರೀತಿಯಲ್ಲಿ ವಿದ್ಯಾಭ್ಯಾಸ ಮಾಡಲಿಕ್ಕೆ ಅನುಕೂಲವಾಗುತ್ತದೆ. ಸದರಿ ಶಿಫಾರಸ್ಸು ಸಚಿವ ಸಂಪುಟದಿಂದ ಅನುಮೋದನೆಯನ್ನು ಪಡೆದುಕೊಂಡು ಕೇಂದ್ರಕ್ಕೆ ಹೋಗಿದೆ. ಕೇಂದ್ರದಿಂದ ಕೆಲವು ವಿಚಾರಗಳಲ್ಲಿ ಸ್ಪಷ್ಟೀಕರಣವನ್ನು ಕೋರಿ, ರಾಜ್ಯಕ್ಕೆ ಶಿಫಾರಸ್ಸು ಮರಳಿ ಬಂದಿದೆ. ಅದಕ್ಕೆ ಸಂಬಂಧಪಟ್ಟಂತೆ ಸಮಾಜ ಕಲ್ಯಾಣ ಇಲಾಖೆಯ ಸಚಿವರಿಂದ ತುರ್ತಾಗಿ ಸ್ಪಷ್ಟೀಕರಣವನ್ನು ಪಡೆದುಕೊಂಡು ಅದನ್ನು ಕೇಂದ್ರಕ್ಕೆ ಕಳುಹಿಸಿ ಕೊಡಿ. ಇದರಿಂದ ತುಂಬಾ ಅನುಕೂಲವಾಗುತ್ತದೆ.

ಶೌಚಾಲಯಗಳ ವಿಚಾರದಲ್ಲಿ ಸಾಕಷ್ಟು ವಿಷಯಗಳನ್ನು ಪ್ರಸ್ತಾಪಿಸಲಾಗಿದೆ. ಸಾಕಷ್ಟು ಸರ್ಕಾರಿ ಶಾಲೆಗಳಲ್ಲಿ ಶೌಚಾಲಯಗಳ ವ್ಯವಸ್ಥೆ ಇಲ್ಲ. ಇವತ್ತಿನ ದಿವಸ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ. ಅಂಗನವಾಡಿಗಳಲ್ಲಿಯೂ ಸಹ ಶೌಚಾಲಯಗಳ ಕೊರತೆ ಇದೆ. ಅಂಗನವಾಡಿಗಳ ಕಟ್ಟಡಗಳ ದುರಸ್ತಿ ಇದೆ. ಅದೇ ರೀತಿಯಾಗಿ ಶಾಲಾ-ಕಾಲೇಜುಗಳ ಕಟ್ಟಡಗಳ ದುರಸ್ತಿಯೂ ಸಹ ಇದೆ. ಶಾಲೆಗಳಲ್ಲಿ ನೀರಿನ ತೊಂದರೆ ತುಂಬಾ ಇರುವುದರಿಂದ, ಪ್ರತಿಯೊಂದು ಶಾಲೆಗೆ ಒಂದೊಂದು ಬೋರ್‌ವೆಲ್‌ಗಳನ್ನು ಕೊರೆಸಿ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ತಮ್ಮ ಮುಖಾಂತರ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಲ್ಯಾಪ್‌ಟಾಪ್‌ಗಳಿಂದ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವಿರುವುದರಿಂದ ಎಲ್ಲಾ ಸಮುದಾಯದ ಮಕ್ಕಳಿಗೆ ಲ್ಯಾಪ್‌ಟಾಪ್ ವಿತರಣೆ ಆಗಬೇಕು.

ಕೃಷಿ ವಿಭಾಗದಲ್ಲಿ ಬಿ.ಟೆಕ್., ಇಂಜನಿಯರಿಂಗ್ ಮಾಡಿರುವಂತಹ ಪದವೀಧರರು ಸಾಕಷ್ಟು ಜನರಿದ್ದಾರೆ. ಸರ್ಕಾರದಿಂದ ಇವರುಗಳನ್ನು ನೇಮಕಾತಿ ಮಾಡಬೇಕು. ಏಕೆಂದರೆ ಹೋಬಳಿಗೊಂದು ಯಂತ್ರಧಾರೆ ಎಂದು ಮಾಡಿದೆ ಎಂಬುದಾಗಿ ಹೇಳಲಾಗಿದೆ. ಸದರಿ ಬಿ.ಟೆಕ್, ಇಂಜನಿಯರಿಂಗ್ ಪದವೀಧರರನ್ನು ನೇಮಕ ಮಾಡಿದರೆ, ಅವರುಗಳಿಗೆ ಅವಕಾಶ ದೊರೆತು ಅನುಕೂಲಗಳಾಗುತ್ತವೆ.

(ಮುಂದು)

(076) 11-7-2018 05.00 ಬಿಎಸ್‌ಡಿ/ಆರ್‌ಎನ್

(076) 11-7-2018 05.00 ಬಿಎಸ್‌ಡಿ/ಆರ್‌ಎನ್

**ಶ್ರೀಮತಿ ಜಯಮ್ಮ (ಮುಂದು)**

ಹಿಂದಿನ ಸರ್ಕಾರದಲ್ಲಿ ಮಾನ್ಯ ಸಿದ್ದರಾಮಯ್ಯನವರು ಅನ್ನಭಾಗ್ಯ, ಕ್ಷೀರಭಾಗ್ಯ, ಮಧ್ಯಾಹ್ನದ ಬಿಸಿಯೂಟ ಹಾಗು ರೈತರು ಆತ್ಮಹತ್ಯೆ ಮಾಡಿಕೊಂಡ ಸಂದರ್ಭದಲ್ಲಿ ರೂ.5 ಲಕ್ಷಗಳ ಪರಿಹಾರ ಮತ್ತು ಆ ರೈತನ ಪತ್ನಿಗೆ ತಿಂಗಳಿಗೆ ರೂ.2 ಸಾವಿರಗಳನ್ನು ಕೊಡಬೇಕು ಎಂದು ಇದ್ದು, ಅದನ್ನು ಕೊಡುತ್ತಿದ್ದಾರೋ ಇಲ್ಲವೋ ಗೊತ್ತಾಗುತ್ತಿಲ್ಲ. ಅದನ್ನು ಕೊಡಬೇಕು. ನಮ್ಮ ಚಿತ್ರದುರ್ಗದಲ್ಲಿ ಜೋಗಿಮಠ ಎಂಬ ಪ್ರದೇಶವಿದ್ದು, ಅಲ್ಲಿ ಸಾಕಷ್ಟು ಗಿಡಮೂಲಿಕೆಗಳಿರುವುದರಿಂದ ಇದ್ದು, ಅದನ್ನು ಸಂರಕ್ಷಿಸಬೇಕು. ಇದಲ್ಲದೇ ಮೃಗಾಲಯ, ಏಳು ಸುತ್ತಿನ ಕೋಟೆ ಇದ್ದು, ಬೇರೆ ಬೇರೆ ಕಡೆಯ ವಿದ್ಯಾರ್ಥಿಗಳು ಭೇಟಿ ನೀಡಿ ವೀಕ್ಷಣೆ ಮಾಡುತ್ತಾರೆ. ಆ ಸ್ಥಳಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಸಂರಕ್ಷಣೆ ಮಾಡಬೇಕು. ಹೆಚ್ಚಿನ ವಿಚಾರಗಳನ್ನು ಮಾತನಾಡಲು ಸಮಯಾವಕಾಶದ ಅಭಾವವಿದ್ದು, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಜುಲೈ 2ನೇ ತಾರೀಖು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲವನ್ನು ಉದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ವಂದನೆ ಸಲ್ಲಿಸಿರುವ ನಿರ್ಣಯವನ್ನು ಅನುಮೋದಿಸುವ ಪುಣ್ಯದ ಅವಕಾಶ ನಾಡಿನ ರೈತನ ಮಗನಾದ ನನಗೆ ಸಿಕ್ಕಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತಿನ ರಾಜ್ಯಪಾಲರ ಭಾಷಣ ವಿಶೇಷವಾಗಿ ಎರಡು ದೊಡ್ಡ ಸಂದೇಶಗಳನ್ನು ನೀಡಿದೆ. ಮೊದನೆಯದಾಗಿ ಕಳೆದ ತಿಂಗಳು 12ನೇ ತಾರೀಖು ರಾಜ್ಯದಲ್ಲಿ ನಡೆದ ಚುನಾವಣೆಯ ಫಲಿತಾಂಶದ ಹಿನ್ನೆಲೆಯಲ್ಲಿ ಇದ್ದ ಬಹುದೊಡ್ಡ ಗೊಂದಲವನ್ನು ನಿವಾರಣೆ ಮಾಡಿ, ಈ ಸರ್ಕಾರವು ಸದೃಢವಾಗಿ ಮುನ್ನಡೆಯುತ್ತದೆ, ದೊಡ್ಡ ಆಶಯ ಮತ್ತು ಕಾರ್ಯಕ್ರಮಗಳನ್ನು ಹೊತ್ತು ಸಮರ್ಥ ಆಡಳಿತವನ್ನು ನೀಡುತ್ತದೆ ಎನ್ನುವ ಎಲ್ಲಾ ರಾಜಕೀಯ ಗೊಂದಲಗಳಿಗೆ ಮತ್ತು ಅನಿಶ್ಚಿತತೆಗಳಿಗೆ ತಿಲಾಂಜಲಿಯನ್ನು ನೀಡಿದೆ. ಎರಡನೆಯದಾಗಿ ನಮ್ಮ ರಾಜ್ಯ ಹಾಗೂ ದೇಶದಲ್ಲಿ ಅತ್ಯಂತ ಸಂಕಷ್ಟದಲ್ಲಿರುವ ಅನ್ನ ಕೊಡುವ ರೈತರನ್ನು ಕಾಪಾಡಿಯೇ ತೀರುತ್ತೇವೆ ಎನ್ನುವ ಸ್ಪಷ್ಟ, ಅಚಲ ಹಾಗೂ ವಿಶ್ವಾಸದ ಭರವಸೆಯನ್ನು ಕೊಟ್ಟಿರುವುದಾಗಿದೆ. ಈ ಎರಡೂ ಕಾರಣಗಳಿಂದ ರಾಜ್ಯಪಾಲರ ಭಾಷಣ ಅತ್ಯಂತ ಮಹತ್ವ ಹಾಗೂ ಗೌರವವನ್ನು ಪಡೆದುಕೊಂಡಿದೆ ಎಂದು ನಾನು ಭಾವಿಸುತ್ತೇನೆ. ಅನೇಕ ಜನ ವಿರೋಧ ಪಕ್ಷದ ಸ್ನೇಹಿತರು 'ರಾಜ್ಯಪಾಲರ ಭಾಷಣದಲ್ಲಿ ಏನೂ ಇಲ್ಲ' ಎಂದು ಮಾತನಾಡಿದ್ದಾರೆ. ನಾನು ಆರೇಳು ಮುಖ್ಯಮಂತ್ರಿಗಳ ಕಾಲದ ರಾಜ್ಯಪಾಲರ ಭಾಷಣಗಳನ್ನು ಆಳವಾಗಿ ಓದಿದ್ದೇನೆ. ಬಹುಶ: ಎಲ್ಲಿಯೂ ಅನ್ನ ಕೊಡುವ ರೈತರ ಬಗ್ಗೆ ಸುಮಾರು ಮೂರ್‍ನಾಲ್ಕು ಪುಟಗಳಲ್ಲಿ ಎಳೆಂಟು ಮಹತ್ವದ ವಿಷಯಗಳನ್ನು ಆರಂಭದಲ್ಲಿ ಒಳಗೊಂಡ ರಾಜ್ಯಪಾಲರ ಭಾಷಣವನ್ನು ನೋಡಿಯೇ ಇಲ್ಲ. 2ನೇ ತಾರೀಖು ರಾಜ್ಯಪಾಲರು ಮಾಡಿದ ಭಾಷಣದಲ್ಲಿ ಅತ್ಯಂತ ಸ್ಪಷ್ಟ ಮಾತುಗಳಲ್ಲಿ ನಮಗೆ ಅನ್ನ ಕೊಡುವ ರೈತನಿಗೆ "ನೀನು ಬದುಕಿಯೇ ತೀರಬೇಕು ಮತ್ತು ನಮ್ಮನ್ನು ಬದುಕಿಸಬೇಕು" ಎನ್ನುವ ಅಚಲವಾದ ಭರವಸೆ ಕೊಡುವ ಕೆಲಸ ಅತ್ಯಂತ ಗಟ್ಟಿಯಾಗಿ ನಡೆದಿದೆ. ಮಾನ್ಯ ಸಂಕನೂರು ರವರು ಅರ್ಧ ವಿಷಯವನ್ನು ಹೇಳಿ ಹಾಗೆ ಬಿಟ್ಟರು. ರಾಜ್ಯಪಾಲರ ಭಾಷಣದಲ್ಲಿ " ರೈತರಿಗೆ ನ್ಯಾಯಯುತ ಬೆಲೆ ಖಚಿತಪಡಿಸುವ ಮಾದರಿ ಹಗೂ ಪ್ರಾಯೋಗಿಕ ಯೋಜನೆಯನ್ನು ಇಡೀ ರಾಷ್ಟ್ರದಲ್ಲಿಯೇ ಪ್ರಪ್ರಥಮವಾಗಿ ಕರ್ನಾಟಕದಲ್ಲಿ ಜಾರಿಗೆ ತರಲು ನನ್ನ ಸರ್ಕಾರ ಉತ್ಸುಕವಾಗಿದೆ. ಆತಂಕದ ದಿನಗಳು ಇನ್ನಿಲ್ಲ. ಧ್ವನಿ ಇಲ್ಲದ ರೈತರಿಗೆ ಧ್ವನಿಯಾಗಬೇಕು ಎಂಬುದು ನನ್ನ ಸರ್ಕಾರದ ಆಶಯ. ಯಾವುದೇ ಕಾರಣಕ್ಕೂ ರೈತರು ಆತ್ಮಹತ್ಯೆಗೆ ಶರಣಾಗಬಾರದು ಎಂದು ಈ ಸದನದ ಮೂಲಕ ರೈತ ಸಮುದಾಯಕ್ಕೆ ಮನವಿ ಮಾಡುತ್ತೇನೆ" ಎಂದು ಉಲ್ಲೇಖವಾಗಿದೆ. ಇದು ರಾಜ್ಯಪಾಲರು ಈ ಸರ್ಕಾರದ ಪರವಾಗಿ ರೈತರಿಗೆ ಕೊಟ್ಟ ಅತ್ಯಂತ ದೊಡ್ಡ ಸಂದೇಶವಾಗಿದೆ. ಇದು ಅತ್ಯಂತ ಅಗತ್ಯವಾಗಿ ಅನುಷ್ಠಾನ ಆಗಬೇಕಾಗಿದೆ.

ನಾನು ಈ ದೇಶದ ಕೇಂದ್ರ ಸರ್ಕಾರದ ಸಂಸ್ಥೆ ಎನ್‌ಸಿಆರ್ (ನ್ಯಾಷನಲ್ ಕ್ರೈಮ್ ರೆಕಾರ್ಡ್ ಬ್ಯೂರೋ) ದೊಡ್ಡ ಮಾಹಿತಿಗಳನ್ನು ಭಿತ್ತರಿಸಿದೆ. 1995ರಿಂದ ಈ ದೇಶದಲ್ಲಿ ಎಷ್ಟು ಜನ ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂಬ ಅಂಕಿ ಅಂಶಗಳನ್ನು ಬಹಿರಂಗಪಡಿಸಿದೆ. ಇದುವರೆಗೆ 3,75,000 ಜನ ರೈತರು ಈ ದೇಶದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ದೇಶದಲ್ಲಿ ಪ್ರತಿ ವರ್ಷ 12 ಸಾವಿರಕ್ಕೂ

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಚ್ಚಿನ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಪ್ರತಿ ವರ್ಷ ಸುಮಾರು ಒಂದೂವರೆ ಸಾವಿರ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಒಂದು ಕಾಲಕ್ಕೆ ಒಂದು ಕುಟುಂಬದಲ್ಲಿ ಒಬ್ಬ ರೈತ ಮಾತ್ರ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದನು. ಆದರೆ ಇತ್ತೀಚೆಗೆ ಒಂದು ಕುಟುಂಬದಲ್ಲಿ ಗಂಡ-ಹೆಂಡತಿ, ಅಣ್ಣ-ತಮ್ಮ, ಅಪ್ಪ-ಮಗ ಸೇರಿದಂತೆ ಒಂದು ಸಂಖ್ಯೆಯನ್ನು ಮೀರಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದು, ನಮ್ಮೆಲ್ಲರ ಹೃದಯ ಕಲಕುವ ಸಂದೇಶ ಬರುತ್ತಿದೆ. ಅತ್ಯಂತ ಸಮಾಧಾನಕರವಾದ ಒಂದು ಸಂಗತಿ ಎಂದರೆ ಆತ್ಮಹತ್ಯೆ ಮಾಡಿಕೊಂಡ ಕುಟುಂಬಗಳ ಎಡತಾಕಿ, ಅವರ ಕಣ್ಣಲ್ಲಿ ಕಣ್ಣೀರು ಹಾಕಿ, ಅವರ ನೋವನ್ನು ಒರೆಸಿ, ಅಷ್ಟೋ-ಇಷ್ಟೋ ಆರ್ಥಿಕ ಶಕ್ತಿ ತುಂಬಿದ ಕೀರ್ತಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಕುಮಾರಸ್ವಾಮಿಯವರಿಗೆ ಇದೆ. ಆ ಕುಟುಂಬಕ್ಕೆ ಅಭಯ ಮತ್ತು ಭರವಸೆ ನೀಡಿದ್ದಾರೆ.

ಒಂದು ದೊಡ್ಡ ಪ್ರಕರಣವನ್ನು ನಾನು ಹೇಳಬಯಸುತ್ತೇನೆ. ಮಂಡ್ಯ ಜಿಲ್ಲೆಯ ಹೊಸೂರಿನ ಗ್ರಾಮದಲ್ಲಿ ಒಬ್ಬ ರೈತ ಒಂದು ಕಾಗದವನ್ನು ಬರೆದು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಆ ಕಾಗದದಲ್ಲಿ ' ನನ್ನ ಅಂತ್ಯ ಸಂಸ್ಕಾರಕ್ಕೆ ಕುಮಾರಣ್ಣನವರೇ ಬರಬೇಕು, ಅವರು ಬಾರದ ಹೊರತು ಅಂತ್ಯ ಸಂಸ್ಕಾರ ಮಾಡಬಾರದು, ನನ್ನ ಎಲ್ಲಾ ಸಾಲದ ಜವಾಬ್ದಾರಿಯನ್ನು ಅವರು ಹೊತ್ತುಕೊಳ್ಳಬೇಕು' ಎಂದು ಬರೆದಿದ್ದಾನೆ. ಇದು ಹೊಸೂರಿನ ಒಂದು ರೈತ ಕುಟುಂಬದ ಪರಿಸ್ಥಿತಿ ಅಷ್ಟೇ ಅಲ್ಲ. ಈ ನಾಡಿನ ಎಲ್ಲಾ ರೈತರ ಮನಸ್ಥಿತಿ. ಬಹುಶ: ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾದರೆ ಬದುಕು-ಭವಿಷ್ಯ ಉಳಿಯುತ್ತದೆ ಎನ್ನುವ ಅಚಲ ವಿಶ್ವಾಸದ ಮೇಲೆ ಆ ರೈತ ಮಾಡಿದ ಪ್ರಕ್ರಿಯೆಯಾಗಿದೆ. ಇದಕ್ಕೆ ಒಂದು ಶಾಶ್ವತವಾದ ಪರಿಹಾರ ಕೊಡಬೇಕು ಎನ್ನುವ ತುಡಿತದ ಹಿನ್ನೆಲೆಯಲ್ಲಿ ತಮ್ಮ ಆರೋಗ್ಯವನ್ನು ಲೆಕ್ಕಿಸದೇ ಇಸ್ರೇಲ್‌ಗೆ ಹೋಗಿಬಂದರು. 'ಇಸ್ರೇಲ್‌ನ ಅಧ್ಯಯನ ಹಾಗೂ ಆ ಸಂದರ್ಭದ ಪ್ರವಾಸ ಮರು ಜನ್ಮ ಕೊಟ್ಟ ಹಿನ್ನೆಲೆಯಲ್ಲಿ ಬದುಕುಳಿದ ಅವಧಿಯನ್ನು ರೈತರ ಬದುಕನ್ನು ಉಳಿಸಲು ಮೀಸಲಾಗಿಡಬೇಕು, ಈ ನಾಡಿನ ಆರೂವರೆ ಕೋಟಿ ಜನರ ರಕ್ಷಣೆಗಾಗಿ ಬದುಕನ್ನು ಮೀಸಲಿಡುತ್ತೇನೆ' ಎನ್ನುವ ಅತ್ಯಂತ ಮಹತ್ವದ ಮಾರ್ಮಿಕ ಮಾತುಗಳ ಜೊತೆಗೆ ಅವರಿಗೆ ಧೈರ್ಯ ತುಂಬುವ ಕೆಲಸವನ್ನು ಮಾಡಿದರು. ಈ ಹಿನ್ನೆಲೆಯಲ್ಲಿ ರಾಜ್ಯಪಾಲರ ಭಾಷಣ ಅತ್ಯಂತ ಮಹತ್ವವನ್ನು ಪಡೆದುಕೊಳ್ಳುತ್ತದೆ. ಇಲ್ಲಿ ಬಹಳ ಜನ ಭೇಟಿಯಾಗಿ ಮಾತನಾಡಿದ್ದು, ನಾನು ಎಲ್ಲವನ್ನೂ ಕೇಳಿಸಿಕೊಂಡಿದ್ದೇನೆ. ನಾನು ರಾಜಕಾರಣದ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಶ್ರೀ ನೀರವ್ ಮೋದಿ, ಶ್ರೀ ಲಲಿತ್ ಮೋದಿ, ಶ್ರೀ ವಿಜಯಮಲ್ಯ ರವರ ಒಂದು ಲಕ್ಷ ಕೋಟಿಗೂ ಹೆಚ್ಚು ಮೊತ್ತದ ಸಾಲವನ್ನು ಏಕೆ ಮನ್ನಾ ಮಾಡಿದರು? ರೈತರ ಸಾಲವನ್ನು ಏಕೆ ಮನ್ನಾ ಮಾಡುವುದಿಲ್ಲ ಎಂಬ ಪ್ರಶ್ನೆಗೆ ನಾನು ಹೋಗುವುದಿಲ್ಲ. ಅದು ರಾಜಕೀಯ ಟೀಕೆ ಆಗಿತ್ತು. ಆದರೆ ಇದು ರೈತರ ಬಗ್ಗೆ ಕಾಳಜಿಯಿಂದ ಮತ್ತು ಹೃದಯವಂತಿಕೆಯಿಂದ ಮಾಡಬೇಕಾದ ಕೆಲಸವಾಗಿದೆ. ನಮ್ಮ ಉಡುಪಿ ಶ್ರೀಕೃಷ್ಣ ಮಠದ ಸ್ವಾಮೀಜಿಯವರು ಹೇಳಿದಂತೆ ಪ್ರತಿಯೊಬ್ಬರ ಖಾತೆಗೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂ.15 ಲಕ್ಷಗಳನ್ನು ಏಕೆ ಹಾಕಲಿಲ್ಲ ಎಂದು ನಾನು ಕೇಳುವುದಕ್ಕೆ ಹೋಗುವುದಿಲ್ಲ. ಅದೇರೀತಿ ವರ್ಷಕ್ಕೆ 2 ಲಕ್ಷ ಉದ್ಯೋಗ ಏಕೆ ಸೃಷ್ಟಿ ಮಾಡಲಿಲ್ಲ ಎಂದು ಕೇಳುವುದಕ್ಕೆ ಹೋಗುವುದಿಲ್ಲ.

**ಶ್ರೀ ರಘುನಾಥ್‌ರಾವ್ ಮಲ್ಕಾಪೂರೆಃ–** ಮಾನ್ಯ ಸಭಾಪತಿಯವರೇ, ಅದು ಯಾರ ಮತ್ತು ಯಾವ ಕಾಲ ಎಂಬುದನ್ನು ಮಾನ್ಯ ಸದಸ್ಯರು ಹೇಳಬೇಕು. ಕಾಲಕಾಲಕ್ಕೆ ಕೇಂದ್ರ ಸರ್ಕಾರಗಳು ಬದಲಾವಣೆಯಾಗಿವೆ.

(ಗೊಂದಲ)

**ಶ್ರೀ ಎನ್. ರವಿಕುಮಾರ್**:– ಮಾನ್ಯ ಸಭಾಪತಿಯವರೇ, ಮಾನ್ಯ ಮೋದಿಯವರ ಸರ್ಕಾರದಲ್ಲಿ ಕೈಗಾರಿಕೋದ್ಯಮಿಗಳ ಸಾಲ ಮನ್ನಾ ಮಾಡಿದರು ಎಂದು ಮಾನ್ಯ ಸದಸ್ಯರು ವಿಜಯ್ ಮಲ್ಯ ಮತ್ತು ಇತರರ ಹೆಸರುಗಳನ್ನು ಹೇಳಿದರು. ಯಾರ ಸಾಲ ಮನ್ನಾ ಮಾಡಿದ್ದಾರೆ ಎಂಬ ಅಂಕಿ–ಅಂಶಗಳನ್ನು ಮಾನ್ಯ ಸದಸ್ಯರು ಕೊಡಬೇಕು. ಸುಮ್ಮನೆ ಭಾಷಣ ಮಾಡುವ ಅಗತ್ಯ ಇಲ್ಲ. ಯಾವುದೇ ಕೈಗಾರಿಕೋದ್ಯಮಿಯ ಸಾಲ ಮನ್ನಾ ಮಾಡಿಲ್ಲ.

(ಗೊಂದಲ)

**ಶ್ರೀ ಕೆ.ಟಿ. ಶ್ರೀಕಂಠೇಗೌಡಃ–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಹೇಳಿರುವ ಎಲ್ಲಾ ಮಾತುಗಳನ್ನು ಕೇಳಿಸಿಕೊಂಡಿದ್ದೇನೆ. ನಾನು ಮಾತನಾಡಬೇಕಾದರೆ ಪ್ರಶ್ನೆ ಮಾಡುವುದಿಲ್ಲ ಎಂದು ಹೇಳಿದ್ದೇನೆ.

(ಗೊಂದಲ)

**ಶ್ರೀ ಎಂ. ಕೆ. ಪ್ರಾಣೇಶ್‌ಃ–** 'ಕೇಳುವುದಿಲ್ಲ, ಹೇಳುವುದಿಲ್ಲ, ಒಪ್ಪಿಕೊಳ್ಳುವುದಿಲ್ಲ' ಎಂದು ಹೇಳುತ್ತಾ ಹೋದರೆ ಹೇಗೆ?

(ಗೊಂದಲ)

**ಶ್ರೀ ಕೆ.ಟಿ. ಶ್ರೀಕಂಠೇಗೌಡಃ–** ಮಾನ್ಯ ಸಭಾಪತಿಯವರೇ, ನಾನು ಆ ವಿಚಾರದಲ್ಲಿ ಚರ್ಚೆ ಮುಂದುವರೆಸುವುದಿಲ್ಲ, ಆದರೆ ಸೂಚ್ಯವಾಗಿ ಆ ವಿಚಾರಗಳನ್ನು ಪ್ರಸ್ತಾಪ ಮಾಡಿದೆ.

(ಗೊಂದಲ)

**ಶ್ರೀ ವೈ.ಎ. ನಾರಾಯಣಸ್ವಾಮಿ :–** ಅವರು ಹೇಳಿದ್ದೆಲ್ಲವೂ ರೆಕಾರ್ಡ್ ಆಯಿತಲ್ಲವೇ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

77/04.07.2018/5.10/ಹೆಚ್‌ವಿಃವಿಕೆ

(ಗೊಂದಲ)

**ಸಭಾಪತಿಯವರುಃ–** ಮಾನ್ಯ ಶ್ರೀಕಂಠೇಗೌಡರು ತಮ್ಮ ಮಾತುಗಳನ್ನು ಮುಂದುವರಿಸಲಿ, ಮಧ್ಯೆ ಯಾರೂ ಅಡ್ಡಿಪಡಿಸಬೇಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ರೈತರ ಬದುಕಿನ ಬಗ್ಗೆ ನಮ್ಮ ಗ್ರಾಮೀಣ ಪ್ರದೇಶದಲ್ಲಿ 'ಬೇಸಾಯ ಎಂದರೆ, ನೀ ಸಾಯ, ನಿಮ್ಮಪ್ಪ ಸಾಯ' ಎನ್ನುವ ಗಾದೆ ಮಾತಿದೆ. ರೈತ ಸಾಲದಲ್ಲಿ ಹುಟ್ಟಿ, ಸಾಲದಲ್ಲಿ ಬದುಕಿ, ಸಾಲದಲ್ಲೇ ಸಾಯುತ್ತಾನೆ. ಭಗವಾನ್ ಬುದ್ಧ 'ಸಾವಿಲ್ಲದ ಮನೆಯಲ್ಲಿ ಸಾಸಿವೆ ತನ್ನಿ' ಎನ್ನುವ ಮಾತನ್ನು ಹೇಳಿದ್ದ. ಇವತ್ತು ನಾವು 'ಸಾಲವಿಲ್ಲದ ರೈತನ ಮನೆಯನ್ನು ಹುಡುಕಿಕೊಂಡು ಬಾ' ಎನ್ನುವ ಮಾತನ್ನು ಹೇಳಬೇಕಾಗಿದೆ. ರೈತ ಅಷ್ಟೊಂದು ಸಂಕಷ್ಟದಲ್ಲಿದ್ದಾನೆ. ಅವನ ಕಣ್ಣೀರು ಹೊರೆಸುವಂತಹ ದೊಡ್ಡ ಪ್ರಯತ್ನಗಳು ನಡೆದವು. 20 ತಿಂಗಳ ಸಮ್ಮಿಶ್ರ ಸರ್ಕಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಕುಮಾರಸ್ವಾಮಿಯವರು ಮೊಟ್ಟಮೊದಲಿಗೆ ರೈತರ ಸಾಲ ಮನ್ನಾ ಮತ್ತು ಕಬ್ಬನ್ನು ಸ್ಥಾಗಾಣಿಕೆ ಮಾಡದೇ ಇರುವಂತಹ ಸಂದರ್ಭದಲ್ಲಿ ಒಂದು ಹೆಕ್ಟೇರ್‌ಗೆ 25 ಸಾವಿರ ರೂಪಾಯಿಗಳಷ್ಟು ಪರಿಹಾರವನ್ನು ಕೊಡಲಾಯಿತು. ಕಳೆದ ವರ್ಷ ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ರೈತರ ಸಾಲ ಮನ್ನಾ ಪ್ರಕ್ರಿಯೆಗಳು ಪ್ರಾರಂಭವಾಯಿತು. ಈ ಜಗತ್ತು ಕಂಡಂತಹ ಅಪ್ರತಿಮ ಆರ್ಥಿಕ ತಜ್ಞ ಡಾ॥ಮನಮೋಹನ್‌ಸಿಂಗ್‌ರವರು ಕೇಂದ್ರದಲ್ಲಿ ಪ್ರಧಾನಮಂತ್ರಿಗಳಾಗಿದ್ದ ಸಂದರ್ಭದಲ್ಲಿ ವಾಣಿಜ್ಯ ಬ್ಯಾಂಕುಗಳಲ್ಲಿ ಇದ್ದಂತಹ 72 ಸಾವಿರ ಕೋಟಿ ರೂಪಾಯಿಗಳಷ್ಟು ರೈತರ ಸಾಲ ಮನ್ನಾ ಮಾಡಲಾಯಿತು. ನಾಳೆ ಈ ರಾಜ್ಯದ ಇತಿಹಾಸದಲ್ಲಿ ಹಿಂದೆಂದು ಮಾಡದಷ್ಟು ರೈತರ ಋಣ ತೀರಿಸುವುದಕ್ಕೆ ಈ ಸರ್ಕಾರ ಬದ್ಧವಾಗಿದೆ ಎನ್ನುವ ಮಾತನ್ನು ಘನತೆವೆತ್ತ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇದು ಪುಣ್ಯದ ಕೆಲಸವಾಗಿದೆ. ಆದ್ದರಿಂದ ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಅನುಮೋದನೆಯನ್ನು ಸಲ್ಲಿಸುವ ಅವಕಾಶ ನನಗೆ ದೊರೆತಿದೆ ಇದೂ ಸಹ ಪುಣ್ಯದ ಕೆಲಸವಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವೈ.ಎ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ನಾಳೆ ಫಿಲ್ಮಂ ಬಿಡುಗಡೆಯಾಗುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಯಾರ್‍ಯಾರ ಫಿಲ್ಮಂ ಯಾವಾಗ ಬಿಡುಗಡೆಯಾಗುತ್ತದೆ, ಯಾರ್‍ಯಾರ ಆಕ್ಟಿಂಗ್ ಹೇಗಿರುತ್ತದೆ ಎನ್ನುವುದು ಗೊತ್ತಾಗುತ್ತದೆ, ಅವರು ಯಾಕೆ ಸುಮ್ಮನೆ ಆತಂಕಪಡಬೇಕು?

(ಗೊಂದಲ)

**ಶ್ರೀ ಅರುಣ ಶಹಾಪುರಃ–** ಸನ್ಮಾನ್ಯ ಸಭಾಪತಿಯವರೇ, ನಾಳೆ ಮಾಡುವ ಭಾಷಣವನ್ನು ಅವರು ಇವತ್ತೇ ಮಾಡುತ್ತಿದ್ದಾರೆ.

**ಸಭಾಪತಿಯವರುಃ–** ಅವರು ಏನಾದರೂ ಹೇಳಲಿ ತಾವು ಯಾಕೆ ಮಧ್ಯೆ ಮಾತನಾಡುತ್ತೀರಿ?

**ಶ್ರೀ ಕೆ.ಟಿ.ಶ್ರೀಕಂಠೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿಲ್ಲ.

(ಗೊಂದಲ)

**ಸಭಾಪತಿಯವರುಃ–** ಮಾನ್ಯ ವೈ.ಎ.ನಾರಾಯಣ ಸ್ವಾಮಿಯವರೇ ಮತ್ತು ಪ್ರಾಣೇಶ್‌ರವರೇ ಕುಳಿತುಕೊಳ್ಳಿ. ನಾನು ಅಲೋ ಮಾಡುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರೇ ತಮ್ಮ ಪಕ್ಷದ ಸದಸ್ಯರು ಪದೇಪದೇ ಎದ್ದು ನಿಂತು ಮಾತಾಡದಂತೆ ನೋಡಿಕೊಳ್ಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಪ್ರತಿಪಕ್ಷದವರು ಈ ಸರ್ಕಾರ 6 ತಿಂಗಳು ಅಥವಾ ಒಂದು ವರ್ಷಗಳ ಕಾಲ ಮಾತ್ರ ಉಳಿಯುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. 122 ಜನ ವಿಧಾನಸಭಾ ಸದಸ್ಯರಲ್ಲಿ ಯಾರೂ ಸಹ 5 ವರ್ಷದಲ್ಲಿ ಒಂದು ದಿನವನ್ನು ಸಹ ಕಡಿಮೆ ಮಾಡಿಕೊಳ್ಳುವುದಕ್ಕೆ ತಯಾರಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಕ್ಷದವರಿಗೆ ಘನತೆವೆತ್ತ ರಾಜ್ಯಪಾಲರು ಸರ್ಕಾರವನ್ನು ರಚನೆ ಮಾಡಲು ಕುದುರೆ ಕೊಟ್ಟರು. ಓಡಿಸಲು ಆಗದೇ ಇವರು ಕುದುರೆ ಮೇಲಿಂದ ಇಳಿದು ಹೋದರು. ಕೇಂದ್ರ ಸಚಿವರೊಬ್ಬರು, 'ಕೊಟ್ಟ ಕುದುರೆಯನ್ನು.......' ಎಂದು ಹೇಳಿದ್ದರು. ಕೊಟ್ಟ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುದುರೆಯನ್ನು ಇಳಿದು ಹೋದವರು ಯಾರು? ನಾವು ಇಳಿದು ಹೋಗಿ ಎಂದು ಹೇಳಲಿಲ್ಲ. ಇವತ್ತಿನ ವಿಶಿಷ್ಟ ಸಮ್ಮಿಶ್ರ ಸರ್ಕಾರದ ರಚನೆಯಲ್ಲಿ ಘನತೆವೆತ್ತ ರಾಜ್ಯಪಾಲರ ಭಾಷಣವು ಮಹತ್ತರವಾದ ಆಶಯಗಳನ್ನು ಹೊತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ರಾಜ್ಯದ ಜನರು ಆರೋಗ್ಯ, ಶಿಕ್ಷಣ ಮತ್ತು ವಸತಿಯ ವಿಚಾರದಲ್ಲಿ ಆತಂಕಕ್ಕೊಳಗಾಗಿದ್ದಾರೆ. ನಮ್ಮ ಸರ್ಕಾರ ಸರ್ವರಿಗೂ ಆರೋಗ್ಯ, ಶಿಕ್ಷಣ ಮತ್ತು ವಸತಿ ನೀಡುವ ಆದ್ಯತೆಯ ಮಾತುಗಳನ್ನು ಘನತೆವೆತ್ತ ರಾಜ್ಯಪಾಲರು ನಮ್ಮ ಪರವಾಗಿ ಹೇಳಿದ್ದಾರೆ. ರೈತ ಆತ್ಮಹತ್ಯೆ ಮಾಡಿಕೊಂಡಿರುವುದು ಸತ್ಯದ ಸಂಗತಿಯಾಗಿದೆ. ಮತ್ತೊಂದು ಕಡೆ ರೈತರು ತಾವಿರುವ ಊರುಗಳನ್ನು ಬಿಟ್ಟು ಸಂಸಾರದ ಸಮೇತ ಗುಳೆ ಹೋಗುತ್ತಿದ್ದಾರೆ. ನಂಜನಗೂಡು ಮತ್ತು ನಮ್ಮ ಹಿಂದಿನ ಮುಖ್ಯಮಂತ್ರಿಗಳ ಕ್ಷೇತ್ರವಾಗಿದ್ದ ವರುಣ ಕ್ಷೇತ್ರದಲ್ಲಿ ಬೇಸಾಯ ಲಾಭದಾಯಕವಲ್ಲ, ಬದುಕುವುದಕ್ಕೆ ಸಾಧ್ಯವಿಲ್ಲ ಎನ್ನುವ ಕಾರಣದಿಂದಾಗಿ ಊರಿಗೆ ಊರೇ ಮೈಸೂರಿಗೆ ಗುಳೆ ಬರುತ್ತಿದೆ. ಈ ಹಿನ್ನೆಲೆಯಲ್ಲಿ ರೈತರಿಗೆ ಉತ್ತಮ ಮಾರುಕಟ್ಟೆ ಮತ್ತು ಲಾಭದಾಯಕ ಬೆಲೆ ಕೊಡುವ ಮಾತುಗಳನ್ನು ಘನತೆವೆತ್ತ ರಾಜ್ಯಪಾಲರು ನಮ್ಮ ಸರ್ಕಾರದ ಪರವಾಗಿ ಹೇಳಿದ್ದಾರೆ. ಈ ದಿಸೆಯಲ್ಲಿ ಕಟಿಬದ್ಧತೆಯನ್ನು ಪ್ರದರ್ಶನ ಮಾಡುವುದಕ್ಕೆ ನಾವು ತಯಾರಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದ ಬಗ್ಗೆ ಮಾತನಾಡಬೇಕಾದರೆ, ಬೆಂಗಳೂರು ನಗರ ಸಮಸ್ಯೆಗಳ ಆಗರವಾಗಿದೆ. ಮೈಸೂರಿಗೆ ಹೋಗಬೇಕಾದರೆ, ಸಮಾಧಾನದಿಂದ ಹೋಗುತ್ತೇವೆ. 'ಯಾಕೆ ಬೆಂಗಳೂರಿಗೆ ಹೋಗಬೇಕಪ್ಪ' ಅಂದುಕೊಂಡು ಬೆಂಗಳೂರಿಗೆ ಬರುತ್ತೇವೆ. ಇಲ್ಲಿನ ಜನದಟ್ಟಣೆ ಮತ್ತು ಟ್ರಾಫಿಕ್ ಜಾಮ್‌ನಿಂದ ಎಲ್ಲರಿಗೂ ಬೇಸರವಾಗಿದೆ. ಈ ಸಮಸ್ಯೆಯನ್ನು ಪರಿಹರಿಸುವುದಕ್ಕಾಗಿ 20 ತಿಂಗಳುಗಳ ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿಗಳಾಗಿದ್ದ, ಇವತ್ತಿನ ಮುಖ್ಯಮಂತ್ರಿಗಳಾಗಿರುವ ಮಾನ್ಯ ಕುಮಾರಸ್ವಾಮಿಯವರು ಮೆಟ್ರೋ ರೈಲಿಗೆ ಅಡಿಗಲ್ಲನ್ನು ಹಾಕಿದ್ದರು. ಇವತ್ತು 'ನಮ್ಮ ಮೆಟ್ರೋ'ದಲ್ಲಿ ಪ್ರತಿದಿನ ಸುಮಾರು 3 ಲಕ್ಷ 60 ಸಾವಿರ ಜನರು ಸಂಚರಿಸುತ್ತಿದ್ದಾರೆ. ಮುಂದಿನ 2-3 ವರ್ಷಗಳಲ್ಲಿ ಸುಮಾರು 20 ಲಕ್ಷ ಜನರು 'ನಮ್ಮ ಮೆಟ್ರೋ'ದಲ್ಲಿ ಸಂಚರಿಸುವ ಮೂಲಕ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಬೇಕೆನ್ನುವ ದೃಷ್ಟಿಯಿಂದ 2021ರ ಮಾರ್ಚ್ ಹೊತ್ತಿಗೆ 118 ಕಿಲೋಮೀಟರ್ ಉದ್ದದ ಮಾರ್ಗವನ್ನು ಪೂರ್ಣಗೊಳಿಸಬೇಕೆನ್ನುವ ಒಂದು ದೊಡ್ಡ ಸವಾಲನ್ನು ನಮ್ಮ ಸರ್ಕಾರ ಸ್ವೀಕರಿಸಿದೆ.

ಸನ್ಮಾನ್ಯ ಸಭಾಪತಿಯವರೇ, ನಾವುಗಳು ಚಿಕ್ಕವರಾಗಿದ್ದಾಗ ಮೈಸೂರಿನಲ್ಲಿ ಸೈಕಲ್ ಶಾಪುಗಳು ಇದ್ದವು. ಪಂಚರ್ ಹಾಕಿ, ಸೈಕಲ್‌ಗಳನ್ನು ಬಾಡಿಗೆಗೆ ತೆಗೆದುಕೊಂಡು ಹೋಗುತ್ತಿದ್ದೆವು. ಈಗ ಸೈಕಲ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಾಪುಗಳು ನಡೆಸುವುದು ಲಾಭದಾಯಕವಲ್ಲವೆಂದು ಅವುಗಳನ್ನು ಮುಚ್ಚಿದ್ದಾರೆ. ಅದಕ್ಕಾಗಿ ನಮ್ಮ ನಗರಪಾಲಿಕೆಯವರು ಸರ್ಕಾರದ ವತಿಯಿಂದ ಮೈಸೂರಿನಲ್ಲಿ ಹೈಟೆಕ್ ಮಾದರಿಯ ಬೈಸಿಕಲ್ ನಿಲ್ದಾಣಗಳನ್ನು ಪ್ರಾರಂಭ ಮಾಡಿದೆ. ಇದು ಬಹಳ ಯಶಸ್ವಿಯಾಗಿದೆ. ಒಂದು ಕೂಪನ್ ತೆಗೆದುಕೊಳ್ಳುವುದು ಅಥವಾ ಕಾಯನ್ ಹಾಕಿ ಸೈಕಲ್ ತೆಗೆದುಕೊಂಡು ಹೋಗಿ ಇಡೀ ಮೈಸೂರು ಸುತ್ತಾಡಬಹುದಾಗಿದೆ. ಈ ಯೋಜನೆಯನ್ನು ಬೆಂಗಳೂರು ನಗರದಲ್ಲಿಯೂ ತರಬೇಕೆನ್ನುವ ಕಾಯಕಲ್ಪಕ್ಕೆ ನಮ್ಮ ಸರ್ಕಾರ ಮುಂದಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಕುಡಿಯುವ ನೀರಿನ ಹಾಹಾಕಾರವನ್ನು ಕಡಿಮೆ ಮಾಡಲು Retreat and Reuse ಎನ್ನುವ ಒಂದು ದೊಡ್ಡ ಕಾರ್ಯಕ್ರಮವನ್ನು ರೂಪಿಸುವುದಕ್ಕೆ ನಾವು ಮುಂದಾಗಿದ್ದೇವೆ. ನಿರುದ್ಯೋಗದ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಒಂದು ವರ್ಷಕ್ಕೆ 2 ಕೋಟಿ ಉದ್ಯೋಗಗಳನ್ನು ಸೃಷ್ಟಿ ಮಾಡುವ ನಿರ್ಣಯಕ್ಕೆ ನಾವು ಬಂದಿದ್ದೇವೆ. ಮಕ್ಕಳಿಗೆ ಪ್ರೌಢಶಾಲೆಗಳಲ್ಲಿ ಮತ್ತು ಪದವಿಪೂರ್ವ ಹಂತದಲ್ಲಿಯೇ ಕೌಶಲ್ಯಾಧಾರಿತ ಶಿಕ್ಷಣವನ್ನು ಕೊಡುವ ಮೂಲಕ ಅವರು ಸ್ವಯಂ ಉದ್ಯೋಗವನ್ನು ಪಡೆದುಕೊಳ್ಳುವುದರ ಜೊತೆಗೆ ಉದ್ಯೋಗ ಬೇಗನೇ ಸಿಗುವ ಅವಕಾಶಗಳು ಹೆಚ್ಚಾಗಬೇಕೆನ್ನುವ ಉದ್ದೇಶದಿಂದ ಕೌಶಲ್ಯಾಧಾರಿತ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡುವುದಕ್ಕೆ ಬದ್ಧರಾಗಿದ್ದೇವೆ ಎನ್ನುವ ಮಾತನ್ನು ಘನತೆವೆತ್ತ ರಾಜ್ಯಪಾಲರಿಂದ ಹೇಳಿಸಲಾಗಿದೆ. ಮಾತು ಬಾರದ, ನೋವು ನುಡಿಯದ ಪ್ರಾಣಿಗಳ ರಕ್ಷಣೆಗಾಗಿ ನಮ್ಮ ಸರ್ಕಾರ ಮೇವು ಭದ್ರತೆ ನೀಡಲು ಮುಂದಾಗಿದೆ. ಮುಂದೆ ಮಾಡಲು ಏನು ಕೆಲಸವಿದೆ ಎಂದು ಅವರು ಹುಡುಕಬೇಕಾಗಿದೆ. ಮೇವು ಭದ್ರತೆಯ ನಂತರ, ಬಾಲ ಕಾರ್ಮಿಕ ಮುಕ್ತ......

**ಶ್ರೀ ಎಂ.ಕೆ.ಪ್ರಾಣೇಶ್:-** ನಾಳೆ ಏನಾಗುತ್ತದೆ ಎನ್ನುವುದನ್ನು ನೋಡೋಣ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನೋಡುವುದು ಏನೂ ಇಲ್ಲ. ಸಾಕುಬೇಕು ಎನ್ನುವ ರೀತಿಯಲ್ಲಿ ನಾವು ಆಡಳಿತ ಕೊಡುತ್ತೇವೆ. ಅದರ ಬಗ್ಗೆ ಅವರಿಗೆ ಆತಂಕಬೇಡ. ಕೇವಲ ಒಂದು ರಾಜ್ಯಪಾಲರ ಭಾಷಣಕ್ಕೆ ಇವರು ಸುಸ್ತಾಗಿದ್ದಾರೆ. ಇನ್ನೂ ಬಜೆಟ್ ನಂತರ 5 ವರ್ಷಗಳ ಆಡಳಿತಕ್ಕೆ ಮಾನ್ಯ ಅರುಣ್ ಶಹಾಪುರ್‌ರವರು ಏನಾಗಬಹುದು ಎನ್ನುವುದನ್ನು ನಾವು ಕಾದು ನೋಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರುः–** ಮಾನ್ಯ ಶ್ರೀಕಂಠೇಗೌಡರೇ, ತಾವು ಮಾತನಾಡುವ ಸಂದರ್ಭದಲ್ಲಿ ಪೀಠವನ್ನುದ್ದೇಶಿಸಿ ಮಾತನಾಡಿ, ಅವರುಗಳನ್ನು ನೋಡಿ ಮಾತನಾಡಿದರೆ ಅವರು ಪ್ರಚೋದನೆಗೆ ಒಳಗಾಗುತ್ತಾರೆ.

**ಶ್ರೀ ಅರುಣ ಶಹಾಪುರः–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು ನನ್ನ ಹೆಸರನ್ನು ಉಲ್ಲೇಖ ಮಾಡಿರುವುದರಿಂದ ನಾನು ಮಾತನಾಡುತ್ತಿದ್ದೇನೆ. ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ ಮನೆಗಳ ಮೇಲೆ 'ನಾಳೆ ಬಾ' ಎಂದು ಬರೆದಿರುತ್ತಾರೆ. ಘನತೆವೆತ್ತ ರಾಜ್ಯಪಾಲರ ಭಾಷಣ 'ನಾಳೆ ಬಾ' ಎನ್ನುವ ರೀತಿಯಲ್ಲಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡः–** ಸನ್ಮಾನ್ಯ ಸಭಾಪತಿಯವರೇ, 'ನಾಳೆ ಬಾ' ಎನ್ನುವುದು ಅವರ ರೂಢಿ, ನಮ್ಮ ರೂಢಿಯಲ್ಲ. ನಾಳೆ ಮಾಡುವುದನ್ನು ಇವತ್ತೇ ಮಾಡು ಎನ್ನುವವರು ನಾವು.

**ಸಭಾಪತಿಯವರುः–** ಮಾನ್ಯ ಶ್ರೀಕಂಠೇಗೌಡರೇ, ನಾನು ಮಾತನಾಡುವುದನ್ನು ತಾವು ಕೇಳಿಸಿಕೊಳ್ಳುವುದೇ ಇಲ್ಲ. ರಾಜ್ಯಪಾಲರ ಭಾಷಣವನ್ನು ಅನುಮೋದನೆ ಮಾಡುವವರು ತಾವು. ಅನುಮೋದಕರು ಎಲ್ಲರೂ ಮಾತನಾಡಿರುವುದನ್ನು ಅನುಮೋದನೆ ಮಾಡುತ್ತೀರಿಂದು ನಾನು ತಿಳಿದುಕೊಂಡಿದ್ದೆ. ಆದರೆ, ತಾವು ಭಾಷಣ ಮಾಡುತ್ತಿದ್ದೀರಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡः–** ಸನ್ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದೇನೆಂದರೆ, ಶಿಕ್ಷಣ ಇಲಾಖೆಯಲ್ಲಿ ಸುಮಾರು 5-6 ದಶಕಗಳಿಂದ ಶಾಲಾ ಕಟ್ಟಡಗಳ ನಿರ್ಮಾಣವಾಗಿತ್ತು. ಆ ಶಾಲಾ ಕಟ್ಟಡಗಳು ಇಡೀ ರಾಜ್ಯದಲ್ಲಿ ಶಿಥಿಲಾವಸ್ಥೆಯನ್ನು ಮುಟ್ಟಿವೆ. ಮಕ್ಕಳು ಆ ಕಟ್ಟಡಗಳಲ್ಲಿ ಕುಳಿತುಕೊಂಡು ಪಾಠ ಕೇಳುವ ಸ್ಥಿತಿಯಲ್ಲಿ ಅವುಗಳಿಲ್ಲ. ಆದ್ದರಿಂದ ಆ ಕಟ್ಟಡಗಳಿಗೆ ಹೊಸ ಕಾಯಕಲ್ಪ ಕೊಡುವಂತಹ ಕೆಲಸ ನಮ್ಮ ಸರ್ಕಾರದಿಂದ ಆಗಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾಗಲೂ ಮಳೆ, ಬಹುಮತ ಸಾಬೀತು ಮಾಡಿದಾಗಲೂ ಮಳೆ, ಮಂತ್ರಿಮಂಡಲ ರಚನೆಯಾದಾಗಲೂ ಮಳೆ ಹೀಗೆ ಎಲ್ಲ ಸಂದರ್ಭಗಳಲ್ಲೂ ಮಳೆಯಾಗಿರುವ ಸೂಚನೆಯನ್ನು ನೋಡಿದರೆ, ನಮ್ಮ ರೈತರ ಮುಂದಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬದುಕು ಸಮೃದ್ಧವಾಗುತ್ತದೆ ಮತ್ತು ಈ ನಾಡಿನ ಜನರ ಬದುಕು ಸಮೃದ್ಧವಾಗುತ್ತದೆ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ.

ಸನ್ಮಾನ್ಯ ಸಭಾಪತಿಯವರೇ, ಕೆಲವು ನದಿಗಳು ಬತ್ತಿ ಹೋಗುತ್ತಿವೆ. ಈ ನದಿಗಳ ಪುನಃಶ್ಚೇತನಗೊಳಿಸುವ ಕಾರ್ಯವು ರಾಜಸ್ಥಾನ ಮಾದರಿಯಲ್ಲಿ ಚೆಕ್‌ಡ್ಯಾಂಗಳ ನಿರ್ಮಾಣವಾಗಬೇಕಾಗಿದೆ. ಇನ್ನೂ ಹಲವಾರು ಸಲಹೆಗಳು ಇದ್ದರೂ ಸಹ ತಾವು ನೀಡಿರುವ ಕಾಲಮಿತಿಯಲ್ಲಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸಬೇಕಾಗಿದೆ. ಘನತೆವೆತ್ತ ರಾಜ್ಯಪಾಲರು ವಿಶಿಷ್ಟ, ವಿಭಿನ್ನ ಹಾದಿಯಲ್ಲಿ ಬಹುದೊಡ್ಡ ಸಂದೇಶವನ್ನು ಈ ನಾಡಿನ ರೈತರಿಗೆ ಮತ್ತು ಜನರಿಗೆ ಕೊಡುವಂತಹ ದಿಸೆಯಲ್ಲಿ ಯಶಸ್ಸನ್ನು ಕಂಡಿದ್ದಾರೆ, ಅವರಿಗೆ ತಮ್ಮ ಮೂಲಕ ನನ್ನ ಗೌರವಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ.

**ಶ್ರೀ ಎಂ.ಕೆ.ಪ್ರಾಣೇಶ್:-** ಸನ್ಮಾನ್ಯ ಸಭಾಪತಿಯವರೇ, ಅವರ ಮಾತುಗಳನ್ನು ಕೇಳಿದರೆ ಕಾಂಗ್ರೆಸ್ ಸರ್ಕಾರ ಏನೂ ಮಾಡಿಲ್ಲವೆಂದು ಗೊತ್ತಾಗುತ್ತಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಕಳೆದ ಎರಡು ದಿನಗಳಿಂದ ಘನತೆವೆತ್ತ ರಾಜ್ಯಪಾಲರು ದಯಪಾಲಿಸಿರುವ ಭಾಷಣದ ಮೇಲೆ ಈ ಸದನದ ಎಲ್ಲ ಸದಸ್ಯರು ಮಾತನಾಡಲು ಅನುವು ಮಾಡಿಕೊಟ್ಟಿರುವ ತಮಗೆ ಮೊದಲಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಬಂದಿದ್ದಾರೆ. ನಾನು ಶಾಸಕನಾಗಿ 9 ವರ್ಷಗಳಾಗಿದ್ದರೂ ಮುಖತಃ ಒಂದು ಬಾರಿ ಮಾತ್ರ ಭೇಟಿ ಮಾಡಲು ಅವಕಾಶವಾಗಿತ್ತು. ಅಷ್ಟೊಂದು ನಿಕಟವಾಗಿರುವ ಪರಿಚಯವಿಲ್ಲ.

(ಮುಂದುವರಿದಿದೆ)

(78) 4.7.2018 5.20 ¦PÉ:«PÉ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದುವರೆದಿದೆ)**

ಅವರ ಜೊತೆ ಅಷ್ಟು ನಿಕಟವಾದ ಸಂಬಂಧವಿಲ್ಲ. ಗುರುತು ಹಿಡಿಯುವಷ್ಟು ಮಾತ್ರ ಪರಿಚಯ ಇದೆ ಎಂದು ನಾನು ಭಾವಿಸಿದ್ದೇನೆ. ಆದರೂ ಮೊನ್ನೆ ಅವರಲ್ಲಿಗೆ ಹೋಗಿ ಅಭಿನಂದನೆ ಹೇಳ ಬಂದಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಂಖ್ಯಾಸಂಖೆಗಳ ಬಲದಲ್ಲಿ ತಾವು ಮುಖ್ಯಮಂತ್ರಿಗಳಾಗಿದ್ದೀರಿ. ನಾವು ಅದನ್ನು ಒಪ್ಪಿದ್ದೇವೆ, ಗೌರವಿಸಿದ್ದೇವೆ. ಈ ಕುರಿತು ನಮ್ಮಲ್ಲಿ ಗೊಂದಲವಿಲ್ಲ. ಆದರೆ ನನಗೆ ವಿಚಿತ್ರ ಹಾಗೂ ಆಶ್ಚರ್ಯ ಎನಿಸಿದ್ದು ಏನೆಂದರೆ . . . .

**ಶ್ರೀ ಸಿ.ಎಂ. ಲಿಂಗಪ್ಪ** :- ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ತಾವು ಎಲ್ಲರಿಗೂ ಅರ್ಥವಾಗುವಂತಹ ಕನ್ನಡ ಭಾಷೆಯಲ್ಲಿ ಮಾತನಾಡಲಿ ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ** :- ಮಾನ್ಯ ಸಭಾಪತಿಯವರೇ, ನನ್ನ ಭಾಷೆ ಅರ್ಥವಾಗುವುದಿಲ್ಲವೇ?

**ಸಭಾಪತಿಯವರು**:- ನನಗಂತೂ ಅರ್ಥವಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ** :- ಮಾನ್ಯ ಸಭಾಪತಿಯವರೇ, ಇಲ್ಲಿ ಕೆಲವರಿಗೆ ಚೌಕಾಸಿ ಕಿವಿ ಎಂದು ಇರುತ್ತದೆ. ಕೆಲವರು ಹೇಳಿದ್ದು ಮಾತ್ರ ಅರ್ಥವಾಗಬೇಕು ಎನ್ನುವುದು ಅವರ ಆಸೆಯಾಗಿರುತ್ತದೆ. ಮಾನ್ಯ ಸಿ.ಎಂ.ಲಿಂಗಪ್ಪನವರ ಕಿವಿ ಚೌಕಾಸಿ ಕಿವಿ ಆಗಬಾರದು ಎನ್ನುವುದು ನನ್ನ ವಿನಂತಿಯಾಗಿದೆ. ಪ್ರಜಾಪ್ರಭುತ್ವದಲ್ಲಿ, ವಿಧಾನ ಮಂಡಲದಲ್ಲಿ ಆಗುವಂತಹ ಚರ್ಚೆಗಳು, ಸಾಮಾನ್ಯ ಬಡವರ, ದುರ್ಬಲರ, ರೈತರ ಅನೇಕ ಸಮಸ್ಯೆಗಳನ್ನು ಒಳಗೊಂಡಿರುತ್ತದೆ. ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿ ಆದಾಗ ಅವರ ನೇರತನವನ್ನು, ದಿಟ್ಟತನವನ್ನು ನಾನು ಒಪ್ಪಿಕೊಂಡಿದ್ದೇನೆ. ಬೇರೆಯವರ ಬಗ್ಗೆ ನನಗೆ ಗೊತ್ತಿಲ್ಲ. ಈ ಸದನ 11 ದಿವಸಗಳ ಕಾಲ ನಡೆಯುತ್ತದೆ. ೯ ದಿವಸಗಳ ಕಾಲ ಕಾರ್ಯಕಲಾಪ ನಡೆಯುತ್ತದೆ. ನಾಲ್ಕು ದಿವಸಗಳ ಕಾಲ ಮಾತ್ರ ಪ್ರಶ್ನೋತ್ತರಕ್ಕೆ ಅವಕಾಶ ಕೊಟ್ಟಿದ್ದೀರಿ. ಮಾನ್ಯ ಕುಮಾರಸ್ವಾಮಿಯವರೇ ತಾವು ಹಳ್ಳಿಗಾಡುಗಳನ್ನು ಕಂಡಿದ್ದೀರಿ. ವಿಧಾನಸಭೆಯಿಂದಾಗಲಿ ಅಥವಾ ವಿಧಾನ ಪರಿಷತ್ತಿನಿಂದಾಗಲಿ ಒಂದು ಪ್ರಶ್ನೆಯನ್ನು ಹಾಕಿ ಆ ಪ್ರಶ್ನೆಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಟ್ಟರೆ ಯಾವುದೋ ಹಳ್ಳಿಯಲ್ಲಿ, ಯಾವುದೋ ಭಾಗದಲ್ಲಿ, ಯಾರದೋ ಒಂದು ಸಮಸ್ಯೆ ಪರಿಹಾರ ಆಗುವುದನ್ನು ನಾವು-ನೀವು ಕಂಡಿದ್ದೇವೆ. ಶಾಸನ ಸಭೆಯ ಶಾಸಕರ ಹಕ್ಕುಗಳು ಮತ್ತು ಕರ್ತವ್ಯಕ್ಕೆ ಧಕ್ಕೆ ತರುವುದರ ಮೂಲಕ ಸಮಾಜದ ಸಮಸ್ಯೆಗಳಿಗೆ ಸ್ಪಂದಸದೇ ಇರುವಂತಹ ವ್ಯವಸ್ಥೆಗೆ ಏಕೆ ಒಪ್ಪಿಕೊಂಡಿರಿ? ಪೂರಕವಾದ ಸಿದ್ಧತೆಗಳನ್ನು ಏಕೆ ಮಾಡಲಿಲ್ಲ? ಸದನವನ್ನು ವ್ಯವಸ್ಥಿತವಾಗಿ ನಡೆಸಬೇಕು ಎನ್ನುವಂತಹ ನಿಮ್ಮ ಕಲ್ಪನೆಗೆ ಏಕೆ ಒತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುವುದಕ್ಕೆ ಹೋಗಲಿಲ್ಲ? ಸರ್ಕಾರ ಶಾಸನದ ಆಧಾರದ ಮೇಲೆ ನಡೆಯುತ್ತದೆ. ಆದರೆ ಕೆಲವು ಸಲ ಘಳಿಗೆ ಆಧಾರದ ಮೇಲೆಯೂ ನಡೆಯುತ್ತದೆ ಎಂಬುದನ್ನು ಕೇಳಿದ್ದೇನೆ. ನೀವೇಕೆ ಹಾಗೆ ಮಾಡಿದಿರಿ ಎಂಬುದನ್ನು ತಾವು ಉತ್ತರ ಕೊಡುವಾಗ ಹೇಳಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ನಾವೇನೂ ನಿಮಗೆ ಹೊಸಬರಲ್ಲ. ನಾವು-ನೀವು ಕೂಡ ಒಂದು ಸಲ ಸರ್ಕಾರ ಮಾಡಿದ್ದೇವೆ. ಅದನ್ನು ಎಲ್ಲರೂ 20:20 ಮ್ಯಾಚ್ ಎಂದು ಕರೆದರು. ನಾವು, ಎರಡನೆ ಸರದಿಯಲ್ಲಿ ಪಿಚ್ ಸರಿ ಹೋಗಬಹುದು ಎಂದು ನಂತರ ಬ್ಯಾಂಟಿಂಗ್ ಮಾಡಲು ಹೊರಟೆವು. ಗ್ರಹಚಾರಕ್ಕೆ ಮೊದಲು ಬ್ಯಾಂಟಿಂಗ್ ಮಾಡಿದವರು ನಮಗೆ 2ನೇ ಆಟಕ್ಕೆ ಅವಕಾಶ ಕೊಡಲೇ ಇಲ್ಲ. ನಾವು ತಪ್ಪಿದ್ದೆಲ್ಲಿ ಎಂದರೆ ಆಗ ಅಂಪೈರ್ ಯಾರು ಎಂದು ಗೊತ್ತಾಗಲಿಲ್ಲ. ತಪ್ಪು ನಮ್ಮದೇ ಹೊರತು ಅವರದ್ದಲ್ಲ ಎನ್ನುವುದು ನಮಗೆ ನಂತರ ಖಾತ್ರಿಯಾಯಿತು. ನಮ್ಮವರ ಅಂಪೈರನ್ನೇ ಇಟ್ಟುಕೊಳ್ಳಬೇಕಾಗಿತ್ತು. ಹಾಗೆ ಮಾಡದೇ ತಪ್ಪು ಮಾಡಿದೆವು ಎಂದು ನಮಗನಿಸಿತು. ಅದೇನೇ ಆಗಿದ್ದರೂ, ಮಾನ್ಯ ಹೆಚ್.ಡಿ.ಕುಮಾರಸ್ವಾಮಿ ಅವರೊಟ್ಟಿಗೆ ರಾಜಕಾರಣ ಮಾಡುವುದು ಹೊಸತಲ್ಲ. ಆದರೆ ಈ ರಾಜ್ಯಪಾಲರ ಭಾಷಣದಲ್ಲಿ ಇರುವಂತಹ ವ್ಯವಸ್ಥೆಗಳನ್ನು ನೋಡಿದರೆ, 1ನೇ ವಿಷಯದಿಂದ 38ನೇ ವಿಷಯದವರೆಗೆ ಚರ್ಚೆ ಮಾಡಿದರೂ ಕೂಡ ಕಡೆಗೆ ಸಿಗುವುದು ಒಂದೇ ರೀತಿಯ ಉತ್ತರ. ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ಕಳೆದ ಸಲ ಮಾನ್ಯ ಸಿದ್ದರಾಮಯ್ಯನವರು ಮಾಡಿದ ಭಾಷಣವನ್ನೂ ಸಹ ನಾನು ನೋಡಿದ್ದೇನೆ. ಅದರ ಪ್ರತಿ ನನ್ನ ಹತ್ತಿರ ಇದೆ. ಕಡೆಗೆ ನಮಗೆ ಅರ್ಥವಾದುದು ಎಂದರೆ, ಸಾಮಾನ್ಯವಾಗಿ ಧೂಳು ಹಿಡಿದ ಸರ್ಕಾರಿ ಕಚೇರಿಗಳಲ್ಲಿ ಇರಬಹುದಾದಂತಹ ಪಾಲನಾ ವರದಿಗೆ ಸತ್ವವೂ ಇರುವುದಿಲ್ಲ, ಶಕ್ತಿಯೂ ಇರುವುದಿಲ್ಲ. ಏನಾದರೂ ಒಂದು ಮುನ್ನೋಟ ಇರಬೇಕು, ಒಂದು ಕನಸು ಇರಬೇಕು, ಯಾವುದಾದರೂ ಒಂದು ವಿಚಾರ ಇರಬೇಕು, ಅರ್ಥಗರ್ಭಿತವಾದ ನುಡಿ ಇರಬೇಕು ಎಂದು ನಾವು ಯೋಚನೆ ಮಾಡುತ್ತಿದ್ದೆವು. ರಾಜ್ಯಪಾಲರು ಭಾಷಣ ಮಾಡಿದರೂ ಕೂಡ, ಸಚಿವ ಸಂಪುಟದ ವಿಚಾರಗಳನ್ನು ಅವರು ಉಲ್ಲೇಖ ಮಾಡುತ್ತಾರೆ. ಸತ್ವ, ಶಕ್ತಿ ಯಾವುದೂ ಇಲ್ಲದೇ ಇರುವಂತಹ, ಧೂಳು ಹಿಡಿದಿರುವ ಸರ್ಕಾರಿ ಕಚೇರಿಯ ಪಾಲನಾ ವರದಿಯಂತಿದೆ. ಇಷ್ಟೊಂದು ರಾಜಕಾರಣದ ಅನುಭವ ಇರುವವರು ಇಂತಹ ಪರಿಸ್ಥಿತಿಗೆ ಏಕೆ ಬಂದರು? ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿ ಒಳ್ಳೆಯ ಆಡಳಿತ ಕೊಡಬೇಕು ಎಂದು ರಾಜ್ಯದ ಜನ ನಿರೀಕ್ಷೆ ಮಾಡುತ್ತಾರೆ. ನಿಮ್ಮ ಸರ್ಕಾರ ಶಾಶ್ವತವಾಗಿರಬೇಕು, ಭದ್ರವಾಗಿರಬೇಕು ಎಂದು ನೀವು ಬಯಸುವುದು ಸಹಜ. ಆದರೆ ನಾವು ವಿರೋಧ ಪಕ್ಷದವರು. ಸರ್ಕಾರದ ಲೋಪದೋಷಗಳನ್ನು ಹೇಳಬೇಕು, ಸಮಸ್ಯೆಗಳನ್ನು ತಿಕ್ಕಬೇಕು-ತೀಡಬೇಕು, ಸರ್ಕಾರದ ಕಾಲೆಳೆಯಬೇಕು, ಒಂದರ್ಥದಲ್ಲಿ ಸರ್ಕಾರವನ್ನು ಉರುಳಿಸಬೇಕು ಎಂದು ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷದವರು ಬಯಸಿದರೆ ಅದರಲ್ಲಿ ತಪ್ಪೇನಿದೆ? ಮಾನ್ಯ ಆರ್.ವಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೇಶಪಾಂಡೆಯವರೇ, ತಾವು ವಿರೋಧ ಪಕ್ಷದಲ್ಲಿದ್ದಾಗ ಈ ರೀತಿ ಮಾಡಿರಲಿಲ್ಲವೇ? ವಿರೋಧ ಪಕ್ಷದವರು ಹೀಗೆ ಇರಬೇಕು ಎಂದು ತಾಕೀತು ಮಾಡುವುದನ್ನು ಯಾರೂ ಒಪ್ಪುವುದಿಲ್ಲ.

ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ಧರಾಮಯ್ಯನವರಷ್ಟು ಅನುಭವ, ಶಕ್ತಿ-ಸಾಮರ್ಥ್ಯ ದಿಟ್ಟತನ ಕಡಿಮೆ ಎಂದು ನಮಗನಿಸಿಲ್ಲ. ನೀವು ಮತ್ತು ಅವರು ಒಂದಾದಾಗ ಬಲಾಢ್ಯವಾಗಿರುವಂತಹ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮತ್ತು ರಾಜಕಾರಣದ ಶಕ್ತಿ ಇರುವಂತಹ ಮಾನ್ಯ ಸಿದ್ದರಾಮಯ್ಯನವರು ಒಟ್ಟಾದರೆ ಗಟ್ಟಿತನದ ಆಡಳಿತ ಕೊಡುತ್ತೀರಿ ಎಂದು ನಾವು ಯೋಚನೆ ಮಾಡಿದ್ದೆವು. ಆದರೆ ಅದೇನಾಯಿತು ಎಂದರೆ, ಒಬ್ಬರದು ಸಿಡಿಲು, ಒಬ್ಬರದು ಗುಡುಗು. ಮಾನ್ಯ ಸಿದ್ದರಾಮಯ್ಯನವರು ಧರ್ಮಸ್ಥಳದ ಪ್ರಕೃತಿ ಚಿಕಿತ್ಸಾಲಯಕ್ಕೆ ಹೋಗಿ ಅಲ್ಲಿ ಕಷಾಯ ಕುಡಿದರು ಆದರೆ ನಿಮಗೆ ಜ್ವರ ಬಂತು. ಅಂತಹ ಪರಿಸ್ಥಿತಿ ನಿರ್ಮಾಣವಾಯಿತು. ಹಾಗಾಗಲೇ ಬೇಕು ಎಂದು ನಾನು ಹೇಳುತ್ತಿಲ್ಲ. ಆದರೆ, ಇಂತಹ ಪರಿಸ್ಥಿತಿ ಬಂದರೆ ರಾಜ್ಯಕ್ಕೆ ಆಡಳಿತಾತ್ಮಕ ಸಮಸ್ಯೆ ಬರುತ್ತದೆ.

**ಶ್ರೀ ಐವನ್ ಡಿ'ಸೋಜಾ** :- ಮಾನ್ಯ ಸಭಾಪತಿಯವರೇ, ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ** :- ಮಾನ್ಯ ಸಭಾಪತಿಯವರೇ, ನಾನು ಮಾತನಾಡುವಾಗ ಮಾನ್ಯ ಐವನ್ ಡಿ'ಸೋಜಾರವರು ಮಧ್ಯದಲ್ಲಿ ನಿಂತು ಮಾತನಾಡದೇ ಇದ್ದರೆ ಅವರಿಗೆ ನಿದ್ದೆಯೇ ಬರುವುದಿಲ್ಲ. ಮಾನ್ಯ ಡಿಸೋಜಾರವರು ಮತ್ತೆ ಮುಖ್ಯ ಸಚೇತಕರಾಗುತ್ತಾರೆ ಎಂದು ಭಾವಿಸುತ್ತೇನೆ. ಅವರು ಬಹಳ ಒಳ್ಳೆಯ ಮನುಷ್ಯರು.

ಮಾನ್ಯ ಸಭಾಪತಿಯವರೇ, ಸರ್ಕಾರ ವ್ಯವಸ್ಥಿತವಾಗಿ ನಡೆಯಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಆ ರೀತಿ ನಡೆಯುವ ಪರಿಸ್ಥಿತಿಯಲ್ಲಿ ಇಲ್ಲ. ಉದಾಹರಣೆಗೆ, ಹೊಸ ಬಜೆಟ್ ಮಂಡನೆ ಮಾಡಬೇಕೋ ಬೇಡವೋ ಎಂದು ಬಂದಾಗ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮಂಡನೆ ಮಾಡುವುದು ನನ್ನ ಹಕ್ಕು ಎಂಬ ಮಾತುಗಳು ಬಂತು. ಅದನ್ನು ನಾನು ಒಪ್ಪುತ್ತೇವೆ. ಆದರೆ ಇನ್ನೊಂದು ಕಡೆ, ಪೂರಕ ಬಜೆಟ್ ಮಂಡಿಸಿ ಎಂಬ ಮಾತುಗಳು ಬಂತು. ಈಗ ನೀವು ಕೇವಲ ಎರಡು ಶಕ್ತಿಗಳಾಗಿ ಉಳಿದಿಲ್ಲ. ಮಧ್ಯೆ ಮಾನ್ಯ ಪರಮೇಶ್ವರ್‌ರವರದ್ದು ಇನ್ನೊಂದು ಶಕ್ತಿಯೂ ಇದೆ. ಅವರು, ಬಜೆಟ್ ಮಂಡನೆ ಮಾಡುವುದು ಹೊಸ ಸರ್ಕಾರದ ಕತ್ಯವ್ಯ ಎಂದು ಹೇಳುತ್ತಾರೆ. ಇದರಲ್ಲಿ ಯಾವುದು ಸರಿ, ಯಾವುದು ತಪ್ಪು ಎನ್ನುವ ಚರ್ಚೆ ಇಲ್ಲಿ ಮುಖ್ಯವಲ್ಲ. ಆದರೆ ಸರ್ಕಾರ ಸರಿಯಾದ ದಿಕ್ಕಿನಲ್ಲಿ ಹೋಗುತ್ತಿಲ್ಲ ಎನ್ನುವುದನ್ನು ರಾಜ್ಯದ ಜನರಿಗೆ ಗೊತ್ತಾಗುವ ಮಟ್ಟದಲ್ಲಿ ನಡೆದುಕೊಳ್ಳುತ್ತಿದ್ದೀರಿ ಎಂಬ ಮಾತುಗಳನ್ನು ನಿಮಗೆ ಈ ಸಂದರ್ಭದಲ್ಲಿ ಹೇಳಲೇಬೇಕಾಗುತ್ತದೆ. ಈ ಸರ್ಕಾರದ ಸ್ಥಿತಿಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗ್ಗೆ ಹೇಳುತ್ತೇನೆ. ಮಾನ್ಯ ಸಭಾಪತಿಯವರೇ, ಶಾಲೆಗಳಲ್ಲಿ ಯಾವ ವಿದ್ಯಾರ್ಥಿಗಳು ಹೆಚ್ಚು ಅಂಕಗಳನ್ನು ಪಡೆದುಕೊಂಡಿರುತ್ತಾರೋ ಅವರಿಗೆ ಚಿನ್ನದ ಪದಕ ಕೊಡುತ್ತಾರೆ. ಒಬ್ಬ ವಿದ್ಯಾರ್ಥಿಗೆ ೯೦ ಅಂಕಗಳಿದ್ದರೆ ಅವನಿಗೆ ಚಿನ್ನದ ಪದಕ ಕೊಡುತ್ತಾರೆ. ೬೦ ಅಂಕ ಪಡೆದಿರುವ ವಿದ್ಯಾರ್ಥಿಗೆ ಬೆಳ್ಳಿ ಪದಕ ಕೊಡುತ್ತಾರೆ. ೩೫ ಅಂಕಗಳನ್ನು ಪಡೆದುಕೊಂಡಿದ್ದರೆ ಅವನಿಗೆ ಕಂಚಿನ ಪದಕ ಕೊಡುತ್ತಾರೆ. ೯೦ ಅಂಕಗಳನ್ನು ಪಡೆದ ಹುಡುಗ ನನ್ನನ್ನು ಕರೆಯುತ್ತಾರೆ, ನನ್ನನ್ನು ಕರೆಯುತ್ತಾರೆ ಎಂದು ಯೋಚನೆ ಮಾಡುತ್ತಿರುತ್ತಾನೆ. ಆದರೆ ೬೫ ಅಂಕ ಮತ್ತು ೩೦ ಅಂಕ ಸಿಕ್ಕಿದ ಬುದ್ಧಿವಂತ ಹುಡುಗರು ಒಟ್ಟಾಗಿ ನಮ್ಮದು ಒಟ್ಟು ೯೫ ಅಂಕಗಳಿವೆ, ಚಿನ್ನದ ಪದಕ ನಮಗೆ ಕೊಡಿ ಎಂದು ಕೇಳುತ್ತಾರೆ. ಪ್ರಜಾತಂತ್ರ ವ್ಯವಸ್ಥೆಯನ್ನು ನಾವು ಒಪ್ಪಿಕೊಂಡಿದ್ದೇವೆ, ಮುಖ್ಯ ಮಂತ್ರಿಗಳಾಗಿದ್ದನ್ನು ಸಂಖ್ಯೆಗಳ ಆಧಾರದ ಮೇಲೆ ನಾವು ಒಪ್ಪಿಕೊಂಡಿದ್ದೇವೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡಃ–** ಮಾನ್ಯ ಸಭಾಪತಿಯವರೇ, ಮಾನ್ಯ ರಾಜ್ಯಪಾಲರು ಸರ್ಕಾರ ರಚನೆ ಮಾಡುವುದಕ್ಕೆ ಬಿಜೆಪಿಯವರಿಗೆ ಮೊದಲು ಅವಕಾಶ ಕೊಟ್ಟಿದ್ದರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ :–** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರಷ್ಟು ನಾವು ಸಮರ್ಥರಿಲ್ಲ. ಇನ್ನೂ ಎರಡು–ಮೂರು ಸೀಟು ಸರ್ಕಾರದಲ್ಲಿ ಉಳಿದುಕೊಂಡಿದೆ, ಅದು ಅವರಿಗೆ ಸಿಗಬಹುದು.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಅಧಿಕಾರಕ್ಕೆ ಬರುವ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಬಿಜೆಪಿಯವರು ಕೇವಲ ಮಿಂಚಿನ ತರಹ ಬಂದು ಹೋದರು ಅಷ್ಟೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ :–** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರಿಗೆ ಸ್ಪರ್ಧೆ ಎಂದಿದ್ದರೆ ಮಾನ್ಯ ಶರವಣರವರು ಮಾತ್ರ. ಅವರ ಬಗ್ಗೆ ಜಾಗೃತರಾಗಿರಲಿ. ಅವರ ಬಗ್ಗೆ ನಮ್ಮಲ್ಲಿ ಗೊಂದಲವಿಲ್ಲ.

**ಶ್ರೀ ಕೃಷ್ಣಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಹಾಗೂ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಪೂಜಾರಿಯವರು ನೀತಿ–ತತ್ವಗಳನ್ನು ತುಂಬಾ ಚೆನ್ನಾಗಿ ಹೇಳುತ್ತಾರೆ. ಉಡುಪಿಯಿಂದ ಗೋವಾ ಅಷ್ಟೊಂದು ದೂರ ಏನು ಇಲ್ಲ. ಗೋವಾದಲ್ಲಿ ಬಿಜೆಪಿಯವರು ಏನು ಮಾಡಿ ತೋರಿಸಿದಿರಿ ಎಂಬ ಬಗ್ಗೆ ವಿಚಾರ ಮಾಡಿ. ಮೇಘಾಲಯದಲ್ಲಿ ಏನು ಮಾಡಿದ್ದಾರೆ ಎನ್ನುವ ಬಗ್ಗೆ ವಿಚಾರ ಮಾಡಲಿ. ಹೇಳುವುದೊಂದು ಮಾಡುವುದು ಮತ್ತೊಂದು ಆಗಬಾರದು. ಅವರು ರಾಜಕೀಯಲ್ಲಿ ಹೆಚ್ಚು ಅನುಭವ ಹೊಂದಿದ್ದಾರೆ. ಹೌದು, ರಾಜಕೀಯವಾಗಿ ನಾವುಗಳು ಪರಸ್ಪರ ಹೋರಾಟ ಮಾಡಿರಬಹುದು. ಆದರೆ ಒಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೈದ್ಧಾಂತಿಕ ಹಂತದಲ್ಲಿ ನಮ್ಮಿಬ್ಬರದು ಸಹಮತ ಇದೆ. ಬೇರೆ ವಿಚಾರದಲ್ಲಿ ನಾವು ಒಬ್ಬರಿಗೊಬ್ಬರು ಹೋರಾಟ ಮಾಡಿದ್ದೇವೆ ನಿಜ. ಮೊನ್ನೆ ವಿಧಾನಸೌಧದ ಮುಂದೆ ರಾಷ್ಟ್ರ ಮಟ್ಟದ ನಾಯಕರು ಎಷ್ಟು ಜನ ಬಂದಿದ್ದರು ಎನ್ನುವುದನ್ನು ಅವರು ಜ್ಞಾಪಕ ಮಾಡಿಕೊಳ್ಳಲಿ. ಅಷ್ಟೊಂದು ಜನ ಏಕೆ ಒಂದಾಗಿ ಕೂಡಿದ್ದರೂ ಎನ್ನುವುದನ್ನು ಅರ್ಥ ಮಾಡಿಕೊಳ್ಳಲಿ. ದೇಶದಲ್ಲಿ ಏನು ಪರಿಸ್ಥಿತಿ ಆಗುತ್ತಿದೆ ಅವೆಲ್ಲವನ್ನೂ ಅವಲೋಕನ ಮಾಡಿ, ಅದರ ಹಿನ್ನೆಲೆಯಲ್ಲಿ ನಾವು ಕೂಡಿಕೊಂಡು ಒಂದು ಸರ್ಕಾರ ಮಾಡಿದ್ದೇವೆ. ನಮಗೆ ನೀತಿ ಹೇಳುವವರು, ಅವರ ಪಕ್ಷದವರಿಗೆ, ಗೋವಾದಲ್ಲಿ, ಮೇಘಾಲಯದಲ್ಲಿ, ಜಾರ್ಖಂಡ್‌ನಲ್ಲಿ ಯಾವರೀತಿ ಸರ್ಕಾರಗಳನ್ನು ಮಾಡಿದ್ದಾರೆ ಎನ್ನುವುದನ್ನು ತಿಳಿಸಲಿ. ಈ ಎಲ್ಲವನ್ನೂ ಸೇರಿಸಿ ಸಮಗ್ರವಾಗಿ ಮಾತನಾಡಿದರೆ ಪ್ರತಿಪಕ್ಷದ ನಾಯಕರು ಮೇಲೆ ನಮಗೆ ಇನ್ನೂ ಗೌರವ ಹೆಚ್ಚಾಗುತ್ತದೆ ಎಂಬುದನ್ನಷ್ಟೇ ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಮುಂದು . . .)

(079)4-7-2018 5.30 ಡಿಎಸ್-ಬಿಎನ್‌ಎಸ್

**ಶ್ರೀ ಕೃಷ್ಣ ಭೈರೇಗೌಡ(ಮುಂದು):-**

ನೀವು ನಮಗೆ ನೀತಿ ಹೇಳುವಂಥವರು ನಿಮ್ಮ ಪಕ್ಷದವರು ಗೋವಾ, ಮೇಘಾಲಯ, ಜಾರ್ಖಂಡ್‌ನಲ್ಲಿ ಅಲ್ಲೆಲ್ಲಾ ಯಾರ್‍ಯಾರಿಗೆ ಮಾಡಿದ್ದೀರಿ ಎಂದು ಜ್ಞಾಪಕ ಮಾಡಿಕೊಂಡು ಎಲ್ಲವನ್ನು ಸೇರಿಸಿ ಸಮಗ್ರವಾಗಿ ಮಾತನಾಡಿದರೆ ಪ್ರತಿಪಕ್ಷ ನಾಯಕರ ಮೇಲೆ ನಮಗೆ ಗೌರವ ಇನ್ನು ಹೆಚ್ಚಾಗುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಹೆಚ್ಚಾಗುತ್ತದೆ, ಕಡಿಮೆಯಾಗುತ್ತದೆ ಎಂದು ಅವರು ಹೇಳಲಿಲ್ಲ. ಅವರಿಗಿರುವಂತಹ ಮಾಹಿತಿಯ ಆಧಾರದ ಮೇಲೆ ಮಾತನಾಡಲಿ. ಮೇಘಾಲಯ, ಗೋವಾದಲ್ಲಿ ಡಿಮ್ಯಾಂಡ್ ಇಡಲಿಲ್ಲ. ಬೇಡ ಎನ್ನುವವರ ಹತ್ತಿರ ಯಾರು ತೆಗೆದುಕೊಳ್ಳುತ್ತಾರೆ. ಪ್ರಮಾಣ ವಚನ ಸ್ವೀಕಾರ ಮಾಡುವಾಗ ಲಕ್ಷಾಂತರ ಜನ ಬಂದಿದ್ದರು ಎಂದು ಅವರು ಹೇಳಿದರು. ಈಗಷ್ಟೇ ಮಾನ್ಯ ಇಬ್ರಾಹಿಂ ರವರು ಹೇಳಿದರು. ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಅಷ್ಟಕ್ಕೂ ಮೊದಲನೇ ಅವಕಾಶವನ್ನು ರಾಜ್ಯಪಾಲರು ಅವರಿಗೆ ಕೊಟ್ಟಿದ್ದಾರೆ. ಅವರಿಗೆ ಸುಧಾರಿಸುವುದಕ್ಕೆ ಆಗಲಿಲ್ಲ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಕಥೆ ಹೇಳುವುದರಲ್ಲಿ ಬಹಳ ನಿಸ್ಸೀಮರಿದ್ದಾರೆ. ಆ ನರಿ ಕಥೆಯನ್ನು ಸ್ವಲ್ಪ ಹೇಳಲಿ. ನರಿ ದ್ರಾಕ್ಷಿಯನ್ನು ಎಟುಕಿಸಿಕೊಳ್ಳಲು ಮೇಲಕ್ಕೆ ಹಾರಿ ಹಾರಿ, ಕೊನೆಗೆ ದ್ರಾಕ್ಷಿ ಸಿಗಲಿಲ್ಲವೆಂದಾಗ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ ದ್ರಾಕ್ಷಿಯೇ ಹುಳಿ ಎಂದು ಹೇಳಿತಂತೆ. ಆ ರೀತಿ ಆಗಿದೆ ಈಗ ಮಾನ್ಯ ವಿರೋಧ ಪಕ್ಷ ನಾಯಕರ ಸ್ಥಿತಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಹೇಳಿರುವುದು ವಿಮರ್ಶೆ. ಮಾನ್ಯ ಭೈರೇಗೌಡರು ಏಕೆ ಆ ರೀತಿ ತೆಗೆದುಕೊಳ್ಳುತ್ತಿದ್ದಾರೆಯೋ ಗೊತ್ತಿಲ್ಲ. ನಾನು ಹೇಳಿದ್ದು ಇಷ್ಟಾಗಿಯೂ ಕೂಡ ಪ್ರಜಾಪ್ರಭುತ್ವದಲ್ಲಿ ಅವರಿಗಿರುವ ಹಕ್ಕಿನ ಪ್ರಶ್ನೆ ಇಲ್ಲ. ಅದು ವಿಮರ್ಶೆಯಲ್ಲವೆ? ಆದ್ದರಿಂದ ನಾನು ಅವರಿಗೆ ಪ್ರಶ್ನೆ ಮಾಡುತ್ತಿಲ್ಲ. ನಾವು ಸರ್ಕಾರ take-off ಆಗಲಿಲ್ಲ ಎಂದು ಹೇಳಿದ್ದಕ್ಕೆ ಅವರು ಬಹಳ ವ್ಯಾಖ್ಯಾನ ಕೊಟ್ಟರು. ಸರ್ಕಾರ take-off ಆಗಿದೆ, ಸರ್ಕಾರ ಸರಿಯಿದೆ, ಸರ್ಕಾರಕ್ಕೆ ಒಂದೂವರೆ ತಿಂಗಳು ಸಂದಿದೆ. ವ್ಯವಸ್ಥಿತವಾಗಿ ಕೆಲಸ ಮಾಡುತ್ತೇವೆ ಎಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ಅವರಿಗೆ ನಾನು ಒಂದು ಮಾತನ್ನು ಕೇಳುತ್ತೇನೆ, ಒಂದೂವರೆ ತಿಂಗಳು ಆಗಿದೆ, ಉಡುಪಿ ಜಿಲ್ಲೆಗೆ ಉಸ್ತುವಾರಿ ಮಂತ್ರಿ ಇಲ್ಲ. ಉಸ್ತುವಾರಿ ಮಂತ್ರಿಯನ್ನು ಅವರಿಗೆ ನೇಮಕ ಮಾಡಿಕೊಳ್ಳುವುದಕ್ಕೆ ಆಗದಿದ್ದರೆ ಸರ್ಕಾರ ಸರಿಯಿದೆ, ಸರ್ಕಾರ take-off ಆಗಿದೆ ಎಂದು ಹೇಳುವುದರಲ್ಲಿ ಏನು ಅರ್ಥ ಇದೆ? ಅವರು ಸತ್ಯವನ್ನು ಹೇಳಬೇಕು. ಸರ್ಕಾರ ಸರಿಯಾಗಿ ಆಗಿಲ್ಲ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಮಳೆ ಬಂದಾಗ ಮಾನ್ಯ ಕಂದಾಯ ಸಚಿವರೇ ಉಡುಪಿ ಜಿಲ್ಲೆಗೆ ಭೇಟಿಯನ್ನು ಕೊಟ್ಟು ಮಳೆ ವಿಪತ್ತಿನಿಂದ ತೊಂದರೆಯಾಗಿರುವುದಕ್ಕೆ ಪರಿಹಾರ ಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ಕೆಲಸದಿಂದ ನಾವು ಹಿಂದೆ ಸರಿದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕಂದಾಯ ಮಂತ್ರಿಗಳು ಬರುತ್ತಾರೆ, ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಬರುತ್ತಾರೆ. ಬರಬಾರದು ಎಂದು ಹೇಳುತ್ತಿಲ್ಲ. ಒಂದು ಸರ್ಕಾರದ ವ್ಯವಸ್ಥೆಯ ಬಗ್ಗೆ ಮಾತನಾಡುತ್ತಿದ್ದೇನೆ. ಉಸ್ತುವಾರಿ ಮಂತ್ರಿಯನ್ನು ಒಂದು ಜಿಲ್ಲೆಗೆ ನೇಮಕ ಮಾಡದಿರುವುದನ್ನೇ ವ್ಯವಸ್ಥಿತವಾದ ಸರ್ಕಾರ ನಡೆಸುವಂತಹ ವ್ಯವಸ್ಥೆ ಎಂದು ಅವರು ಹೇಳುವುದಾದರೆ ನಾನು ಅದರ ಬಗ್ಗೆ ಪ್ರಶ್ನೆ ಮಾಡುವುದಿಲ್ಲ. ಅದಕ್ಕೆ ಅಡ್ಡಿಯಿಲ್ಲ. ಸರ್ಕಾರ ಈ ರೀತಿ ಮಾಡುವುದರಿಂದ ಆಡಳಿತಾತ್ಮಕ ವ್ಯವಸ್ಥೆಗಳು ಸರಿಯಾಗುತ್ತದೆ ಎಂದು ನಾನು ಹೇಳಿದೆ. ನಾವು ಮರಳು ನೀತಿ, ಕಾನೂನು ಸುವ್ಯವಸ್ಥೆ ಬಗ್ಗೆ ಮಾತನಾಡಿದೆವು. ನಮ್ಮ ಜಿಲ್ಲೆಗಳಲ್ಲಿ ಹೇರಳವಾದ ಮರಳು ಸಿಗುತ್ತದೆ. ಅದಕ್ಕೆ ಬೇಕಾದಂಥ ವ್ಯವಸ್ಥೆಗಳನ್ನು ರೂಪಿಸುವ ಬದಲು ಮಲೇಷಿಯಾದಿಂದ ಮರಳನ್ನು ತರುವುದಕ್ಕೆ ಹೊರಟಿದ್ದೀರಲ್ಲಾ ಇದು ಸರಿಯೇ? ಇದು ಎಂತಹ ವ್ಯವಸ್ಥೆ ಎಂದರೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಇದರ ಬಗ್ಗೆ ಮಾತನಾಡಬೇಕು. ಒಂದು ಹುಡುಗಿ ಓಡಿ ಬಂದು ನನ್ನ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗಂಡನನ್ನು ಹಿಡಿದುಕೊಂಡು ಹೋಗಿದ್ದಾರೆ ಎಂದು ಹೇಳುತ್ತಾಳೆ. ನಾನು ಜಿಲ್ಲಾಧಿಕಾರಿಗಳಿಗೆ ದೂರವಾಣಿ ಮಾಡಿ ಹೇಳಿದೆ. ಬಡವರು ಮನೆ ಕಟ್ಟಲಿಕ್ಕೆ ಮರಳು ಬಳಸಿದರೆ ಅವರಿಗೆ ತೊಂದರೆ ಕೊಡಬೇಡಿ ಎಂದು ಹೇಳಿದೆ. ಬಡವರು ಮನೆ ಕಟ್ಟಲಿಕ್ಕೆ ಮರಳು ತೆಗೆದರೆ ಅವರಿಗೆ ಯಾವ ಅಧಿಕಾರಿಯೂ ತೊಂದರೆ ಕೊಡತಕ್ಕದ್ದಲ್ಲ. ಹಾಗೊಂದು ವೇಳೆ ತೊಂದರೆ ಇದ್ದರೆ ನನಗೆ ಹೇಳಿ. ನಾನು ಮುಖ್ಯಮಂತ್ರಿಯಾಗಿ ಅಧಿಕಾರಿಗಳ ಮೇಲೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಇದೇ ಸದನದಲ್ಲಿ ನಿಂತು ಹೇಳಿದರು. ಕೂಲಿ ಮಾಡುವಂಥ ಒಬ್ಬ ಹುಡುಗನನ್ನು ಗಣಿ ಇಲಾಖೆಯವರು ಮತ್ತು ಪೊಲೀಸರು ಹಿಡಿದು ಜೈಲಿಗೆ ಹಾಕುತ್ತಾರೆ. ಆ ಹುಡುಗನನ್ನು ಅರೆಸ್ಟ್ ಮಾಡಿದ ಕೂಡಲೇ ನಾನು ಜಿಲ್ಲಾಧಿಕಾರಿಗಳಿಗೆ ದೂರವಾಣಿಯನ್ನು ಮಾಡಿ ಅವನು ಕೂಲಿ ಮಾಡುವವನು, ಅವನನ್ನು ಬಿಟ್ಟುಬಿಡಿ, ಅವನ ಬಳಿ ವಾಹನ ಇದ್ದರೆ ಅದನ್ನು seize ಮಾಡಬೇಡಿ ಎಂದು ಹೇಳಿದರೆ, ಯಾವ ಕೇಸ್ ಬೇಕಾದರೂ ಹಾಕುತ್ತೇವೆಂದು ಹೇಳಿದರೆ, ಕಡೆಗೂ ಬಿಡದೇ ಕೂಲಿ ಮಾಡುವವನನ್ನು ಉಡುಪಿಯಲ್ಲಿ ಜೈಲು ರಿಪೇರಿಯಾಗುತ್ತದೆಂದು ಕಾರವಾರ ಜೈಲಿಗೆ ಹಾಕಿಬಿಟ್ಟರು. ಇದನ್ನು ತನಿಖೆ ಮಾಡಿ ನಿಮಗೆ ಅರ್ಥವಾಗುತ್ತದೆ. ಸರ್ಕಾರದ ಕರ್ತವ್ಯ ಏನೆಂದರೆ, ಇಂತಹ ವಿಚಾರಗಳು ಬಂದಾಗ ಕಾನೂನು, ಕಾಯ್ದೆ, ನಿಯಮ, ವ್ಯವಸ್ಥೆಗಳ ನಡುವೆಯೂ ಕೂಡ ಸಮರ್ಪಕ ಮಾಡುವುದು ನಿಮ್ಮ ಜವಾಬ್ದಾರಿ ತಾನೆ. ಕಾನೂನು ಸುವ್ಯವಸ್ಥೆ ಎಲ್ಲವೂ ಸರಿ ಇದೆಯೇ ಎಂದರೆ, ಸರಿ ಇದೆ, ನಾನು ಇಲ್ಲವೆಂದು ಹೇಳುವುದಿಲ್ಲ. ತುಮಕೂರು ಜಿಲ್ಲೆಯಲ್ಲಿ ಒಬ್ಬ ನಿರುದ್ಯೋಗಿ ಹುಡುಗ ಒಂದು ಡಾಬಾವನ್ನು ಹಾಕಿಕೊಂಡಿದ್ದಾನೆ. ನಾಲ್ಕು ಜನರು ಬಂದು glass ಗಳನ್ನು ಹೊಡೆಯುತ್ತಾರೆ. ಆ ಹುಡುಗ ನನಗೆ ಪರಿಚಯವಿರುವುದರಿಂದ ಅವನು ನನಗೆ ದೂರವಾಣಿ ಮಾಡಿ ಹೇಳುತ್ತಾನೆ. ನಾನು ಈ ಬಗ್ಗೆ Sub-Inspector of Police ರವರಿಗೆ ದೂರವಾಣಿ ಮಾಡಿದಾಗ ಅವರು ಬೇರೆ ಕಾರ್ಯಕ್ರಮದಲ್ಲಿದ್ದುದ್ದರಿಂದ ನನಗೆ ಸಿಗುವುದಿಲ್ಲ. ಎರಡು ದಿನಗಳ ನಂತರ ಅವರೇ ನನಗೆ ದೂರವಾಣಿಯನ್ನು ಮಾಡಿ ಏನೆಂದು ಕೇಳುತ್ತಾರೆ. ಆ ಡಾಬಾದ glass ಹೊಡೆದದ್ದು ಏಕೆಂದರೆ ದಿವಸಕ್ಕೆ ಒಂದು ಸಾವಿರದಂತೆ ತಿಂಗಳಿಗೆ ಮೂವತ್ತು ಸಾವಿರ ರೂಪಾಯಿ ಹಫ್ತಾ ಕೊಡಬೇಕೆಂದು ಹೇಳುತ್ತಾರಂತೆ. ಇದೊಂದೇ ಪ್ರಕರಣಕ್ಕೋಸ್ಕರ ಈ ಸರ್ಕಾರದ ಕಾನೂನು ಸುವ್ಯವಸ್ಥೆ ಹಾಳಾಗಿದೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಬೀದಿ ಬೀದಿಯಲ್ಲಿ ಈ ರೀತಿ ನಡೆಯುತ್ತಲೇ ಇರುತ್ತದೆ.

**ಶ್ರೀ ಭೋಜೇಗೌಡ**:- ಮಾನ್ಯ ಸಭಾಪತಿಯವರೇ, ಮರಳು ದಂಧೆ ಪ್ರಾರಂಭವಾಗಿ ಅದೊಂದು ದೊಡ್ಡ ವಿಚಾರವೆಂದು ಈ ರಾಜ್ಯಕ್ಕೆ ತೋರಿಸಿಕೊಟ್ಟವರೆ ಇವರು. ಈ ವಿಷಯ ಅವರಿಗೆ ನೆನಪು ಇರಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ನೀವು ಅವರಿಗೆ ಮಾತನಾಡಲು ಅನುಮತಿಯನ್ನು ಕೊಟ್ಟಿದ್ದೀರಾ?

**ಸಭಾಪತಿಯವರು**:- ಅವರು ಕೇಳುವುದೇ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ನೀವು ಅವರಿಗೆ ಅನುಮತಿ ಕೊಟ್ಟರೆ ಅಡ್ಡಿ ಇಲ್ಲ. ನೀವು ಅವರಿಗೆ ಅನುಮತಿ ಕೊಟ್ಟರೆ ಅದು ಕಡತಕ್ಕೆ ಹೋಗಲಿ.

(ಗೊಂದಲ)

**ಡಾ॥ ತೇಜಸ್ವಿನಿ ಗೌಡ**:- ಮಾನ್ಯ ಸಭಾಪತಿಯವರೆ, ನಾವು ನಿಮ್ಮ ಮಾತನ್ನು ಗೌರವಿಸುತ್ತಿದ್ದೇವೆ. ನಮಗೆ ಮಾತನಾಡಲು ಅನುಮತಿ ಸಿಕ್ಕಿಲ್ಲ. ಸದಸ್ಯರು ಈ ರೀತಿ ಅಡ್ಡಿಪಡಿಸುವುದು ಸರಿಯಲ್ಲ.

**ಶ್ರೀ ಭೋಜೇಗೌಡ**:- ಮಾನ್ಯ ಸಭಾಪತಿಯವರೆ, ನಮಗೂ ಗೊತ್ತಿದೆ.

**ಸಭಾಪತಿಯವರು**:- ನಾನು ಪದೇ ಪದೇ ಹೇಳುತ್ತೇನೆ.

**ಶ್ರೀ ಕೆ.ಬಿ.ಶಾಣಪ್ಪ**:- ಮಾನ್ಯ ಸಭಾಪತಿಯವರೆ, ನಾವು ಸರ್ಕಾರವನ್ನು ವಹಿಸಿಕೊಂಡು ಆರು ವರ್ಷಗಳಾಗಿವೆ. ಇದು ಯಾವಾಗಿನದು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ನೀವು ಅವರಿಗೆ ಮಾತನಾಡಲು ಅನುಮತಿಯನ್ನು ಕೊಟಿದ್ದರೆ ಅವರು ಮಾತನಾಡಲಿ.

**ಶ್ರೀ ಎಸ್.ಆರ್.ಪಾಟೀಲ್**:- ಅವರಿಗೆ ಅನುಮತಿ ಇಲ್ಲ. ಆದರೆ ಇವರೆಲ್ಲರೂ ಒಟ್ಟಿಗೆ ಎದ್ದು ನಿಲ್ಲುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಎಲ್ಲರಿಗೂ ಒಂದೇ ಮಾನದಂಡ. ನಾನು ಪೀಠಕ್ಕೆ ಹೇಳಿದೆ. ಎಸ್.ಆರ್.ಪಾಟೀಲರೆ, ನೀವು ಆ ಕಡೆ ನೋಡುವುದು ಬೇಡ. ಪೀಠ ಯಾರಿಗಾದರೂ ಸಿಗಲಿ ನಮ್ಮದೇನೂ ಆಕ್ಷೇಪಣೆ ಇಲ್ಲ. ಈಗ ನಾನು ಪೀಠಕ್ಕೆ ಹೇಳಿದೆ.

**ಸಭಾಪತಿಯವರು**:- ಈ ಸದನದಲ್ಲಿ ಮಾತನಾಡಲು ಅನುಮತಿಯನ್ನು ಕೊಟ್ಟಾಗ ಮಾತನಾಡಿ ಎಂದು ನಾನು ಪದೇ ಪದೇ ಹೇಳುತ್ತೇನೆ. ಎಲ್ಲರೂ ಮಾತನಾಡಿದರೆ ಈ ಸದನವನ್ನು ಹೇಗೆ ನಡೆಸಬೇಕು? ತಾವು ಅರ್ಥ ಮಾಡಿಕೊಳ್ಳಬೇಕು. ಎಲ್ಲರೂ ಅನುಮತಿ ಪಡೆದು ಮಾತನಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಾವು ಹುಬ್ಬಳ್ಳಿ ಭಾಗದವರು. ಒಂದಷ್ಟು ಜನ ರೌಡಿಗಳು ಹೋಟೆಲ್‌ಗಳಿಗೆ ಹೋಗಿ ಹುಬ್ಬಳ್ಳಿಯಲ್ಲಿಯೂ ಕೂಡ ತಿಂಗಳಿಗೆ ಒಂದು ಸಾವಿರ, ಎರಡು ಸಾವಿರ ಕೊಡಬೇಕೆಂದು ದಂಧೆಯನ್ನು ಮಾಡಿ, ಹುಬ್ಬಳ್ಳಿಯಲ್ಲಿರುವ ಎಲ್ಲಾ ಹೋಟೆಲ್‌ನವರು Sub-Inspector of Police ಕಛೇರಿ ಎದುರು ಧರಣಿಯನ್ನು ಕುಳಿತುಕೊಳ್ಳುತ್ತಾರೆ. ತುಮಕೂರು ಜಿಲ್ಲೆಯ ದೇವನಹಳ್ಳಿಯ ಭಾಗದಲ್ಲಿ ಮರುಳುಗಾರಿಕೆಗೆ ಸಂಬಂಧಪಟ್ಟಂತೆ ಒಬ್ಬ ಪೋಲೀಸ್ ಅಧಿಕಾರಿ ಮರಳು ಹೋಗುವಂಥ ಲಾರಿಯನ್ನು ತಡೆದ ಎನ್ನುವ ಒಂದೇ ಕಾರಣಕ್ಕಾಗಿ ಅವನನ್ನು ಅಮಾನತ್ತು ಮಾಡಿರುತ್ತಾರೆ. ಈ ಎಲ್ಲಾ ಘಟನೆಗಳು ಸರ್ಕಾರದ ವಿಫಲತೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಸರ್ಕಾರ ಇದರಲ್ಲಿ ಸಫಲವಾಗಬೇಕಲ್ಲಾ. ಜಿಲ್ಲಾ ಉಸ್ತುವಾರಿ ಸಚಿವರನ್ನು ನೇಮಕ ಮಾಡದೇ ಹೋದರೆ ಸರ್ಕಾರ ಆಡಳಿತ ವ್ಯವಸ್ಥೆಯಲ್ಲಿ ಚುರುಕು ತರುವಂಥ ಪರಿಸ್ಥಿತಿ ಹೇಗೆ ಉಂಟಾಗುತ್ತದೆ? ನಾವು ವಿರೋಧ ಪಕ್ಷದವರು ರಾಜ್ಯದ ಹಿತದೃಷ್ಟಿಯಿಂದ ಹೇಳಬೇಕು. ಒಂದು ಕಡೆ ಸಿದ್ಧರಾಮಣ್ಣ ಮತ್ತು ಕುಮಾರಸ್ವಾಮಿಯವರು ಜಂಟಿ ಸರ್ಕಾರವನ್ನು ಮಾಡುವಾಗ ಒಟ್ಟಾಗಿ ಕುಳಿತು ಮಾತನಾಡುವ ಪರಿಸ್ಥಿತಿಯೂ ನಿರ್ಮಾಣವಾಗದೇ ಹೋದರೆ, ನನಗೆ ಗೊತ್ತಿಲ್ಲ, ನೇರವಾಗಿ ಮುಖ ನೋಡುವುದನ್ನು ನಿಲ್ಲಿಸಿ ಕೆಲವು ಸಮಯವಾಯಿತು ಎಂದು ಪತ್ರಿಕೆಗಳು ಹೇಳುತ್ತಿವೆ. ಅವು ಪೂರ್ತಿ ತಪ್ಪು ಹೇಳಲಿಕ್ಕಿಲ್ಲವೆಂದು ನನಗೆ ಅನ್ನಿಸುತ್ತದೆ. ವ್ಯವಸ್ಥೆಗಳನ್ನು ಸರಿಪಡಿಸುವಂಥ ಪರಿಸ್ಥಿತಿಗೆ ವಿರೋಧ ಪಕ್ಷವಾಗಿ ನಾವು ಒತ್ತಡ ಹಾಕುವಾಗಲೇ.... ಅದಕ್ಕೋಸ್ಕರ ಯಡಿಯೂರಪ್ಪನವರು ಹೇಳಿದ್ದು, "ಹೆಳವನ ಹೆಗಲ ಮೇಲೆ ಕುರುಡ ಕುಳಿತು ಮಾರ್ಗ ತೋರುತಿಹನು". ಇದು ನಿಮಗೆ ನೆನಪಿದೆಯೇ? ಯಡಿಯೂರಪ್ಪನವರು ವಿಧಾನ ಸಭೆಯಲ್ಲಿ ಹೇಳಿದ್ದು ಇದೇ ಮಾತನ್ನು. ಹೆಳವನ ಹೆಗಲ ಮೇಲೆ ಕುರುಡ ಕುಳಿತು ಮಾರ್ಗ ತೋರುತಿಹನು. ಅಂದರೆ ಹೆಳವನಿಗೆ ಕಾಲಿಲ್ಲ, ಕುರುಡನಿಗೆ ಕಣ್ಣಿಲ್ಲ, ಮಾರ್ಗ ಸವೆಯುವ ಪರಿಯಂತೂ ಶಿವ ಶಿವ, ಎಂದು ಯಡಿಯೂರಪ್ಪನವರು ಹೇಳಿದರಲ್ಲಾ, ಈ ಕಾಂಗ್ರೆಸ್ ಮತ್ತು ಜೆ.ಡಿ.(ಎಸ್) ಸಮ್ಮಿಶ್ರ ಸರ್ಕಾರವಿದೆಯಲ್ಲಾ ಒಬ್ಬರಿಗೆ ಒಂದೊಂದು ದಿಕ್ಕು ಏನೆಂದು ಗೊತ್ತಿಲ್ಲದೇ ಇರುವ ಪರಿಸ್ಥಿತಿಯಲ್ಲಿ ನೀವು ಸರ್ಕಾರದ ಗುರಿಯನ್ನು ಹೇಗೆ ಮುಟ್ಟುತ್ತೀರಿ? ಈ ಕಾರಣಕ್ಕಾಗಿ ನಾವು ಹೇಳಬೇಕಾಯಿತು. ನಾನು ವಿನಂತಿ ಮಾಡುತ್ತೇನೆ. ಸಾಲ ಮನ್ನಾ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳುವುದಕ್ಕೂ ಮೊದಲು ಎಲ್ಲರೂ ಹೇಳುತ್ತಾರೆ. ಅದರ ಬಗ್ಗೆ ಸುಳಿವು ಸಿಕ್ಕಿರಬಹುದು, ಅದರಲ್ಲಿ ತಪ್ಪೇನೂ ಇಲ್ಲ. ಈ ಸಾಲ ಮನ್ನಾ ವಿಚಾರ ನಾಳೆಯ ದಿವಸ ಏನಾದರೂ ಬಜೆಟ್‌ನಲ್ಲಿ ಪ್ರಕಟವಾದರೆ, ಅದರ ನೇರ ಗೌರವ ಸಿಗಬೇಕಾದುದು ಬಿಜೆಪಿ ಗೆ ಮತ್ತು ಯಡಿಯೂರಪ್ಪನವರಿಗೆ ಎಂದು ಅನ್ನಿಸಿಬಿಡುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಎ.ಶರವಣ:–** ಈಗಲೇ ಗಿಟ್ಟಿಸಿಕೊಂಡು ಬಿಡಿ, ನಿಮಗೆ ನಾಚಿಕೆಯಾಗಬೇಕು. Shame shame.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಇವರು ಸಾಲ ಮನ್ನಾ ಮಾಡಿ ಎಂದರೆ printing machine ಇಟ್ಟಿದ್ದೇವೆಯೇ ಎಂದು ಕೇಳುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ತಮ್ಮ ಪೀಠದಿಂದ ಎದ್ದು ನಿಂತರು)**

**ಸಭಾಪತಿಯವರು:–** ನಿಮಗೇನು ತಿಳಿಯುತ್ತದೆಯೋ ಇಲ್ಲವೋ? ಸಭಾಪತಿ ಎದ್ದು ನಿಂತಾಗಲೂ ನೀವು ಭಾಷಣ ಮಾಡುತ್ತೀರಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಹೇಳಿದ್ದು ಏನೆಂದರೆ, ಮುಖ್ಯಮಂತ್ರಿಗಳಾಗಿ ಅವರನ್ನು ನಾವು ಪೂರ್ಣ ಪ್ರಮಾಣದಲ್ಲಿ ಗೌರವಿಸುತ್ತೇವೆ. ಅವರ ದಿಟ್ಟತನ, ಅವರ ಆಡಳಿತ ಶೈಲಿ ಬಗ್ಗೆ ನನಗಿನ್ನೂ ನಂಬಿಕೆ ಇದೆ ಎಂದು ನಾನು ಹೇಳಿದೆ. ಉತ್ತರವನ್ನು ಕೊಡುವವರು ಮುಖ್ಯಮಂತ್ರಿಗಳು. ನೀವು ಹೇಳಿದ್ದೆಲ್ಲಾ ತಪ್ಪಿದೆ, ನಿಮಗೆ ಇದರ ಬಗ್ಗೆ ಗೌರವ ಸಲ್ಲಲಿಕ್ಕಿಲ್ಲ. ಗೌರವ ಏನಿದ್ದರೂ ನಮಗೆ ಸಲ್ಲಬೇಕು ಎಂದು ಹೇಳುವಂಥ ಅವಕಾಶಗಳಿದೆಯಲ್ಲಾ, ನೀವು ಸುಮ್ಮನೆ ಏಕೆ ಗಂಟಲು ಶೋಷಣೆ ಮಾಡಿಕೊಳ್ಳುತ್ತೀರಿ?

(ಮುಂದು)

080/04-07-2018/5-40/bkp-bns

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನೀವು ಸುಮ್ಮನೆ ಏಕೆ ಗಂಟಲು ಶೋಷಣೆ ಮಾಡಿಕೊಳ್ಳುತ್ತೀರಿ ಎಂದು ತಾವು ಕೇಳಬೇಕು.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವು ರೈತರ ಸಾಲವನ್ನು ಮನ್ನಾ ಮಾಡಿ ಎಂದು ಕೇಳಿದಾಗ ಶ್ರೀಯುತ ಯಡಿಯೂರಪ್ಪನವರು ನಮ್ಮ ಹತ್ತಿರ ನೋಟ್ ಪ್ರಿಂಟ್ ಮಾಡುವಂತಹ ಯಂತ್ರ ಇದೆಯೇ ಎಂದು ಅವರು ಹೇಳಿದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಶ್ರೀಯುತ ನಾರಾಯಣಸ್ವಾಮಿಯವರು ನನಗೆ ಸ್ನೇಹಿತರಿದ್ದಾರೆ.

**ಸಭಾಪತಿಯವರು:–** ನಿಮ್ಮ ಸ್ನೇಹ ಹೊರಗಡೆ ಇರಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ,. "ನಾನು ಜಗಳ ಮಾಡಿದರೂ ಸಹ ನೀವು ಬೇಜಾರು ಮಾಡಿಕೊಳ್ಳಬೇಡಿ" ಎಂದವರು ಆಗಾಗ ನನಗೆ ಹೇಳುತ್ತಿರುತ್ತಾರೆ. ಅದಕ್ಕೋಸ್ಕರ ಅದನ್ನು ನಾನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ.

ಮಾನ್ಯ ಸಭಾಪತಿಯವರೇ, "ಜನತಾ ದಳದ ಪ್ರಣಾಳಿಕೆ ಜನತೆಯ ಆಳ್ವಿಕೆ" ಎನ್ನುವುದನ್ನು ನಾನು ಒಪ್ಪಿಕೊಂಡಿದ್ದೇನೆ. ಈಗ ಜನತಾ ದಳದ ಪ್ರಣಾಳಿಕೆ ಜನರದ್ದೇ ಆಳ್ವಿಕೆ, ಕಾಂಗ್ರೆಸ್‌ನ ಪ್ರಣಾಳಿಕೆ "ಜನ ಪರವಾದ ನಿಲುವು" ಎಂದು ಎರಡು ಸಹ ಇದೆ. ನನಗೆ ಆಸೆ ಇರುವುದು ಏನೆಂದರೆ, ಮುಖ್ಯಮಂತ್ರಿಗಳಾಗಿ ತಮ್ಮ ಅನುಭವ, ನಿಮಗೆ ಇರುವ ತಾಕತ್ತು, ನಿಮ್ಮ ಶ್ರದ್ಧೆ, ನೀವು ಹೇಳಿದಂತಹ ನೇರವಾದ ನುಡಿ, ಇವುಗಳನ್ನೆಲ್ಲಾ ಗಮನದಲ್ಲಿಟ್ಟು, ಇವುಗಳನ್ನು ನೀವು ಅನುಷ್ಠಾನ ಮಾಡುತ್ತೀರೋ ಅಥವಾ 5 ವರ್ಷಗಳ ರಾಜಕಾರಣದ ಅನುಭವದ ವ್ಯವಸ್ಥೆಯಲ್ಲಿ ಕಾಂಗ್ರೆಸ್‌ನವರು ಮಾಡಿಕೊಟ್ಟಿರುವ ಈ ಪ್ರಣಾಳಿಕೆಯನ್ನು ಅನುಷ್ಠಾನ ಮಾಡುತ್ತೀರೋ ಅಥವಾ ಎರಡನ್ನೂ ಮಾಡುತ್ತೀರೋ . .

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಎರಡನ್ನೂ ಮಾಡುತ್ತೇವೆ.

**SRI IVAN D'SOUZA (NOMINATED MEMBER)**:- Common Minimum Programme ಮೂಲಕ ಎರಡನ್ನೂ ಸೇರಿಸಿ ಮಾಡುತ್ತೇವೆ.

(ಗೊಂದಲ)

**ಡಾ|| ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದಕ್ಕೆ ಎಲ್ಲರೂ ಉತ್ತರ ಕೊಡಬೇಕಾಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ಅವರು ಉತ್ತರ ಕೊಡಬೇಕು.

**ಸಭಾಪತಿಯವರು:–** ತಾವು ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದೆಲ್ಲವೂ ಸದನದಲ್ಲಿ ಇರುವಂತಹ ವಿಷಯವೇ ಆಗಿದೆ. ಯಾರಾದರೂ ಮಾತನಾಡುವಾಗ ಅದನ್ನು ಬ್ರೇಕ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವಂತಹದ್ದು ಇದ್ದೇ ಇರುತ್ತದೆ. ಸುಮ್ಮನೆ ಏತಕ್ಕೆ ಗಡಿಬಿಡಿ ಮಾಡಿಕೊಳ್ಳುತ್ತೀರಿ. ನಾನು ನಿಮ್ಮ ವಿರುದ್ಧ ಇಲ್ಲ.

(ಗೊಂದಲ)

ಎರಡನ್ನು ಮಾಡುತ್ತೇವೆಂದು ಶ್ರೀಯುತ ರೇವಣ್ಣನವರು ಹೇಳಿದರು. ಆ ಎರಡು ಪ್ರಣಾಳಿಕೆಯಲ್ಲಿ ಇರುವುದನ್ನು ಮಾಡುವಾಗ 79-80 ಜನ ಶಾಸಕರು ಇರುವಂತಹ ಕಾಂಗ್ರೆಸ್ ಪಕ್ಷದ್ದನ್ನು ಎಷ್ಟು ಮಾಡುತ್ತೀರಿ, 37 ಜನ ಶಾಸಕರಿರುವ ಜನತಾ ದಳ ಪಕ್ಷದ್ದನ್ನು ಎಷ್ಟು ಮಾಡುತ್ತೀರಿ, 75-25 ರಷ್ಟು ಮಾಡುತ್ತೀರಾ ಅಥವಾ 50-50 ರಷ್ಟನ್ನು ಮಾಡುತ್ತೀರೋ ಎನ್ನುವುದು ಇರಬೇಕು. ಈ ವಿಚಾರವನ್ನು ನಾನು ಚರ್ಚೆಗೋಸ್ಕರ ಕೇಳಿದೆ ಅಷ್ಟೆ. ರಾಜ್ಯದ ಜನತೆಗೆ ಇದರ ಬಗ್ಗೆ ಮಾಹಿತಿ ಬೇಕಲ್ಲವೇ?

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಆ ಕಡೆ ಇರುವಂತಹವರು ಸಹಕಾರ ಕೊಡದೇ ಇದ್ದರೆ ಆ ಕಡೆಯಲ್ಲಿ ಸಭಾ ನಾಯಕರು ಮಾತನಾಡುವಂತಹ ಸಂದರ್ಭದಲ್ಲಿ ನಾವು ಸಹಕಾರ ಕೊಡಬೇಕೋ ಬೇಡವೋ ಎನ್ನುವ ಪ್ರಶ್ನೆ ನನ್ನದಾಗಿದೆ. ಅವರು ಪ್ರಶ್ನೆಗಳಿಗೆಲ್ಲಾ ಉತ್ತರ ಕೊಡುವಲ್ಲಿ ಸಮರ್ಥರಾದ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಕುಳಿತಿದ್ದಾರೆ. ಹೀಗಿರುವಾಗ ಬಾಕಿ ಇರುವವರೆಲ್ಲಾ ಈ ರೀತಿಯಲ್ಲಿ ಏತಕ್ಕೆ ಹಾರಾಡುತ್ತಿದ್ದಾರೆ? ಇನ್ನು ಮುಂದೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ನಾವು ಸಹ ಇದೇ ರೀತಿಯಲ್ಲಿ ವರ್ತಿಸಬೇಕೇ?

**ಶ್ರೀ ಎಂ.ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿನ್ನೆ ಅವರು ಮಾತನಾಡಲಿಲ್ಲವೇ?

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾನು ನಿನ್ನೆ ಮಾತನಾಡಿದ್ದು, ಸದಸ್ಯರಾದ ಶ್ರೀಯುತ ನಾರಾಯಣಸ್ವಾಮಿಯವರು ಮಾತನಾಡಿದ್ದಕ್ಕೆ ಮಾತನಾಡಿದ್ದೇನೆ ಹೊರತು, ಸಭಾ ನಾಯಕರಿಗೆ, ಮುಖ್ಯಮಂತ್ರಿಗಳಿಗಲ್ಲ. ಸ್ಥಾನಗಳ ಬೆಲೆ ಗೊತ್ತಿಲ್ಲದೆ ಮಾತನಾಡಬೇಡಿ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದನ್ನು ಅವರು ನಮಗೆ ಹೇಳಿಕೊಡಬೇಕಾಗಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಆಯನೂರು ಮಂಜುನಾಥ್:-** ಹಾಗಿದ್ದಲ್ಲಿ, ನಿಮ್ಮ ನಾಯಕರು ಮಾತನಾಡುವಾಗ ನೋಡೋಣ.

(ಗೊಂದಲ)

**ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು):-** ಸನ್ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ. ಮುಖ್ಯಮಂತ್ರಿಗಳು ಎದ್ದು ನಿಂತು ಮಾತನಾಡುವಾಗ ಕನಿಷ್ಠ ಸೌಜನ್ಯಕ್ಕಾದರೂ ಕುಳಿತುಕೊಳ್ಳಿ. ಈ ಬಗ್ಗೆ ತಮಗೆ ಎಷ್ಟು ಬಾರಿ ಹೇಳಬೇಕು?

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ನಮ್ಮ ಮಿತ್ರರು ಹೇಳಿದ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಮನವಿ ಮಾಡುವುದೇನೆಂದರೆ ನನ್ನನ್ನು ನಂಬಿ ತಾವು ಈ ಸ್ಥಾನವನ್ನು ಕೊಟ್ಟಿದ್ದೀರಿ. ಅವರು ಏನು ಬೇಕಾದರೂ ಚರ್ಚೆ ಮಾಡಲಿ. ಅವರು ಎಷ್ಟು ತಿವಿದು, ತಿರುಚಿ ಮಾತನಾಡಿದರೂ ಅದಕ್ಕೆಲ್ಲಾ ಉತ್ತರ ಕೊಡುವಂತಹ ನೈತಿಕತೆಯನ್ನು ನಾನು ಉಳಿಸಿಕೊಂಡಿದ್ದೇನೆ. 20-20 ಮತ್ತು 90 ಅಂಕಗಳು, 30 ಅಂಕಗಳು, 60 ಅಂಕಗಳು ಎಂದು ಅವರು ಏನು ಹೇಳಿದ್ದಾರೆ, ಎಲ್ಲದಕ್ಕೂ ವಿವರವಾಗಿಯೇ ಉತ್ತರವನ್ನು ಕೊಡಲಿಕ್ಕೆ ತಯಾರಾಗಿದ್ದೇನೆ. ನಮ್ಮ ಕಡೆಯವರು ಅವರಿಗೆ ಮಾತನಾಡಲಿಕ್ಕೆ ಎಷ್ಟು ಅವಕಾಶ ಬೇಕೋ ಅಷ್ಟು ಸಮಯ ಕೊಡಿ. ಎಲ್ಲರೂ ಸುಮ್ಮನಿದ್ದು ಬಿಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಎಲ್ಲರೂ ಒಳ್ಳೆಯವರಿದ್ದಾರೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರಿಂದ ಮಾತನಾಡಲಿಕ್ಕೆ ಸುಲಭವಾಯಿತು. ಅವರಿಗೆ ಧನ್ಯವಾದಗಳು.

**ಸಭಾಪತಿಯವರು:-** ತಾವು ಮತ್ತೆ ಬೆಂಕಿ ಹಚ್ಚಬೇಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಇಲ್ಲ, ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ವ್ಯಕ್ತಿಗತವಾಗಿ ನನ್ನ ಸ್ನೇಹಿತರಿದ್ದಾರೆ. ಏನೇ ಆಗಲಿ. ಜನತೆಯ ಪ್ರಣಾಳಿಕೆ, ಜನರದ್ದೇ ಆಳ್ವಿಕೆ-2018 ಎಂದು ಅದ್ಭುತವಾಗಿ ಮಾಡಿದ್ದೀರಿ. ತಾವು ಒಂದು ರಾಜಕೀಯ ಪಕ್ಷವಾಗಿ ಪ್ರಣಾಳಿಕೆ ಎಂದರೆ ಕಾಟಾಚಾರ ಎಂದು ಇದೆ. ಪ್ರಣಾಳಿಕೆಯನ್ನು ಓದಿದರೆ ಓಟು ಕೊಡುತ್ತಾರೆಯೇ ಅಂದರೆ ಇಲ್ಲದೇ ಇರಬಹುದು. ಪ್ರಣಾಳಿಕೆಯನ್ನು ಮಾಡಬೇಕಾದಂತಹ ರಾಜಕೀಯ ಪಕ್ಷವೊಂದು ಅತ್ಯಂತ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅರ್ಥಪೂರ್ಣವಾಗಿ ಪ್ರಣಾಳಿಕೆಯನ್ನು ಜನರಿಗೆ ಮನ ಮುಟ್ಟುವಂತೆ ಮಾಡಿದರೆ ಅದು ರಾಜಕೀಯ ಪಕ್ಷದ ಗೌರವ ಹೆಚ್ಚುತ್ತದೆ ಎಂದು ತಿಳಿದುಕೊಂಡವರಲ್ಲಿ ನಾನು ಒಬ್ಬ. ನಿಮ್ಮ ಚುನಾವಣಾ ಪ್ರಣಾಳಿಕೆ ಬಹಳ ಅದ್ಭುತವಾಗಿದೆ ಎಂದು ನನಗೆ ಅನಿಸುತ್ತದೆ. ಆದರೆ, ಈ ಪ್ರಣಾಳಿಕೆಯಲ್ಲಿ ನೀವು ಏನು ಬರೆದಿದ್ದೀರಿ ಎಂದರೆ, ನಮ್ಮ ಹಿರಿಯರಾದ ಶ್ರೀಮಾನ್ ಹೆಚ್.ಡಿ.ದೇವೇಗೌಡರವರು ಹೇಳಿದ್ದಾರೆ, ತದನಂತರ ನೀವು ಹೇಳಿದ್ದೀರಿ. "ರಾಜಕಾರಣಕ್ಕೆ ನಾನು ಅನಿರೀಕ್ಷಿತವಾಗಿ ಬಂದವನು, ಕರುನಾಡಿನ ಮುಖ್ಯಮಂತ್ರಿಯಾಗುವಂತಹ ಯಾವುದೇ ಕನಸನ್ನು ಕಂಡವನು ನಾನಲ್ಲ, ಅದರೂ ಸಹ ಮುಖ್ಯಮಂತ್ರಿಯಾಗುವಂತಹ ಅವಕಾಶ ಸಿಕ್ಕಿದೆ, ಮುಂದಿನ 5 ವರ್ಷಗಳಲ್ಲಿ ನಾನು ನಿಭಾಯಿಸುವ ಆಡಳಿತ ಸಂಕ್ಷಿಪ್ತ ರೂಪವನ್ನು ಈ ಪ್ರಣಾಳಿಕೆಯಲ್ಲಿ ಉಲ್ಲೇಖಿಸಿದ್ದೇನೆ, ಅದನ್ನು ನಾಡಿನ ಜನರಾದ ತಮ್ಮ ಅವಗಾಹನೆಗೆ ಬಿಟ್ಟಿದ್ದೇನೆ, ಜನಪರವಾದ ಅಭಿವೃದ್ಧಿ ನನ್ನ ಆದ್ಯತೆ, ಅದಕ್ಕೆ ನಾನು ಮನ್ನಣೆಯನ್ನು ಬಯಸುತ್ತೇನೆ, ಆದ್ದರಿಂದ, ಈ ಬಾರಿ ಜಾತ್ಯಾತೀತ ಜನತಾದಳಕ್ಕೆ ಅವಕಾಶ ಕೊಡಬೇಕೆಂದು" ನೀವು ಒಟ್ಟು ಮಾಡಿರುವಂತಹ ನಿವೇದನೆಯಾಗಿದೆ. ನಾನು ಪ್ರಣಾಳಿಕೆಯನ್ನು ವಿಮರ್ಶೆ ಮಾಡುತ್ತಿಲ್ಲ. ಒಂದೆರಡು ವಿಷಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ರೈತರ ಸಾಲವನ್ನು ಒಂದು ಬಾರಿ ಮನ್ನಾ ಮಾಡಿ, ಅವರ ಭೂಮಿಗೆ ನೀರಾವರಿ ಕೊಟ್ಟು ಅವರು ಬೆಳೆದಂತಹ ಬೆಳೆಗಳಿಗೆ ಉತ್ತಮ ಬೆಲೆ ಒದಗಿಸಿಕೊಟ್ಟರೆ, ಅವರು ಸ್ವಾವಲಂಬಿಗಳಾಗುತ್ತಾರೆ. ಅಷ್ಟೇ ಅಲ್ಲದೇ "ಸರ್ಕಾರಕ್ಕೆ ಸಾಲ ನೀಡುವ ಹಂತಕ್ಕೆ ರೈತರು ಆರ್ಥಿಕವಾಗಿ ಸಬಲರಾಗುತ್ತಾರೆಂದು" ಹೇಳಿದ್ದೀರಿ. ಇದೇನು ಸಣ್ಣ ನುಡಿಯೆಂದು ನನಗೆ ಅನಿಸಿರುವುದಿಲ್ಲ. ಜೊತೆಗೆ "ರೈತರು ಸಹಕಾರ ಸಂಘಗಳಲ್ಲಿ, ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಮಾಡಿರುವ 53 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು 24 ಗಂಟೆಗಳಲ್ಲಿ ಜೆ.ಡಿ.(ಎಸ್) ಸರ್ಕಾರ ಮನ್ನಾ ಮಾಡಲಿದೆ" ಎನ್ನುವಂತಹ ಮಾತನ್ನು ತಾವು ಹೇಳಿದಿರಿ. ಇವತ್ತು ತಮಗೆ ಕಾಂಗ್ರೆಸ್‌ನವರು ಬೆಂಬಲ ಕೊಡುವುದು ಅನಿವಾರ್ಯವಾಗಿದೆ. ಏಕೆಂದರೆ, ಅವರು ಭಾರತೀಯ ಜನತಾ ಪಕ್ಷವನ್ನು ವಿರೋಧಿಸಬೇಕು. ಸೈದ್ಧಾಂತಿಕವಾಗಿ ನಮ್ಮಲ್ಲಿ ವಿರೋಧಗಳಿವೆ. ಕಾಂಗ್ರೆಸ್‌ನವರು ಕೇವಲ ನಮ್ಮನ್ನೇ ಏತಕ್ಕೆ ವಿರೋಧಿಸುತ್ತಾರೆಂದು ನಾನು ಕೇಳುವುದಿಲ್ಲ. ಏಕೆಂದರೆ, ಸೈದ್ಧಾಂತಿಕವಾಗಿ ನಮಗೂ ಅವರಿಗೂ ಅಭಿಪ್ರಾಯ ಬಂದಿದೆ. ಅಂತಹ ಸಂದರ್ಭದಲ್ಲಿ ಅವರು ನಿಮ್ಮನ್ನು ಬೆಂಬಲಿಸಿರಬಹುದು, ಅನಿವಾರ್ಯವಿರಬಹುದು. ಅದರೂ ಸಹ ನಮ್ಮ ದೃಷ್ಟಿಯಲ್ಲಿ ಜೆ.ಡಿ.(ಎಸ್) ಸರ್ಕಾರ. ಸಮ್ಮಿಶ್ರ ಸರ್ಕಾರ ಎಂದು ಹೇಳಿದರೆ ಅದು ಸಹ ಹೌದು. ಮುಖ್ಯಮಂತ್ರಿಗಳಿಗೆ ಪರಮೋಚ್ಚ ಅಧಿಕಾರವಿರುವುದರಿಂದ ಸಮ್ಮಿಶ್ರ ಸರ್ಕಾರ, ಜೆ.ಡಿ.(ಎಸ್) ನೇತೃತ್ವದ ಸರ್ಕಾರವೆಂದು ನೀವು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಪ್ಪಿಕೊಂಡರೆ ಅದು ನನಗೆ ಗೊತ್ತಿಲ್ಲ. ನಾನು ಅರ್ಥಮಾಡಿಕೊಂಡಿರುವುದು ಹೀಗೆ. ಜೆ.ಡಿ.(ಎಸ್) ನೇತೃತ್ವದ ಸರ್ಕಾರ.

ನಾನು ತಮ್ಮಲ್ಲಿ ನಿವೇದನೆ ಮಾಡುವುದೇನೆಂದರೆ ನಾಳೆ, ಉಲ್ಲೇಖ ಬಜೆಟ್‌ನಲ್ಲಿ ಈ ಬಗ್ಗೆ ಮಾಡುತ್ತೀರಿ ಎಂದು ನಂಬಿದ್ದೇನೆ. ಈ ರಾಜ್ಯದ ಸಹಕಾರಿ ಸಂಘಗಳಲ್ಲಿ, ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಮಾಡಿರುವಂತಹ 53 ಸಾವಿರ ಕೋಟಿ ರೂಪಾಯಿಗಳ ಸಾಲವನ್ನೂ ಕೂಡ 24 ಗಂಟೆಗಳಲ್ಲಿ ಮನ್ನಾ ಮಾಡುತ್ತೇವೆಂದು ಹೇಳಿದ್ದರೂ ಕೂಡ ಆಡಳಿತದ ತೊಂದರೆ ಇರುತ್ತದೆ. ಏಕೆಂದರೆ, 24 ಗಂಟೆಗೆ ಎಷ್ಟು ದಿವಸ, ಎಷ್ಟು ಗಂಟೆ, ಎಷ್ಟು ವಾರ ಎಂದು ಅದೆಲ್ಲವನ್ನೂ ನಾನು ಕೇಳಬಹುದಿತ್ತು. ಆದರೆ, ನಾನು ಅದನ್ನು ಕೇಳುವುದಿಲ್ಲ. ಏಕೆಂದರೆ, ಆಡಳಿತ ನಡೆಸುವಂತಹವರಿಗೆ ಕೆಲವೊಂದು ಅನಿವಾರ್ಯತೆಗಳಿರುತ್ತವೆ. ನಾಳೆ ಬರುವಂತಹ ಬಜೆಟ್‌ನಲ್ಲಿ ಇಷ್ಟನ್ನೂ ಮಾಡುತ್ತೀರಿ ಎಂದು ಎರಡು ಸದನಗಳಲ್ಲಿರುವ ಭಾರತೀಯ ಜನತಾಪಕ್ಷದವರಾದ ನಾವು  ನಂಬಿದ್ದೇನೆ. ಒಂದು ವೇಳೆ ನೀವು ಮಾಡದಿದ್ದರೆ.. . . ಮಾಡುತ್ತೀರಿ, ನಮ್ಮ ಒತ್ತಡ ಇದೆ,  ಈ ಒಂದು ವ್ಯವಸ್ಥೆಯಲ್ಲಿ ಶ್ರೀಮಾನ್ ಯಡಿಯೂರಪ್ಪನವರು ಸದನದಲ್ಲಿ ಹೇಳಿರುವುದನ್ನು ತಾವು ಕೇಳಿದ್ದೀರಿ. ಸಂವಿಧಾನಬದ್ಧವಾಗಿ ಪ್ರತಿಪಕ್ಷವೊಂದು, . . ಇವತ್ತು ಇದು ನಿಮಗೆ ಸರಳವಾದ ಪ್ರತಿಪಕ್ಷವಲ್ಲ. ಇವತ್ತು ನೀವು ಬಹುಮತದಲ್ಲಿ ಇದ್ದರೂ ಕೂಡ ನಮ್ಮದು ಸರಳವಾದ ಪ್ರತಿಪಕ್ಷವಲ್ಲ. 30, 40, 25, 10 ಸದಸ್ಯರನ್ನೊಳಗೊಂಡ ಪ್ರತಿಪಕ್ಷವಾಗಿದ್ದರೆ ನೀವು ಸುಲಭವಾಗಿ ಜಾರಿಕೊಳ್ಳಬಹುದಿತ್ತು. ನೀವು ಜಾರಿಕೊಳ್ಳುತ್ತೀರಿ ಎಂದು ನಾನು ಹೇಳಿಲ್ಲ.  ಆದರೆ, 104 ಜನ ಶಾಸಕರನ್ನೊಳಗೊಂಡ ಪಕ್ಷವೊಂದು ಪ್ರಬಲವಾಗಿ ನಿಮಗೆ ಸೊಡ್ಡು ಹೊಡೆದಿರುವಾಗ,  ಆಡಿದಂತಹ ಮಾತನ್ನು ನುಣುಚಿಕೊಳ್ಳಲಿಕ್ಕೆ ಸಾಧ್ಯವಿಲ್ಲ.  ಅಲ್ಲಿ, ಇಲ್ಲಿ ಸ್ವಲ್ಪ ಕಡಿಮೆ, ಸ್ವಲ್ಪ ಹೆಚ್ಚು 8, 10, 15, 20 ಸಾವಿರ ಕೋಟಿ ರೂಪಾಯಿಗಳು ಆಗುವುದಿಲ್ಲ. ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಏನು ಸಾಲ ಮಾಡಿದ್ದೀರಿ, ಸಹಕಾರಿ ಸಂಘಗಳಲ್ಲಿ ಏನು ಸಾಲ ಮಾಡಿದ್ದೀರಿ, ಅದನ್ನು ಪೂರ್ಣವಾಗಿ ಮನ್ನಾ ಮಾಡುತ್ತೇವೆನ್ನುವ ಘೋಷಣೆಗೆ ನೀವು ಬದ್ಧರಾಗಿದ್ದೀರಿ ಎಂದು ನಾವು ನಂಬಿದ್ದೇವೆ. ನಾಳೆ ಮಾಡುತ್ತೀರಿ ಎನ್ನುವ ವಿಶ್ವಾಸ ನಮಗಿದೆ. ಹಾಗೆ ಒಂದು ವೇಳೆ ಸಾಲ ಮನ್ನಾ ಮಾಡದಿದ್ದರೆ, ಮಾಡುವಲ್ಲಿ ನಮ್ಮ ಒತ್ತಡ ಇದೆ ಎಂದು ಸ್ಪಷ್ಟ ಹೇಳಿದ್ದೇವೆ.  ಪ್ರತಿಪಕ್ಷವನ್ನು ಲಘುವಾಗಿ ಪರಿಗಣಿಸಬೇಕಾದಂತಹ ಅಗತ್ಯತೆ ಇಲ್ಲ.  ಇಡೀ ಕರ್ನಾಟಕ ರಾಜ್ಯದಲ್ಲಿ 104 ವಿಧಾನಸಭಾ ಕ್ಷೇತ್ರಗಳನ್ನು ಪಡೆದಿರುವವರಿದ್ದೇವೆ. ಹೀಗಾಗಿ ನಮ್ಮ ಒತ್ತಡಕ್ಕೆ ನೀವು ಮಣಿಯುತ್ತೀರಿ ಎನ್ನುವಂತಹ ವಿಶ್ವಾಸ ಇದೆ. ನಾಳೆ ಇದನ್ನು ಪ್ರಕಟಿಸಬೇಕು.  ಒಂದು ವೇಳೆ ಪ್ರಕಟಿಸದಿದ್ದರೆ  ಈ ವಿಚಾರವನ್ನು ಜನರ ಬಳಿಗೆ ತೆಗೆದುಕೊಂಡು ಹೋಗುತ್ತೇವೆ ಎನ್ನುವಂತಹ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ನನಗೆ ಇನ್ನು ಹೆಚ್ಚಿನ ಮಾತುಗಳನ್ನು ಹೇಳಬೇಕೆಂದಿನಿಸಿಲ್ಲ. ಏಕೆಂದರೆ, ಬಹಳ ಮಂದಿ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ತಾವು ಗಮನಿಸಬೇಕು. ನಿಮ್ಮ ಚುನಾವಣಾ ಪ್ರಣಾಳಿಕೆ ಪುಸ್ತಕದ 9ನೇ ಪುಟದಲ್ಲಿ ಏನು ಬರೆದಿದ್ದೀರಿ ಎಂದರೆ "65 ವರ್ಷಕ್ಕೂ ಮಿಗಿಲಾದ ಹಿರಿಯ ನಾಗರಿಕರಿಗೆ ನನ್ನ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದರೆ 6 ಸಾವಿರ ರೂಪಾಯಿಗಳ ಮಾಸಾಶನವನ್ನು ಕೊಡುತ್ತೇವೆಂದು ಹೇಳಿದ್ದೀರಿ. 65 ವರ್ಷ ಮೀರಿದವರಿಗೆ ನಾವು ಮತ್ತು ನೀವು ಒಟ್ಟಿಗೆ ಆಡಳಿತ ಮಾಡಿದಂತಹ ಸಂದರ್ಭದಲ್ಲಿ "ಸಂಧ್ಯಾ ಸುರಕ್ಷಾ ಯೋಜನೆ" ಎಂದು ಮಾಡಿದ್ದೆವು ಎನ್ನುವುದು ನನ್ನ ನೆನಪಿನ ಪ್ರಕಾರ ಇದೆ. ಅದು ಮೊದಲು 400 ರೂಪಾಯಿಗಳಿತ್ತು. ನಂತರ ಅದು 500 ರೂಪಾಯಿಗಳಾಗಿದೆ. ಆದರೆ, ನಿಮ್ಮ ಘೋಷಣೆ ಏನಿತ್ತು ಎಂದರೆ ಒಳ್ಳೆಯ ವಿಚಾರಗಳಿವೆ. 6000 ರೂಪಾಯಿಗಳು ಒಬ್ಬ ಬಡವನಿಗೆ, ಒಬ್ಬ ರೈತನಿಗೆ, ಒಬ್ಬ ವೃದ್ಧನಿಗೆ ಸಿಕ್ಕಿದರೆ ಅದು ಸಣ್ಣದು ಎಂದು ನನಗೇನೂ ಅನಿಸುವುದಿಲ್ಲ. 65 ವರ್ಷ ಮೇಲ್ಪಟ್ಟ ರಾಜ್ಯದ ಎಲ್ಲಾ ಹಿರಿಯ ನಾಗರಿಕರಿಗೆ, ಸಾರ್ವಜನಿಕ ಮಾಸಾಶನ ಕಾರ್ಯಕ್ರಮದಡಿಯಲ್ಲಿ ತಿಂಗಳಿಗೆ 6 ಸಾವಿರ ರೂಪಾಯಿಗಳನ್ನು ಕೊಡುತ್ತೇವೆ.

**ಮುಂದು. . .**

**(081) 04.07.2018 05.50 ಎಸ್‌ವಿ-ಜಿಆರ್**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು):-**

ಎಂಭತ್ತು ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರಿಗೆ 8000 ರೂಪಾಯಿಗಳ ಮಾಸಾಶನವನ್ನು ಕೊಡಲಾಗುವುದು. ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ರಾಜ್ಯದಲ್ಲಿ ಕ್ರಾಂತಿಯ ಕಹಳೆಯನ್ನು ಊದಲು ಹೊರಟಿದ್ದಾರೆ. ಇದಕ್ಕೆ ನನ್ನ ಆಕ್ಷೇಪವಿಲ್ಲ. ನನ್ನ ಬೆಂಬಲವಿದೆ. ಆದರೆ ನಾಳೆಯ ಬಜೆಟ್‌ನಲ್ಲಿ ಅದು ಪ್ರಕಟವಾಗದಿದ್ದರೆ ಅವರ ಪ್ರಣಾಳಿಕೆಗೆ ಅರ್ಥ ಬರುವುದಿಲ್ಲ ಹಾಗೂ ಸರ್ಕಾರದ ಗೌರವ ಹೆಚ್ಚುವುದಿಲ್ಲ ಎಂಬ ಅಂಶವನ್ನು ಮನವರಿಕೆ ಮಾಡುತ್ತಿದ್ದೇನೆ. ಬಡ ಮಹಿಳೆಯರಿಗೆ ಪ್ರತಿ ತಿಂಗಳು ರೂ.2000 ಕುಟುಂಬ ನಿರ್ವಹಣಾ ವೆಚ್ಚ; ಕೃಷಿಯೇತರ ಮೂಲಗಳಿಂದ ಕನಿಷ್ಟ ರೂ.5000 ಗಳಿಗಿಂತಲೂ ಕಡಿಮೆ ಆದಾಯ ಗಳಿಸುತ್ತಿರುವ 24 ವರ್ಷ ಮೇಲ್ಪಟ್ಟ ಕಳೆದ 10 ವರ್ಷಗಳಿಂದ ಕರ್ನಾಟಕದಲ್ಲಿ ವಾಸವಿರುವ ಮಹಿಳೆಯರಿಗೆ ತಿಂಗಳಿಗೆ ರೂ.2000/- ಕೌಟುಂಬಿಕ ನಿರ್ವಹಣಾ ವೆಚ್ಚವನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಹಳ್ಳಿಗಾಡನ್ನು ಕಂಡಿರುವಂತಹವರು. ಎಲ್ಲರ ಬಾಯಿಯಲ್ಲಿಯೂ ಇಂತಹ ಮಾತು ಬರುತ್ತದೆ ಎಂಬ ಭ್ರಮೆಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವು ಇಲ್ಲ. ಹಳ್ಳಿಯ ಬದುಕಿನಲ್ಲಿ ತುತ್ತು ಊಟಕ್ಕೂ ಕಷ್ಟ ಪಡುವಂತಹ ಜನರ ಮತ್ತು ಅಂತಹ ಮನೆಯ ಮಹಿಳೆಯ ಮನೆಬಾಗಿಲಿಗೆ ಹೋದವರಿಗೆ ಮಾತ್ರ ಅವರ ಕಷ್ಟ ಅರ್ಥವಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಅದನ್ನು ಅರ್ಥ ಮಾಡಿಕೊಂಡಿದ್ದಾರೆ ಮತ್ತು ಅದನ್ನು ಪ್ರಕಟಿಸಿದ್ದಾರೆ. ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ಸಂತ್ರಸ್ತ ಮಹಿಳೆಯರಿಗೆ ರೂ.2000/- ಮಾಸಾಶನವನ್ನು ನೀಡುತ್ತಾರೆಂಬ ವಿಶ್ವಾಸವನ್ನು ಭಾರತೀಯ ಜನತಾ ಪಕ್ಷ ಹೊಂದಿದೆ. ಒಂದು ವೇಳೆ ಪ್ರಕಟಿಸದಿದ್ದಲ್ಲಿ ಸರ್ಕಾರದ ಗೌರವ ಕಡಿಮೆಯಾಗುತ್ತದೆ ಎಂಬುದನ್ನು ತಮಗೆ ಮನವರಿಗೆ ಮಾಡಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಒಂದು ರಾಜಕೀಯ ಪಕ್ಷದ ಪ್ರಣಾಳಿಕೆಯನ್ನು ಓದುವುದು ನನ್ನ ಕೆಲಸವಾಗಿರುವುದಿಲ್ಲ. ಆದರೂ ಸರ್ಕಾರಕ್ಕೆ ನೆನಪು ಮಾಡಿಕೊಡುವಂತಹ ಜವಾಬ್ದಾರಿ ನನ್ನ ಮೇಲಿದೆ. 'ಸರ್ಕಾರಿ ಕಛೇರಿಯ ಮೇಲೆ ಮೂರನೇ ಕಣ್ಣು; ಸರ್ಕಾರಿ ಕಛೇರಿಯಲ್ಲಿ ವ್ಯವಹಾರ'.

**ಸಭಾಪತಿಯವರು:-** ಮಾನ್ಯ ಪೂಜಾರಿಯವರೇ, ಪೂಜಾರಿ ಎಂಬ ಹೆಸರು ನಿಮಗೆ ಸಾರ್ಥಕವಾಯಿತು. ಏನೂ ಹೇಳಬಾರದೆಂದು ಹೇಳುತ್ತಲೇ ಎಲ್ಲವನ್ನೂ ಹೇಳುತ್ತೀರಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಾವು ನಮಗೆ ಅವಕಾಶ ಮಾಡಿಕೊಟ್ಟಿರುವುದೇ ಅದಕ್ಕಾಗಿ. ವಿರೋಧಪಕ್ಷದವರ ಮೇಲೆ ತಮಗೆ ಕನಿಕರ ಇರಬೇಕಲ್ಲವೆ?

**ಶ್ರೀ ಐವನ್ ಡಿ'ಸೋಜ:-** ಮಾನ್ಯ ಸಭಾಪತಿಯವರೇ, ಎಲ್ಲವನ್ನೂ ಇವತ್ತೇ ಓದಿ ಮುಗಿಸಬೇಡಿ ಎಂದು ಅವರಿಗೆ ಹೇಳಿ. ಮತ್ತೆ ಐದು ವರ್ಷ ಅವರಿಗೆ ಬೇರೆ ಕೆಲಸವಿರುವುದಿಲ್ಲ.

**ಸಭಾಪತಿಯವರು:-** ಮಾನ್ಯ ಡಿಸೋಜ ಅವರೇ, ತಾವು ಕುಳಿತುಕೊಳ್ಳಿ. ಎಷ್ಟು ಬಾರಿ ಹೇಳಿಸಿಕೊಳ್ಳುತ್ತೀರಿ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರಿಗೆ ಅವರ ಪ್ರಣಾಳಿಕೆಯ ಬಗ್ಗೆ ಮಾತ್ರ ಗೊತ್ತಿದೆ. ಬೇರೆಯವರ ಪ್ರಣಾಳಿಕೆಯನ್ನು ಬರೆದು ಗೊತ್ತಿರುವುದಿಲ್ಲ. ಇದು ಬೇರೆಯವರು ಬರೆದದ್ದು, ಅವರು ಏಕೆ ಒದ್ದಾಡುತ್ತಿದ್ದಾರೆ? ರಾಜಕೀಯ ಪಕ್ಷಕ್ಕೆ ಒಂದು ಕಲ್ಪನೆ ಬೇಕಲ್ಲವೆ? ನಾನು ಮುಖ್ಯಮಂತ್ರಿಗಳಿಗೆ ಅಭಿನಂದನೆ ಹೇಳುವಾಗ ಮತ್ತು ಅವರ ಜೊತೆಯಲ್ಲಿ ಜಗಳವಾಡುವಾಗ ಗೌರವವನ್ನು ಕೊಡುವುದು ಏಕೆಂದರೆ ಒಂದು ರಾಜಕೀಯ ಪಕ್ಷ ಏನನ್ನಾದರೂ ಹೇಳಿ ಬಚಾವಾಗುವುದಕ್ಕೆ ಸಾಧ್ಯವಿಲ್ಲ. ಒಂದು ರಾಜಕೀಯ ಪಕ್ಷ ಜನರ ನೋವನ್ನು ಅರ್ಥ ಮಾಡಿಕೊಳ್ಳಬೇಕು; ಜನರ ಕಷ್ಟಗಳನ್ನು ತಿಳಿದುಕೊಳ್ಳಬೇಕು. ಮೂರನೇ ಕಣ್ಣು ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುವಾಗ ಸರ್ಕಾರಿ ಕಛೇರಿಗಳಲ್ಲಿ ಅಕ್ರಮಗಳು ನಡೆಯುತ್ತಿರುವ ಆರೋಪಗಳು ದಿನೇ ದಿನೇ ಬಲಗೊಳ್ಳುತ್ತಿವೆ. ಇಂತಹ ಅಕ್ರಮಗಳನ್ನು ತಡೆಗಟ್ಟುವುದಕ್ಕಾಗಿ ಕ್ಯಾಮೆರಾ ಜಾಲವನ್ನು ಸ್ಥಾಪಿಸಲಾಗುವುದು. ಅದರ ಮೇಲುಸ್ತುವಾರಿಯನ್ನು ಮೂರನೇ ಕಣ್ಣು ಗಮನಿಸುತ್ತದೆ. ಇದು ವಾಸ್ತವಿಕ ಸತ್ಯ ಕೂಡ. ವಿಧಾನಸೌಧದಲ್ಲಿ ಒಂದು ವರ್ಗಾವಣೆಯಾಗಬೇಕೆಂದರೆ ರೂ.10 ಲಕ್ಷ ರೂಪಾಯಿಗಳು ಬೇಕು ಎಂದು ಮಾನ್ಯ ಮುಖ್ಯಮಂತ್ರಿಯವರೇ ಹೇಳಿದ್ದಾರೆ. ಹಿಂದಿನ ಮುಖ್ಯಮಂತ್ರಿಗಳು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳಿದರು. ಹೀಗಾಗಿ ಆ ವಿಷಯದಲ್ಲಿ ಹೆಚ್ಚಿನ ಚರ್ಚೆಯನ್ನು ಮಾಡಲಿಕ್ಕೆ ನಾನು ಹೋಗುವುದಿಲ್ಲ.

ನಾನು ಗ್ರಾಮ ಪಂಚಾಯಿತಿಯಿಂದ ಬಂದವನಾಗಿರುವುದರಿಂದ ಗ್ರಾಮ ಪಂಚಾಯಿತಿಯ ಒಂದು ಉದಾಹರಣೆಯನ್ನು ಕೊಡಬಯಸುತ್ತೇನೆ. ಬಂಟ್ವಾಳ ತಾಲ್ಲೂಕಿನ ಒಂದು ಗ್ರಾಮ ಪಂಚಾಯಿತಿಗೆ ಹೋಗಿದ್ದೆನು. ಆ ಗ್ರಾಮ ಪಂಚಾಯಿತಿಯ ಮುಂದೆ "ನಮ್ಮ ಗ್ರಾಮ ಪಂಚಾಯಿತಿಯು ಭ್ರಷ್ಟಾಚಾರ ಮುಕ್ತವಾಗಿದೆ" ಎಂಬ ಫಲಕ ಕಾಣುತ್ತದೆ. ಇಂದಿನ ಕಾಲದಲ್ಲೂ ಒಂದು ಗ್ರಾಮ ಪಂಚಾಯಿತಿಯ ಎದುರು ಆ ಗ್ರಾಮಪಂಚಾಯಿತಿಯು ಭ್ರಷ್ಟಾಚಾರದಿಂದ ಮುಕ್ತವಾಗಿದೆ ಎಂಬ ಫಲಕವನ್ನು ನೋಡಿ ನನಗೆ ಆಶ್ಚರ್ಯ ಮತ್ತು ದಿಗ್ಭ್ರಮೆಯುಂಟಾಯಿತು. ಆ ಪಂಚಾಯಿತಿಯಲ್ಲಿ ಹಿಂದುಳಿದ ವರ್ಗದ ಮಹಿಳೆಯೊಬ್ಬರು ಅಧಿಕಾರವನ್ನು ನಡೆಸುತ್ತಿದ್ದಾರೆ. ನಾನು ಒಳಗೆ ಹೋಗಿ ಅವರ ಬಳಿ ಹೇಗೆ ಈ ರೀತಿ ಫಲಕವನ್ನು ಹಾಕಲು ಸಾಧ್ಯವಾಯಿತು ಎಂದು ಕೇಳಿದೆನು. ಆಕೆ "ಶ್ರೀನಿವಾಸ ಪೂಜಾರಿಯವರೆ, ಫಲಕವನ್ನು ಹಾಕಿಸಿದ್ದು ನಾನೇ. ನಾನು ಮಧ್ಯಾಹ್ನ 02.30 ಗಂಟೆಗೆ ಕಛೇರಿಗೆ ಬರುತ್ತೇನೆ. ಸಾರ್ವಜನಿಕರು ಬರಲಿ. ಗ್ರಾಮ ಪಂಚಾಯಿತಿಯ ಪಿ.ಡಿ.ಓ, ಕಾರ್ಯದರ್ಶಿ, Waterman ಈ ರೀತಿ ಇಡೀ ನನ್ನ ಗ್ರಾಮ ಪಂಚಾಯಿತಿಯಲ್ಲಿ ಯಾರಾದರೂ ಒಂದು ರೂಪಾಯಿ ಲಂಚವನ್ನು ತೆಗೆದುಕೊಂಡಿದ್ದಾರೆಂದು ನನಗೆ ಹೇಳಿದರೆ ತಕ್ಷಣವೇ ಅವರ ವಿರುದ್ಧ ಕ್ರಮ ಕೈಗೊಳ್ಳುವ ಶಾಸನಬದ್ಧವಾದ ಅಧಿಕಾರ ನನಗೆ ಇದೆ. ಅದಕ್ಕಾಗಿ ಆ ರೀತಿಯ ಫಲಕವನ್ನು ಹಾಕಿದ್ದೇನೆ. ಅಲ್ಲ ಎಂದು ಹೇಳುವ ತಾಕತ್ತು ಯಾರಿಗಾದರೂ ಇದ್ದರೆ ನನ್ನಲ್ಲಿಗೆ ಬರಲಿ" ಎಂದು ಹೇಳಿದರು. ನಾನು ಇದನ್ನು ಏಕೆ ಉಲ್ಲೇಖ ಮಾಡುತ್ತಿದ್ದೇನೆಂದರೆ ಕರ್ನಾಟಕ ರಾಜ್ಯದಲ್ಲಿ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಯಾರೇ ಮುಖ್ಯಮಂತ್ರಿಯಾದರೂ ಸಹ ವಿಧಾನಸೌಧದ ಎದುರು ವಿಧಾನಸೌಧ ಭ್ರಷ್ಟಾಚಾರ ಮುಕ್ತವಾಗಿದೆ ಎಂದು ಫಲಕ ಹಾಕುವ ದಿನ ಬರಲಿದೆ ಎಂದು ನನಗೆ ನಂಬಿಕೆ ಇಲ್ಲ. ಏಕೆಂದರೆ ಈಗ ನನಗೆ 57 ವರ್ಷಗಳು. ನನಗಿಂತಲೂ ವಯಸ್ಸಾಗಿರುವ ಹಲವರು ಇನ್ನೂ ಗಟ್ಟಿಮುಟ್ಟಿಯಾಗಿ ಇರುವುದರಿಂದ ಇನ್ನೂ ಕೆಲವು ಪ್ರಾಯ ನಾನು ಬದುಕುತ್ತೇನೆಂಬ ಭಾವನೆ ಇದೆ. ಹಾಗೆಂದು ವಿಧಾನಸೌಧಕ್ಕಿಂತಲೂ ನಮ್ಮ ಗ್ರಾಮಪಂಚಾಯಿತಿಗಳೇ ಶ್ರೇಷ್ಠ ಎಂದು ಹೇಳಲು ನಾನು ಹೊರಟಿಲ್ಲ. ಆದರೆ ವಾಸ್ತವ ಅದಕ್ಕಿಂತ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಿನ್ನವಾಗಿ ಏನೂ ಇರುವುದಿಲ್ಲ. ಆದಕಾರಣ ಈ ವ್ಯವಸ್ಥೆಯನ್ನು ಮೂರನೇ ಕಣ್ಣಿನ ಮೂಲಕ ನಾವು ಗಮನಿಸುತ್ತೇವೆಂದು, ಭ್ರಷ್ಟಾಚಾರ ಮುಕ್ತ ಮಾಡುತ್ತೇವೆಂದು, ಲಂಚಗುಳಿತನವನ್ನು ನಿಯಂತ್ರಣ ಮಾಡುತ್ತೇವೆಂದು ಹೇಳಿದ್ದು, ಅದನ್ನು ಯಾವ ರೀತಿಯಾಗಿ ಮಾಡಲಾಗುವುದೆಂದು ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟ ಪಡಿಸಬೇಕು.

ಮಾನ್ಯ ಮುಖ್ಯಮಂತ್ರಿಯವರು ತಮ್ಮ ಪ್ರಣಾಳಿಕೆಯಲ್ಲಿ ಲೋಕಾಯುಕ್ತರ ಬಗ್ಗೆ ಮಾತನಾಡಿದ್ದರು. ಎಸಿಬಿ ಅನ್ನು ತಕ್ಷಣವೇ ರದ್ದುಗೊಳಿಸಿ, ಲೋಕಾಯುಕ್ತವನ್ನು ಬಲಗೊಳಿಸಲಾಗುವುದು ಎಂದು ಹೇಳಿದ್ದರು. ಎ.ಸಿ.ಬಿ., ಬಂದು ಎರಡೂವರೆ ವರ್ಷಗಳಾಯಿತು. ಅದರಲ್ಲಿ ಏನಾಗಿದೆ ಎಂಬುದನ್ನು ಮುಖ್ಯಮಂತ್ರಿಗಳು ಗಮನಿಸಬೇಕು. 627 ಪ್ರಕರಣಗಳು ಎ.ಸಿ.ಬಿ., ಯಲ್ಲಿ ದಾಖಲಾಗಿವೆ. 180 ಪ್ರಕರಣಗಳು ಅಕ್ರಮ ಭೂಮಿಯನ್ನು ಪಡೆದಿರುವವರ ವಿರುದ್ಧ ದಾಖಲಾಗಿದೆ. ಇಂದಿನವರೆವಿಗೂ ಎ.ಸಿ.ಬಿ.,ಯವರು ಗಂಭೀರವಾದ ಪ್ರಕರಣಗಳಲ್ಲಿ ಒಂದೇ ಒಂದು ಆರೋಪ ಪಟ್ಟಿಯನ್ನು ಸಲ್ಲಿಸಿರುವುದಿಲ್ಲ. ಎ.ಸಿ.ಬಿ.,ಯನ್ನು ಯಾವಾಗ ರದ್ದು ಮಾಡಲಾಗುವುದು ಮತ್ತು ಲೋಕಾಯುಕ್ತವನ್ನು ಯಾವಾಗ ಬಲಗೊಳಿಸಲಾಗುವುದು ಎಂದು ಮುಖ್ಯಮಂತ್ರಿಯವರು ಹೇಳಬೇಕು. ಲೋಕಾಯುಕ್ತರ ಕೊಠಡಿಗೆ ಬಂದು ಲೋಕಾಯುಕ್ತರಿಗೆ ಚೂರಿ ಹಾಕುವಂತಹ ಪರಿಸ್ಥಿತಿಗೆ ಲೋಕಾಯುಕ್ತ ವ್ಯವಸ್ಥೆಯು ಬಂದು ನಿಂತಿದೆ. ಲೋಕಾಯುಕ್ತವನ್ನು ಬಲಪಡಿಸದಿದ್ದರೆ, ಎ.ಸಿ.ಬಿ.,ಯನ್ನು ರದ್ದುಗೊಳಿಸದಿದ್ದರೆ ಅವರ ಕಲ್ಪನೆಗೆ ಅರ್ಥ ಬರುವುದು ಹೇಗೆ? ಮುಖ್ಯಮಂತ್ರಿಯವರು ಎ.ಸಿ.ಬಿ.,ಯನ್ನು ರದ್ದುಗೊಳಿಸಿ, ಲೋಕಾಯುಕ್ತಕ್ಕೆ ಬೇಕಾದಂತಹ ಅಧಿಕಾರವನ್ನು ಕೊಡಲಾಗುವುದು. ಲೋಕಾಯುಕ್ತ ಪೊಲೀಸ್ ದಳ ಇನ್ನು ಮುಂದೆ ಬಲವಾಗಿ ಕೆಲಸ ಮಾಡುತ್ತದೆ. ಪಾರದರ್ಶಕವಾಗಿ ಆಡಳಿತವನ್ನು ನಡೆಸಲು ನಾನು ಪಣ ತೊಟ್ಟಿದ್ದೇನೆ. ಎಂದು ಇತ್ತೀಚೆಗೆ ಹೇಳಿದ್ದಾರೆ. ಹಾಗೆಯೇ ಅವರು ತಮ್ಮ ಉತ್ತರದಲ್ಲಿ ಹೇಳಬೇಕೆಂದು ನನ್ನ ವಿನಂತಿ.

ರೈತರ ಸಾಲ ಮನ್ನಾ ವಿಷಯದಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯನ್ನು ಬಳಸಿಕೊಳ್ಳಲಾಗುವುದೆಂದು ಮುಖ್ಯಮಂತ್ರಿಯವರು ಹೇಳಿದ್ದಾರೆ ಎಂದು ಪತ್ರಿಕೆಗಳಲ್ಲಿ ವರದಿ ಬಂದಿದೆ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಪೂಜಾರಿಯವರು ಪತ್ರಿಕೆಗಳಲ್ಲಿ ಬಂದಿರುವುದನ್ನು ಹಿಡಿದುಕೊಂಡು ಭಾಷಣವನ್ನು ಮಾಡುತ್ತಿದ್ದಾರೆ. ಅದರೆ ಆ ವಿಷಯವು ನಾಳೆ ಬಜೆಟ್‌ನಲ್ಲಿ ಮಂಡನೆ ಆದ ನಂತರ ಚರ್ಚೆ ಮಾಡಲಿ. ಈಗ ಅದರ ಅವಶ್ಯಕತೆಯಿಲ್ಲ. ನಾನು ಎಲ್ಲಿಯಾದರೂ ಹೇಳಿದ್ದೇನೆಯೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿಲ್ಲ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಹೇಳಿದ್ದೇನೆಂಬ ರೀತಿಯಲ್ಲಿ ಅವರು ಮಾತನಾಡುತ್ತಿದ್ದಾರೆ. ವಿರೋಧಪಕ್ಷದವರು 'ಸಾಲ ಮನ್ನಾ, ಸಾಲ ಮನ್ನಾ' ಎಂದು ಭಜನೆ ಮಾಡುತ್ತಿದ್ದಾರೆ. ನಾನು ನಾಳೆ ಬಜೆಟ್ ಮಂಡನೆ ಮಾಡುವವರೆವಿಗೂ ಸ್ವಲ್ಪ ಸಮಾಧಾನವಾಗಿರಲಿ. ಅವರು ಬಜೆಟ್‌ನ ಮೇಲೆ ಚರ್ಚೆ ಮಾಡುವುದಿಲ್ಲವೆ? ಆಗ ಮಾತನಾಡಲಿ. ಅದು ಬಿಟ್ಟು ಪತ್ರಿಕೆಯಲ್ಲಿ ಬಂದಿರುವುದರ ಬಗ್ಗೆ ಮಾತನಾಡುತ್ತಿದ್ದಾರೆ. ಆ ಪತ್ರಿಕೆಯಲ್ಲಿ ಏನು ವರದಿ ಬಂದಿದೆಯೋ ಅದು ನಾನು ಕೊಟ್ಟಿರುವುದಲ್ಲ. ಪತ್ರಿಕೆಯವರು ನೂರಾರು ವರದಿಗಳನ್ನು ಮಾಡಿಕೊಳ್ಳುತ್ತಾರೆ. ಅದಕ್ಕೆ ನಾನು ಜವಾಬ್ದಾರನೇ? ಅದನ್ನು ನಾನು ಹೇಳಿದ್ದರೆ ಅದರ ಬಗ್ಗೆ ಚರ್ಚಿಸಲಿ. ಈಗ ಅದರ ಬಗ್ಗೆ ಚರ್ಚೆ ಅವಶ್ಯಕತೆಯಿಲ್ಲ ಎಂದು ನಾನು ಹೇಳುತ್ತೇನೆ. ನಾಳೆಯವರೆವಿಗೂ ಕಾಯಿರಿ.

**ಸಭಾಪತಿಯವರು:–** ಮಾನ್ಯ ಪೂಜಾರಿಯವರೇ, ನೀವು ಮಾತನಾಡಲು ಪ್ರಾರಂಭಿಸಿ ಒಂದು ಗಂಟೆಗೂ ಹೆಚ್ಚು ಸಮಯವಾಗಿದೆ. ಬೇಗ ಮುಗಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರನ್ನು ನಾವು ಸಂಪೂರ್ಣವಾಗಿ ಗೌರವಿಸುತ್ತೇವೆ. ಆದರೆ ಅವರಿಗೆ ಸಂತೋಷವಾಗುವಂತೆ ಮಾತನಾಡಬೇಕೆಂಬ ಮಾನಸಿಕತೆಯಿಂದ ಹೊರಬರಬೇಕೆಂದು ವಿನಂತಿಸುತ್ತೇನೆ. ವಿರೋಧಪಕ್ಷದಲ್ಲಿರುವ ನಮಗೆ ಹಲವು ಅನುಮಾನಗಳಿರುತ್ತವೆ. ಮಾಧ್ಯಮಗಳಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಚರ್ಚೆಯಾಗುತ್ತಿದೆ. ದಯವಿಟ್ಟು ಶಾಸಕರ ನಿಧಿಯನ್ನು ಬಳಸಬೇಡಿ ಎಂಬುದು ನನ್ನ ಮನವಿ.

**ಸಭಾಪತಿಯವರು:–** ಮಾನ್ಯ ಪೂಜಾರಿಯವರೇ, ಅಂತಿಮ ತೀರ್ಮಾನಕ್ಕೆ ಏಕೆ ಬರುತ್ತೀರಿ? ಬೇಗ ಮುಗಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಬಹಳ ಪ್ರೀತಿಯಿಂದ ಇದ್ದಾರೆ. ಮಧ್ಯದಲ್ಲಿ ಅವರು intervene ಆದರು. ಅವರಿಗೆ ನನ್ನ ಮೇಲೆ ಖುಷಿ ಇದೆ ಎಂದು ಅವರ ಮುಖದಲ್ಲಿ ಕಾಣಬಹುದು. ಅವರು ಸತ್ಯ ಹೇಳಿದರೆ ಒಪ್ಪುತ್ತಾರೆ. ಅದರಲ್ಲಿ ತಮಗೆ ಅನುಮಾನಗಳೇನು ಬೇಡ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಪೂಜಾರಿಯವರೇ, ಪ್ರೀತಿ ಹೆಚ್ಚಾಗಬಾರದು. ಬೇಗ ಮುಗಿಸಿ. ನೀವು ಮಾತನಾಡಲಾರಂಭಿಸಿ ಒಂದು ಗಂಟೆ ಆಯಿತು.

**Sri K.B.SHANAPPA**:- Mr.Chairman Sir, being the Opposition, we have got every right to criticise the Government.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಣಪ್ಪನವರು ಸದನದ ಹಿರಿಯ ಸದಸ್ಯರಾಗಿದ್ದಾರೆ. ಶಾಸಕರಿಗೆ ಟೀಕೆ ಮಾಡುವುದಕ್ಕೆ ಹಕ್ಕು ಇದೆ ಎಂದು ಹೇಳಿ ಏನು ಬೇಕಾದರೂ ಮಾತನಾಡಲಿಕ್ಕೆ ಹಕ್ಕಿಲ್ಲ. ವಾಸ್ತವಾಂಶ ಚರ್ಚೆ ಮಾಡಿ. ಪತ್ರಿಕೆಗಳಲ್ಲಿ ಯಾರೋ ವರದಿ ಮಾಡಿರುವುದರ ಬಗೆಗೆಲ್ಲಾ ಚರ್ಚೆ ಮಾಡುವುದಕ್ಕೆ ತಮ್ಮ ನಿಯಮಾವಳಿಗಳಲ್ಲಿ ಅವಕಾಶವಿದೆಯೇ?

**(...ಮುಂದು)**

(082)04.07.20186.00ಕೆಜಿ.ಜಿಆರ್

**ಶ್ರೀ ಹೆಚ್..ಡಿ.ಕುಮಾರಸ್ವಾಮಿ (ಮುಂದು.,):-** ಮಾನ್ಯ ಸಭಾಪತಿಯವರೇ, ದಯವಿಟ್ಟು ತಾವು ಹೇಳಬೇಕು. ಆ ಬಗ್ಗೆ ನಾನು ಹೇಳಿಕೆ ಕೊಟ್ಟಿರುವುದಲ್ಲ. ನಮ್ಮ ಸರ್ಕಾರ ಕೊಟ್ಟಿರುವಂತಹ ಹೇಳಿಕೆಯು ಅಲ್ಲ. ಯಾರೋ ಪತ್ರಿಕೆಗಳಲ್ಲಿ ಬರೆದಿರುವಂಥದ್ದನ್ನು ಮಾನ್ಯ ವಿರೋಧಪಕ್ಷದ ನಾಯಕರು ಅದನ್ನು ಸದನದಲ್ಲಿ ಕುಳಿತುಕೊಂಡು ಓದುವುದಕ್ಕೆ ಇದೆಯೋ? 

(ಗೊಂದಲ)

**ಶ್ರೀ ಕೆ.ಬಿ.ಶಾಣಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಒಪ್ಪಿಕೊಂಡಿದ್ದಾರೆ.

(ಗೊಂದಲ)

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಮತ್ತೆ ಅದನ್ನೇ ಏಕೆ ಚರ್ಚೆ ಮಾಡಿದರು? ಅದನ್ನು ಕೇಳಿಸಿಕೊಂಡು ನಾವು ಸುಮ್ಮನೆ ಕುಳಿತುಕೊಳ್ಳಬೇಕಾ?

**Sri K.B.SHANAPPA**:- We have not discussed about it.

**ಸಭಾಪತಿಯವರು:-** ಮಾನ್ಯ ಕೆ.ಬಿ.ಶಾಣಪ್ಪನವರೇ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವಾಗ ಮಧ್ಯೆ ಮಾತನಾಡಬೇಡಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಶ್ರೀ ಕೆ.ಬಿ.ಶಾಣಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾವು ಇದೆಲ್ಲಾ ಮುಗಿಯಿತು ಎಂದು ನಾವು ಒಪ್ಪಿಕೊಂಡಿದ್ದೇವೆ. ಈ ಸದನ ಇರುವುದೇ ಚರ್ಚೆ ಮಾಡುವುದಕ್ಕೆ.

(ಗೊಂದಲ)

**ಶ್ರೀ ಎಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಮತ್ತೆ ಏಕೆ ಅದನ್ನು ಚರ್ಚೆ ಮಾಡುತ್ತಾರೆ? ನಾನು ಉತ್ತರ ಕೊಡುತ್ತೇನೆ.

(ಗೊಂದಲ)

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಬೇಗ ಮಾತನಾಡಿ ಮುಗಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಸಹ ವಿರೋಧಪಕ್ಷದಲ್ಲಿದ್ದವರು. ಆಗ ಅವರು ಯಾವ ಯಾವ ವಿಚಾರಗಳ ಮೇಲೆ ಏನೇನು ಉಲ್ಲೇಖ ಮಾಡಿ ಮಾತನಾಡಿದ್ದಾರೆಂದು ಕಡತದಲ್ಲಿದೆ. ದಯವಿಟ್ಟು ನನ್ನ ವಿನಂತಿ ಮತ್ತು ಆಗ್ರಹ ಇರುವುದೇನೆಂದರೆ, ಅವರು ನಿಯಮಗಳನ್ನು ಬಿಟ್ಟು ಒಂದು ಚೂರು ಆಚೆ ಈಚೆಗೆ ಹೋಗಿಲ್ಲ ಎಂದು ನನಗೆ ಅನಿಸುತ್ತದೆ. ಮಾಧ್ಯಮದಲ್ಲಿ ಬಂದಿರುವಂತಹ ಸುದ್ದಿಯ ಗಂಭೀರತೆಯನ್ನು ಈ ಸದನದಲ್ಲಿ ಉಲ್ಲೇಖ ಮಾಡಿ ಸರ್ಕಾರದಿಂದ ಉತ್ತರ ಪಡೆಯುವಂತಹ ನಮ್ಮ ಹಕ್ಕನ್ನು ಪ್ರಶ್ನಿಸಲಾಗದು. ಪೀಠ ನಮಗೆ ನ್ಯಾಯ ದೊರಕಿಸಿಕೊಡಬೇಕೆಂದು ನಮ್ಮ ವಿನಂತಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಬೇಗ ಮಾತನಾಡಿ ಮುಗಿಸಿ ಈಗಾಗಲೇ ನಿಮಗೆ ಒಂದು ಗಂಟೆ ಅವಕಾಶವನ್ನು ಕೊಡಲಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಮುಖ್ಯಮಂತ್ರಿಯವರು ನಗುತ್ತಿದ್ದಾರೆ. ಅವರಿಗೆ ಖುಷಿಯಾಗಿದೆ. ಮಧ್ಯ ಮಧ್ಯದಲ್ಲಿ ಸ್ವಲ್ಪ ಕೋಪ ಬರುತ್ತದೆ. ಇದೆಲ್ಲಾ ಸ್ವಾಭಾವಿಕ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಬದ್ಧಿವಂತರು. ಬೇಗ ಮಾತನಾಡಿ ಮುಗಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಮ್ಮ ಆಗ್ರಹ ಇರುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಯವರು ನಮ್ಮನ್ನು ಸಾಲ ಮನ್ನಾ, ಸಾಲ ಮನ್ನಾ ಎಂದು ಭಜನೆ ಮಾಡುತ್ತಾರೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಹೇಳಿದ್ದಾರೆ. ಹಾಗಾದರೆ, ನಾವು ವಿರೋಧ ಪಕ್ಷದವರು ಏನು ಮಾಡಬೇಕು? ಆಡಳಿತ ಪಕ್ಷದವರು ಹೇಳಿದ್ದನ್ನು ನಾವು ಹಿಡಿದುಕೊಂಡು ತಿದ್ದಿತೀಡಬೇಕು. ಅವರ ಕಿವಿ ಹಿಂಡಬೇಕು. ಇದು ಸರ್ಕಾರದ ವ್ಯವಸ್ಥೆಗಳು. ಇದರಲ್ಲಿ ತಪ್ಪು ಏನಿದೆ? ಅವರು ಮೊದಲು ಅದನ್ನೇ ಮಾಡಿದ್ದಾರೆ. ಒಂದು ಲೆಕ್ಕದಲ್ಲಿ ಅವರೇ ನಮಗೆ ಇದನ್ನು ಹೇಳಿಕೊಟ್ಟಿದ್ದು. ದಯವಿಟ್ಟು ನನ್ನ ಅಗ್ರಹ ಇರುವುದೇನೆಂದರೆ, ರೈತರ ಸಾಲ ಮನ್ನಾ ಕುರಿತಂತೆ ಹಾಗೂ ಚುನಾವಣೆಯ ಪ್ರಣಾಳಿಕೆಯಲ್ಲಿ ಕೊಟ್ಟಿರುವಂತಹ ಎಲ್ಲಾ ಭರವಸೆಗಳು, ಶಾಂತಿ ಸುವ್ಯಸ್ಥೆಗಳು, ಮರಳು ನೀತಿ ಮತ್ತು ಶಿಕ್ಷಣದ ವ್ಯವಸ್ಥೆಯ ಬಗ್ಗೆ ಸರ್ಕಾರ ಒತ್ತು ಕೊಡಬೇಕಾದಂತಹ ಅವಶ್ಯಕತೆ ಇದೆ ಎಂಬುದನ್ನು ನೆನಪು ಮಾಡುತ್ತಿದ್ದೇನೆ. ಮಾನ್ಯ ರಾಜ್ಯಪಾಲರ ಮೂಲಕ ಮಂಡಿಸಿರುವಂತಹ ಭಾಷಣದಲ್ಲಿ ಸತ್ವವು ಇಲ್ಲ, ಶಕ್ತಿಯೂ ಇಲ್ಲ. ಆದರೆ, ಅವರ ಅನಿವಾರ್ಯತೆಯ ಪ್ರಕ್ರಿಯೆಗಳನ್ನು ನಾನು ಪ್ರಶ್ನಿಸುವುದಿಲ್ಲವೆಂದು ಹೇಳಿ ಮಾನ್ಯ ಸಭಾಪತಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಇಲ್ಲಿಯವರೆಗೆ ಒಟ್ಟು 21 ಜನ ಮಾನ್ಯ ಸದಸ್ಯರು ಸದನದಲ್ಲಿ ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡಿದ್ದಾರೆ. ಒಟ್ಟು ಎಂಟು ಗಂಟೆಗಳ ಕಾಲ ಚರ್ಚೆಯಾಗಿದೆ. ಈಗ ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಡುತ್ತಾರೆ.

**10.ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವದ ಮೇಲೆ ನಡೆದ ಚರ್ಚೆಗೆ ಸರ್ಕಾರದ ಉತ್ತರ**

**ಶ್ರೀ ಹೆಚ್..ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಯವರು):-** ಮಾನ್ಯ ಸಭಾಪತಿಯವರೇ, ನೂತನವಾಗಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ಸಮ್ಮಿಶ್ರ ಸರ್ಕಾರ ರಚನೆಯಾದ ಮೇಲೆ ನಮ್ಮ ರಾಜ್ಯದ ಗೌರವಾನ್ವಿತ ರಾಜ್ಯಪಾಲರು ಒಂದು ಜಂಟಿ ಅಧಿವೇಶನವನ್ನು ಉದ್ದೇಶಿಸಿ, ಮಾಡಿದ ಭಾಷಣಕ್ಕೆ ವಂದನೆಯನ್ನು ಸಲ್ಲಿಸತಕ್ಕಂಥದ್ದಕ್ಕೆ ಈ ಸದನದ ಹಿರಿಯ ಸದಸ್ಯರಾಗಿರತಕ್ಕಂಥ ಮಾನ್ಯ ಐವನ್ ಡಿ'ಸೋಜಾ ರವರು ಮಂಡಿಸಿದ ಪ್ರಸ್ತಾವನೆಯ ಮೇಲೆ ಗಂಭೀರವಾಗಿತಕ್ಕಂಥ ಚರ್ಚೆಗಳು ನಡೆದಿದೆ. ರಾಜ್ಯದ ವಿಧಾನ ಮಂಡಲದ ಎರಡೂ ಸದನಗಳು ಅಂದರೆ, ಮೇಲ್ಮನೆ ಮತ್ತು ಕೆಳಮನೆಯ ಈ ಒಂದು ವ್ಯವಸ್ಥೆಯಲ್ಲಿ ರಾಜ್ಯದಲ್ಲಿ ಈ ಮೇಲ್ಮನೆಗೆ ಒಂದು ದೊಡ್ಡ ಮಟ್ಟದ 'ಚಿಂತಕರ ಚಾವಡಿ' ಎಂಬ ಹಿನ್ನೆಲೆಯನ್ನು ಹೊಂದಿರತಕ್ಕಂಥ ಸದನವಾಗಿದೆ. ಇಲ್ಲಿ ಹಲವಾರು ರೀತಿಯ ಉತ್ತಮವಾದಂತಹ ಚರ್ಚೆಗಳನ್ನು ಮಾಡಿರತಕ್ಕಂಥ ಸದನದ ಕಲಾಪದ ಇತಿಹಾಸದ ದಾಖಲೆಗಳು ಇರತಕ್ಕಂಥದ್ದು ಎನ್ನುವುದು ನನ್ನ ಒಂದು ಅಭಿಪ್ರಾಯವಾಗಿದೆ. ಎರಡನೇ ಬಾರಿಗೆ ನಾನು ಈ ರಾಜ್ಯದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖ್ಯಮಂತ್ರಿಯಾಗಿ ಇವತ್ತಿನ ದಿವಸ ಮೊದಲನೆಯ ಬಾರಿಗೆ ಮೇಲ್ಮನೆಯ ಈ ಸಭಾಂಗಣಕ್ಕೆ ಬಂದಿದ್ದೇನೆ.

ಮೊದಲನೆಯದಾಗಿ, ಗೌರವಾನ್ವಿತ ರಾಜ್ಯಪಾಲರ ಭಾಷಣಕ್ಕೆ ನಮ್ಮ ಸದಸ್ಯರು ಇವತ್ತಿನ ದಿವಸ ಸದನದ ಒಪ್ಪಿಗೆಯನ್ನು ಪಡೆಯತಕ್ಕಂಥ ನಿರ್ಣಯವನ್ನು ಮಂಡನೆ ಮಾಡಿದ್ದಾರೆ. ಮೊದಲನೆಯದಾಗಿ ತಮಗೆ ಮತ್ತು ಈ ಸದನದ ಎಲ್ಲಾ ಮಾನ್ಯ ಸದಸ್ಯರುಗಳಿಗೆ ನನ್ನ ಗೌರವಪೂರ್ವಕವಾದಂತಹ ವಂದನೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ಇವತ್ತು ಸದನದಲ್ಲಿ ಸುಮಾರು 7 ಗಂಟೆ 50 ನಿಮಿಷಗಳ ಕಾಲ ಸದನದ ಹಲವಾರು ಗೌರವಾನ್ವಿತ ಹಿರಿಯ ಸದಸ್ಯರುಗಳು ಮತ್ತು ಗೌರವಾನ್ವಿತ ಕಿರಿಯ ಸದಸ್ಯರುಗಳು ಸೇರಿ ಒಟ್ಟು ಸುಮಾರು 21 ಜನ ಸದಸ್ಯರುಗಳು ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ನನ್ನ ಸರ್ಕಾರದ ಮುಂದಿನ ಒಂದು ಹೊಸ ದಾರಿಯ ಬಗ್ಗೆ, ಹೊಸ ದಿಕ್ಕಿನ ಬಗ್ಗೆ ನಮ್ಮ ಒಂದು ಮೈತ್ರಿ ಸರ್ಕಾರದ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ವಿರೋಧಪಕ್ಷದ ಎಲ್ಲಾ ಗೌರವಾನ್ವಿತ ಸದಸ್ಯರುಗಳು 'ಈ ಒಂದು ಕಿರುಹೊತ್ತಿಗೆಯಲ್ಲಿ ಏನು ನಿರ್ದೇಶನವೇ ಇಲ್ಲ. ಈ ಒಂದು ರಾಜ್ಯಪಾಲರ ಭಾಷಣದಲ್ಲಿ ಯಾವುದೇ ರೀತಿಯ ಈ ಸಮ್ಮಿಶ್ರ ಸರ್ಕಾರದ ಮುಂದಿನ ನಡವಳಿಕೆಗಳೇನು ಎನ್ನತಕ್ಕಂಥ ವಿಷಯಗಳೇ ಇಲ್ಲ' ಎನ್ನತಕ್ಕಂಥ ಮಾತುಗಳನ್ನೇ ಹೇಳುತ್ತಾ, ಸುಮಾರು 7 ಗಂಟೆ 50 ನಿಮಿಷಗಳ ಕಾಲ ಚರ್ಚೆ ಮಾಡಿದ್ದಾರೆ. ಈ ಒಂದು ಪ್ರತಿಯಲ್ಲಿ ನಮ್ಮ ಗೌರವಾನ್ವಿತ ರಾಜ್ಯಪಾಲರು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಿರತಕ್ಕಂಥ ನಮ್ಮ ಸರ್ಕಾರದ ಮುಂದಿನ ಹಾದಿಯ ಬಗ್ಗೆ ತಮ್ಮಗಳ ಭಾವನೆಯಲ್ಲಿ ಇದರಲ್ಲಿ ಏನೂ ಸತ್ವವೇ ಇಲ್ಲವೆಂದು ತಾವುಗಳೇ ಇವತ್ತಿನ ದಿವಸ ವ್ಯಕ್ತಪಡಿಸುತ್ತಾ, ಸುಮಾರು ಒಂದೊಂದು ಗಂಟೆ ಕಾಲ ಚರ್ಚೆ ಮಾಡಿದ್ದಾರೆ. ಸತ್ವವೇ ಇಲ್ಲದಿರತಕ್ಕಂಥ ಭಾಷಣದ ಬಗ್ಗೆ ಚರ್ಚೆ ಮಾಡಿರತಕ್ಕಂಥ ಎಲ್ಲಾ ಗೌರವಾನ್ವಿತ ಮಾನ್ಯ ವಿರೋಧಪಕ್ಷದ ಸದಸ್ಯರುಗಳಿಗೆ ಮೊದಲನೆಯದಾಗಿ, ಸರ್ಕಾರದ ಪರವಾಗಿ ನಿಮಗೆಲ್ಲಾ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಇವತ್ತು ನಾನು ಮೊದಲೇ ಹೇಳಿದಂತಹ ರೀತಿಯಲ್ಲಿ ಈ ಮೇಲ್ಮನೆಗೆ ನಡೆಯುತಕ್ಕಂಥ ಚರ್ಚೆಗಳಲ್ಲಿ ವಿಶೇಷ ಮನ್ನಣೆ ನೀಡತಕ್ಕಂಥ ಹಲವಾರು ಪರಂಪರೆಯನ್ನು ಸೃಷ್ಟಿ ಮಾಡಿರತಕ್ಕಂಥ ಸದನ ಇದು. ಈ ಒಂದು ಮೇಲ್ಮನೆಯಲ್ಲಿ ಸಭಾನಾಯಕಿಯಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿತಕ್ಕಂಥ ಡಾ||ಜಯಮಾಲ ರಾಮಚಂದ್ರರವರನ್ನು ಈ ಒಂದು ಸದನದ ಸಭಾನಾಯಕಿಯಾಗಿ ಆಯ್ಕೆ ಮಾಡಿರತಕ್ಕಂಥ ಸಮ್ಮಿಶ್ರ ಸರ್ಕಾರದ ನಾಯಕರುಗಳಿಗೆ ಹಾಗೂ ಎಲ್ಲಾ ಮಾನ್ಯ ಸದಸ್ಯರುಗಳಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದು ಒಂದು ಮಹಿಳೆಯರಿಗೆ ಸಿಕ್ಕಿರತಕ್ಕಂಥ ಗೌರವ ಎನ್ನತಕ್ಕಂಥ ಭಾವನೆಯನ್ನು ಮೊದಲನೆಯದಾಗಿ ನಾನು ವ್ಯಕ್ತಪಡಿಸುವುದಕ್ಕೆ ಬಯಸುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರುಗಳು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು.)**

ಮಾನ್ಯ ಸಭಾಪತಿಯವರೇ, ಈ ಒಂದು ರಾಜ್ಯಪಾಲರ ಭಾಷಣದಲ್ಲಿ ನಾನು ನನ್ನ ಮನಸ್ಸಿನಲ್ಲಿ ಇಟ್ಟುಕೊಂಡಿರತಕ್ಕಂಥದ್ದು, ಬಹಳ ದೊಡ್ಡಮಟ್ಟದ ಭಾಷಣದ ಪ್ರತಿಯನ್ನು ಸದನದಲ್ಲಿ ಗೌರವಾನ್ವಿತ ರಾಜ್ಯಪಾಲರ ಮುಖಾಂತರ ಮಾತನಾಡಿಸುವುದಕ್ಕೆ ತಯಾರು ಮಾಡದೇ ಇದ್ದರೂ, ನನ್ನ ಸಣ್ಣ 12 ಪುಟಗಳ ನಮ್ಮ ಸಚಿವ ಸಂಪುಟದ ತೀರ್ಮಾನಗಳನ್ನು ನಾವು ಮಾಡಿ ಗೌರವಾನ್ವಿತ ರಾಜ್ಯಪಾಲರಿಂದ ಈ ಒಂದು ಜಂಟಿ ಸದನವನ್ನು ಉದ್ದೇಶಿಸಿ ಮಾತನಾಡುವುದಕ್ಕೆ ಅವರಿಗೆ ಆಹ್ವಾನ ಕೊಟ್ಟು, ಅವರು ಈ ಒಂದು ಭಾಷಣವನ್ನು ಮಾಡಿದ್ದಾರೆ. ಈ ಸರ್ಕಾರದ ಆಶಯಗಳು ಮತ್ತು ಧ್ಯೇಯಗಳನ್ನು ತಂದಿದ್ದೇವೆ ಎನ್ನತಕ್ಕಂಥದ್ದು ನನ್ನ ಅಭಿಪ್ರಾಯವಾಗಿದೆ. ಮಾನ್ಯ ಸಭಾಪತಿಯವರೇ, ನನ್ನ ಒಂದು ಸಮ್ಮಿಶ್ರ ಸರ್ಕಾರವೇನಿದೆ, ಈ ಸರ್ಕಾರದ ಆದ್ಯತೆಗಳೇನೆಂಬ ಬಗ್ಗೆ ಬಹುಶಃ ಮೊದಲನೆ ಮೂರು ಪುಟಗಳಲ್ಲಿ ರೈತರ ಬಗ್ಗೆ ಚರ್ಚೆ ಮಾಡಿದ್ದೇನೆ. 'ಮಾನ್ಯ ರಾಜ್ಯಪಾಲರ ಭಾಷಣದ ಕಿರುಹೊತ್ತಿಗೆಯಲ್ಲಿ ಏನಿದೆ' ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ನನ್ನ concern ಇರುವಂಥದ್ದು, ನಮ್ಮ ಸಮ್ಮಿಶ ಸರ್ಕಾರದ ಬದ್ಧತೆ ಇರುವಂತದ್ದು. ನಮ್ಮ ರೈತ ಸಮುದಾಯಕ್ಕೆ ಮಾನ್ಯ ರಾಜ್ಯಪಾಲರ ಮೂಲಕ ಜಂಟಿ ಸದನದ ಸದಸ್ಯರನ್ನು ಉದ್ದೇಶಿಸಿ ಮಾತನಾಡಿರುವಂತಹ ಭಾಷಣದಲ್ಲಿ ನಮ್ಮ ರೈತರ ಪ್ರಾಣವನ್ನು ಉಳಿಸುವುದಕ್ಕೆ ಮನವಿ ಮಾಡಿದ್ದೇನೆ. ನಮ್ಮ ರೈತರಿಗೆ ನ್ಯಾಯಯುತ ಬೆಲೆ ಖಚಿತ ಪಡಿಸುವ ಮಾದರಿ ಹಾಗೂ ಪ್ರಾಯೋಗಿಕ ಯೋಜನೆಯನ್ನು ಇಡೀ ರಾಷ್ಟ್ರದಲ್ಲಿಯೇ ಪ್ರಪ್ರಥಮವಾಗಿ ಕರ್ನಾಟಕದಲ್ಲಿ ಜಾರಿಗೆ ತರಲು ನನ್ನ ಸರ್ಕಾರ ಉತ್ಸುಕವಾಗಿದೆ.

(083) 04.07.2018-06.10-ಎಂವಿ-ಎಂಡಿ

**ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿ) (ಮುಂದು...):-**

ರೈತರಿಗೆ ನ್ಯಾಯಯುತ ಬೆಲೆ ಖಚಿತಪಡಿಸುವ ಮಾದರಿ ಹಾಗೂ ಪ್ರಾಯೋಗಿಕ ಯೋಜನೆಯನ್ನು ಇಡೀ ರಾಷ್ಟ್ರದಲ್ಲಿಯೇ ಪ್ರಪ್ರಥಮವಾಗಿ ಕರ್ನಾಟಕದಲ್ಲಿ ಜಾರಿಗೆ ತರಲು ನನ್ನ ಸರ್ಕಾರ ಉತ್ಸುಕವಾಗಿದೆ. ಆತಂಕದ ದಿನಗಳು ಇನ್ನಿಲ್ಲ. ಧ್ವನಿ ಇಲ್ಲದ ರೈತನಿಗೆ ಧ್ವನಿಯಾಗಬೇಕು ಎಂಬುದು ನನ್ನ ಸರ್ಕಾರದ ಆಶಯ. ಯಾವುದೇ ಕಾರಣಕ್ಕೂ ರೈತರು ಆತ್ಮಹತ್ಯೆಗೆ ಶರಣಾಗಬಾರದು ಎಂದು ಈ ಸದನದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂಲಕ ರೈತ ಸಮುದಾಯಕ್ಕೆ ಮನವಿ ಮಾಡುತ್ತೇನೆ. ಇದಕ್ಕಿಂತಲೂ ನನಗೆ ದೊಡ್ಡ ಮಟ್ಟದ ಭಾಷಣದ ಅವಶ್ಯಕತೆ ಇಲ್ಲ. ಈ ಸರ್ಕಾರದ ಮುಂದಿನ ನಡೆ, ನೀವು ಯಾವ ಅನ್ನದಾತನ ಬಗ್ಗೆ ಚರ್ಚೆ ಮಾಡಿದ್ದೀರಿ. ಮಾನ್ಯ ಬಿ.ಎಸ್.ಯಡಿಯೂರಪ್ಪನವರಿಗೆ ಮತ್ತು ಬಿಜೆಪಿ ಪಕ್ಷದವರಿಗೆ ನಾಳೆಯ ಬಜೆಟ್ ಮಂಡನೆಯಲ್ಲಿ ಸಾಲ ಮನ್ನಾವಾದರೆ, ಅದರ credit ಎರಡೂ ಪಕ್ಷಗಳಿಗೆ ಅಲ್ಲ. ನಮಗೆ ಬರಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಪ್ರಥಮವಾಗಿ ನಾನು ನೆನಪಿಸಿಕೊಡುತ್ತೇನೆ. ಇದೇ ಸದನದಲ್ಲಿ ಮಾನ್ಯ ವಿ.ಎಸ್.ಉಗ್ರಪ್ಪನವರು 2009-10ರಲ್ಲಿ, ಅಂದರೆ ಡಿಸೆಂಬರ್ 30ರಂದು ನಡೆದಿರುವಂತಹ ಸದನದಲ್ಲಿ. ಏನು ಎರಡು ಪಕ್ಷಗಳ ಪ್ರಣಾಳಿಕೆಯನ್ನು ಇಟ್ಟುಕೊಂಡು ತೋರಿಸುತ್ತಿದ್ದಾರೆ. ಅದನ್ನು ಮಾಡುತ್ತಾರೋ, ಇದನ್ನು ಮಾಡುತ್ತಾರೋ ಎಂದು ತುಂಬಾ ಚೆನ್ನಾಗಿ ಕೇಳಿದ್ದಾರೆ, ಅದನ್ನು ನನಗೆ ನೆನಪಿಸಿಕೊಟ್ಟಿದ್ದಾರೆ. ಅದನ್ನು ನನಗೆ ನೆನಪಿಸಿಕೊಟ್ಟಿರುವುದಕ್ಕೆ ನಿಮಗೆ ಅಭಿನಂದಿಸುತ್ತೇನೆ. ಮಾನ್ಯ ರಾಜ್ಯಪಾಲರು ಭಾಷಣ ಮಾಡಿದಂತಹ ಸಂದರ್ಭದಲ್ಲಿ, ಮಾನ್ಯ ವಿರೋಧ ಪಕ್ಷದ ನಾಯಕರು ಐದನೇ ವರ್ಷದಲ್ಲಿ ಮಾಡಬೇಕಾಗಿರುವ ಭಾಷಣವನ್ನು ಮೊದಲನೇ ವರ್ಷದಲ್ಲಿ ಭಾಷಣ ಮಾಡಿದ್ದಾರೆ. ಐದನೇ ವರ್ಷಕ್ಕೆ ನಮ್ಮ ಸರ್ಕಾರ ಏನು ಮಾಡಿದೆ ಎನ್ನುವುದನ್ನು, ಅವತ್ತು ಚರ್ಚೆ ಮಾಡಬೇಕಾಗಿರುವುದನ್ನು, ಮಾನ್ಯ ರಾಜ್ಯಪಾಲರ ಮೊದಲನೆ ಭಾಷಣದಲ್ಲೇ ಚರ್ಚೆ ಮಾಡಿದ್ದಾರೆ ಅದಕ್ಕೆ ನನಗೆ ಸಂತೋಷವಾಗಿದೆ. ಬೀದಿಗೆ ಇಳಿಯುತ್ತೇವೆಂದು ಹೇಳಿದ್ದಾರೆ, ಸಂತೋಷವಾಗಿ ಬೀದಿಗೆ ಇಳಿಯಿರಿ, ಬೀದಿಗೆ ಬರುವುದಕ್ಕೆ ನಿಮಗೆ ಸ್ವಾಗತ. ಸಾಲ ಮನ್ನಾ ಸಾಧ್ಯವಿಲ್ಲ, ಮಾತಿಗೆ ತಪ್ಪಿದ ಶ್ರೀ ಬಿ.ಎಸ್.ಯಡಿಯೂರಪ್ಪ, ಮತಗಳಿಗಾಗಿ ಆಶ್ವಾಸನೆ ನೀಡಿದ್ದೆ ಎಂದ ಸಿ.ಎಂ. ಮತಕ್ಕಾಗಿ ಇತರ ಪಕ್ಷಗಳು ಹೇಳಿದಂತೆ, ನಾನು ಕೂಡ ರೈತರ ಕೃಷಿ ಸಾಲವನ್ನು ಮನ್ನಾ ಮಾಡುತ್ತೇನೆಂದು ಚುನಾವಣೆಯ ಸಂದರ್ಭದಲ್ಲಿ ಆಶ್ವಾಸನೆ ನೀಡಿದ್ದೆ. ಆದರೆ, ಇದು ಸಾಧ್ಯವಿಲ್ಲ ಎಂಬುದು ಈಗ ಅರ್ಥವಾಗುತ್ತಿದೆ. ಇದು ಈಗ ಜಾಗದಲ್ಲಿ ನಿಂತುಕೊಂಡು ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮಾಡಿದ ಭಾಷಣ. ನಾಳೆ ಬೆಳಗ್ಗೆ ಇದಕ್ಕೆ ಕ್ರೆಡಿಟ್ ತೆಗೆದುಕೊಳ್ಳುತ್ತಾರೆಯೆ? ನಾವು ಹೋರಾಟ ಮಾಡಿ, ಮಾನ್ಯ ಬಿ.ಎಸ್.ಯಡಿಯೂರಪ್ಪನವರ ಒಂದು ಘರ್ಜನೆ, ವಿರೋಧ ಪಕ್ಷದ ನಾಯಕರು ಈಗ ಏನು ಭಾಷಣ ಮಾಡಿದ್ದಾರೆ. ನಾನು ನಿಮ್ಮ ಘರ್ಜನೆಯಿಂದ ಸಾಲ ಮನ್ನಾ ಮಾಡುತ್ತೇನೆಯೇ? ನಾನು ಈಗಾಗಲೇ ಅದನ್ನು ಮಾಡಿ ತೋರಿಸಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿರುವುದು ಪತ್ರಿಕಾ ವರದಿಯೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಇಲ್ಲಿ ನಡೆದಿರುವಂತಹ ನಡವಳಿಗಳು.

(ಗೊಂದಲ)

ಮಾನ್ಯ ಸಭಾಪತಿಯವರೇ, ಬಹುಶಃ ಮಾನ್ಯ ವಿರೋಧ ಪಕ್ಷದ ನಾಯಕರು 2010ರಲ್ಲಿ ಸದನದಲ್ಲಿ ಇರಲಿಲ್ಲವೆಂದು ಕಾಣುತ್ತದೆ. ನಾನು ಹೇಳುತ್ತಿರುವುದು ಸದನದಲ್ಲಿ ನಡೆದಿರುವಂಥದ್ದು. ಇದು ಸದನದ ಕಡತದಲ್ಲಿ ಇರುವಂಥದ್ದು, ಪತ್ರಿಕೆಯಲ್ಲಿ ಬಂದಿರುವಂಥದ್ದು ಅಲ್ಲ. ನಾನು ಇದನ್ನು ಘಟಕ್ಕೆ ನೆನಪಿಸಿಕೊಡುತ್ತೇನೆಂದರೆ, ತಾವು ಹೇಳಿದ ಹಾಗೆ ರಾಜಕೀಯ ಭಾಷಣಕ್ಕೆ ಪ್ರಾರಂಭದಲ್ಲೇ ಬರುತ್ತೇನೆ. ಆಮೇಲೆ ನಮ್ಮ ಸರ್ಕಾರದ ಬಗ್ಗೆ ಹೇಳುತ್ತೇನೆ. ತಾವು ಹೇಳಿದ ಹಾಗೆ 90 ಮಾರ್ಕ್ಸ್ ತೆಗೆಯುವ ಸ್ಟೂಡೆಂಟ್, 60 ಮಾರ್ಕ್ಸ್ ತೆಗೆದಿರುವಂತಹ ಸ್ಟೂಡೆಂಟ್ ಮತ್ತು 35 ಮಾರ್ಕ್ಸ್ ತೆಗೆದಿರುವಂತಹ ಸ್ಟೂಡೆಂಟ್ ಎಂದು ಹೇಳಿದ್ದಾರೆ ಹೌದು. ಈ ಚುನಾವಣೆಯಲ್ಲಿ ವಿರೋಧ ಪಕ್ಷದವರು 104 ಸ್ಥಾನಗಳನ್ನು ಗೆದಿದ್ದಾರೆ, ಈ ರಾಜ್ಯದ ಜನತೆ ನಿಮಗೆ ಕೊಟ್ಟಿದ್ದಾರೆ. ನಿಮಗೆ ಬಂದಿರುವ 104 ಸ್ಥಾನಗಳಿಗೆ ನೀವು ಸರ್ಕಾರ ರಚನೆ ಮಾಡುವುದಕ್ಕೆ ಯಾವುದೇ ಪಕ್ಷೇತರ ಅಭ್ಯರ್ಥಿಗಳು ಇರಲಿಲ್ಲ. ಗೆದ್ದಿದಂತಹ ಇಬ್ಬರು ಪಕ್ಷೇತರ ಶಾಸಕರು ಆಗಲೇ ಕಾಂಗ್ರೆಸ್ ಪಕ್ಷದ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಸೇರಿಕೊಂಡಿದ್ದರು. ಸರ್ಕಾರ ರಚನೆ ಮಾಡುವುದಕ್ಕೆ 113 ಸಂಖ್ಯೆಯೇ ಇರಲಿಲ್ಲ, ಆದರೂ ಬಿ.ಜೆ.ಪಿ. ಅವರು ಸರ್ಕಾರವನ್ನು ರಚನೆ ಮಾಡಿದರು. ಎಷ್ಟು ದಿನಗಳ ಕಾಲ ಅವರು ಸದನದಲ್ಲಿ Vote of Confidence ಅನ್ನು move ಮಾಡುವುದಕ್ಕೆ ಸಮಯ ತೆಗೆದುಕೊಂಡಿದ್ದರು. ಈಗ ನಾನು ಅದನ್ನೆಲ್ಲಾ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಇವತ್ತು 37 ಸಂಖ್ಯೆಯ ಬಗ್ಗೆ ಚರ್ಚೆ ಮಾಡುತ್ತಾರೆ. 37 ಜನ ಶಾಸಕರನ್ನು ಇಟ್ಟುಕೊಂಡಿರುವಂತಹವರು ಮುಖ್ಯಮಂತ್ರಿಯಾದದ್ದು, ಆದರೆ, 60 ಮಾರ್ಕ್ಸ್ ತೆಗೆದುಕೊಂಡವರು ಮುಖ್ಯಮಂತ್ರಿಯಾಗಿದ್ದರೆ ಒಪ್ಪಿಕೊಳ್ಳುವೆವು. 78 ಸೀಟುಗಳನ್ನು ಗೆದ್ದು ಅವರು ಮುಖ್ಯಮಂತ್ರಿಯಾಗದೆ, 37 ಮಾರ್ಕ್ಸ್ ತೆಗೆದುಕೊಂಡವರನ್ನು ಮುಖ್ಯಮಂತ್ರಿ ಮಾಡಿದರು ಎಂದು. ಕೆಳಮನೆಯಲ್ಲೂ ಮಾತನಾಡುತ್ತಾರೆ ಮತ್ತು ಮೇಲ್ಮನೆಯಲ್ಲೂ ಮಾತನಾಡುತ್ತಾರೆ. ಫೆಬ್ರವರಿ 3, 2006 ಅನ್ನು ನಿಮಗೆ ಜ್ಞಾಪಿಸಿಕೊಡುತ್ತೇನೆ. 2004ರಲ್ಲಿ ಇದೇ ರೀತಿ ಯಾವುದೇ ಪಕ್ಷಗಳಿಗೆ ಬಹುಮತ ಬರದೆ ಇದ್ದಾಗ, ಮೊದಲನೆ ಹಂತದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರ ರಚನೆ ಆಯಿತು. ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಆ ಸಂದರ್ಭದಲ್ಲಿ ನಾನು ಕೆಳಮನೆ ಸದನದಲ್ಲಿ ಕೊನೆ ಬೆಂಚ್‌ನಲ್ಲಿ ಕುಳಿತುಕೊಳ್ಳುತ್ತಿದ್ದೆ. ನನ್ನದು ಏನು ಚಟುವಟಿಕೆ ಇರಲಿಲ್ಲ. ಏನೇನು ನಡೆಯಿತು ಎಂದು ಇಲ್ಲಿ ಹೇಳುವುದಿಲ್ಲ, ಅದನ್ನು ನಾಡಿದ್ದು ಅಲ್ಲಿ ಹೇಳುತ್ತೇನೆ. ಏಕೆಂದರೆ, ಅಲ್ಲಿ ನಿಮ್ಮ ವಿರೋಧ ಪಕ್ಷದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾಯಕರು ಬಹಳ ವಿರಾವೇಶದ ಭಾಷಣವನ್ನು ಮಾಡಿದ್ದಾರೆ, ದಗಲ್‌ಬಾಜಿ ರಾಜಕಾರಣ ಎಂದು ಹೇಳಿದ್ದಾರೆ. ಅದನ್ನು ಅಲ್ಲಿ ಹೇಳುತ್ತೇನೆ, ಇಲ್ಲಿ ಹೇಳುವುದಿಲ್ಲ, ಇಲ್ಲಿಗೆ ಅದರ ಅವಶ್ಯಕತೆ ಇಲ್ಲ. ಮಾನ್ಯ ಸಭಾಪತಿಯವರೇ, ಅವತ್ತು ಬಿಜೆಪಿ ಯವರು 79 ಸೀಟ್‌ಗಳು ಮತ್ತು ಜೆಡಿಯು ನವರು 05 ಸೀಟ್‌ಗಳನ್ನು ಗೆದಿದ್ದರು. ಅದು ನನ್ನ ನೆನಪಿನಲ್ಲಿ ಇದೆ. ನೀವು 84 ಜನರ ಇದ್ದಂತಹವರು, ಅವೊತ್ತು ನಮ್ಮಲ್ಲಿ ಬ್ರೇಕ್ ಆಗಿದ್ದು 38 ಜನ. ಅವರು 84 ಜನ ಇದ್ದವರು, 38 ಜನರ ಹತ್ತಿರಕ್ಕೆ ಏಕೆ ಓಡಿ ಬಂದರು. ನಾನು ನಿಮ್ಮ ಬಳಿ ಬಂದಿದ್ದೇನಾ ಎಂದು ನೀವು ನಿಮ್ಮ ನಾಯಕರನ್ನು ಕೇಳಬೇಕು. ನಾನು ಬಂದಿರಲಿಲ್ಲ, ನೀವೇ ಬಂದಿದ್ದು. ನೀವು ಅವತ್ತು 84 ಜನರನ್ನು ಇಟ್ಟುಕೊಂಡು, ನಮ್ಮ 38 ಜನರನ್ನು ಕರೆದುಕೊಂಡು ನನ್ನನ್ನು ಬಾರಪ್ಪ ಮುಖ್ಯಮಂತ್ರಿಯಾಗು ಎಂದು ಕರೆದರು. ಈಗ ಏನು ಶಾಂತಿವನದ ಬಗ್ಗೆ ಹೇಳುತ್ತಿದ್ದಾರೆ. ಫೆಬ್ರವರಿ 3ನೇ ತಾರೀಖಿಗೆ ಸರ್ಕಾರ ರಚನೆಯಾಗುತ್ತದೆ, ಈಗ ಅವರು ಸದನದಲ್ಲಿ ಇಲ್ಲ, ಅವರು ಎರಡೇ ತಿಂಗಳಿಗೆ ಅಂದರೆ ಮೇ ತಿಂಗಳಿನಲ್ಲಿ ಸದನದ ಮೂಲೆಯಲ್ಲಿ ಒಂದು ಸಿಡಿಯನ್ನು ತೋರಿಸಿದರು. ಮಾನ್ಯ ಕುಮಾರ ಸ್ವಾಮಿಯವರು ಗಣಿ ಮಾಲೀಕರಿಂದ ಸುಮಾರು 150 ಕೋಟಿ ರೂಪಾಯಿಗಳ ಹಣ ಸಂಗ್ರಹ ಮಾಡಿದ್ದಾರೆಂದು ಹೇಳಿದರು. ಮಾನ್ಯ ಸಿದ್ದರಾಮಯ್ಯನವರು ಎಲ್ಲೋ off the recordನಲ್ಲಿ ಯಾರೋ ಸ್ನೇಹಿತರ ಜೊತೆ ಚರ್ಚೆ ಮಾಡಿರುವುದನ್ನು, ಇಲ್ಲಿ ಪ್ರಸ್ತಾಪ ಮಾಡಿಕೊಂಡು ಶಾಂತಿವನದ ಕಥೆ ಹೇಳುವುದಕ್ಕೆ ಬರದಿದ್ದಿರಲ್ಲ. ನಮ್ಮ ಮಾನ್ಯ ಸಿ.ಎಂ.ಇಬ್ರಾಹಿಂ ಸಾಹೇಬರು ಹೇಳಿದರು. ಬೇಕಾದಷ್ಟು ವಿಷಯಗಳನ್ನು ಚರ್ಚೆ ಮಾಡಿರುತ್ತೇವೆ. ರಾಜಕೀಯ ವಿಶ್ಲೇಷಣೆ ಇಟ್ಟುಕೊಂಡು ಮಾಡಿಕೊಂಡಿರುತ್ತೇವೆ. ಅದು ಅವರ ಮನಸ್ಸಿನ ಭಾವನೆ ಅಲ್ಲ. ಆದರೆ, ನೀವು ತಿಳಿದುಕೊಂಡಿರಬಹುದು. ಮಾನ್ಯ ಸಿದ್ದರಾಮಯ್ಯನವರೆ ಈ ಸರ್ಕಾರವನ್ನು ತೆಗೆದುಬಿಡುತ್ತಾರೆ ಎಂದು. ಆದರೆ, ನನಗೆ ವಿಶ್ವಾಸ ಇದೆ ಮಾನ್ಯ ಸಿದ್ದರಾಮಯ್ಯನವರಿಂದಲೆ ಈ ಸರ್ಕಾರ ಮುಂದಕ್ಕೂ ಉಳಿಯುತ್ತದೆ ಮತ್ತು ಐದು ವರ್ಷ ಇರುತ್ತದೆ. ಇದು ನನ್ನ ಅಭಿಪ್ರಾಯ. ಅವತ್ತು ಎರಡೇ ತಿಂಗಳಿಗೆ ನನ್ನ ಮೇಲೆ 150 ಕೋಟಿ ರೂಪಾಯಿಗಳನ್ನು ತಂದರು. ಅವತ್ತು ಯಾರಾದರೂ ನನ್ನ ರಕ್ಷಣೆಗೆ ಬಂದಿದ್ದೀರಾ? ಏತಕ್ಕೆ ಆ 150 ಕೋಟಿ ರೂಪಾಯಿಗಳ ಹಗರಣವನ್ನು ತಂದರು? ನಾನು 150 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದೇನೆ ಎಂದು ನಿಮ್ಮ ಭಾವನೆ ಇದ್ದಾಗ, ಅವತ್ತು ನನ್ನನ್ನು ಏತಕ್ಕೆ ಮುಂದುವರಿಸಿದರು? ನಮ್ಮ ಶಾಸಕರೇ ನಿಮ್ಮ ಮೇಲೆ ಈ ರೀತಿಯ ಆಪಾಧನೆ ಮಾಡಿದ್ದಾರೆ, ಆದುದರಿಂದ ನಿಮಗೆ ಬೆಂಬಲ ಕೊಡುವುದಕ್ಕೆ ಸಾಧ್ಯವಿಲ್ಲ, ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಏಕೆ ಹೇಳಲಿಲ್ಲ. ಅವತ್ತು ಏನು ಭಿನ್ನಾಭಿಪ್ರಾಯಗಳು ಇರಲಿಲ್ಲವೆ? ನೈಸ್ ಕಂಪನಿಯ ವಿಷಯದಲ್ಲಿ ಕ್ಯಾಬಿನೇಟ್‌ಗೆ ಒಂದು subject ಬಂದರೆ, ಮಾನ್ಯ ಸಭಾಪತಿಯವರೇ, ತಾವು ಸಹ ಅಂದಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಂತ್ರಿಮಂಡಲದಲ್ಲಿ ಇದ್ದೀರಿ. ನೀವು ಎರಡೂ ಪಕ್ಷಗಳ ಮಧ್ಯದಲ್ಲಿ ಓಡಾಟ ಮಾಡುತ್ತಿದ್ದೀರಿ, ಪಂಚಾಯಿತಿ ಮಾಡಿ ಸಂಧಾನ ಮಾಡುವುದಕ್ಕೆ.

**ಸಭಾಪತಿಯವರು**:- ನಾನು ಸಂಧಾನ ಮಾಡುವುದಕ್ಕೆ 13 ಬಾರಿ ಓಡಾಡಿದ್ದೇನೆ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವತ್ತು ಸಾಯಂಕಾಲ ಆರು ಗಂಟೆವರೆಗೂ ಕ್ಯಾಬಿನೇಟ್‌ಗೆ ಬರಲಿಲ್ಲ, ಇವುಗಳೆಲ್ಲಾ ಇತಿಹಾಸ. ಈಗ ನಾವು ಮತ್ತು ಶ್ರೀ ಸಿದ್ಧರಾಮಯ್ಯನವರು ಚರ್ಚೆ ಮಾಡಿರುವುದನ್ನು, ಮತ್ತೆ ಇನ್ಯಾರೋ ಚರ್ಚೆ ಮಾಡಿರುವುದನ್ನು ಹೇಳುತ್ತಿರಲ್ಲ. ನಾನು ನಾಡಿದ್ದು ಅಲ್ಲಿ ಚರ್ಚೆ ಮಾಡುತ್ತೇನೆ. ಎಲ್ಲವನ್ನು ಸಹ ತೆಗೆದು ಇಟ್ಟುಕೊಂಡಿದ್ದೇನೆ. ಕೆಜೆಪಿ ಆದಾಗ ಯಾರ್‍ಯಾರು ಏನೇನು ಮಾತನಾಡಿದರು, ಬಿಜೆಪಿ ನಾಯಕರು ಏನು ಮಾತನಾಡಿದರು ಎಂದು. ಬಹುಶಃ ಮಾನ್ಯ ಲೆಹರ್ ಸಿಂಗ್‌ರವರಿಗೆ ಎಲ್ಲಾ ವಿಷಯಗಳು ಗೊತ್ತಿದೆ. ಏನೇನು ಮಾತನಾಡಿದ್ದಾರೆಂದು ಅವುಗಳನ್ನು ಇಲ್ಲಿ ಇಟ್ಟುಕೊಂಡಿದ್ದೇನೆ. ಏನೇನು ಚರ್ಚೆ ಮಾಡಿದ್ದಾರೆ ಎಂದು ನಾಡಿದ್ದು ಅಲ್ಲಿ ಚರ್ಚೆ ಮಾಡುತ್ತೇನೆ. ಆದುದರಿಂದ ನಿಮಗೆ sample ಹೇಳುತ್ತಿದ್ದೇನೆ. ಏನೋ ಹೇಳುತ್ತಿದ್ದಾರಲ್ಲ, ಓಹೋ ನಾವು ನಾಳೆ ಬೆಳಗ್ಗೆ ಕಾಯುತ್ತಿದ್ದೇವೆ ಎಂದು.

**(ಮುಂದು...)**

(084) 04.07.2018 6.20 ವೈಎಲ್-ಎಂಡಿ

**ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಂದು):-**

ನಾವು ನಾಳೆ ಬೆಳಗ್ಗೆಯವರೆಗೂ ಕಾಯುತ್ತೇವೆ. ಸಾಲ ಮನ್ನಾ ಐವತ್ಮೂರು ಸಾವಿರ ಕೋಟಿ ರೂಪಾಯಿಗಳು ಹಾಗೂ ಗರ್ಭಿಣಿ ತಾಯಂದಿರಿಗೆ 6000 ರೂಪಾಯಿಗಳು, ಹಿರಿಯ ನಾಗರೀಕರಿಗೂ 6000 ರೂಪಾಯಿ ಕೊಡಬೇಕೆಂದು ಏನು ವಿರೋಧ ಪಕ್ಷದವರು ಹೇಳುತ್ತಿದ್ದಾರೆ, ಅದಕ್ಕೆ ಇನ್ನೂ ಸಮಯ ಇದೆ. ನಾನು ಮುಖ್ಯಮಂತ್ರಿಯಾಗಿ ಇನ್ನೂ ಒಂದು ತಿಂಗಳಾಗಿಲ್ಲ, take-off ಆಗಿಲ್ಲ, ಯಾವ ಸರ್ಕಾರ ಅಧಿಕಾರದಲ್ಲಿದೆ ಎಂಬುದೇ ಗೊತ್ತಿಲ್ಲವೆಂದು ವಿರೋಧ ಪಕ್ಷದವರೇ ಹೇಳುತ್ತಿದ್ದಾರೆ. ಸರ್ಕಾರದ ಮೇಲೆ ನಂಬಿಕೆ ಇಲ್ಲದೇ ಇರುವಂಥವರು ಯಾವ ಕೆಲಸವನ್ನು ಇನ್ನೂ ಮಾಡಿಲ್ಲವೆಂದು ಏತಕ್ಕಾಗಿ ನಮಗೆ ಆ ಕೆಲಸ ಮಾಡಿಲ್ಲ, ಈ ಕೆಲಸ ಮಾಡಿಲ್ಲ ಎಂದು ಈಗಲೇ ಪ್ರಶ್ನೆಯನ್ನು ಮಾಡುತ್ತಿದ್ದಾರೆ. ಸಚಿವ ಸಂಪುಟದ ಸದಸ್ಯರನ್ನು ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ನೇಮಕ ಮಾಡಿದ ತಕ್ಷಣ ಆಡಳಿತ ನಡೆಯುತ್ತದೆ ಎಂದು ಪ್ರಶ್ನೆ ಮಾಡುತ್ತಿದ್ದೀರಾ? ಜಿಲ್ಲಾ ಉಸ್ತುವಾರಿ ಸಚಿವರು ಇಲ್ಲದೇ ಇದ್ದರೆ ಸರ್ಕಾರ ನಡೆಯುವುದಿಲ್ಲವೇ? ಮಂತ್ರಿಮಂಡಲ ಇಲ್ಲದೇ ಚುನಾವಣೆ ಪ್ರಕಟವಾದ ಮೇಲೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲಿರತಕ್ಕಂಥ ಅಧಿಕಾರಿಗಳೇ ಈ ರಾಜ್ಯವನ್ನು ನಡೆಸಿಲ್ಲವೇ? ಈ ಸರ್ಕಾರಕ್ಕೆ ಜಿಲ್ಲಾ ಉಸ್ತುವಾರಿ ಸಚಿವರನ್ನು ನೇಮಕ ಮಾಡದೇ ಇದ್ದರೂ, ಯಾವ ರೀತಿ ಅಧಿಕಾರಿಗಳಿಂದ ಕೆಲಸ ಮಾಡಿಸಬೇಕೆಂದು ಶಕ್ತಿಯನ್ನಿಟ್ಟುಕೊಂಡಿದ್ದೇವೆ. ಸರ್ಕಾರ ನಿದ್ದೆ ಮಾಡುತ್ತಿಲ್ಲ. ಶ್ರೀ ಆರ್.ವಿ.ದೇಶಪಾಂಡೆಯವರು ಯಾವ್ಯಾವ ಜಿಲ್ಲೆಗೆ ಹೋಗಿ ಬಂದಿದ್ದಾರೆ, ಏತಕ್ಕಾಗಿ ಹೋಗಿದ್ದರು. ಯಾವ ಭಾಗದಲ್ಲಿ ಮಳೆಯಿಂದಾಗ ಅನಾಹುತಗಳಾಗಿದೆ ಅಲ್ಲಿ ಸ್ಥಳ ಪರಿಶೀಲನೆ ಮಾಡಿ, ಬಿದ್ದು ಹೋದಂತಹ ಮನೆಗಳಿಗೆ ಈಗ ಇರತಕ್ಕಂಥ ಮಾರ್ಗದರ್ಶನವನ್ನು ತೆಗೆದು ಹಾಕಿ, ಈಗಾಗಲೇ ಸಚಿವ ಸಂಪುಟದಲ್ಲಿ ಯಾವ ರೀತಿಯಲ್ಲಿ ಮನೆ ಬಿದ್ದು ಹೋಗಿರುವವರಿಗೆ ಹೆಚ್ಚಿನ ನೆರವು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಎಲ್ಲಾ ಜಿಲ್ಲಾಧಿಕಾರಿಗಳಿಗೂ ತಕ್ಷಣ ಯಾವುದೇ ಸಮಸ್ಯೆಗಳಿದ್ದರೂ, ಹಣದ ಕೊರತೆ ಇದ್ದರೂ, ಹಣ ಬಿಡುಗಡೆಯಾಗುತ್ತದೆ ಆದರೆ ಕೆಲಸ ಆಗಬೇಕೆಂದು ಸೂಚನೆಯನ್ನು ನೀಡಿದ್ದೇವೆ.

ಬಹುಶಃ ಹಾವೇರಿ ಜಿಲ್ಲೆಯೊಳಗೆ ಒಂದು ಕುಟುಂಬದಲ್ಲಿ ಸಿಡಿಲು ಬಡಿದು ಒಬ್ಬ ವ್ಯಕ್ತಿ ಮರಣ ಹೊಂದಿದಂತಹ ಸಂದರ್ಭದಲ್ಲಿ ತಹಶೀಲ್ದಾರ್‌ರವರು ರಾತ್ರಿ 1.30 ಗಂಟೆಗೆ ಅವರ ಮನೆ ಬಾಗಿಲಿಗೆ ಹೋಗಿ ಚೆಕ್ ನೀಡಿದ್ದಾರೆ. ಯಾವ ರೀತಿಯಲ್ಲಿ ಈ ಸರ್ಕಾರ ನಡೆಯುತ್ತಿದೆ ಎಂಬ ಒಂದು ಉದಾಹರಣೆಯನ್ನು ಈ ಸದನದಲ್ಲಿ ಕೊಡುತ್ತಿದ್ದೇನೆ. ನೀತಿ ಆಯೋಗ ಸಭೆಗಾಗಿ ನಾನು ದೆಹಲಿಗೆ ಭೇಟಿ ನೀಡಿದ್ದೆ. ಬೆಳಗ್ಗೆ tread mill ಮಾಡುತ್ತಿದ್ದಾಗ ದೂರದರ್ಶನದಲ್ಲಿ ಪ್ರಚಾರವಾಗುತ್ತಿತ್ತು. ಅದರಲ್ಲಿ ಖಾನಾಪುರದಲ್ಲಿ ಕೆಲವು ಮಕ್ಕಳು ಕಾಡಿನಲ್ಲಿ ಶಾಲೆಗೆ ನಡೆದುಕೊಂಡು ಹೋಗುತ್ತಿದ್ದಂತಹ ದೃಶ್ಯ ನೋಡಿದ್ದೆ. ಅದನ್ನು ನೋಡಿದ ತಕ್ಷಣ ಜಿಲ್ಲಾಧಿಕಾರಿಗಳಿಗೆ ಕರೆ ಮಾಡಿ, ಅಲ್ಲಿ ಮಧ್ಯಾಹ್ನದೊಳಗೆ ಬಸ್ಸಿನ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಹೇಳಿ ಮಧ್ಯಾಹ್ನದೊಳಗೆ ಆ ರಸ್ತೆಗೆ ಬಸ್ಸನ್ನು ಬಿಡಿಸುವಂತಹ ತೀರ್ಮಾನವನ್ನು ಮಾಡಿದ ಸರ್ಕಾರ ಇದು.

ನಾನು ನಿಮಗೆ ಉದಾಹರಣೆಯನ್ನು ಏತಕ್ಕೆ ಕೊಡುತ್ತಿದ್ದೇನೆ ಎಂದರೆ, ಇವತ್ತು ನನ್ನ ಮನೆಯ ಮುಂದೆ ಅಂಗವಿಕಲರು, ವಿಕಲಚೇತನರು, ಈ ನಾಡಿನ ಹಲವಾರು ಅಬಲೆಯರು ಬೆಳಗ್ಗೆ 6.00 ಗಂಟೆಗೆ ಬಂದು ಸಾವಿರಾರು ಜನ ಏತಕ್ಕಾಗಿ ನಿಂತಿರುತ್ತಾರೆ? ಇವತ್ತು ಸಮ್ಮಿಶ್ರ ಸರ್ಕಾರದಿಂದ ಯಾವ ರೀತಿ ವಿಧಾನಸೌಧ ಇದೆ ಎಂದು 3ನೇ ಮಹಡಿಗೆ ಬಂದು ನೋಡಿ. ಈಗಾಗಲೇ ಈ ನಾಡಿನ ಜನರು ತುಂಬಿ ತುಳುಕುತ್ತಿರುವುದನ್ನು ನೋಡಿರುತ್ತೀರಿ. ಯಾವುದೇ ಸಮಸ್ಯೆಯನ್ನು ಹೇಳಿಕೊಳ್ಳುವುದಕ್ಕಾಗಿ ಜನಸಾಮಾನ್ಯರು ಬಂದಾಗ ಪೋಲೀಸ್‌ನವರು ಅವರನ್ನು ತಡೆಯದೇ ವಿಧಾನ ಸೌಧ ಜಾತ್ರೆ ರೀತಿಯಲ್ಲಿದೆ. ಆ ರೀತಿ ಕೆಲಸ ನಡೆಯುತ್ತಿದೆ. ಈ ನಾಡಿನಲ್ಲಿರುವ ಬಡವರು ಅವರ ಕಷ್ಟವನ್ನು ಹೇಳಿಕೊಳ್ಳುವುದಕ್ಕೆ ಯಾರೇ ಬಂದರೂ ಸ್ಪಂದಿಸಿ ನಡೆಯುತ್ತಿರುವ ಸರ್ಕಾರವಾಗಿದೆ. ಜನತೆಯನ್ನು ಮರೆತ್ತಿರುವಂತಹ ಸರ್ಕಾರ ಇದ್ದಲ್ಲ. ನಾವು 5-10 ವರ್ಷದಿಂದ ಹಲವಾರು ಸಮಸ್ಯೆಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೋಡುತ್ತಿದ್ದೇವೆ. ಆ ಸಮಸ್ಯೆಗಳನ್ನು ಸರಿಪಡಿಸುವುದಕ್ಕೆ ಸ್ವಲ್ಪವಾದರೂ ಅವಕಾಶ ಕೊಡಬೇಕಲ್ಲವೇ? ಅವಕಾಶ ಬೇಡವೇ? ಒಂದು ತಿಂಗಳಲ್ಲಿ ಮಾಡುವುದಕ್ಕಾಗುತ್ತದೆಯೇ? ಮುಂದಿನ ಒಂದು ವರ್ಷದ ಕೆಲಸಗಳು ಒಂದೇ ತಿಂಗಳಿನಲ್ಲಿ ಆಗುವ ರೀತಿ ಆದೇಶ ಹೊರಡಿಸಬೇಕೆಂದು ವಿರೋಧ ಪಕ್ಷದವರು ಇಷ್ಟೊಂದು ಆತುರದಲ್ಲಿದ್ದಾರಲ್ಲಾ? ಜೂನ್ 12ನೇ ತಾರೀಖಿನವರೆಗೂ ಕಾಯುತ್ತೇವೆ. ಜೂನ್ 12 ರಂದು ಸದನ ಮುಗಿಯುತ್ತಿದ್ದಂತೆ ಬೀದಿಗೆ ಇಳಿಯುತ್ತೇವೆ ಎನ್ನುವ ಭಾಷಣವನ್ನು ಕೇಳಿದ್ದೇನೆ. ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರವು 5ನೇ ವರ್ಷ ಪೂರೈಸುತ್ತಿದೆ. ನಮ್ಮ ಮಾನ್ಯ ಪ್ರಧಾನ ಮಂತ್ರಿಗಳಾದ ಮೋದಿಯವರು ಬಹಳ ಚೆನ್ನಾಗಿಯೇ ಮಾತನಾಡುತ್ತಾರೆ. ಯಾವ್ಯಾವ ಮಾತುಗಳನ್ನು ಅವರು ಹೇಳಿದ್ದಾರೆ, ಎಷ್ಟು ಕೆಲಸ ಇವತ್ತು ಆಗಿದೆ, ಅವರು ಆಡಿದ ಮಾತುಗಳನ್ನು ಉಳಿಸಿಕೊಂಡಿದ್ದಾರೆಯೇ ಎಂಬುದನ್ನು ವಿರೋಧ ಪಕ್ಷದವರು ಹೇಳುತ್ತಾರೆಯೇ? ಮಾನ್ಯ ಪ್ರಧಾನ ಮಂತ್ರಿಗಳು ಚುನಾವಣಾ ಸಂದರ್ಭದಲ್ಲಿ ಬಂದು ಗದಗ್ ಜಿಲ್ಲೆಯಲ್ಲಿ ಭಾಷಣ ಮಾಡುವಂತಹ ಸಂದರ್ಭದಲ್ಲಿ ಅವರ ಆದಾಯದ ಬಗ್ಗೆ ಏನು ಹೇಳಿದ್ದಾರೆ ಎಂಬುದನ್ನು ವಿರೋಧ ಪಕ್ಷದವರು ಸ್ವಲ್ಪ ಜ್ಞಾಪಕ ಮಾಡಿಕೊಳ್ಳುತ್ತಾರೆಯೇ?

**ಡಾ॥ ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ದೇಶದ ಪ್ರಧಾನ ಮಂತ್ರಿಗಳು.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮಾನ್ಯ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಹೌದು. ಅವರು ದೇಶದ ಪ್ರಧಾನ ಮಂತ್ರಿಗಳು. ನಮಗೂ ಪ್ರಧಾನ ಮಂತ್ರಿಗಳೇ. ದೇಶದ ಪ್ರಧಾನ ಮಂತ್ರಿಗಳು ಗದಗ್ ಜಿಲ್ಲೆಯಲ್ಲಿ ಮಹಾದಾಯಿ ವಿಚಾರವಾಗಿ ಚುನಾವಣೆ ಮುಗಿದ ತಕ್ಷಣವೇ ಸಮಸ್ಯೆಯನ್ನು ಬಗೆಹರಿಸುತ್ತೇನೆ ಎಂದು ಭಾಷಣ ಮಾಡಿದ್ದರು. ಅದರ ಬಗ್ಗೆ ಅವರಿಗೆ ಏನಾದರೂ ಜ್ಞಾಪಕ ಇದೆಯೇ, ಏನಾದರೂ ಅದರ ಬಗ್ಗೆ ಪ್ರಯತ್ನ ನಡೆಯುತ್ತಿದೆಯೇ? ನಾವೇನು ಇದು ಆಗಿಲ್ಲವೆಂದು ಬೀದಿಗೆ ಬರುತ್ತೇವೆ ಎಂದು ಹೇಳುವುದಿಲ್ಲ. ಪ್ರಧಾನ ಮಂತ್ರಿಗಳು ಹೇಳಿದ ಮಾತುಗಳನ್ನು ಇನ್ನೂ ಉಳಿಸಿಕೊಂಡಿಲ್ಲವೆಂದು ನಾವೇನು ಬೀದಿಗೆ ಇಳಿದು ಹೋರಾಟ ಮಾಡುತ್ತೇವೆ ಎಂದು ಹೇಳಿಲ್ಲ. ಆದರೆ, ನಾನು ಈ ಸರ್ಕಾರದ ಬದ್ಧತೆಯನ್ನು ಹೇಳುವುದಕ್ಕೆ ಬಯಸುತ್ತೇನೆ. ಜೆಡಿಎಸ್ ಪಕ್ಷ ಮತ್ತು ಕಾಂಗ್ರೆಸ್ ಪಕ್ಷ ಇವೆರಡೂ ಪಕ್ಷಗಳು ಚುನಾವಣಾ ಪ್ರಣಾಳಿಕೆಯಲ್ಲಿ ಜನತೆಯ ಮುಂದೆ ಏನು ಹೇಳಿದ್ದೇವೆ, ಅದನ್ನು ಜಾರಿಗೆ ತರುವುದಕ್ಕೆ ಇವತ್ತು Common Minimum Programme ಮಾಡುವುದಕ್ಕೆ ಸಮಿತಿಯನ್ನು ಮಾಡಿರುವುದು. ಯಾವ ಕೆಲಸವನ್ನು ನಿಮ್ಮ ಸರ್ಕಾರದಲ್ಲಿ ಮಾಡುತ್ತೀರೆಂದು ಬಿಜೆಪಿ ಸರ್ಕಾರದವರು ಹೇಳುತ್ತಿದ್ದಾರಲ್ಲಾ; ಎರಡೂ ಪಕ್ಷದ ಕೆಲಸವನ್ನು ಸೇರಿಸಿಯೇ ಮಾಡುತ್ತೇವೆ. ಎರಡೂ ಪಕ್ಷಗಳು ಜನತೆಗೆ ಕೊಟ್ಟಿರತಕ್ಕಂಥ ಭರವಸೆಗಳನ್ನು ಈಡೇರಿಸುವುದಕ್ಕೆ ಬದ್ಧವಾಗಿರತಕ್ಕಂಥ ಸಮ್ಮಿಶ್ರ ಸರ್ಕಾರ ಇದು. ಅದರ ಬಗ್ಗೆ ಯಾವ ಅನುಮಾನವನ್ನು ಇಟ್ಟುಕೊಳ್ಳುವುದು ಬೇಡ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದನ್ನು ಬಹಳ ಸ್ಪಷ್ಟವಾಗಿ ನಿಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇವತ್ತು ಶಿಕ್ಷಣದ ಬಗ್ಗೆ ಮತ್ತು ಅರಣ್ಯ ಇಲಾಖೆಯ ಬಗ್ಗೆ ಮಾತನಾಡಿದ್ದೇನೆ.

**ಶ್ರೀ ಕೃಷ್ಣಭೈರೇಗೌಡ**:- ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪನವರು ವಿಧಾನಪರಿಷತ್ತಿನಲ್ಲಿ ಹೇಳದಂತಹ ನಡವಳಿಯನ್ನು ಓದಲೇ ಇಲ್ಲ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ**:- ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದವರಿಗೆ ಉಲ್ಲೇಖ ಮಾಡಿದ್ದೇನೆ.

**ಶ್ರೀ ಕೃಷ್ಣಭೈರೇಗೌಡ**:- ಮಾನ್ಯ ಸಭಾಪತಿಯವರೇ, ಮರೆತು ಹೋಗಿ ಬಿಟ್ಟಿರುತ್ತಾರೆ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮತ್ತೊಮ್ಮೆ ನೆನಪು ಮಾಡಿ ಎಂದು ಹೇಳುತ್ತಿದ್ದಾರೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, ಈ 5 ವರ್ಷದಿಂದಲೂ ಮಾಜಿ ಪ್ರಧಾನ ಮಂತ್ರಿಗಳಾದ ಹೆಚ್.ಡಿ.ದೇವೇಗೌಡರು ಜಾಗ್ರತೆಯಾಗಿಟ್ಟುಕೊಂಡು ಬರೆದು ಕೊಟ್ಟಿದ್ದನ್ನು ಮಾನ್ಯ ಸಿದ್ಧರಾಮಯ್ಯನವರು ಅದನ್ನು ಓದುತ್ತಿದ್ದರು. ಈ ಸಲ ಮಾನ್ಯ ಮುಖ್ಯಮಂತ್ರಿಗಳು ಓದುತ್ತಿದ್ದಾರೆ. ಅದರಲ್ಲಿ ನಮಗೆ ಯಾವುದೇ ರೀತಿಯ ಆಶ್ಚರ್ಯವಾಗುವುದಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಬಹುಶಃ ಮಾನ್ಯ ಮುಖ್ಯಮಂತ್ರಿಗಳು ನಡವಳಿಯ ಪ್ರತಿಯನ್ನೇ ಹುಡುಕುತ್ತಿದ್ದಾರೆಂದು ಕಾಣಿಸುತ್ತದೆ. ಅದಕ್ಕಾಗಿ ನಾನು ನಡವಳಿಯ ಪ್ರತಿಯನ್ನು ತರಿಸಿದ್ದೇನೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಕುಳಿತಿರುವ ಜಾಗದಲ್ಲಿ 31ನೇ ಡಿಸೆಂಬರ್ 2009 ರಂದು ನಾನು ಕುಳಿತುಕೊಂಡು ಪ್ರಶ್ನೆ ಕೇಳದಂತಹ ಸಂದರ್ಭದಲ್ಲಿ ಆವತ್ತಿನ ಈ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪನವರು ಇವತ್ತು ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿದ್ದಾರೆ. ಅವರ ಬಾಯಿಯಿಂದ ಯಾವ ರೀತಿಯ 10 ಪದಗಳು ಬಂದಿದೆ, ಅದನ್ನು ಈ ರಾಜ್ಯದ ಮುಂದೆ ಪ್ರಕಟಿಸುವುದಕ್ಕೆ ಬಯಸುತ್ತೇನೆ. "ಇವತ್ತು ನಾವೆಲ್ಲರೂ ರೈತರ ಸಾಲ ಮನ್ನಾ ಮಾಡುವ ಬಗ್ಗೆ ಮಾತನಾಡುತ್ತೇವೆ. ಆದರೆ, 2009ನೇ ಸಾಲಿನಲ್ಲಿದಂತಹ ಮುಖ್ಯಮಂತ್ರಿಗಳು, ರೈತರ ಸಾಲವನ್ನು ಮನ್ನಾ ಮಾಡಲು ತಯಾರಿದ್ದೇನೆ, ಆದರೆ ಸಾಲ ಮನ್ನಾ ಮಾಡಲು ಎಲ್ಲಿಂದ ಹಣವನ್ನು ತರುವುದು, ಕೇಂದ್ರ ಸರ್ಕಾರ ಹಣವನ್ನು ಮುದ್ರಿಸುವ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಧಿಕಾರವನ್ನು ನೀಡಿಲ್ಲ, ಕೇಂದ್ರ ಸರ್ಕಾರ ಸಾಲ ಮನ್ನಾ ಮಾಡಲು ಹಣವನ್ನು ನೀಡುವುದೇ? ಹಣವನ್ನು ಎಲ್ಲಿಂದ ತರಬೇಕೆನ್ನುವುದನ್ನು ಹೇಳಿ ನಾನು ಕೂಡಾ ವಿರೋಧ ಪಕ್ಷದ ನಾಯಕನಾಗಿದ್ದಂತಹ ಸಂದರ್ಭದಲ್ಲಿ ಈ ರೀತಿಯೇ ಮಾತನಾಡಿದ್ದೇನೆ. ರೈತರ ಸಾಲ ಮನ್ನಾ ಮಾಡಲು ತಯಾರಿದ್ದೇನೆ. ಮುಂದಿನ ವರ್ಷ ಯಾವುದೇ ಯೋಜನೆಗಳನ್ನು ಕೈಗೊಳ್ಳುವುದು ಬೇಡ. ನಾವೆಲ್ಲ ಸೇರಿ ರೈತರ ಸಾಲ ಮನ್ನಾ ಮಾಡೋಣವೆಂದು ತೀರ್ಮಾನ ಮಾಡೋಣ. ಮುಂದಿನ ವರ್ಷ ಹೊಸ ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದು ಬೇಡ. ರಸ್ತೆ, ದೀಪ ಯಾವುದೇ ಯೋಜನೆಯನ್ನು ಕೈಗೊಳ್ಳುವುದು ಬೇಡ. ಎಲ್ಲರೂ ರೈತರ ಸಾಲ ಮನ್ನಾ ಮಾಡೋಣ ಎಂದು ಹೇಳಿದರೆ ಅದಕ್ಕೆ ನಾನು ಸಿದ್ಧನಿದ್ದೇನೆ. ಎಲ್ಲರೂ ಮತವನ್ನು ಗಳಿಸಲು ರೈತರ ಸಾಲ ಮನ್ನಾ ಮಾಡುತ್ತೇವೆ ಎಂದು ಭಾಷಣ ಮಾಡಿದ ಹಾಗೆ ನಾನು ಕೂಡಾ ಭಾಷಣ ಮಾಡಿದ್ದೇನೆ. ಇದು ಆಗದೇ ಇರುವ ವಿಚಾರ ಎಂದು ಸಾರ್ವಜನಿಕ ಸಭೆಯಲ್ಲಿ ನಾನು ಹೇಳಿದ್ದೇನೆ. ನಿಮಗೆ ಇವತ್ತಿನ ಇತಿ-ಮಿತಿಯಲ್ಲಿ ಏನು ಬೇಕು. ರೈತರ ಹೊಲಕ್ಕೆ ನೀರು ಬೇಕೇ? ಆತ ಬೆಳೆದಂಥ ಬೆಳೆಗೆ ವೈಜ್ಞಾನಿಕ ಬೆಲೆ ಬೇಕೇ? ಬಿತ್ತನೆಗೆ ಉತ್ತಮ ಬೀಜ ಬೇಕೇ? ಬ್ಯಾಂಕ್ ಸಾಲ ಸವಲತ್ತು ಬೇಕೇ? ಇವೆಲ್ಲವನ್ನೂ ಒದಗಿಸಲು ಸರ್ಕಾರ ಸಿದ್ಧ ಇದೆ. ಎಲ್ಲಿಯೋ ಒಂದು ಕಡೆ ತಪ್ಪಾಗಿದೆ ನಾವೆಲ್ಲರೂ ಅದನ್ನು ತಿದ್ದುಕೊಂಡು ಜನರಿಗೆ ವಿಶ್ವಾಸ ಬರತಕ್ಕಂಥ ರೀತಿಯಲ್ಲಿ ಮಾತನಾಡಬೇಕೇ ಹೊರತು ನಾನೇ ಆಗಲಿ, ನೀವೇ ಆಗಲಿ ಆಗದಿರುವ ವಿಚಾರಗಳನ್ನು ಮಾತನಾಡಿದರೆ ಸರಿದೂಗುವುದಿಲ್ಲ. ಈ ವಿಚಾರದಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದ ನೆರವಿಗೆ ಬರಲಿ, ನಾವೆಲ್ಲರೂ ಕೇಂದ್ರಕ್ಕೆ ನಿಯೋಗ ಹೋಗೋಣ, ಇನ್ನೂ ಹೆಚ್ಚು ಹಣವನ್ನು ಕೇಂದ್ರ ಸರ್ಕಾರದಿಂದ ತರೋಣ" ಎಂದು ಈ ಸದನದಲ್ಲಿ ಹೇಳಿಕೆ ನೀಡಿದ್ದಾರೆ. ನಾನು ಇಷ್ಟು ಮಾತ್ರ ಹೇಳುವುದಕ್ಕೆ ಬಯಸುತ್ತೇನೆ.

(ಗೊಂದಲ)

ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪನವರು ಈ ರಾಜ್ಯದ ಜನತೆಗೆ ಎಲ್ಲೋ ದ್ರೋಹ ಮಾಡಿರತಕ್ಕಂಥ ಹೇಳಿಕೆಯನ್ನು ಅವತ್ತು ಕೊಟ್ಟಿದ್ದೇನೆ ಎಂದು ಈ ರಾಜ್ಯದ ಜನತೆಯಲ್ಲಿ ಕ್ಷಮೆಯನ್ನು ಯಾಚಿಸಲಿ, ಆಮೇಲೆ ಈ ಡಿಮ್ಯಾಂಡನ್ನು ಇಡಲಿ ಎಂದು ಆಗ್ರಹಿಸುವುದಕ್ಕೆ ಬಯಸುತ್ತೇನೆ.

(ಮುಂದು) . . .

(085)/04.07.2018/6.30/ಎಸ್‌ಕೆ-ಎಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅನಂತರ ಕೂಡ ನಮ್ಮ ಸರ್ಕಾರ ಸಾಲ ಮನ್ನಾ ಮಾಡಿದೆ.

**ಸಭಾಪತಿಯವರು:–** ಆಯಿತು ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾಜಿ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್‌ವರು ಅಧಿಕಾರದಲ್ಲಿದ್ದಾಗ ಬಿಜೆಪಿ ಸರ್ಕಾರ ರೈತರ ಸಾಲ ಮನ್ನಾ ಮಾಡಿದೆ.

**ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):–** ಅದನ್ನೇ ಹೇಳಿ.

**ಸಭಾಪತಿಯವರು:–** ಆಯಿತು ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಯವರೇ ಮಾತನಾಡಿ.

**(ಗೊಂದಲ)**

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಮಾನ್ಯ ಸಭಾಪತಿಯವರೇ ...

**(ಗೊಂದಲ)**

**ಶ್ರೀ ಸಿ.ಎಂ. ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ ಕೇಂದ್ರದಲ್ಲಿ ಹೋಗಿ ಮಾಡೋಣ. ಇಲ್ಲಿ ಅದನ್ನು ಬಾಯಿ ಬಿಡಿ ...

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಮಾನ್ಯ ಸಭಾಪತಿಯವರೇ ...

**(ಗೊಂದಲ)**

**ಸಭಾಪತಿಯವರು:–** ದಯವಿಟ್ಟು, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ ಕುಳಿತುಕೊಳ್ಳಿ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿ):–** ಮಾನ್ಯ ಸಭಾಪತಿಯವರೇ, ಈ ಹಿಂದೆ ಬಿಜೆಪಿ ಸರ್ಕಾರವಿದ್ದಾಗ ಒಂದು ಬಾರಿ ರೈತರ ಸಾಲ ಮನ್ನಾ ಮಾಡಿದರು. ಏತಕ್ಕೆಂದರೆ, ಚುನಾವಣೆಗೆ ಹೋಗುವ ಕೊನೆಯ ಹಂತದಲ್ಲಿ ಅದನ್ನು ಮಾಡಿದರು. ಮಾನ್ಯ ಯಡಿಯೂರಪ್ಪನವರು ಎಂದೂ ಸಾಲ ಮನ್ನಾ ಮಾಡಲಿಲ್ಲ. ಅವರು ಮೊನ್ನೆ ಸಹ ಹೇಳಿದ್ದಾರೆ. ನಾಡಿದ್ದು ನಾನು ಅದನ್ನು ಹೇಳುತ್ತೇನೆ. ಈ ಹಿಂದೆ ಸಮ್ಮಿಶ್ರ ಸರ್ಕಾರವಿದ್ದಾಗ ಮಾಜಿ ಉಪ ಮುಖ್ಯಮಂತ್ರಿಯಾದ ಶ್ರೀ ಯಡಿಯೂರಪ್ಪನವರು ಸಾಲ ಮನ್ನಾ ಮಾಡಿದೆ ಎಂದು ಮೊನ್ನೆ ತಮ್ಮ ಭಾಷಣದಲ್ಲಿ ಹೇಳಿದರು. ನಾನು ಸಾಲ ಮನ್ನಾ ಮಾಡುತ್ತೇನೆಂದು ಹೇಳಿದರೆ, ಆವೊತ್ತಿನ ದಿವಸ ಮಾನ್ಯ ಯಡಿಯೂರಪ್ಪನವರು ಎಲ್ಲಿ ಸಾಲ ಮನ್ನಾ ಮಾಡುವುದಕ್ಕಾಗುತ್ತದೆ ಮತ್ತು ದುಡ್ಡು ಎಲ್ಲದೆ ಎಂದು ಶಿವಮೊಗ್ಗದಲ್ಲಿ ಒಂದು ಹೇಳಿಕೆ ಕೊಟ್ಟರು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮಾನ್ಯ ಜಗದೀಶ್ ಶೆಟ್ಟರ್ ಮುಖ್ಯಮಂತ್ರಿಯಾದಂತಹ ಸಂದರ್ಭದಲ್ಲಿ ಸುಮಾರು ಮೂರು ಸಾವಿರದ ಎಂಟುನೂರು ಕೋಟಿ ರೂಪಾಯಿ ಸಾಲ ಮನ್ನಾ ಮಾಡುವಂತಹ ತೀರ್ಮಾನ ...

**(ಗೊಂದಲ)**

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಒಂದು ನಿಮಿಷ

**(ಗೊಂದಲ)**

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–** ಮಾನ್ಯ ಸಭಾಪತಿಯವರೇ, ಇಪ್ಪತ್ತೈದು ಸಾವಿರ ಇವರಿಗೆ...

**(ಗೊಂದಲ)**

**ಶ್ರೀ ಹೆಚ್.ಡಿ. ಕುಮಾರಸ್ವಾಮಿ :–** ಮಾನ್ಯ ಸಭಾಪತಿಯವರೇ, ಇಲ್ಲಿ ಏನಾಯಿತು ಎಂದರೆ ಮಾನ್ಯ ಜಗದೀಶ್ ಶೆಟ್ಟರ್‌ರವರ ಕಾಲದಲ್ಲಿ ಮಾನ್ಯ ಯಡಿಯೂರಪ್ಪನವರು ಅಷ್ಟರೊಳಗೆ ಕೆ.ಜೆ.ಪಿ ಪಕ್ಷಕ್ಕೆ ಹೊರಟು ಹೋಗಿದ್ದರು. ಅವರು ಅದರಲ್ಲಿ ಇರಲಿಲ್ಲ. ಮಾನ್ಯ ಜಗದೀಶ್ ಶೆಟ್ಟರ್‌ರವರು ಸಾಲ ಮನ್ನಾ ಘೋಷಣೆ ಮಾಡಿದರು. ಆದರೆ ಬಜೆಟ್‌ನಲ್ಲಿ ಏನು ಘೋಷಣೆ ಮಾಡಿರುತ್ತಾರೆ ೮೦೦ ಕೋಟಿ ರೂಪಾಯಿಗಳನ್ನು ಮಾತ್ರ ಅವರ ಕಾಲದಲ್ಲಿ ತುಂಬಿದರು. ಆ ೮೦೦ ಕೋಟಿ ರೂಪಾಯಿಗಳನ್ನು ತುಂಬುವುದಕ್ಕೂ ರಾಜ್ಯದಲ್ಲಿದ್ದಂತಹ ವ್ಯಾಟ್ ತೆರಿಗೆಯನ್ನು ಶೇಕಡ 12 ರಷ್ಟು ಇದ್ದಿದ್ದನ್ನು ಶೇಕಡ 12.5 ಗೆ ತೆಗೆದುಕೊಂಡು ಹೋದರು. ಸಾಲ ಮನ್ನಾ ಯೋಜನೆಗೆ ಹಣವನ್ನು ಒದಗಿಸುವುದಕ್ಕೆ ಶೇಕಡ 0.5 ರಷ್ಟನ್ನು ಜಾಸ್ತಿ ಮಾಡಿದರು. ಅವರು ಮೂರು ಸಾವಿರದ ಎಂಟುನೂರು ಕೋಟಿ ರೂಪಾಯಿ ಎಂದು ಘೋಷಣೆ ಮಾಡಿದರು. ಆದರೆ ಸುಮಾರು ಎಂಟುನೂರು ಕೋಟಿ ರೂಪಾಯಿಗಳಷ್ಟೇ ಸಾಲ ಮನ್ನಾ ಮಾಡಿದರು. ಮುಂದೆ ಬಂದಂತಹ ಮಾನ್ಯ ಸಿದ್ದರಾಮಯ್ಯನವರ ಸರ್ಕಾರದಲ್ಲಿ ಸುಮಾರು ಮೂರು ಸಾವಿರ ಕೋಟಿ ರೂಪಾಯಿಗಳನ್ನು ತುಂಬಿದರು. ಇದು ಸರ್ಕಾರದ ದಾಖಲೆ ಇರುವಂತಹದ್ದು. ನಾವು ಏನು ಬೇರೆ ರೀತಿಯಲ್ಲಿ ಕಥೆ ಕಟ್ಟಿ ಹೇಳುತ್ತಿರುವುದಲ್ಲ. ಮಾನ್ಯ ಸಿದ್ದರಾಮಯ್ಯನವರು ಸುಮಾರು ಎಂಟು ಸಾವಿರದ ನೂರ ಅರವತ್ತೈದು ಕೋಟಿ ರೂಪಾಯಿಗಳಷ್ಟು ಸಾಲ ಮನ್ನಾ ಮಾಡುವಂಥ ನಿರ್ಧಾರ ಮಾಡಿದ್ದಾರೆ.

ಮಾನ್ಯ ಸಭಾಪತಿಯವರೇ, ಆರನೇ ವೇತನ ಆಯೋಗದ ಶಿಫಾರಸ್ಸು ಏನಿದೆ, ಇವತ್ತು ಅದಕ್ಕೆ ಹಣ ಒದಗಿಸಬೇಕು. ಇವತ್ತು ಬೆಳಗ್ಗೆ ಮಾನ್ಯ ಕಾರಜೋಳರವರು ಎಲ್ಲೆಲ್ಲೋ ನೀರಾವರಿ ಯೋಜನೆಗಳಾಗಬೇಕೆಂದು ಭಾಷಣ ಮಾಡುತ್ತಿದ್ದರು. ಈ ವರ್ಷವೇ ಸುಮಾರು ಎಪ್ಪತ್ತೈದು ಸಾವಿರ ಕೋಟಿ ರೂಪಾಯಿಗಳನ್ನು ಕೊಡಬೇಕು ಎಂದು ಅವರು ಹೇಳುತ್ತಿದ್ದರು. ಒಂದು ಕಡೆ ಸಾಲ ಮನ್ನಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರವಿದೆ, ಈ ಸಂದರ್ಭದಲ್ಲಿ ನಾನು ತಮಗೆ ಒಂದು ವಿಚಾರವನ್ನು ನೆನಪಿಸಿಕೊಡುತ್ತೇನೆ. ರೈತರನ್ನು ಉಳಿಸುವುದಕ್ಕೋಸ್ಕರವಾಗಿ ನಮ್ಮೆಲ್ಲ ಸ್ನೇಹಿತರು 'ಸಾಲ ಮನ್ನಾ' ವಿಚಾರದಲ್ಲಿ ಕೊಟ್ಟಿರುವಂತಹ ಬೆಂಬಲವೇನಿದೆ, ಅವರು ವಿರೋಧ ಮಾಡಿದರು ಎಂದು ನೀವೆಲ್ಲಾ ತಿಳಿದುಕೊಂಡಿದ್ದೀರಿ. ಅವರೇನೂ ವಿರೋಧ ಮಾಡಿರಲಿಲ್ಲ. ಆದರೆ ಅದಕ್ಕೆ ಇಷ್ಟೊಂದು ಹಣವನ್ನು ಎಲ್ಲಿಂದ ಒದಗಿಸುತ್ತೀರಿ, ಒದಗಿಸುವುದಕ್ಕೆ ಸಾಧ್ಯವೇ ಎನ್ನುವುದರ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ ಅಷ್ಟೆ. Common Minimum Programme ಮೀಟಿಂಗ್‌ನಲ್ಲಿ ತೀರ್ಮಾನ ತೆಗೆದುಕೊಂಡಿದ್ದಾರೆ. ಮೊದಲ ವಿಷಯವೇ 'ಸಾಲ ಮನ್ನಾ'. ನಮ್ಮ ಎರಡು ಪಕ್ಷಗಳ ಸದಸ್ಯರು ಅಲ್ಲಿ ಅದರ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದಾರೆ. ಮೊದಲನೇ ಹಂತದಲ್ಲಿ ಬೆಳೆ ಸಾಲವನ್ನು ಮನ್ನಾ ಮಾಡುತ್ತೇವೆಂದು ನಾನು ಈಗಾಗಲೇ ಹೇಳಿದ್ದೇನೆ.

ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ನನ್ನ ಪ್ರಣಾಳಿಕೆಯ ಬಗ್ಗೆ ಏನು ಹೇಳುತ್ತಾರೆಂದರೆ, 'ಈ ರಾಜ್ಯದ ಜನತೆ ನಿಮ್ಮ ಪ್ರಣಾಳಿಕೆಯನ್ನು ತಿರಸ್ಕಾರ ಮಾಡಿದ್ದಾರೆ ಎಂದು ಹೇಳಿದ್ದಾರೆ. ನನ್ನ ಪ್ರಣಾಳಿಕೆ ನೋಡಿ, ಇವತ್ತು ಆ ಪ್ರಣಾಳಿಕೆ ಅನುಷ್ಠಾನಕ್ಕೆ ಬರಬೇಕೆನ್ನುವುದಿದ್ದರೆ, ಈ ರಾಜ್ಯದ ಜನತೆ ನನಗೆ ಸ್ಪಷ್ಟವಾದ ಬಹುಮತ ಕೊಡಬೇಕಾಗಿತ್ತು. ನಾನು ಚುನಾವಣೆಯ ಪ್ರಚಾರದಲ್ಲಿ ಭಾಷಣ ಮಾಡಿರುವಂಥದ್ದು, ಬೇಕಾದರೆ ಪೇಪರ್ ಕಟಿಂಗ್ಸ್ ಕಳುಹಿಸಿಕೊಡುತ್ತೇನೆ. ಯಾವುದೇ ಸಭೆಗಳಲ್ಲಿ ನಾನು ರಾಜ್ಯದ ಜನತೆಗೆ ಮನವಿ ಮಾಡಿದ್ದೇನೆಂದರೆ, ಸ್ವತಂತ್ರವಾದ ಸರ್ಕಾರವನ್ನು ಈ ರಾಜ್ಯದಲ್ಲಿ ಜನತಾ ದಳವನ್ನು ಅಧಿಕಾರಕ್ಕೆ ತರುವಂಥದ್ದಕ್ಕೆ ನನಗೆ ಆಶೀರ್ವಾದವನ್ನು ನೀಡಿದರೆ, ಇಪ್ಪತ್ನಾಲ್ಕು ಗಂಟೆಯೊಳಗೆ ರೈತರ ಸಾಲ ಮನ್ನಾ ಮಾಡುತ್ತೇನೆಂದು ಹೇಳಿದೆ. 'ನನಗೆ ಸ್ವತಂತ್ರವಾದ ಅಧಿಕಾರವನ್ನು ಕೊಟ್ಟರೆ ಸಾಲ ಮನ್ನಾ ಮಾಡುತ್ತೇನೆ' ಎಂದು ಹೇಳಿದ್ದೆ. ಏನು ಇಪ್ಪತ್ನಾಲ್ಕು ಗಂಟೆ, ಈಗಾಗಲೇ ಒಂದು ತಿಂಗಳು ಆಯಿತು ಎಂದು ಹೇಳುತ್ತೀರಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ...

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನನ್ನದು ಒಂದು ವಿನಂತಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-**ಸ್ವಾಭಾವಿಕವಾಗಿ ಹೇಳಿ. ಮಾನ್ಯ ಕುಮಾರಸ್ವಾಮಿಯವರು ಜೆಡಿಎಸ್‌ನ ರಾಜ್ಯಾಧ್ಯಕ್ಷರು ಆಗಿದ್ದರು. ಇಡೀ ಕರ್ನಾಟಕ ರಾಜ್ಯದ ರಾಜಕಾರಣದ ತಿರುಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಂಡವರು. ವಾಸ್ತವಿಕವಾಗಿ ನಿಮಗೆ ಸ್ಪಷ್ಟವಾದ ಬಹುಮತ ಬರುತ್ತದೆ ಎನ್ನುವಂತಹ ಯೋಚನೆ ಅಥವಾ ಆಶಯವೇನಾದರೂ ಇದ್ದೀತೇ? ಹಾಗಾದರೆ, ಅದು ಗೊತ್ತಿದ್ದು ಕೂಡ ಇಂತಹ 'ಪ್ರಣಾಳಿಕೆ'ಯನ್ನು ಹೊರಡಿಸಿದ್ದೀರಾ? ಈ 'ಪ್ರಣಾಳಿಕೆ' ಮುಂದೆ ಒಂದು ದಿವಸ ನಮ್ಮ ರಕ್ಷಣೆಗೆ ನಿಲ್ಲುತ್ತದೆ ಎಂದು ಹೇಳಿ, ನಿಮಗೆ ಆಸಕ್ತಿ ಇತ್ತಾ....

**(ಗೊಂದಲ)**

**Sri T.A. SHARAVANA:** Mission 150...

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):–** ನಿಮ್ಮ ಮಿಷನ್ 150 ಏನಾಯಿತು?

**(ಗೊಂದಲ)**

**ಸಭಾಪತಿಯವರು:–** ದಯವಿಟ್ಟು, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾನು ಕೇಳುತ್ತಿರುವುದು...

**(ಗೊಂದಲ)**

**ಸಭಾಪತಿಯವರು:–** ದಯವಿಟ್ಟು, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ರಾಜ್ಯದ ಒಬ್ಬ ಜೆಡಿಎಸ್‌ನ ರಾಜ್ಯಾಧ್ಯಕ್ಷರಾಗಿ...

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಜೆಡಿಎಸ್ ಅಧ್ಯಕ್ಷರಾಗಿ ...

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ ನೋಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಜೆಡಿಎಸ್ ಪಕ್ಷ ಅಧಿಕಾರಕ್ಕೆ ...

**(ಗೊಂದಲ)**

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ ಕುಳಿತುಕೊಳ್ಳಿ ನಿಮ್ಮ ಮಾತು ನನಗೆ ಅರ್ಥವಾಯಿತು. ನಾನು ಮಾತನಾಡುತ್ತೇನೆ.

**(ಗೊಂದಲ)**

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ಈ ದೇಶದೊಳಗೆ ಎರಡೇ ಸೀಟ್ ಇದ್ದಂತಹ ಬಿಜೆಪಿಯವರು ಈ ದೇಶವನ್ನು ಆಳುವಂತಹ ಶಕ್ತಿ 170, 180 ಸೀಟ್ ಗೆದ್ದಂತಹದ್ದು ಏನಿದೆ ಎರಡೇ ಸೀಟ್ ಇದ್ದಂತಹ ಬಿಜೆಪಿ ಆ ಮಟ್ಟಕ್ಕೆ ಇದ್ದಾಗ, ಕಳೆದ ಬಾರಿ 40 ಸೀಟ್ ಗೆದ್ದವನು 120 ಸೀಟ್ ಗೆಲ್ಲುವುದಕ್ಕೆ ಸಾಧ್ಯವಿಲ್ವಾ? ಜನತೆಯ ನಂಬಿಕೆಯ ಮೇಲೆ ಭರವಸೆ ಇಟ್ಟಿದ್ದು, ಮತ್ತು ಜನತೆಯ ಮುಂದೆ ಇಟ್ಟಂತಹ ಕಾರ್ಯಕ್ರಮಗಳು ಹಾಗೂ ಜನರು  ಕಷ್ಟದಲ್ಲಿದ್ದೀರಿ. ಆದ್ದರಿಂದ, ನನಗೆ ಅಧಿಕಾರ ನಡೆಸಲು ಒಂದು ಅವಕಾಶ ಕೊಡಿ. ಒಂದು ಬಾರಿ ಮಾನ್ಯ ಯಡಿಯೂರಪ್ಪನವರಿಗೂ ಅಧಿಕಾರ ಕೊಟ್ಟಿದ್ದೀರಿ. ಇನ್ನೊಂದು ಬಾರಿ ಮಾನ್ಯ ಸಿದ್ದರಾಮಯ್ಯನವರಿಗೂ ಅಧಿಕಾರ ಕೊಟ್ಟಿದ್ದೀರಿ. ನನಗೊಂದು ಬಾರಿ ಅಧಿಕಾರ ನಡೆಸಲು ಅವಕಾಶ ಕೊಡಿ. ನನ್ನನ್ನು ಪರೀಕ್ಷೆ ಮಾಡಿ ಎಂದು ಹೋದ ಕಡೆಗಳಲ್ಲಿ ನಾನು ಮನವಿ ಮಾಡಿದ್ದೇನೆ. ಈ ಬಾರಿ ನನಗೊಂದು ಅಧಿಕಾರ ನಡೆಸಲು ಅವಕಾಶ ಕೊಡಬಹುದೆಂಬ ನಂಬಿಕೆ ಇತ್ತು.  ರಾಜಕಾರಣದಲ್ಲಿ ನಾವು ಮತ್ತು ಕಾಂಗ್ರೆಸ್‌ನವರು ಸೇರಿ ಸರ್ಕಾರ ಮಾಡುತ್ತೇವೆಂದು ನಿಮಗೇನಾದರೂ ಕನಸು ಬಿದ್ದಿತ್ತಾ ಮತ್ತು ಏನಾದರೂ ನಂಬಿದ್ದಿರಾ? ನನ್ನ ಅಭಿಪ್ರಾಯದಲ್ಲಿ ರಾಜಕಾರಣದಲ್ಲಿ ಏನು ಬೇಕಾದರೂ ಆಗಬಹುದು. ನಿಮ್ಮ ಜೊತೆ ಬರುತ್ತೇನೆಂದು 2006 ನೇ ಇಸವಿಯಲ್ಲಿ ಏನಾದರೂ ಅಂದುಕೊಂಡಿದ್ದಿರಾ ಮತ್ತು ಬರುವುದಕ್ಕೇನಾದರೂ ಸಾಧ್ಯವಿತ್ತಾ. ಇವೆಲ್ಲಾ ಸನ್ನಿವೇಶಗಳು. ನೀವು ಏನು ಹೇಳಿದ್ದೀರಿ? ನಾನು ಸಾಂದರ್ಭಿಕ ಶಿಶು ಎಂದು ಒಂದು ಮಾತು ಹೇಳಿದೆ. ಅದಕ್ಕೊಂದು ದೊಡ್ಡ ವ್ಯಾಖ್ಯಾನಗಳು ಮತ್ತು ಅರ್ಥಗಳು ಏನೆಂದರೆ ತಂದೆ ಇಲ್ಲ, ಅಪ್ಪ ಇಲ್ಲ, ಅಮ್ಮ  ಇಲ್ಲ, ಕಾಲಿಲ್ಲ, ಕೈ ಇಲ್ಲ, ಕಣ್ಣಿಲ್ಲ. ಸಾಂದರ್ಭಿಕ ಶಿಶು ಎಂದರೆ ಇವತ್ತಿನ ರಾಜಕೀಯ ಸನ್ನಿವೇಶದಲ್ಲಿ ಈ ರೀತಿಯ ಒಂದು ಸರ್ಕಾರವನ್ನು ಮಾಡುವಂತಹ ನಾಯಕತ್ವವನ್ನು ವಹಿಸಿಕೊಳ್ಳಬೇಕಾದಂತಹ ಒಂದು ಅನಿವಾರ್ಯತೆಯ ಹಿನ್ನೆಲೆಯಲ್ಲಿ ನಾನು ಹೇಳಿದಂತಹ ಮಾತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನನಗೆ ಅಪ್ಪ-ಅಮ್ಮ ಇಲ್ಲ, ಕೈ-ಕಾಲು ಇಲ್ಲ ಎಂದು ನಾನೇನೂ ಹೇಳಲಿಲ್ಲ. ಅದಕ್ಕೆ ನೀವು ವ್ಯಾಖ್ಯಾನಗಳನ್ನು ಕೊಟ್ಟುಕೊಂಡು ಹೋರಟಿದ್ದೀರಿ. ಇವತ್ತು ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ಶಾಸಕರು ಅಪ್ಪ-ಅಮ್ಮನ ಸ್ಥಾನದಲ್ಲಿದ್ದಾರೆ. ಇವತ್ತು 120 ಶಾಸಕರು ನಾವಿದ್ದೇವೆ. ಈ ಸದನದಲ್ಲಿ ಬರೀ ಮೂವತ್ತೇಳು ಶಾಸಕರಲ್ಲ ಇರುವುದು. ಈ ಸದನದಲ್ಲಿ 120 ಜನ ಶಾಸಕರು ಇರುವುದು. ಇದು 120 ಜನ ಶಾಸಕರುಗಳ ಸರ್ಕಾರವಿದು. ಎರಡನೇ ಬಾರಿಗೆ ಗೌರವಾನ್ವಿತ ರಾಜ್ಯಪಾಲರು ನಮ್ಮ ಈ ಸಮ್ಮಿಶ್ರ ಸರ್ಕಾರ ನಡೆಸುವುದಕ್ಕೆ ಆಹ್ವಾನ ಕೊಟ್ಟರು. ಅವರು ಮೊದಲ ಬಾರಿಗೆ ಬಿಜೆಪಿ ಪಕ್ಷಕ್ಕೆ ಬಹುಮತ ಸಾಬೀತುಪಡಿಸಲು ಅವಕಾಶ ಕೊಟ್ಟರು. ಅದು ಅವರ ಕೈಯಲ್ಲಿ ಆಗಲಿಲ್ಲ. ನಾವು 37 ಜನ ಶಾಸಕರಿದ್ದೇವೆಂದು ಕರೆದಿರುವಂತಹದ್ದಲ್ಲ. 120 ಜನ ಶಾಸಕರ ಬೆಂಬಲವಿರುವುದನ್ನು ನೋಡಿ, ಎರಡು ಪಕ್ಷಗಳು ಸೇರಿ ಸರ್ಕಾರ ಮಾಡುವಂತಹ ಬಹುಮತವಿದೆ ಎನ್ನುವ ಹಿನ್ನೆಲೆಯೊಳಗೆ ನಮ್ಮನ್ನು ಕರೆದಿರುವಂತಹದು. ಇದು ಮೂವತ್ತೇಳು ಜನ ಶಾಸಕರ ಸರ್ಕಾರವಲ್ಲ. ಇದು 120 ಜನ ಶಾಸಕರು ಇರುವಂತಹ ಸರ್ಕಾರವಿದು. ದಯವಿಟ್ಟು, ಇದನ್ನು ಅರ್ಥ ಮಾಡಿಕೊಳ್ಳಿ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಗೌರವಾನ್ವಿತ ರಾಜ್ಯಪಾಲರು ಮಾಡಿದಂತಹ ಭಾಷಣದಲ್ಲಿ ಏನಿದೆ ಅದನ್ನು ತಮ್ಮಗಳ ಮುಂದೆ ಏನು ಇಟ್ಟಿದ್ದಾರೆ, ಅದರ ಬಗ್ಗೆ ನಿಮಗೆ ನಂಬಿಕೆ ಇಲ್ಲದೇ ಇರಬಹುದು. ಯಾವುದೋ ದೊಡ್ಡ ದೊಡ್ಡ ಚಿತ್ರಣ ನಾನು ಏನು ಕೊಟ್ಟಿಲ್ಲದೇ ಇರಬಹುದು. ಇವತ್ತು ರಾಜ್ಯದ ಪ್ರತಿಯೊಂದು ಸಮಸ್ಯೆಗಳ ಬಗ್ಗೆ ಒಂದೊಂದು ಕಂಡಿಕೆಯಲ್ಲಿ ಒಂದು ಪಕ್ಷಿನೋಟವನ್ನು ಇಟ್ಟಿದ್ದೇನಷ್ಟೇ. ಬೆಂಗಳೂರು ಮಹಾನಗರಕ್ಕೆ ಏನು ಮಾಡಬೇಕೆಂಬುದು ಈಗಾಗಲೇ ಅದರಲ್ಲಿ ಕೆಲವು ವಿಷಯಗಳನ್ನು mention ಮಾಡಿದ್ದೇನೆ. ಮಾಹಿತಿ ತಂತ್ರಜ್ಞಾನದ ಬಗ್ಗೆ ಹೇಳಿದ್ದೇನೆ. ಇವತ್ತು ಆಡಳಿತದ ಬಗ್ಗೆ ಹೇಳಿದ್ದೇವೆ. ಎರಡು ಪಕ್ಷಗಳ ಯಾವ್ಯಾವ ರೀತಿಯಲ್ಲಿ ಕಾರ್ಯಕ್ರಮಗಳು ಇರುತ್ತವೆಂದು ಹೇಳಿದ್ದೇನೆ. ಉದ್ಯೋಗ ಸೃಷ್ಟಿ ಬಗ್ಗೆ ಹೇಳುವುದಾದರೆ, ಮಾನ್ಯ ಸಭಾಪತಿಯವರೇ, ನಾನು ನಾಡಿದ್ದು ಶನಿವಾರ ದಾವಣಗೆರೆಗೆ ಹೋಗುತ್ತಿದ್ದೇನೆ. ಒಬ್ಬ ಯುವಕ ಸೆಲ್ಫಿ ತೆಗೆದು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಆ ಸೆಲ್ಫಿನಲ್ಲಿ ಏನು ಹೇಳುತ್ತಾನೆಂದರೆ, ನಿಮ್ಮ ಬಗ್ಗೆ ನನಗೆ ನಂಬಿಕೆ ಇದೆ. ನೀವು ಏನೋ ಒಬ್ಬರು ಬುದ್ಧಿವಂತರಿದ್ದೀರಿ ಮತ್ತು ಏನು ಒಳ್ಳೆಯದು ಮಾಡುತ್ತೀರಿ. ನಿಮ್ಮ ಸಮ್ಮಿಶ್ರ ಸರ್ಕಾರದಲ್ಲಿ ಯುವಕರಿಗೆ ಉದ್ಯೋಗವನ್ನು ಸೃಷ್ಟಿ ಮಾಡಿ ಎಂದು ಹೇಳಿ ನಿನ್ನೆ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕಿಂತ ಮುಂಚೆ, ಈ ಸಮ್ಮಿಶ್ರ ಸರ್ಕಾರಕ್ಕೆ ನೆನಪು ಮಾಡಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಅದರ ಬಗ್ಗೆ ನನಗೆ ನೋವಿದೆ.

(ಮುಂದು...)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(086)04.07.2018/6.40/ಎಂ.ಎಂ-ಎ.ಕೆ

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿ) (ಮುಂದು):**

ಈ ರಾಜ್ಯದಲ್ಲಿ ಉದ್ಯೋಗದ ಸಮಸ್ಯೆಯಿಂದ ಯುವಕರ ಪರಿಸ್ಥಿತಿಗಳನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ನಾಳೆ ಮಧ್ಯಾಹ್ನ 1.30 ಗಂಟೆಯವರೆಗೆ ಕಾಯಿರಿ. ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವ ರೀತಿಯ ಯೋಜನೆಗಳನ್ನು ಕೊಡಬೇಕು, ಹೌದು ನಮಗೆ ಹಣದ ಕೊರತೆ ಇದೆ. ಈ ಸಮ್ಮಿಶ್ರ ಸರ್ಕಾರದಲ್ಲಿ ದೊಡ್ಡ ಮಟ್ಟದ ಸವಾಲು ನಮಗಿದೆ. ಆ ಸವಾಲನ್ನು ಯಾವರೀತಿ ಅನುಷ್ಠಾನಕ್ಕೆ ತರಬೇಕು, ಇವತ್ತು ನಮ್ಮದೇ ಆದಂತಹ ನೀಲಿನಕ್ಷೆಯನ್ನು ಇಟ್ಟಿದ್ದೇವೆ. ನಾವೇನು ಧೂಳನ್ನು ಒರೆಸದೇ ಇಟ್ಟುಕೊಂಡು ಕುಳಿತಿಲ್ಲ. ಧೂಳನ್ನೂ ಹೊರಗಡೆ ತೆಗೆದಿಲ್ಲ ಎಂದೆಲ್ಲಾ ಚರ್ಚೆ ಮಾಡಿದ್ದರಲ್ಲಾ ಅವನ್ನೆಲ್ಲಾ ಈಗ ಕ್ಲೀನ್ ಮಾಡಬೇಕಾಗಿದೆ. ಯುವಕರಿಗೆ ಉದ್ಯೋಗವನ್ನು ಯಾವರೀತಿ ಕೊಡಬೇಕೆಂಬ ಬಗ್ಗೆ ಚಿಂತನೆ ಮಾಡಿದ್ದೇವೆ. ಬಂಡವಾಳವನ್ನು ಯಾವರೀತಿ ತರಬೇಕು ಎಂಬುದೂ ಗೊತ್ತಿದೆ. ನಮಗೂ ಸ್ವಲ್ಪ ಅನುಭವ ಇದೆ. 20 ತಿಂಗಳು ನಿಮ್ಮ ಜೊತೆಗೆ ಸರ್ಕಾರ ಮಾಡಿದಾಗ ನಮಗೆ ಅನುಭವ ಇರಲಿಲ್ಲ. ಅನುಭವ ಇಲ್ಲದಿದ್ದರೂ ಯಾವರೀತಿ ಸರ್ಕಾರವನ್ನು ನಡೆಸಿದ್ದೇನೆ ಎಂಬುದನ್ನು ಈ ರಾಜ್ಯದ ಜನತೆ ನೋಡಿದ್ದಾರೆ. ಕುಮಾರಸ್ವಾಮಿ ಎಂಬುವವರು ಇದ್ದಾರೆ ಎನ್ನುವುದನ್ನು ಜನರು ನೆನಪಿಸಿಕೊಂಡರೆ ಆ 20 ತಿಂಗಳ ಆಡಳಿತದಲ್ಲಿ ಅನುಭವ ಇಲ್ಲದಿರುವ ಮುಖ್ಯಮಂತ್ರಿ ಕೊಟ್ಟಂತಹ ನಡವಳಿಕೆಯನ್ನು ನೋಡಿಯೇ ನಾನು ಇನ್ನೂ ರಾಜಕಾರಣದಲ್ಲಿ ಉಳಿದುಕೊಂಡಿದ್ದೇನೆ. ನೀವು ಅಂದು ಗೆದ್ದಿದ್ದೂ 108 ಕ್ಷೇತ್ರಗಳಲ್ಲಿಯೇ. 2009ರಲ್ಲಿ ನಮ್ಮ ಕಾಂಗ್ರೆಸ್‌ನ ನಾಯಕರುಗಳು ಏನಾದರೂ ಸ್ವಲ್ಪ ತೀರ್ಮಾನ ತೆಗೆದುಕೊಂಡಿದ್ದರೆ ಅಂದು ಕಾಂಗ್ರೆಸ್ ಸರ್ಕಾರ ಇರಬೇಕಾಗಿತ್ತು. 28 ಕ್ಷೇತ್ರಗಳಲ್ಲಿ ನಾವು ಇದ್ದೆವು, 108 ಕ್ಷೇತ್ರಗಳಲ್ಲಿ ಬಿ.ಜೆ.ಪಿಯವರು ಇದ್ದರು, 79 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷ ಬಂದಿತ್ತು. ಐದು ಜನರು ಪಕ್ಷೇತರರು ಇದ್ದರು. ಆ ಪಕ್ಷೇತರರನ್ನು ತೆಗೆದುಕೊಂಡು ನೀವು ಸರ್ಕಾರ ರಚನೆ ಮಾಡಿದ್ದು ನನಗೆ ಗೊತ್ತಿದೆ. ಅಂದು ಕೂಡ ನಿಮಗೆ ಸ್ಪಷ್ಟವಾದ ಬಹುಮತ ಸಿಕ್ಕಿರಲಿಲ್ಲ. ಕಾಂಗ್ರೆಸ್‌ನ ನಾಯಕರು ಸುಮ್ಮನೆ ಇದ್ದುದರಿಂದ ನಿಮಗೆ ಅಧಿಕಾರ ಸಿಕ್ಕಿತು. ಕಾಂಗ್ರೆಸ್ ನಾಯಕಿಯಾದ ಶ್ರೀಮತಿ ಸೋನಿಯಾ ಗಾಂಧಿಯವರು ಸರ್ಕಾರ ರಚನೆ ಮಾಡಿ ಎಂದಿದ್ದರೆ 2008ರಲ್ಲಿಯೂ ನೀವು ಅಧಿಕಾರಕ್ಕೆ ಬರುವುದಕ್ಕೆ ಆಗುತ್ತಿರಲಿಲ್ಲ. ಆದ್ದರಿಂದ ಇವತ್ತು ನನ್ನ ಚಿಂತನೆಯೇನೆಂದರೆ ನಾನು ಚುನಾವಣೆ ಸಂದರ್ಭದಲ್ಲಿ ಬಿಜಾಪುರದಲ್ಲಿ ನಾಗಠಾಣಾ ಕ್ಷೇತ್ರದಲ್ಲಿ ಪ್ರಚಾರ ಮಾಡಿ ಅಲ್ಲಿಂದ ಕೊಪ್ಪಳಕ್ಕೆ ಹೋದರೆ ಬೆಳಗ್ಗೆ ಪೇಪರ್ ತೆಗೆದು ನೋಡಿದರೆ ಲಂಬಾಣಿ ತಾಂಡದ ಕೆಲಸವನ್ನು ಹುಡುಕಿಕೊಂಡು ಗುಳೇ ಹೋದ ಕುಟುಂಬದ 19 ಜನ ಸದಸ್ಯರು ಅಪಘಾತದಲ್ಲಿ ಸಾಯುತ್ತಾರೆ. ಇದಾವುದನ್ನೂ ನಾನು ಮರೆತಿಲ್ಲ. ನಾವು ಹಲವಾರು ನಿಗಮಗಳನ್ನು ಮಾಡಿಕೊಂಡಿದ್ದೇವೆ. ಇದರಿಂದ ಏನು ಸಾಧನೆ ಮಾಡಿದ್ದೇವೆ? ನಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿಲ್ಲೆಯಿಂದ, ನಮ್ಮ ತಾಲ್ಲೂಕಿನಿಂದ ಕೆಲಸವನ್ನು ಹುಡುಕಿಕೊಂಡು ಗುಳೇ ಹೋಗುತ್ತಾರೆ ಎಂದು ನೀವು ಚರ್ಚೆ ಮಾಡಬೇಕಾದರೆ ಈಗಲೂ ಮಾತನಾಡುತ್ತೀರಿ. ನೀವು ಕೂಡ ಐದು ವರ್ಷ ಆಡಳಿತ ನಡೆಸಿದ್ದೀರಿ. ನೀವು ಏನು ಸಾಧನೆ ಮಾಡಿದ್ದೀರಿ ಅದನ್ನು ಸದನದ ಮುಂದೆ ಹೇಳಬೇಕು. ಇಂದು ಹಲವಾರು ರೀತಿಯ ಭ್ರಷ್ಟಾಚಾರ ಇತ್ಯಾದಿ ವಿಷಯಗಳನ್ನು ಚರ್ಚೆ ಮಾಡುತ್ತಾರೆ. ಈ ರಾಜ್ಯದಲ್ಲಿ ಉತ್ತಮವಾದ ಆಡಳಿತವನ್ನು ಕೊಡುವಂತಹ ಒಂದು ರಾಜ್ಯ ಎಂಬ ಭಾವನೆ ಏನಿತ್ತು, ಕೆಲವು ಬದಲಾವಣೆಗಳು ಎಲ್ಲಿಂದ ಪ್ರಾರಂಭವಾದವು ಎಂದು ನಾವೆಲ್ಲಾ ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಶಾಲಾಮಕ್ಕಳ ಬಗ್ಗೆ ಮಾನ್ಯ ಸದಸ್ಯರಾದ ಆಯನೂರು ಮಂಜುನಾಥರವರು ಹೇಳಿದ್ದಾರೆ. ಮಕ್ಕಳು ಓದುವುದಕ್ಕೆ ಬ್ಯಾಂಕಿನಲ್ಲಿ ಸಾಲವನ್ನು ಪಡೆದುಕೊಂಡಿದ್ದಾರೆ. ರೈತರ ಸಾಲವನ್ನು ಮನ್ನಾ ಮಾಡುತ್ತೀರಿ ವಿದ್ಯಾರ್ಥಿಗಳ ಸಾಲವನ್ನು ಕೂಡ ಮನ್ನಾ ಮಾಡಿ ಎಂದು ತಮ್ಮ ಭಾಷಣದಲ್ಲಿ ಹೇಳಿದ್ದನ್ನು ನಾನು ನೋಡಿದ್ದೇನೆ. ಅದೇ ರೀತಿಯಲ್ಲಿ ಇನ್ನೂ ಹಲವಾರು ವಿಷಯಗಳನ್ನು ಹೇಳಿದ್ದರು. ಅದೇ ರೀತಿ ಡ್ರೈವರ್ ಮತ್ತು ಕಂಡಕ್ಟರ್‌ಗಳ ಬಗ್ಗೆಯೂ ಹೇಳಿದ್ದೀರಿ. ಬಸ್‌ಗೆ ಕಂಡಕ್ಟರ್ ಇರಬೇಕು. ಕಂಡಕ್ಟರ್ ಇಲ್ಲದೇ ಕೇವಲ ಡ್ರೈವರ್ ಇದ್ದರೆ ಆ ಬಸ್ ಓಡಿಸಲು ವಸೂಲಿ ಮಾಡುವವರು ಯಾರು? ವಸೂಲಿ ಎಂದರೆ ಇಲ್ಲಿ ಕಮಿಷನ್; ನಾನು ಹೇಳಿದ್ದು ಮಾನ್ಯ ಸಿದ್ದರಾಮಯ್ಯನವರನ್ನು ಕುರಿತು ಹೇಳಲಿಲ್ಲ. ಈ ದೇಶದ ವ್ಯವಸ್ಥೆ ಬಗ್ಗೆ ಹೇಳಿದ್ದು. ರೈತರ ಸಾಲವನ್ನು ಮನ್ನಾ ಮಾಡಿ ಎಂದರೆ ಯಾರು ಏನೇನು ಪ್ರತಿಕ್ರಿಯೆಗಳನ್ನು ಕೊಟ್ಟಿದ್ದಾರೆ, ಕೇಂದ್ರ ಸರ್ಕಾರದ ಆರೋಗ್ಯ ಸಚಿವರು ಏನು ಹೇಳಿಕೆ ಕೊಟ್ಟರು? ಕೇಂದ್ರ ಕೃಷಿ ಇಲಾಖೆ ಸಚಿವರಾದ ಶ್ರೀ ರಾಧಾ ಮೋಹನ್ ಸಿಂಗ್‌ರವರು ಅದು State subject ರೈತರ ಸಾಲ ಮನ್ನಾ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿಕೆ ಕೊಟ್ಟಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡರು ಹೇಳಿದ ತಕ್ಷಣ ಧುತ್ತನೆ ಎದ್ದು ನಿಂತು ಯಾವ ಕಾಲದಲ್ಲಿ ಎಂದರಲ್ಲ. ಕಳೆದ ಐದು ವರ್ಷಗಳಲ್ಲಿ ಯಾವ ಯಾವ N.P.A (Non-Performing Assets) ಆದವರಿಗೆ ಮನ್ನಾ ಮಾಡಿದ್ದೀರಿ ನಾಳೆ ಬೇಕೆಂದರೆ ಯಾವ ಯಾವ ಕಂಪನಿಗಳೆಂದು ಅವುಗಳ ಮಾಹಿತಿ ಕೊಡಲಿ. N.P.A ಕಂಪನಿಗಳು ಆಗಿರುವುದಕ್ಕೆ ರೂ. 2 ರಿಂದ 2.5 ಲಕ್ಷ ಕೋಟಿಗಳನ್ನು ಕೊಟ್ಟಿದ್ದಾರೆ. ಅದರ ದಾಖಲೆಗಳಿವೆ. ಇವತ್ತು ನಾನು ಗೌರವಾನ್ವಿತ ಸದಸ್ಯರುಗಳಿಗೆ ಮನವಿ ಮಾಡುವುದೇನೆಂದರೆ, ಇಲ್ಲಿ ದೊಡ್ಡ ಮಟ್ಟದ ಭಾಷಣವನ್ನು ಮಾಡುವ ಅವಶ್ಯಕತೆ ಇಲ್ಲ. ಸಮ್ಮಿಶ್ರ ಸರ್ಕಾರವನ್ನು ಮತ್ತೆ ಸೇರಿ ಮಾಡಿದ್ದೇವೆ. ತಾವು ತಿಳಿದುಕೊಂಡಂತೆ ನಾನು ಒಂದು ವರ್ಷ ಇರುತ್ತೇನೆ ಎಂದು ಯಾವಾಗಲೋ ಒಂದು ಸಲ ಹೇಳಿದ್ದೆ. ಕಾರಣವೇನೆಂದರೆ, ಎಲೆಕ್ಟ್ರಾನಿಕ್ ಮೀಡಿಯಾದ ಮಿತ್ರರು ನಾನು Chartered Accountant ಗಳ ಒಂದು ಸಮ್ಮೇಳನಕ್ಕೆ ಹೋಗಿದ್ದಾಗ ನಾನು ಪ್ರಿಂಟ್ ಮೀಡಿಯಾದವರಿಗೆ ಇದನ್ನು ಹೇಳುತ್ತಿಲ್ಲ, ಅವರು ಇದ್ದುದರಲ್ಲಿ ಇನ್ನೂ ಸ್ವಲ್ಪ ನಮ್ಮನ್ನು ಉಳಿಸುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಯಾವ ಚಾನಲ್ ನೋಡಿದರೂ "ನಾಳೆ ಬೆಳಗ್ಗೆ ಸರ್ಕಾರ ಹೋಗೇ ಬಿಡ್ತು" ಎಂದು ಹೇಳಿದ್ದೇ ಹೇಳಿದ್ದು. ಎಲೆಕ್ಟ್ರಾನಿಕ್ ಮೀಡಿಯಾದ ನನ್ನ ಸ್ನೇಹಿತರುಗಳಿಗೆ ಆ ಸಭೆಯಲ್ಲಿ ಹೀಗೆ ಹೇಳಿದೆ. 'ಪ್ರತಿ ದಿನ ನೀವು ಇದನ್ನು ಮಾಡಿಕೊಂಡು ಹೊರಟಿದ್ದೀರಿ, ಈಗ ರಾಜಕೀಯ ಮುಗಿದು ಹೋಗಿದೆ. ನಾವು ನೀವು ಸೇರಿ ರಾಜ್ಯದ ಅಭಿವೃದ್ಧಿ ಮಾಡೋಣ. ಈ ರೀತಿ ಜನಗಳ ಮುಂದೆ ತಪ್ಪು ಅಭಿಪ್ರಾಯವನ್ನು ಮೂಡಿಸಬೇಡಿ ನೀವು ಹೇಳಿದ ರೀತಿ ಇವತ್ತೋ ನಾಳೆಯೋ ಎಂದು ಹೇಳುತ್ತೀರಲ್ಲ, ಮುಂದೆ ಲೋಕಸಭಾ ಚುನಾವಣೆ ಇದೆಯಲ್ಲವೇ ಅದಕ್ಕಾದರೂ ನಿಮ್ಮ ಬೆಂಬಲ ಇದೆಯೇ? ಒಂದು ವರ್ಷವಾದರೂ ನನ್ನನ್ನು ತೆಗೆಯದೇ ಇರಬಹುದು. ಲೋಕಸಭಾ ಚುನಾವಣೆವರೆಗೆ ನಾನು ಇರುತ್ತೇನಲ್ಲವೇ? ಅಲ್ಲಿಯವರೆಗಾದರೂ ನಮ್ಮನ್ನು ಕೆಲಸ ಮಾಡಲು ಬಿಡಿ' ಎಂದು ಮಾಧ್ಯಮದ ಸ್ನೇಹಿತರಿಗೆ ಮನವಿ ಮಾಡಿದೆ. 'ಒಂದು ವರ್ಷಕ್ಕೇ ಹೋಗಿ ಬಿಡುತ್ತೇನೆ' ಎಂದು ಹೇಳಿದ್ದಲ್ಲ. ಇವತ್ತು ಕಾಂಗ್ರೆಸ್‌ನ ಹಿರಿಯ ನಾಯಕರುಗಳು ದೆಹಲಿಯಲ್ಲಿರಲಿ ಅಥವಾ ರಾಜ್ಯದಲ್ಲಿರಲಿ ಈ ಸರ್ಕಾರ ಮುಂದಿನ ಐದು ವರ್ಷ ಕಾಲ ನಡೆಯಬೇಕು ಎನ್ನುವುದು ಪ್ರತಿಯೊಬ್ಬರಲ್ಲಿಯೂ ಇರುವ ಭಾವನೆಯಾಗಿದೆ. ಇಲ್ಲಿ ನಾನು ಕಾಂಗ್ರೆಸ್‌ನ ನಾಯಕರುಗಳು ಮತ್ತು ಶಾಸಕರುಗಳನ್ನು ಯಾವರೀತಿ ವಿಶ್ವಾಸಕ್ಕೆ ತೆಗೆದುಕೊಂಡು ಹೋಗಬೇಕು ಎನ್ನುವುದರಲ್ಲಿ ನನಗೂ ಸ್ವಲ್ಪ ಅನುಭವ ಇದೆ. ನನಗೆ ಪ್ರತಿಯೊಬ್ಬ ಕಾಂಗ್ರೆಸ್‌ನ ಶಾಸಕರು ಮತ್ತು ನಾಯಕರುಗಳನ್ನು ಒಟ್ಟಾಗಿ ಯಾವರೀತಿ ತೆಗೆದುಕೊಂಡು ಹೋಗಬೇಕು ಎನ್ನುವುದು ಗೊತ್ತಿದೆ. ನನಗೆ ಈ ರಾಜ್ಯ ಮುಖ್ಯ, ಈ ರಾಜ್ಯದ ಅಭಿವೃದ್ಧಿ ಮುಖ್ಯ. ಶ್ರೀ ಸಿದ್ಧರಾಮಯ್ಯನವರಿಗೂ ಕಮಿಟ್‌ಮೆಂಟ್ ಇದೆ, ಹಾಗೆ ಶ್ರೀ ದೇಶಪಾಂಡೆ ಮತ್ತು ಶ್ರೀ ಕೆ.ಜೆ. ಜಾರ್ಜ್ ರವರಿಗೂ ಇದೆ ಮತ್ತು ಎಲ್ಲಾ ಮಂತ್ರಿಗಳಿಗೂ ಕಮಿಟ್‌ಮೆಂಟ್ ಇದೆ. ಇವತ್ತು ಬೆಂಗಳೂರು ನಗರವನ್ನು ಒಳಗೊಂಡಂತೆ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ನಾವೆಲ್ಲ ಒಟ್ಟಾಗಿ ನಡೆಯೋಣ. ಕೆಲವರು "ಪಾಪ ಉತ್ತರ ಕರ್ನಾಟಕ ಇವತ್ತು ಅಸಡ್ಡೆ ಆಗಿ ಹೋಯಿತು ಹಾಗೂ ಉತ್ತರ ಕರ್ನಾಟಕದ ಸರ್ಕಾರವನ್ನು ಕಾಣಲು ಸಾಧ್ಯವಿಲ್ಲ" ಎಂದು ಭಾಷಣ ಮಾಡುತ್ತಾರೆ . ಈ ರೀತಿ ಬೇರ್ಪಡಿಸುವ ಕೆಲಸವನ್ನು ಯಾರೂ ಕೂಡ ಮಾಡಬೇಡಿ. ಈ ಸರ್ಕಾರವು ಸಮಗ್ರ ಕರ್ನಾಟಕದ ಅಭಿವೃದ್ಧಿಗಾಗಿ ರಚನೆಯಾಗಿರುವ ಸಮ್ಮಿಶ್ರ ಸರ್ಕಾರವಿದು. ಇವತ್ತಿನ ದಿವಸ ಉತ್ತರ ಕರ್ನಾಟಕ ಅಥವಾ ಹಳೇ ಸರ್ಕಾರ ಎನ್ನುವ ಪ್ರಶ್ನೆಯೇ ಇಲ್ಲ. ಗುಳೇ ಹೋಗಿ ಸಾಯುತ್ತಿರುವ ಉತ್ತರ ಕರ್ನಾಟಕದ ನನ್ನ ಬಡ ಕುಟುಂಬಗಳು ಉಳಿಯುವಂತಹ ರೀತಿಯ ಕಾರ್ಯಕ್ರಮಗಳನ್ನು ನಾವು ಕೊಡಬೇಕಾಗಿದೆ. ಎಲ್ಲಾ ನೀರಾವರಿ ಯೋಜನೆಗಳನ್ನು ಮುಂದಿನ 5 ವರ್ಷಗಳಲ್ಲಿ ಯಾವ ರೀತಿ ಪೂರ್ಣಗೊಳಿಸಬೇಕೆನ್ನುವ ಬಗ್ಗೆ ಚಿಂತನೆ ಮಾಡಿದ್ದೇವೆ. ಅದೇ ರೀತಿ ಪ್ರತಿಯೊಂದು ಕುಟುಂಬಗಳಿಗೆ ಕುಡಿಯುವ ನೀರನ್ನು ಒದಗಿಸಬೇಕು. ಯಾವ ರೀತಿ ಕಾರ್ಯಕ್ರಮಗಳನ್ನು ನೀಡಬೇಕು ಹಾಗೂ ಹೇಗೆ ಹಣವನ್ನು ಹೊಂದಿಸಬೇಕು ಎಂಬುದರ ಕುರಿತು ನಾನು ಮತ್ತು ಮಾನ್ಯ ಶ್ರೀ ಕೃಷ್ಣ ಭೈರೇಗೌಡರು ಚರ್ಚೆ ಮಾಡಿದ್ದೇವೆ. ಕರ್ನಾಟಕ ರಾಜ್ಯವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಪದ್ಭರಿತವಾದ ರಾಜ್ಯ ಎಂಬುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಇವತ್ತು ಕರ್ನಾಟಕದಲ್ಲಿ ಹಣದ ಸಮಸ್ಯೆ ಆಗುವುದಕ್ಕೆ ಸಾಧ್ಯವಿಲ್ಲ. ಇವತ್ತು ರೈತನ ಸಾಲ ಮನ್ನಾ ಮಾಡಬೇಕೆಂದು ಒಂದು ತಿಂಗಳಿನಿಂದ ನಮಗೆ ಎಚ್ಚರಿಸುತ್ತಿದ್ದೀರಿ. ಅದನ್ನು ನಾವು ರಾಜ್ಯದ ಗಲಾಟೆಯೊಳಗೆ ಮರೆತು ಬಿಟ್ಟಿದ್ದೇವೆ ಎಂದು ತಿಳಿದುಕೊಂಡಿದ್ದೀರಿ. ನೀವು ನಮಗೆ ಬುದ್ಧಿ ಹೇಳಿ ನಾವು ಸಾಲ ಮನ್ನಾ ಮಾಡಬೇಕಾಗಿಲ್ಲ. ಅಂತಹ ಒಂದು ಕೆಟ್ಟ ಪರಿಸ್ಥಿತಿ ಈ ಸಮ್ಮಿಶ್ರ ಸರ್ಕಾರಕ್ಕೆ ಬಂದಿಲ್ಲ. ರೈತರ ಸಾಲ ಮನ್ನಾ ವಿಷಯದಲ್ಲಿ ತಾವು ಕ್ರೆಡಿಟ್ ತೆಗೆದುಕೊಳ್ಳಬೇಕೆಂದು ರೈತರ ಸಾಲ ಮನ್ನಾ ಆದರೆ ಅದರ ಕೀರ್ತಿ ನಮಗೆ ಸೇರಬೇಕೆಂದು ರಾಜಕಾರಣ ಮಾಡುವುದಕ್ಕೆ ಹೊರಟಿದ್ದೀರಿ. ಅದನ್ನು ಈ ರಾಜ್ಯದ ಜನರು ತೀರ್ಮಾನ ಮಾಡುತ್ತಾರೆ. ಬಹಳ ಸಲ ಜನರನ್ನು ದಾರಿ ತಪ್ಪಿಸಲು ಸಾಧ್ಯವಿಲ್ಲ. ಮುಂದಿನ ನಡೆ ನಿಮಗೆ ಸಮಾಧಾನ ಆಗದೇ ಇರಬಹುದು. ಈ ಸರ್ಕಾರ ಇನ್ನೂ ಚಾಲೂ ಆಗಿದೆಯೋ ಇಲ್ಲವೆಂದು ನಿಮಗೆ ಅಪನಂಬಿಕೆ ಇರಬಹುದು.

(ಮುಂದು . .

(87) 04-07-2018/6-50/ಕೆಹೆಚ್/ಆರ್ಎನ್

**ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಂದು):-** ಆದರೆ ಈ ನಾಡಿನ ಜನತೆಯಲ್ಲಿರುವಂತಹ ಭಾವನೆ ಇದೆಯಲ್ಲವೇ ಅದೊಂದು ಜನಪರವಾದಂತಹ ಬಡವರ ಸರ್ಕಾರ ಇವತ್ತಿನ ದಿವಸ ಇದೆಯೆಂಬುದೇನಿದೆ. ಮಾನ್ಯ ಸಿದ್ದರಾಮಯ್ಯ ಸರ್ಕಾರದ ಕಾರ್ಯಕ್ರಮಗಳು ಮುಂದುವರೆಯಬೇಕೆಂದು ನಿರ್ಧಾರವಾಗಿದೆ. ನಾವೇನು ಇದರ ಬಗ್ಗೆ ದೊಡ್ಡ ಪ್ರಚಾರ ಮಾಡುವುದಕ್ಕೆ ಹೋಗಿಲ್ಲ. ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಮಾಡಿದಂತಹ ಹಲವಾರು ಉತ್ತಮವಾದ ಕಾರ್ಯಕ್ರಮಗಳೇನಿವೆ, ಆ ಕಾರ್ಯಕ್ರಮಗಳೆಲ್ಲವೂ ಮುಂದುವರೆಯುತ್ತವೆ. ಯಾವ ಕಾರ್ಯಕ್ರಮಗಳನ್ನು ಉಳಿಸುವಂತಹ ಪ್ರಶ್ನೆಯಿಲ್ಲ. ಅದೇ ರೀತಿ ಅಭಿವೃದ್ಧಿ ಕೆಲಸಗಳನ್ನು ಮಾಡಿರುವುದರ ಬಗ್ಗೆ ಅಂಕಿ-ಅಂಶಗಳನ್ನು ಕೊಡುವುದಕ್ಕೆ ತಯಾರಾಗಿದ್ದೇವೆ. ಇವತ್ತಿನ ದಿವಸ 2 ಪಕ್ಷಗಳು ಈ ನಾಡಿನ ಅಭಿವೃದ್ಧಿಗೆ ಸರ್ಕಾರವನ್ನು ರಚನೆ ಮಾಡಿರುವುದೇ ಹೊರತು, ಯಾವುದೋ ಒಂದು ಅವಕಾಶವಾದ ರಾಜಕಾರಣಕ್ಕೆ ಅಥವಾ ಮುಖ್ಯಮಂತ್ರಿಗಳ ಸ್ಥಾನವನ್ನು ಹಿಡಿದುಕೊಳ್ಳಬೇಕೆಂಬ ಆಸೆಯಿಂದ ನಾನು ಕಾಂಗ್ರೆಸ್ ಪಕ್ಷದ ಜೊತೆ ಇವತ್ತಿನ ದಿವಸ ಸರ್ಕಾರವನ್ನು ಮಾಡಿರುವಂತಹದ್ದಲ್ಲ. ಕಾಂಗ್ರೆಸ್‌ನವರು ನನ್ನನ್ನು ಮುಖ್ಯಮಂತ್ರಿಯನ್ನಾಗಿ ಮಾಡಿ, ಅವರು ಅಧಿಕಾರವನ್ನು ಹಿಡಿದುಕೊಳ್ಳಬೇಕೆಂದು ಮಾಡಿರುವುದಲ್ಲ. ಈ ನಾಡಿಗೆ ಇದು ಅನಿವಾರ್ಯವಾಗಿದೆ. ಕರ್ನಾಟಕ ರಾಜ್ಯದಿಂದ ದೇಶಕ್ಕೆ ಈ ಒಂದು ವ್ಯವಸ್ಥೆ ಅನಿವಾರ್ಯ ಎನ್ನುವಂತಹದ್ದನ್ನು ಮನಗಂಡು ಇವತ್ತಿನ ದಿವಸ ಸಮಿಶ್ರ ಸರ್ಕಾರ ರಚನೆಯಾಗಿರುವಂತಹದ್ದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದ್ದರಿಂದ ವಿರೋಧ ಪಕ್ಷದ ಸದಸ್ಯರಿಗೆ ಇದರ ಬಗ್ಗೆ ಅನುಮಾನಗಳೆನಾದರೂ ಇದ್ದರೆ, ನನಗೆ 2-3 ತಿಂಗಳುಗಳ ಸಮಯವನ್ನು ಕೊಡಿ. ನಾನು ನಿಮ್ಮನ್ನು 2 ವರ್ಷಗಳ ಕಾಲ ಸಮಯವನ್ನು ಕೇಳುವುದಿಲ್ಲ. ಕೇವಲ 2-3 ತಿಂಗಳುಗಳ ಸಮಯವನ್ನು ಕೊಡಿ ಎಂದು ಕೇಳುತ್ತಿದ್ದೇನೆ.

**ಶ್ರೀ ಕೆ.ಬಿ.ಶಾಣಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾವು ನಿಮ್ಮನ್ನು ಅಧಿಕಾರದಿಂದ ಇಳಸುವುದಕ್ಕೆ ಆಸೆ ಇದೆ ಎಂದು ತಾವು ಹೇಳದರೆ, ಎಲ್ಲಾ ವಿಷಯವನ್ನು ಏಕೆ ತಾವು negative ಆಗಿ ತೆಗೆದುಕೊಳ್ಳುತ್ತೀರಿ. ನಮ್ಮ ಪಕ್ಷದ ಬಗ್ಗೆ ನಿಮಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. We wish them to run the government. ನಿಮ್ಮ ಹಣೆಬರಹಕ್ಕೆ ನೀವೇ ಸರ್ಕಾರವನ್ನು ಪತನ ಮಾಡಿದರೆ ಎಂದು ಹೇಳದಷ್ಟೆ ಹೇಳದ್ದು.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಅಧಿಕಾರದಿಂದ ಇಳಸುವುದಕ್ಕೆ ಆಸೆ ಇದ್ದರೆ, ಅದಕ್ಕೆ ತಾವು ನಮ್ಮನ್ನು ಎಚ್ಚರಿಸುತ್ತಿದ್ದೀರಿ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ನಿಮ್ಮ ಪಕ್ಷದ ಬಗ್ಗೆ ನಿಮಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. We support them to continue. ನಿಮ್ಮ ಹಣೆಬರಹಕ್ಕೆ ಯಾರು ಹೊಣೆ ಎಂದು ಹೇಳದಷ್ಟೆ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದೇನೋ ಫಿಲ್ಟರ್ ಎಂದು ಹೇಳುತ್ತಾರೆ. ಫಿಲ್ಟರ್‌ನ ಓಪನ್ ಮಾಡಿ ಹೇಳುತ್ತಿದ್ದಾರೋ ಅಥವಾ ಫಿಲ್ಟರ್‌ನ ಪ್ರೆಸ್ ಮಾಡಿ ಹೇಳುತ್ತಿದ್ದಾರೋ ಎಂಬುದು ಗೊತ್ತಿಲ್ಲ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಬುಟ್ಟಿಯೊಳಗೆ ಕೈಹಾಕದೇ ಇದ್ದರೂ ಕೂಡ . . .

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ನಿಮ್ಮ ನಿಮ್ಮ ಜಗಳದೊಳಗೆ ಸರ್ಕಾರವನ್ನು ಕಳೆದುಕೊಳ್ಳಬೇಡಿ ಎಂದು ಬುದ್ಧಿಮಾತನ್ನು ನಾನು ಹೇಳದ್ದೇನೆ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರೇ ನಮ್ಮಗಳ ಚಿಂತೆಯನ್ನು ತಾವು ಬಿಟ್ಟುಬಿಡಿ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ನಾವು ಚಿಂತೆ ಮಾಡಲೇಬೇಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮ್ಮ ಚಿಂತೆಯನ್ನು ಮಾಡಬೇಡಿ. ನಾವೆಲ್ಲರೂ ರಾಜ್ಯದ ಜನತೆಯ ಚಿಂತೆಯನ್ನು ಮಾಡೋಣ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ರಾಜ್ಯದ ಜನತೆಯ ಚಿಂತೆ ನಿಮ್ಮೊಬ್ಬರಿಗೆ ಮಾತ್ರವಲ್ಲ. ನಮಗೂ ಕೂಡ ಇದೆ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ನೀವು ರಾಜ್ಯದ ಜನರ ಚಿಂತೆಯನ್ನು ಮಾಡೋಣ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರು ಸುಮ್ಮನೆ ಕುಳಿತುಕೊಳ್ಳಬೇಕೆ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಸರ್ಕಾರದ ಬಗ್ಗೆ ತಾವು ಆತಂಕಪಡಬೇಡಿ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಸರ್ಕಾರವು ಚೆನ್ನಾಗಿ ನಡೆದರೆ, we are happy.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಾನು ರೆಫರ್ ಮಾಡುತ್ತಿರಲಿಲ್ಲ. ಅದೇನೋ 20-20 ತಿಂಗಳುಗಳ ಬಗ್ಗೆ ಹೇಳಿದರು. Umpire ಸರಿಯಾಗಿ ಇರುವವರನ್ನು ಹಾಕಿಕೊಂಡಿಲ್ಲ ಎಂದು ಹೇಳಿದರು. ವಿರೋಧ ಪಕ್ಷದ ನಾಯಕರು ಅದು ಹೇಳಿದ್ದು ತಪ್ಪಿಲ್ಲ. ಸತ್ಯ ಇದೆ. 20-20 ತಿಂಗಳಲ್ಲಿ ಅವರು ನನಗೆ ಏನು ಮಾಡಿದರು ಬಿಡಿ. ನನ್ನ ಮೇಲೆಯೇ ಸಚಿವ ಸಂಪುಟದ ಸದಸ್ಯರೊಬ್ಬರೂ ನನ್ನ ಕ್ಯಾಬಿನೇಟ್ ಸಚಿವರನ್ನು ಕೊಲೆ ಮಾಡಿಸುವುದಕ್ಕೆ ಸುಫಾರಿ ಕೊಟ್ಟಿದ್ದೇನೆಂದು ಬಳ್ಳಾರಿ ಸ್ಟೇಷನ್‌ಗೆ ಹೋಗಿ ದೂರನ್ನು ಕೊಡುತ್ತಾರೆ. ಅವರು ಯಾವ್ಯಾವ ಮಟ್ಟದಲ್ಲಿ ನನ್ನನ್ನು ನಡೆಸಿಕೊಂಡಿದ್ದೀರೆಂಬುದು ನನಗೆ ಗೊತ್ತಿದೆ. ತಮಗೆ ಹೇಳುವುದೇನೆಂದರೆ, ನಾನು ಅವರಿಗೆ ಅಧಿಕಾರವನ್ನು ಕೊಟ್ಟೆ. 7-8 ದಿನ ಮುಖ್ಯಮಂತ್ರಿಗಳಾಗಿದ್ದರು. ಅದು ಎಂಥದ್ದೋ ಅಗ್ರಿಮೆಂಟ್ ಎಂದು ಹೇಳಿದರಲ್ಲವೇ, ಅದನ್ನು ಯಾವ ಅಂಪೈರ್ ಕಳುಹಿಸಿದ್ದು, ಅದನ್ನು ಎರಡು ಪಕ್ಷದವರು ಸಹಿ ಮಾಡಬೇಕೆಂದು ಬಾಂಡ್ ಪೇಪರ್‌ನ್ನು ಶ್ರೀ ದೇವೇಗೌಡರವರು ಕಳುಹಿಸಿದ್ದು ಎಂದು ತಾವು ಅಂದುಕೊಂಡಿದ್ದೀರಾ, ಅದನ್ನು ನಿಮ್ಮ head quarters ನಿಂದಲೇ ಕಳುಹಿಸಿರುವುದು. ಅದು ನನಗೆ ಗೊತ್ತಿರಲಿಲ್ಲ. ಆದರೆ ಅದಕ್ಕೆ ನಾನು ಪೆಟ್ಟನ್ನು ತಿಂದಿದ್ದೇನೆ. ಅದೆಲ್ಲೋ ದಿಲ್ಲಿಯೊಳಗೆ . . . .

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, . . . .

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ವಿರೋಧ ಪಕ್ಷದ ನಾಯಕರೇ ಒಂದು ನಿಮಿಷ ಕುಳಿತುಕೊಳ್ಳಿ. ಇದರ ಬಗ್ಗೆ ಹೇಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, . . . .

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ವಿರೋಧ ಪಕ್ಷದ ನಾಯಕರೇ ನಾನು ಮಾತನಾಡುವುದನ್ನು ಮುಗಿಸುತ್ತೇನೆ. ನಾನು yield ಆಗಿಲ್ಲ. ತಾವು ದಯಮಾಡಿ ಕುಳಿತುಕೊಳ್ಳಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ.,ಯಿಂದ ಹೊರ ಬಂದು ಕೆ.ಜೆ.ಪಿ., ಆಯಿತಲ್ಲಾ, ಕೆ.ಜಿ.ಪಿ., ಪಕ್ಷದ ನಾಯಕರಾಗಿ ಶ್ರೀ ಯಡಿಯೂರಪ್ಪನವರು ಭಾಷಣ ಮಾಡುತ್ತಾರೆ. ಆ ಪುಣ್ಯಾತ್ಮ ನನಗೆ ಕೊಟ್ಟಿದ್ದ ಅಧಿಕಾರವನ್ನು ಆದರೆ ನಮ್ಮವರೆ ಅಧಿಕಾರವನ್ನು ತಪ್ಪಿಸಬೇಕೆಂದು ಹೇಳಿ ಶಿಗ್ಗಾಂವದಲ್ಲಿ ಮಾಡಿದ ಭಾಷಣದ ಧ್ವನಿ ಮುದ್ರಿತ ಕ್ಯಾಸೆಟ್‌ನ್ನು ತಮಗೆ ಕೊಡುತ್ತೇನೆ. ಇದರ paper cutting ಅಲ್ಲ. 12 ವರ್ಷದ ಕಥೆ ಮುಗಿದು ಹೋಯಿತು. ಇದರ ಬಗ್ಗೆ ತಾವು refer ಮಾಡಿದಕ್ಕೆ ನಾನು ಹೇಳುತ್ತಿದ್ದೇನೆ. ಇಲ್ಲದಿದ್ದರೆ ಇದರ ಅವಶ್ಯಕತೆ ನನಗಿರಲಿಲ್ಲ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಹಳೆಯದನ್ನೆಲ್ಲಾ ಹೇಳಿದರೆ,

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ತಮ್ಮ ವಿರೋಧ ಪಕ್ಷದ ನಾಯಕರು ಈಗ ಹೇಳಿದರಲ್ಲವೇ, ಅದಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಆತ್ಮವಿಶ್ವಾಸದಿಂದ ಮಾತನಾಡುತ್ತಾರೆ. ಆದರೆ ಅದು ನಮ್ಮ head quarters ನಿಂದ ಬಂದಿರುವುದಲ್ಲ. ಆಗ ಪರಮೋಚ್ಛ ನಾಯಕರಿಂದ ಬಂದಂತಹ ಈ ಅಗ್ರಿಮೆಂಟ್‌ಗೆ ಸಹಿ ಹಾಕಬೇಕೆಂಬ ಸುದ್ದಿಯು ಮಾಧ್ಯಮದಲ್ಲಿ ಬಂದಿದೆ. ಇದರ ಬಗ್ಗೆ ಚರ್ಚೆ ಏನು ಬೇಕಾದರೂ ಆಗಿರಲಿ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಯಾವ ಪರಮೋಚ್ಛ ನಾಯಕರು ಈ ರೀತಿ ಮಾಡಿರುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಿಮ್ಮ ಪಕ್ಷದ ಪರಮೋಚ್ಛ ನಾಯಕರೇ ಈ ಅಗ್ರಿಮೆಂಟ್‌ಗೆ ಸಹಿ ಮಾಡಿದರೆ ಮಾತ್ರ ಅಧಿಕಾರವನ್ನು ಹಸ್ತಾಂತರ ಮಾಡುತ್ತೇವೆಂದು ಹೇಳಿದರು. ಇದರಿಂದ ತಾವು ವಚನ ಭ್ರಷ್ಟರಾದೆವು ಎಂದು ಜನರ ಬಳಿ ಹೋದೆವು. ಇದನ್ನು ತಾವು ನೆನಪು ಮಾಡಿಕೊಳ್ಳಬೇಕು. ಆಗ ನಾವು ಏನು ಮಾಡಿದ್ದೇವೆಂದರೆ ತಾವು ಮಾತು ತಪ್ಪಿದ್ದೀರಿ ಎಂದು ನಾವು ಜನರ ಬಳಿ ಹೋದೆವು. ಜನಾಭಿಪ್ರಾಯದ ಮೂಲಕ ನಾವು 5 ವರ್ಷ ಅಧಿಕಾರವನ್ನು ನಡೆಸಬೇಕೆಂಬುದು ತಮಗೆಲ್ಲಾ ಗೊತ್ತಿರುವಂತಹ ವಿಚಾರವಾಗಿದೆ. ತಾವು ಬಹಳ ಬುದ್ಧಿವಂತಿಕೆಯಿಂದ, ತುಂಬಾ ತಾಳ್ಮೆಯಿಂದ, ಸಹನೆಯಿಂದ ಯಾರು ಕೂಡ ತಲೆದೂಗುವಂತಹ ಶೈಲಿಯಲ್ಲಿ ಮಾತನಾಡುವಂತಹ ಕಲೆ ಮಾನ್ಯ ಮುಖ್ಯಮಂತ್ರಿಗಳಿಗಿದೆ ಎಂಬ ಕಾರಣಕ್ಕೆ ಅವರ ಮೇಲೆ ನನಗೆ ಅಭಿಮಾನವಿದೆ. ತಾವು ಹೇಳಿದ್ದು ಸತ್ಯ ಅಲ್ಲವೇ? ಎಲ್ಲರೂ ಕೂಡ ತಲೆದೂಗಬೇಕು. ಆ ರೀತಿ ತಾವು ಹೇಳುವ ಶೈಲಿ, ಮಾತಿನ ಶೈಲಿ, ವಿಷಯ ಮಂಡನೆ ಎಲ್ಲವೂ ಅದ್ಭುತ, ಇದರ ಬಗ್ಗೆ ತಮಗೆ ಯಾವುದೇ ರೀತಿಯ ಅನುಮಾನವು ಬೇಡ. ತಾವು ಇನ್ನೊಬ್ಬರನ್ನು ಒಪ್ಪಿಸುವುದಕ್ಕೆ ಮಾತನಾಡುವಂತಹ ಶೈಲಿಗೆ ಒಪ್ಪಲೇಬೇಕು. ಆದರೆ ವಾಸ್ತವಾಂಶ ಅದಲ್ಲ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಶ್ರೀ ದೇವೇಗೌಡರ ಮಗ ಅಂದರೆ ಹಾಗೆಯೇ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಮ್ಮ ಶೈಲಿಯು ಕರಗತವಾಗಿದೆಯಲ್ಲವೇ ಅದಕ್ಕೆ ತಮಗೆ ಶರಣು. ಆದರೆ ವಾಸ್ತವಿಕ ಆದಲ್ಲ. ಯಾವ ರೀತಿಯಲ್ಲಿ ಅದ್ಭುತವಾಗಿ ಹೇಳುತ್ತಾರೆಂದರೆ . . .

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ ಶ್ರೀ ದೇವೇಗೌಡರ ಮಗ ಅಂದರೆ ಹಾಗೆಯೇ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅದು ಗೊತ್ತಾಯಿತು. ನನಗೆ . . .

**ಸಭಾಪತಿಯವರು:-** ಒಂದು ನಿಮಿಷ, ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಏನು ಮಾತನಾಡುತ್ತಾರೋ, ಅದನ್ನು ಮಾತನಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಶ್ರೀ ದೇವೇಗೌಡರ ಬಗ್ಗೆ ನನಗೆ ವಾಸ್ತವಿಕವಾಗಿ ಬಹಳ ಗೌರವವಿದೆ. ಆ ಜಿಲ್ಲೆಯಲ್ಲಿ ಅವರ ಸಂಪರ್ಕ ಬಹಳ ಕಡಿಮೆ ಇದೆ. ಆದರೆ ನನಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಬ್ಬ ಹಿರಿಯರು ಒಂದು ಮಾತನ್ನು ಏನು ಹೇಳಿದರು ಎಂದರೆ, ಶ್ರೀ ದೇವೇಗೌಡರು ಎಂದರೆ ಎಂತಹ ಅದ್ಭುತವಾದ ರಾಜಕಾರಣಿ ಎಂದು ಹೇಳಿದರೆ ಅವರು ಯಾವುದಾದರೂ ನಿರ್ಧಾರವನ್ನು ತೆಗೆದುಕೊಂಡರೆ ಆ ನಿರ್ಧಾರ ಅವರಿಗೆ ಮಾತ್ರ ಗೊತ್ತಿರುತ್ತದೆ. ಮತ್ತೆ ಇನ್ಯಾರಿಗೆ ಗೊತ್ತಿರುತ್ತದೆ ಎಂದು ಕೇಳಿದರೆ ಆ ಭಗವಂತನಿಗೆ ಮಾತ್ರ ಗೊತ್ತಿರುತ್ತದೆ ಎಂದು ಹೇಳುತ್ತಾರೆ. ಅಂತಹ ಅದ್ಭುತವಾದಂತಹ ಶ್ರೀ ದೇವೇಗೌಡರ ಪುತ್ರ ನೀವು ನಿಮ್ಮ ಬಗ್ಗೆ ನನಗೆ ಯಾವುದೇ ರೀತಿಯ ಭಾವನೆಯಿಲ್ಲ. ಆದರೆ ತಾವು ಹೇಳಿದಂತಹ ಮಾತು ಪೂರ್ಣ ಸತ್ಯವಲ್ಲ. ಆದರೆ ತಾವು ವಾಸ್ತವಿಕವಾಗಿ ಎಲ್ಲರನ್ನೂ ಒಪ್ಪಿಸುವಂತಹ ಶೈಲಿಯಲ್ಲಿ ಹೇಳಿದ್ದೀರಿ. ಆ ಕಾರಣಕ್ಕಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಎಲ್ಲರಿಗೂ mesmerise ಮಾಡುವುದಕ್ಕೆ ಹೇಳಬೇಕಾದುದಲ್ಲ. ವಾಸ್ತವಾಂಶವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಕೆ.ಜಿ.ಪಿ., ಪಕ್ಷದ ನಾಯಕರಾಗಿ ಶ್ರೀ ಯಡಿಯೂರಪ್ಪನವರೇ ಶಿಗ್ಗಾಂವದ ಭಾಷಣದಲ್ಲಿ ಹೇಳಿರುವುದು. ಇದು ನಿಮ್ಮ ನಾಯಕರೇ ಭಾಷಣವನ್ನು ಮಾಡಿರುವುದು, ಇದು ನನ್ನ ಭಾಷಣವಲ್ಲ. ಹೌದು, ನಾನು ಮಾತನಾಡುವಂತಹ ಕಲೆಯನ್ನು ಆ ಶೃಂಗೇರಿ ಶಾರದಾಂಬೆ ತಾಯಿ ಕೊಟ್ಟಿರಬಹುದು ಏನೋ? ಈ ಮಾತನ್ನು ನಾನು ಹೇಳುವುದಕ್ಕೆ ಕಾರಣ ವಿರೋಧ ಪಕ್ಷದ ನಾಯಕರು raise ಮಾಡಿದಕ್ಕೆ ಈ ಮಾತನ್ನು ಹೇಳಿದೆ. ಇಲ್ಲದಿದ್ದರೆ ಇಲ್ಲಿ ಈ ಮಾತನ್ನು ಏಕೆ ಹೇಳುತ್ತಿದ್ದೆ? ಅಲ್ಲಿಯೂ ಸಹ ಹೇಳಬೇಕೆಂದರೆ ಹೇಳೋಣ. ನಮ್ಮ ಸರ್ಕಾರದ ಬಗ್ಗೆ ನಿಮಗೇನು ಅನುಮಾನಗಳಿವೆ. ತಾವು ಅನುಮಾನವನ್ನು ಪಡಲೇಬೇಕು ಅದು ಸಹಜ. ವಿರೋಧ ಪಕ್ಷದವರು ನಮ್ಮನ್ನು ಹೊಗಳುವುದಕ್ಕೆ ಆಗುತ್ತದೆಯೇ, ನಾವು ಏನು ಮಾಡಿದರೂ ಅದೇನೋ ಹೇಳುತ್ತಾರಲ್ಲವೇ, 'ಕಾಮಾಲೆ ಕಣ್ಣಿಗೆ, ನೋಡಿದೆಲ್ಲಾ ಹಳದಿ' ರೀತಿಯೇ ಕಾಣುತ್ತದೆಯಂತೆ ಅದಕ್ಕೆ ನಾವೇನು ಮಾಡುವುದಕ್ಕಾಗುತ್ತದೆ? ಆದ್ದರಿಂದ ಇವತ್ತಿನ ದಿವಸ ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಪಾಪ, ಅವರು ಬೀದಿಗೆ ಹೋಗುವುದಕ್ಕೆ ಆಸೆ ಪಡುತ್ತಿದ್ದಾರೆ, ಅವರಿಗೆ ಬೀದಿಗೆ ಹೋಗಿ ಹೋಗಿ ಅಭ್ಯಾಸವಾಗಿದೆ. ರಾತ್ರಿ ಯಾತ್ರೆಯನ್ನು ಮಾಡಿದರು. ರಾಮನ ಮಂದಿರವನ್ನು ಕಟ್ಟುತ್ತೇವೆಂದು ಹೇಳಿ ನೋಟನ್ನು ತೆಗೆದುಕೊಂಡು, ಇಟ್ಟಿಗೆಯನ್ನು ತೆಗೆದುಕೊಂಡು, ಇಟ್ಟಿಗೆಯನ್ನು ಅಲ್ಲೆಲ್ಲೋ ತಿಪ್ಪೆ ಗುಂಡಿಗೆ ಹಾಕಿದರು, ನೋಟನ್ನು ಜೇಬಿಗೆ ಬಿಟ್ಟುಕೊಂಡರು. ರಾಮ ಮಂದಿರವನ್ನು ಇಷ್ಟು ವರ್ಷವಾದರೂ ಕಟ್ಟಲೇ ಇಲ್ಲ. 2 ಬಾರಿ ಅಧಿಕಾರವನ್ನು ಸಹ ನಡೆಸಿಬಿಟ್ಟರು. ಇದು ನೀವು ಜನಗಳ ಮುಂದೆ . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾವು ಹೇಳುವುದನ್ನು ಕೇಳಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ನಾನು ಹೇಳುವುದನ್ನು ಕೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ರಾಮ ಮಂದಿರವನ್ನು ಕಟ್ಟುವುದು ನಮ್ಮ ಪಕ್ಷದ ನಿಲುವಾಗಿತ್ತು.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಒಂದು ನಿಮಿಷ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಯವರು ಈ ರೀತಿ ಹೇಳಿದರೆ ನಾವು ಸುಮ್ಮನಿರುವುದಕ್ಕಾಗುವುದಿಲ್ಲ. ರಾಮ ಮಂದಿರವನ್ನು ಕಟ್ಟುವುದು ನಮ್ಮ ಪಕ್ಷದ ನಿಲುವಾಗಿತ್ತು. ಅದಕ್ಕೋಸ್ಕರ ನಾವು ಹೋರಾಟವನ್ನು ಮಾಡಿದ್ದೇವು. ರಾಷ್ಟ್ರೀಯವಾದ ವಿಚಾರ ಇದರಲ್ಲಿ ನಮಗೆ ಏನು ಗೊಂದಲವಿಲ್ಲ. ನಮ್ಮದೇನು ನಿಲುವು ಇತ್ತೋ, ಅದಕ್ಕೆ ನಾವು ಬದ್ಧರಿದ್ದೇವೆ. ಆಯೋಧ್ಯೆಯಲ್ಲಿ ರಾಮ ಮಂದಿರವನ್ನು ಕಟ್ಟಲು ಸಾರ್ವಜನಿಕರಿಂದ ಎಷ್ಟು ಇಟ್ಟಿಗೆಯನ್ನು ಸಂಗ್ರಹಿಸಿದ್ದೇವೆ ಎಂಬ ಬಗ್ಗೆ ಮಾಹಿತಿಯನ್ನು ನಮಗೆ ಕೊಡಿ. ಎಷ್ಟು ಇಟ್ಟಿಗೆಯನ್ನು ತೆಗೆದುಕೊಂಡಿದ್ದೇವೆ, ಎಷ್ಟು ಇಟ್ಟಿಗೆಯನ್ನು ಸಂಗ್ರಹಿಸಿದ್ದೇವೆ. ಬೇರೆ ಬೇರೆ ಕಾನೂನಿನ ಪರಿಸ್ಥಿತ ಬಂದಿರುವುದರಿಂದ ರಾಮ ಮಂದಿರವನ್ನು ನಿರ್ಮಾಣ ಮಾಡುವುದಕ್ಕೆ ನಿಧಾನವಾಯಿತು. ಆದರೆ ಇವತ್ತಿನವರೆಗೂ ಕೂಡ ನಮ್ಮ ಅಜೆಂಡಾದಲ್ಲಿ ರಾಮ ಮಂದಿರದ ನಿರ್ಮಾಣದ ಬಗ್ಗೆ ಇದೆ. ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು . . .

**(ಗೊಂದಲ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಶ್ರೀ ಶರವಣರವರೇ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವುದನ್ನು ಕೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅಂದು ನಮ್ಮ ಜೊತೆ 20 ತಿಂಗಳು ಅಧಿಕಾರ ಮಾಡಿದ ಮುಖ್ಯಮಂತ್ರಿಗಳಿಗೆ ರಾಮ ಮಂದಿರ ನಿರ್ಮಾಣಕ್ಕೆ ಎಷ್ಟು ಇಟ್ಟಿಗೆಯನ್ನು ಸಂಗ್ರಹಿಸುತ್ತಿದ್ದರು ಎನ್ನುವುದು ಗೊತ್ತಿರಲಿಲ್ಲವೇ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಚುನಾವಣೆ ಬಂದಾಗ ಇವರಿಗೆ ರಾಮ ಮಂದಿರ ನಿರ್ಮಾಣದ ಬಗ್ಗೆ ಜ್ಞಾನೋದಯವಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಮ್ಮ ಜೊತೆ ಸರ್ಕಾರ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳಿಗೆ ರಾಮ ಮಂದಿರ ನಿರ್ಮಾಣಕ್ಕೆ ಇಟ್ಟಿಗೆಯನ್ನು ಸಂಗ್ರಹಿಸಿದರು ಎನ್ನುವುದು ಗೊತ್ತಿರಲಿಲ್ಲವೇ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಇನ್ನು ಎಷ್ಟು ವರ್ಷಗಳ ಕಾಲ ರಾಮ ಮಂದಿರವನ್ನು ಕಟ್ಟುತ್ತೀರಿ.

**(ಗೊಂದಲ)**

ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಮುಂದು)

(88)04.07.2018 ಎಸ್‌ಪಿಆರ್/ಆರ್‌ಎನ್/7.00

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಯಾವತ್ತಿನ ದಿವಸ ಚುನಾವಣೆ ಘೋಷಣೆಯಾಗುತ್ತದೆಯೋ ಆಗ ಮಾತ್ರವೇ ರಾಮಮಂದಿರದ ಬಗ್ಗೆ ಮಾತನಾಡುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಕ್ಷದ ಅಜೆಂಡಾದಲ್ಲಿ ರಾಮಮಂದಿರ ನಿರ್ಮಾಣದ ವಿಷಯ ಇನ್ನೂ ಇದೆ. ನಮ್ಮ ಜೊತೆ 20-20 ತಿಂಗಳುಗಳ ಕಾಲ ಇವರು ಸರ್ಕಾರವನ್ನು ನಡೆಸಿದ್ದಾರೆ. ಅಂತಹ ಸಂದರ್ಭದಲ್ಲಿ ಬಿ.ಜೆ.ಪಿ.ಯವರು ರಾಮ ಮಂದಿರ ನಿರ್ಮಾಣಕ್ಕಾಗಿ ಇಟ್ಟಿಗೆ ಸಂಗ್ರಹಣೆ ಮಾಡಿದ್ದಾರೆ ಎನ್ನುವ ವಿಷಯವು ಇವರಿಗೆ ತಿಳಿದಿರಲಿಲ್ಲವೇ? ಆ ಅಂಶವು ಇವರಿಗೆ ನೆನಪಿರಲಿಲ್ಲವೇ? ಹೀಗಾಗಿ ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಅವರು ಹೇಳಿದ ಮಾತುಗಳನ್ನು ಹಿಂಪಡೆಯಬೇಕು.

**ಸಭಾಪತಿಯವರು:-** ನಾನು ಮಾತನಾಡಲು ಅವಕಾಶವನ್ನು ನೀಡುವುದಿಲ್ಲ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿಲ್ಲ.

**(ಗೊಂದಲ)**

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

**(ಗೊಂದಲ)**

**ಸಭಾಪತಿಯವರು:-** ಯಾರಾದರೂ ಒಬ್ಬರು ಮಾತನಾಡಿ. ನಾನು ಅವಕಾಶವನ್ನು ನೀಡುತ್ತೇನೆ, ಇನ್ನುಳಿದವರೆಲ್ಲರೂ ಕುಳಿತುಕೊಳ್ಳಿ. ಏಕೆ ಎಲ್ಲರೂ ನಿಂತುಕೊಳ್ಳುತ್ತೀರಿ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಮ್ಮ ಅಜೆಂಡಾದಲ್ಲಿ ಯಾವುದೇ ಬದಲಾವಣೆಯೂ ಇಲ್ಲ. ಬೇರೆ ಯಾರಾದರೂ ಶಾಸಕರು ಮಾತನಾಡಿದ್ದರೆ, ಅದನ್ನು ನಾನು ಪ್ರಶ್ನೆ ಮಾಡುತ್ತಿರಲಿಲ್ಲ. ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿರುವವರೊಬ್ಬರು ರಾಮ ಮಂದಿರ ನಿರ್ಮಾಣಕ್ಕಾಗಿ ಇಟ್ಟಿಗೆ ಸಂಗ್ರಹಣೆ ಮಾಡಿರುವ ವಿಷಯದ ಬಗ್ಗೆ ಮಾತನಾಡಿದ್ದಾರೆ. ನಮ್ಮ ಪಕ್ಷದೊಂದಿಗೆ 20-20 ತಿಂಗಳುಗಳ ಕಾಲ ಸರ್ಕಾರವನ್ನು ನಡೆಸುವ ಸಂದರ್ಭದಲ್ಲಿ ನಮ್ಮ ಪಕ್ಷವು ರಾಮ ಮಂದಿರ ನಿರ್ಮಾಣಕ್ಕಾಗಿ ಇಟ್ಟಿಗೆ ಸಂಗ್ರಹಣೆ ಮಾಡಿರುವ ವಿಚಾರ ಗೊತ್ತಿರಲಿಲ್ಲವೇ? ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಅವರು ಹೇಳಿದ ಮಾತುಗಳನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಆಗ್ರಹಿಸುತ್ತೇನೆ.

**(ಗೊಂದಲ)**

**ಶ್ರೀ ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಮ ಮಂದಿರ ನಿರ್ಮಾಣಕ್ಕೆ ನಾವು ದುಡ್ಡು ಕೊಟ್ಟಿದ್ದು ಸುಳ್ಳೇ? ಈ ಕಾರ್ಯಕ್ಕಾಗಿ ನಾನೂ ಸಹ ದುಡ್ಡನ್ನು ನೀಡಿದ್ದೇನೆ. ನಮ್ಮ ಮನೆಗೆ ಬಂದು ದುಡ್ಡನ್ನು ತೆಗೆದುಕೊಂಡು ಹೋಗಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ನೀವು ವಿರೋಧ ಪಕ್ಷದ ನಾಯಕರಾಗಿದ್ದೀರಿ, ಹೀಗಾಗಿ ನಿಮ್ಮ ಸದಸ್ಯರಿಗೆ ಸರಿಯಾಗಿ ತಿಳುವಳಿಕೆ ನೀಡಿ. ಶ್ರೀ ಭೋಜೇಗೌಡರೇ ಕುಳಿತುಕೊಳ್ಳಿ. ಒಬ್ಬ ಸದಸ್ಯರು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಯೀಲ್ಡ್ ಆಗಿದ್ದಾರೆ. ಹೀಗಾಗಿ ನೀವುಗಳು ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡುವ ಧಾಟಿಯನ್ನು ನಾವು ಒಪ್ಪಿಕೊಳ್ಳುತ್ತೇವೆ. ಅವರು ಉತ್ತರವನ್ನು ನೀಡುವಂತಹ ಸಂದರ್ಭದಲ್ಲಿ ನಾವುಗಳು ಗೌರವದಿಂದ ಕುಳಿತುಕೊಂಡಿದ್ದೇವೆ. ಆದರೆ ಈಗ ನಾನು

ಏಕೆ ನಿಂತಿದ್ದೇನೆ ಎಂದರೆ, ಅವರವರ ಅನಿಸಿಕೆಗಳನ್ನು ಅವರುಗಳು ಹೇಳಿದ್ದಾರೆ. ನಾವು ಯಾವುದೋ ಒಂದು ಶ್ರದ್ಧೆಯಿಂದ ರಾಮಮಂದಿರ ನಿರ್ಮಾಣದ ಕಾರ್ಯವನ್ನು ಮಾಡಿದ್ದೇವೆ. ಆ ಶ್ರದ್ಧೆ ನಿಮಗೆ ಇಲ್ಲದೇ ಇರಬಹುದು. ರಾಮಮಂದಿರ ನಿರ್ಮಾಣಕ್ಕೆ ಇಟ್ಟಿಗೆಗಳನ್ನು ಹಾಗೂ ದುಡ್ಡನ್ನು ಸಂಗ್ರಹ ಮಾಡಿದ್ದೇವೆ. ಆದರೆ ಮಾನ್ಯ ಮುಖ್ಯಮಂತ್ರಿಗಳು 'ಅವುಗಳನ್ನು ತಿಪ್ಪೆಗುಂಡಿಗೆ ಹಾಕಿದ್ದೇವೆ' ಎನ್ನುವಂತಹ ಪದವನ್ನು ಬಳಸಿದ್ದಾರೆ. ಇದು ಸರಿಯಲ್ಲ. ಹೀಗಾಗಿ ದಯಮಾಡಿ ಮುಖ್ಯಮಂತ್ರಿಗಳು ಈ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

**(ಗೊಂದಲ)**

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ರಾಮ ಮಂದಿರ ನಿರ್ಮಾಣ ಮಾಡಿದ್ದರೆ ಈ ಮಾತೇ ಬರುತ್ತಿರಲಿಲ್ಲ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, 'ತಿಪ್ಪೆಗುಂಡಿಗೆ ಹಾಕಿದ್ದೇವೆ' ಎನ್ನುವಂತಹ ಪದವನ್ನು ವಾಪಸ್ಸು ತೆಗೆದುಕೊಳ್ಳಬೇಕು. **(ಗೊಂದಲ)** ರಾಮಮಂದಿರ ವಿಚಾರದಲ್ಲಿ ನಂಬಿಕೆ ಇರುವಂತಹವರು ತಮ್ಮ ದೇಣಿಗೆಯನ್ನು ಇಟ್ಟಿಗೆ ಹಾಗೂ ಹಣದ ರೂಪದಲ್ಲಿ ನೀಡಿದ್ದಾರೆ. ಹೀಗಾಗಿ ಅವರುಗಳೆಲ್ಲರ ಭಾವನೆಗಳನ್ನು ಕೆಣಕುವ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವ ಮಾತನ್ನು ನಾವು ಒಪ್ಪುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಆ ಪದವನ್ನು ವಾಪಸ್ಸು ತೆಗೆದುಕೊಳ್ಳಬೇಕು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಮಾನ್ಯ ಸದಸ್ಯರುಗಳಿಗೆ ನೋವಾಗಿದೆ. **(ಗೊಂದಲ)** 'ತಿಪ್ಪೆಗುಂಡಿಗೆ' ಎಂಬ ಪದ ಹೇಳಿದ್ದಕ್ಕಾಗಿ ಅವರುಗಳಿಗೆ ಅಪಮಾನವಾಗಿದೆ.

**(ಗೊಂದಲ)**

**ಎಸ್.ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸಂದರ್ಭ ಬಂದಾಗ, ಮಾನ್ಯ ಸಭಾಪತಿಯವರ ಅನುಮತಿಯನ್ನು ಪಡೆದುಕೊಂಡ ನಂತರವಷ್ಟೇ ನಾವು ಮಾತನಾಡುತ್ತೇವೆ.

**(ಗೊಂದಲ)**

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗ ನಾನು 'ಇಟ್ಟಿಗೆಗಳನ್ನು ತಿಪ್ಪೆಗುಂಡಿಗೆ ಎಸೆದಿದ್ದಾರೆ' ಎಂದು ಹೇಳಿದ ಪದದಿಂದಾಗಿ ವಿರೋಧ ಪಕ್ಷದ ಸದಸ್ಯರುಗಳಿಗೆ ನೋವಾಗಿದ್ದರೆ, ಅದನ್ನು ವಾಪಸ್ಸು ತೆಗೆದುಕೊಳ್ಳೋಣ. ಆದರೆ ಅದು ಬೇರೆ ವಿಷಯವಾಗಿದೆ. ಆದರೆ ಇಲ್ಲಿಯವರೆಗೆ ರಾಮಮಂದಿರ ನಿರ್ಮಾಣ ವಿಚಾರದಲ್ಲಿ ಸಂಗ್ರಹಿಸಲಾದ ಹಣದ ಲೆಕ್ಕವನ್ನು ಯಾರಿಗೆ ಕೊಡಲಾಗಿದೆ? **(ಗೊಂದಲ)** ದೇಶದಲ್ಲೆಲ್ಲಾ ರಾಮಮಂದಿರ ನಿರ್ಮಾಣಕ್ಕೆ ಹಣವನ್ನು ವಸೂಲು ಮಾಡಿ, ಯಾರಿಗೆ ಲೆಕ್ಕ ಕೊಟ್ಟಿದ್ದಾರೆ?

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಂಗ್ರಹಿಸಲಾದ ದುಡ್ಡು ಎಲ್ಲಿ ಹೋಯಿತು? - ಹೇಳಿ, ಈ ಬಗ್ಗೆ ಲೆಕ್ಕ ಕೊಡಿ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಮಮಂದಿರ ನಿರ್ಮಾಣಕ್ಕೆ ಸಂಗ್ರಹಿಸಲಾದ ಹಣ ಎಲ್ಲಿ ಹೋಯಿತು?

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ. ಯಾರೂ ಮಧ್ಯದಲ್ಲಿ ಮಾತನಾಡಬೇಡಿ.

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರುಗಳೆಲ್ಲರೂ "ಶೇಮ್! ಶೇಮ್!" ಎಂದು ಕೂಗುತ್ತಿದ್ದರು)**

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರುಗಳಾದ ಶ್ರೀ ರವಿ ಕುಮಾರ್, ಶ್ರೀ ವೈ.ಎ.ನಾರಾಯಣಸ್ವಾಮಿ, ಶ್ರೀ ಎಸ್.ವ್ಹಿ.ಸಂಕನೂರ, ಶ್ರೀ ಎಂ.ಕೆ.ಪ್ರಾಣೇಶ್, ಶ್ರೀ ರಘುನಾಥ್ ರಾವ್ ಮಲ್ಕಾಪೂರೆ, ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ, ಡಾ|| ತೇಜಸ್ವಿನಿ ಗೌಡ, ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ, ಶ್ರೀಮತಿ ತಾರಾ ಅನೂರಾಧ, ಶ್ರೀ ಲಹರ್ ಸಿಂಗ್ ಸಿರೋಯಾ ಹಾಗೂ ಶ್ರೀ ಅ.ದೇವೇಗೌಡ ರವರುಗಳೆಲ್ಲರೂ ಸದನದ ಬಾವಿಗೆ ಬಂದರು)**

**ಸಭಾಪತಿಯವರು:-** ಮುಖ್ಯಮಂತ್ರಿಗಳೇ ತಾವು ತಮ್ಮ ಮಾತನ್ನು ಮುಂದುವರೆಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಯಾವ ಕಾರಣಕ್ಕಾಗಿ ಈ ಮಾತನ್ನು ಹೇಳಿದ್ದೇನೆ ಎಂದರೆ, ಬಿ.ಜೆ.ಪಿ. ಪಕ್ಷದವರು ರಾಮ ಮಂದಿರ ನಿರ್ಮಾಣ ಮಾಡುತ್ತೇವೆ ಎಂಬುದಾಗಿ ಹೇಳಿ ಎಷ್ಟು ವರ್ಷಗಳಾಯಿತು? **(ಗೊಂದಲ)** ನಾನು ಹೇಳುವವರೆಗೆ ಮೊದಲು ಕೇಳಿ, ನಂತರದಲ್ಲಿ ಮಾತನಾಡಿ. ನೀವೇ ಮಾತನಾಡುವುದಾದರೆ, ನಾನು ಕುಳಿತುಕೊಳ್ಳಲು ಸಿದ್ಧನಿದ್ದೇನೆ. ವಿರೋಧ ಪಕ್ಷದ ನಾಯಕರು ಮಾತನಾಡುವಾಗ ನಾನು ಸುಮ್ಮನೆ ಕುಳಿತಿದ್ದೆನು ಹಾಗೂ ಅವರುಗಳು ಹೇಳಿದ್ದನ್ನೆಲ್ಲಾ ಕೇಳಿಸಿಕೊಂಡಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ರವಿಕುಮಾರ್ ರವರು ಸದನದ ಬಾವಿಯಲ್ಲಿ ನಿಂತುಕೊಂಡು "ಗರೀಬಿ ಹಟಾವೋ" ಎಂದು ಹೇಳಿ ಎಷ್ಟು ವರ್ಷಗಳಾಯಿತು? ಎಂಬುದಾಗಿ ಪ್ರಶ್ನೆ ಮಾಡಿದರು)**

**ಸಭಾಪತಿಯವರು:-** ಸದನದ ಬಾವಿಯಲ್ಲಿ ನಿಂತುಕೊಂಡು ಯಾವ ಸದಸ್ಯರೂ ಮಾತನಾಡಬಾರದು.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯನ್ನು ಹಿಡಿದುಕೊಂಡು, ನಾಳೆ ಬೆಳಗ್ಗೆ ಎಲ್ಲಾ ಕಾರ್ಯಕ್ರಮಗಳು ಮುಗಿದು ಹೋಗಬೇಕು ಎನ್ನುವ ರೀತಿಯಲ್ಲಿ ಚರ್ಚೆಯನ್ನು ಮಾಡುತ್ತಾರೆ. ಈ ಪಕ್ಷವು ರಾಮಮಂದಿರವನ್ನು ನಿರ್ಮಾಣ ಮಾಡುತ್ತೇವೆ ಎಂದು ಹೇಳಿ ಅಧಿಕಾರವನ್ನು ಹಿಡಿದುಕೊಂಡಿದ್ದಾರೆ. 25 ವರ್ಷಗಳಾದರೂ ಸಹ ಇನ್ನೂ ರಾಮಮಂದಿರವನ್ನು ನಿರ್ಮಾಣ ಮಾಡಿಲ್ಲ. ಎರಡು ಬಾರಿ ಅಧಿಕಾರ . . . **(ಗೊಂದಲ)** ಗ್ರಾಮೀಣ ಪ್ರದೇಶಗಳಲ್ಲಿ 'ತಿಪ್ಪೆಗುಂಡಿ' ಎಂದರೆ ನಾವು ಪ್ರತಿ ಮುಂಗಾರಿನಲ್ಲಿ ಕೃಷಿ ಕಾರ್ಯಕ್ರಮಗಳನ್ನು ಏನು ಪ್ರಾರಂಭ ಮಾಡುತ್ತೇವೆ, ಆಗ ತಿಪ್ಪೆಗುಂಡಿಗೆ ಪೂಜೆ ಮಾಡಿ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಹಾಗೇನೂ ಇಲ್ಲ

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾವು ಹೇಳುವುದನ್ನು ಕೇಳಿ. ನಮ್ಮದು ರೈತರ ಸಂಸ್ಕೃತಿಯಾಗಿದೆ.

**ಸಭಾಪತಿಯವರು:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿರವರೇ ತಮಗೆ ಮಾತನಾಡಲು ಅವಕಾಶವನ್ನು ಕೊಡುವುದಿಲ್ಲ. ತಾವು ಸುಖಾ ಸುಮ್ಮನೆ ಮಾತನಾಡುತ್ತೀರಿ. ನೀವು ವಿರೋಧ ಪಕ್ಷದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾಯಕರಾಗಿದ್ದೀರಿ. ನಿಮ್ಮ ಪಕ್ಷದ ಸದಸ್ಯರು ಮಾತನಾಡುತ್ತಿದ್ದಾಗ, ಮಾನ್ಯ ಮುಖ್ಯಮಂತ್ರಿಗಳು ಸುಮ್ಮನೆ ಕುಳಿತಿದ್ದರು. ಆದರೆ ಅವರು ಮಾತನಾಡುವಾಗ, ಅದನ್ನು ಕೇಳುವಷ್ಟು ಸೌಜನ್ಯ ತಮ್ಮಲ್ಲಿ ಇಲ್ಲವೆಂದಾದರೆ, ನೀವು ವಿರೋಧ ಪಕ್ಷದ ನಾಯಕರಾಗಿ ಹೇಗೆ ಕೆಲಸವನ್ನು ನಿರ್ವಹಿಸುತ್ತೀರಿ? ಅವರು ಹೇಳುವುದನ್ನು ನೀವು ಕೇಳಿ; ನೀವು ಹೇಳುವುದನ್ನು ಅವರು ಕೇಳುತ್ತಾರೆ. ಮಧ್ಯದಲ್ಲಿ ಯಾರೂ ಸಹ ಮಾತನಾಡಬಾರದು. **(ಗೊಂದಲ)** ಸದನದ ಬಾವಿಯಲ್ಲಿದ್ದಾಗ, ಸದಸ್ಯರುಗಳು ಮಾತನಾಡಬಾರದು.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುವುದಾದರೆ ತಮ್ಮ ಸ್ಥಾನಕ್ಕೆ ತೆರಳಿ ಮಾತನಾಡಬೇಕು.

**ಸಭಾಪತಿಯವರು:-** ಸದನದಲ್ಲಿ ಮಾತನಾಡಲು ಒಂದು ರೀತಿ-ನೀತಿ ಇರಬೇಕು.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಈ ಹಿಂದೆ ರಥಯಾತ್ರೆಯನ್ನು ಮಾಡಿದ್ದಾರೆ. ನಮ್ಮ ಊರಿನಲ್ಲಿಯೂ ಸಹ ರಾಮ ಮಂದಿರ ನಿರ್ಮಾಣಕ್ಕಾಗಿ ಹಣವನ್ನು ಸಂಗ್ರಹಣೆ ಮಾಡಲಾಯಿತು. ಅದರು ಯಾರು ಮಾಡಿದರು ಅದು ನನಗೆ ಗೊತ್ತಿಲ್ಲ. ಆ ಅಂಶವನ್ನು ಇಲ್ಲಿ ಉಲ್ಲೇಖಿಸಿದ್ದೇನೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಿಮ್ಮ ಊರಿನಲ್ಲಿ ಎಷ್ಟು ಹಣವನ್ನು ಸಂಗ್ರಹಣೆ ಮಾಡಲಾಗಿದೆ?

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಆ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ ಏಕೆಂದರೆ, ಹಣವನ್ನು ನೀವು ಸಂಗ್ರಹಣೆ ಮಾಡಿದ್ದೀರಿ.

**(ಗೊಂದಲ)**

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ರಾಮಮಂದಿರ ನಿರ್ಮಾಣಕ್ಕಾಗಿ ಹಣವನ್ನು ನೀಡಿದ್ದೇನೆ.

**(ಗೊಂದಲ)**

**ಸಭಾಪತಿಯವರು:-** ನೀವುಗಳೆಲ್ಲರೂ ಹೀಗೆ ಮಾತನಾಡುತ್ತಿದ್ದೀರಿ. ಯಾವುದನ್ನೂ ಕಡತದಲ್ಲಿ ದಾಖಲಿಸಲಾಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಸದಸ್ಯರುಗಳು ಮಾತನಾಡುತ್ತಿರುವುದನ್ನು ದಾಖಲಿಸಬಾರದೆಂದು ಆದೇಶಿಸಿದರು)**

**ಸಭಾಪತಿಯವರು:-** ಮಾನ್ಯ ಸದಸ್ಯರುಗಳೆಲ್ಲರೂ ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ತಮ್ಮ ಪೀಠದಿಂದ ಎದ್ದು ನಿಂತರು)**

**(ಗೊಂದಲ)**

**ಸಭಾಪತಿಯವರು:-** ನಾನು ಹೇಳುವುದನ್ನು ಮೊದಲು ಕೇಳಿ. ಸದನದಲ್ಲಿ ಸಭಾಪತಿಗಳು ಎದ್ದು ನಿಂತಾಗ, ದಯಮಾಡಿ ಅವರಿಗೆ ಗೌರವನ್ನು ನೀಡಿ ಸದಸ್ಯರುಗಳೆಲ್ಲರೂ ಕುಳಿತುಕೊಳ್ಳುವುದನ್ನು ಮೊದಲು ಕಲಿತುಕೊಳ್ಳಿ. ನಂತರದಲ್ಲಿ ಮಾತನಾಡಿ. ಈ ವಿಚಾರದಲ್ಲಿ ಇಷ್ಟು ಮಾತ್ರ ಸೌಜನ್ಯವಿಲ್ಲವೆಂದರೆ ಹೇಗೆ? ಇಲ್ಲಿನ ಸದಸ್ಯರುಗಳೆಲ್ಲರೂ ಹಿರಿಯರಾಗಿದ್ದೀರಿ. ಯಾರು ಮಾತನಾಡಬೇಕೆಂಬುದನ್ನು ನೀವೇ ಹೇಳಿ, ನಾನು ಅವರಿಗೆ ಅವಕಾಶವನ್ನು ನೀಡುತ್ತೇನೆ. ಮೊದಲು ಮಾನ್ಯ ಮುಖ್ಯಮಂತ್ರಿಗಳು ಮಾತನಾಡಲಿ. ಅದನ್ನು ನೀವುಗಳು ಕೇಳಿ. ನಾನು ಯಾರಿಗೆ ಅನುಮತಿ ನೀಡುತ್ತೇನೋ, ಅವರು ಮಾತ್ರವೇ ಮಾತನಾಡಬೇಕು.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಕ್ಷದವರು ದೇವಸ್ಥಾನವನ್ನು ನಿರ್ಮಾಣ ಮಾಡುತ್ತೇವೆಂದು ಹೇಳಿದ್ದಾರೆ, ಇದಕ್ಕೆ ನನ್ನದೇನೂ ತಕರಾರು ಇಲ್ಲ. ಅದನ್ನು ನಿರ್ಮಾಣ ಮಾಡಲಿ ಎಂಬುದಾಗಿ ನಾವು ಹೇಳುತ್ತಿದ್ದೇವೆ. ಇಷ್ಟು ವರ್ಷಗಳಿಂದ ಏಕೆ ನಿರ್ಮಾಣ ಮಾಡಿಲ್ಲ ಎಂಬ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಉಪಯೋಗಿಸಕೂಡದು

**(ಮುಂದು)**

**(89( 04.07.2018 ಬಿಎಸ್‌ಡಿ/ವಿಕೆ 7.10**

**ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಂದು)**

ನಾವು ಕೊಟ್ಟ ಪ್ರಣಾಳಿಕೆ ವಿಷಯವನ್ನೇ ಹಿಡಿದುಕೊಂಡು ನಾಳೆ ಬೆಳಗ್ಗೆಗೆ ಗಡುವು ಕೊಟ್ಟಂತೆ ಹೇಳುತ್ತಾರೆ. ಅವರು ನನಗೆ ಗಡುವು ಕೊಡಬಹುದು. ಆದರೆ ದೇಶದ ಜನತೆ ಮುಂದೆ ಅವರು ಕೊಟ್ಟ ಮಾತನ್ನು ಉಳಿಸಿಕೊಂಡರೇ ಎಂದು ಪ್ರಶ್ನೆ ಮಾಡಬಾರದೇ? ನಮ್ಮ ಪ್ರಣಾಳಿಕೆ ಎಲ್ಲವೂ ಕ್ಲಿಯರ್ ಆಗಬೇಕು, ಇಲ್ಲದಿದ್ದರೆ ನಾಳೆಯೇ ಬೀದಿಗೆ ಇಳಿಯುತ್ತೇವೆ ಎಂದು ಹೇಳುತ್ತಿದ್ದಾರೆ. ಆದರೆ ಅವರು 20

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ವರ್ಷದಿಂದ ರಾಮಮಂದಿರವನ್ನು ಕಟ್ಟುತ್ತೇವೆ ಎಂದು ಹೇಳಿಕೊಂಡು ಅಧಿಕಾರಕ್ಕೆ ಬಂದರು. ಇನ್ನೂ ರಾಮಮಂದಿರವನ್ನು ಕಟ್ಟಲಿಲ್ಲ. ಇದಕ್ಕೆ ನಾವು ಏನು ಮಾಡಬೇಕು?

**ಶ್ರೀ ಆಯನೂರು ಮಂಜುನಾಥ್ :–** ರಾಮಮಂದಿರದ ವಿಷಯವಾಗಿ ಸುಪ್ರೀಂಕೋರ್ಟ್ ಅಡ್ಡ ಬಂದಿದೆಯಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ :–** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು** :– ತಾವು ಕುಳಿತುಕೊಳ್ಳಿ, ಮಾನ್ಯ ಶಾಣಪ್ಪನವರಿಗೆ ಅವಕಾಶ ಕೊಟ್ಟಿದ್ದೇನೆ.

**ಶ್ರೀ ಕೆ.ಬಿ.ಶಾಣಪ್ಪ (ನಾಮನಿರ್ದೇಶಿತರು)ಃ–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಹೇಳುವಾಗ ನಾನು ಬಹಳ ಸೂಕ್ಷ್ಮವಾಗಿ ಕೇಳಿದ್ದೇನೆ. ಅವರು ಬಹಳ ಬಿಡಿಸಿ–ಬಿಡಿಸಿ ಏನು ಆಯಿತು, ಏನು ಆಗಿಲ್ಲ ಎಂಬುದನ್ನೆಲ್ಲಾ ಹೇಳಿದರು. ಅಲ್ಲಿಗೆ ಎಲ್ಲವೂ ಚೆನ್ನಾಗಿಯೇ ಇತ್ತು. ಕೊನೆಗೆ ರಾಮಮಂದಿರದ ವಿಷಯವನ್ನು ತೆಗೆದುಕೊಂಡರು, ಅದನ್ನು ಹೇಳುವ ಶೈಲಿಯಲ್ಲಿ ಹೇಳಿದ್ದರೆ ಬೇರೆಯಾಗುತ್ತಿತ್ತು. ಆದರೆ ಇಟ್ಟಿಗೆಯನ್ನು ಸಂಗ್ರಹ ಮಾಡಿ ನೋಟನ್ನು ಜೇಬಿನಲ್ಲಿ ಇಟ್ಟುಕೊಂಡರು ಎಂದು ಒಂದು ಮಾತನ್ನು ಹೇಳಿದರು. I got a great respect to the Hon'ble Chief Minister. But, ಸುಪ್ರೀಂಕೋರ್ಟ್‌ನಲ್ಲಿ ಈ ಇಷ್ಯೂ ಪೆಂಡಿಂಗ್ ಇರುವ ಬಗ್ಗೆ ಎಲ್ಲರಿಗೂ ಗೊತ್ತಿದೆ. ಅದನ್ನು ಯಾರೂ ಪರಿಹಾರ ಮಾಡುವುದಕ್ಕೆ ಆಗುವುದಿಲ್ಲ. ಸುಪ್ರೀಂಕೋರ್ಟ್ ಕ್ಲಿಯರ್ ಮಾಡದ ಹೊರತು ರಾಮಮಂದಿರ ಕಟ್ಟುವ ಪ್ರಶ್ನೆಯೇ ಬರುವುದಿಲ್ಲ. ಆದರೆ ನೋಟು ಜೇಬಿನಲ್ಲಿ ಇಟ್ಟುಕೊಂಡರು ಎಂದು ಹೇಳಿದರು. ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಸರ್ಕಾರವನ್ನು ನಡೆಸಲಿ ಅಥವಾ ಬಿಡಲಿ, ನಮ್ಮದೇನೂ ತಕರಾರು ಇಲ್ಲ.

(ಗೊಂದಲ)

**ಸಭಾಪತಿಯವರು** :– ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ರಿಜ್ವಾನ್ ಅರ್ಷದ್ ರವರು ಮಾತನಾಡಿ.

**ಶ್ರೀ ರಿಜ್ವಾನ್ ಅರ್ಷದ್ (ವಿಧಾನಸಭಾ ಕ್ಷೇತ್ರ)ಃ–** ಮಾನ್ಯ ಸಭಾಪತಿಯವರೇ, ಪದೇ ಪದೇ ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರಣಾಳಿಕೆಯಲ್ಲಿ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿದ್ದೀರಿ....

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ** :– ಮಾನ್ಯ ಸಭಾಪತಿಯವರೇ,

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ರಿಜ್ವಾನ್ ಅರ್ಷದ್‌:-** ಮಾನ್ಯ ಸಭಾಪತಿಯವರೇ, ಒಬ್ಬ ಸದಸ್ಯನಿಗೆ ಮಾತನಾಡಲು ಅವಕಾಶ ಮಾಡಿಕೊಡಲಲ್ಲವೆಂದರೆ ಹೇಗೆ? ಅವರು ವಿರೋಧ ಪಕ್ಷದ ನಾಯಕರಾಗಿದ್ದಾರೆ.

**ಸಭಾಪತಿಯವರು** :- ನಾನು ಮಾನ್ಯ ಸದಸ್ಯರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ, ಮಧ್ಯೆ ಯಾರೂ ಮಾತನಾಡಬಾರದು.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ** :- ವಿರೋಧ ಪಕ್ಷದ ನಾಯಕರು ಮಾತನಾಡಬಾರದೇ? ಇಡೀ ರಾಜ್ಯದ ಜನರು.... ರಾಮಮಂದಿರದ ಬಗ್ಗೆ ಆಪಾದನೆ ಮಾಡಿದಾಗ... ಮಾತನಾಡಬಾರದೇ?

**ಸಭಾಪತಿಯವರು** :- ಮಾನ್ಯ ಕೋಟಾ ಶ್ರೀನಿವಾಸ ಪೂಜಾರಿಯವರು ಮಾತನಾಡುವ ಯಾವ ವಿಷಯವೂ ಕಡತಕ್ಕೆ ಹೋಗುವುದಿಲ್ಲ. ಕಡತಕ್ಕೆ ದಾಖಲು ಮಾಡಬೇಡಿ. ನಾನು ನಿಮಗೆ ಅಲೋ ಮಾಡಿಲ್ಲ, ನೀವು ಮಾತನಾಡತಕ್ಕದ್ದಲ್ಲ. ನನ್ನ ತೀರ್ಮಾನವೇ ಅಂತಿಮ ತೀರ್ಮಾನ.

**ಶ್ರೀ ರಿಜ್ವಾನ್ ಅರ್ಷದ್‌:-** ಮಾನ್ಯ ಸಭಾಪತಿಯವರೇ, ಅವರು ಪದೇ ಪದೇ ಮಾನ್ಯ ಮುಖ್ಯಮಂತ್ರಿಗಳನ್ನು ಕುರಿತು 24 ಗಂಟೆಯೊಳಗೆ ಸಾಲ ಮನ್ನಾ ಮಾಡುವುದಾಗಿ ಹೇಳಿರುವುದರಿಂದ ಸಾಲ ಮನ್ನಾ ಮಾಡದಿದ್ದರೆ ಬೀದಿಗೆ ಇಳಿಯುತ್ತೇವೆ ಎಂದು ಹೇಳುತ್ತಿದ್ದಾರೆ. ಮಾನ್ಯ ಪ್ರಧಾನ ಮಂತ್ರಿಗಳು 100 ದಿವಸದಲ್ಲಿ ವಿದೇಶದಲ್ಲಿರುವ ಕಪ್ಪು ಹಣವನ್ನು ವಾಪಸ್ಸು ತರುತ್ತೇನೆ ಎಂದು ಹೇಳಿದ್ದರು. 100 ದಿವಸ ಬೇಡ, ಇವತ್ತಿಗೆ 1000 ದಿನಗಳಿಗಿಂತ ಹೆಚ್ಚು ಆಗಿದೆ. ಅದಕ್ಕೆ ಉತ್ತರ ಇಲ್ಲ. ಮೊನ್ನೆ ನಾವು ಅಧಿಕಾರವನ್ನು ಸ್ವೀಕಾರ ಮಾಡಿದ್ದೇವೆ. ಚರ್ಚೆಗಳು ನಡೆಯುತ್ತಿವೆ. ಇಷ್ಟರಲ್ಲಿಯೇ ಅವರಿಗೆ ಅವಸರವಾಗಿದೆ. ಮಾನ್ಯ ಪ್ರಧಾನ ಮಂತ್ರಿಗಳು ಅಲ್ಲಿಂದ ಹಣವನ್ನು ತಂದು ರೂ.15 ಲಕ್ಷ ಅಕೌಂಟ್‌ಗೆ ಹಾಕುವ ಬಗ್ಗೆ ಹೇಳಿದ್ದರು. ಆ ಹಣ ಬಂದಿಲ್ಲ. ಈಗ ತೊಂದರೆಯಾಗಿರುವುದು ಏನು? ಇಟ್ಟಿಗೆ ಎಲ್ಲಿ ತಕ್ಷಣ ಬಾವಿಗೆ ಇಳಿದಿದ್ದಾರೆ. ಅವರಿಗೆ ತೊಂದರೆಯಾಗಿರುವುದು ಏನು? ಅವರು ಹಣವನ್ನು ವಸೂಲಿ ಮಾಡಿಲ್ಲವೇ? ಆ ಹಣದ ಲೆಕ್ಕ ಯಾರು ಕೊಟ್ಟಿದ್ದಾರೆ? ಸಾವಿರಾರು ಕೋಟಿ ರೂಪಾಯಿಗಳನ್ನು ರಾಮಮಂದಿರದ ಹೆಸರಿನಲ್ಲಿ ವಸೂಲಿ ಮಾಡಿರುವ ಲೆಕ್ಕವನ್ನು ಯಾರು ಕೊಟ್ಟಿದ್ದಾರೆ? ಆ ಹಣವನ್ನು ಯಾರಿಗಾದರೂ ಕೊಟ್ಟಿದ್ದಾರೆಯೇ? ಅಥವಾ ನಾಗಪುರಕ್ಕೆ ಕಳುಹಿಸಿದ್ದಾರೆಯೇ? ಏನಾದರೂ ಒಂದನ್ನು ಹೇಳಬೇಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಯನೂರು ಮಂಜುನಾಥ್ :- (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರ ಮಾತುಗಳನ್ನು ಅತ್ಯಂತ ಗೌರವದಿಂದ ಆಲಿಸಿದ್ದೇವೆ. ಅವರು ರಾಜಕೀಯ ಪ್ರಶ್ನೆಗಳಿಗೆ ರಾಜಕೀಯ ಉತ್ತರವನ್ನು ಕೊಡಲಿ. ಆದರೆ ಈ ದೇಶದ ಕೋಟ್ಯಾಂತರ ಜನರ ಭಾವನೆಗಳ ಬಗ್ಗೆ ಇಷ್ಟೊಂದು ಹಗುರವಾಗಿ ಮಾತನಾಡಬಾರದು.

(ಗೊಂದಲ)

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳೇ, ತಮ್ಮ ಪಕ್ಷದ ಸದಸ್ಯರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ.

**ಶ್ರೀ ಆಯನೂರು ಮಂಜುನಾಥ್:-** ಬೇರೆ ಸದಸ್ಯರು ಮಾತನಾಡುವ ಬಗ್ಗೆ ಅಷ್ಟೊಂದು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಈ ರಾಜ್ಯದಲ್ಲಿ ಎರಡು ಬಾರಿ ಮುಖ್ಯಮಂತ್ರಿಗಳಾಗಿದ್ದಾರೆ. ಬಾಕಿ ವಿಷಯಗಳಲ್ಲಿ ನಮ್ಮದು ತಪ್ಪೋ-ಸರಿಯೋ ಅಥವಾ ಅವರದ್ದು ತಪ್ಪೋ-ಸರಿಯೋ ಎಂಬುದನ್ನು ಹೇಳುತ್ತಾರೆ. ಕೊನೆಗೆ ಅನವಶ್ಯಕವಾಗಿ ರಾಮಮಂದಿರದ ಇಟ್ಟಿಗೆಗಳನ್ನು ತಿಪ್ಪೆ ಗುಂಡಿಗೆ ಎಸೆದರು, ನೋಟನ್ನು ಜೇಬಲ್ಲಿ ಇಟ್ಟುಕೊಂಡರು ಎಂದು ಹೇಳುವಾಗ ಅದಕ್ಕೆ ಲೆಕ್ಕ ಬೇಕಲ್ಲವೇ?

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಹಣವನ್ನು ವೇಸ್ಟ್ ಮಾಡದೇ ರಾಮಮಂದಿರವನ್ನು ಕಟ್ಟಲು ಇಟ್ಟುಕೊಂಡಿದ್ದಾರೆ. ಆ ರೀತಿ ಇದ್ದರೆ ನನ್ನ ಆಕ್ಷೇಪಣೆ ಏನೂ ಇಲ್ಲ. ಇಟ್ಟಿಗೆಯನ್ನು ತಿಪ್ಪೆ ಗುಂಡಿಗೆ ಹಾಕದೇ ಎಲ್ಲೋ ತೆಗೆದುಕೊಂಡು ಹೋಗಿ ಸೇಫ್ ಆಗಿ ಇಟ್ಟುಕೊಂಡಿದ್ದಾರೆ. ಅಲ್ಲವೇ? ಸದನದ ಕಲಾಪಗಳು ಹಾಳಾಗುವುದು ಬೇಕಿಲ್ಲ. ನನಗೇನೂ ಪ್ರತಿಷ್ಠೆ ಇಲ್ಲ. ಅವರು ಇಟ್ಟಿಗೆಯನ್ನು ತೆಗೆದುಕೊಂಡು ಹೋಗಿ ಸೇಫ್ ಆಗಿ ಇಟ್ಟುಕೊಂಡು ಇನ್ನೊಂದು ಹತ್ತು ಅಥವಾ ಇಪ್ಪತ್ತು ವರ್ಷ ಆದಮೇಲೆ ರಾಮಮಂದಿರಕ್ಕೆ ಗುದ್ದಲಿ ಪೂಜೆ ಮಾಡುತ್ತಾರೆ. ಅವರಿಗೆ ಒಳ್ಳೆಯದಾಗಲೀ, ರಾಮ ಅವರಿಗೆ ಒಳ್ಳೆಯದು ಮಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ :-** ಅವರ ಮಾತುಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ :-** ಆಯಿತಲ್ಲ, ಇನ್ನೇನು ಹೇಳಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು** :- ಮಾನ್ಯ ಮುಖ್ಯಮಂತ್ರಿಗಳಿಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನಾನು ಹಾಗೆ ಹೇಳಿದ ಪದವನ್ನು ವಾಪಸ್ಸು ತೆಗೆದುಕೊಂಡಿದ್ದೇನೆ ಎಂದು ಗೌರವಯುತವಾಗಿ ಹೇಳುತ್ತಿದ್ದೇನೆ. ಇಟ್ಟಿಗೆಗಳನ್ನು ಸೇಫ್ ಆಗಿ ಸೂರತ್ಕಲ್ ಸ್ಥಳದಲ್ಲಿ ತೆಗೆದುಕೊಂಡು ಹೋಗಿ ಇಟ್ಟುಕೊಂಡಿದ್ದಾರೆ. ಅವರದ್ದು ಈ ದೇಶದ ಜನತೆಗೆ ಕೊಟ್ಟಿರುವ ಎಲ್ಲಾ ಮಾತುಗಳನ್ನು ಚಾಚೂ ತಪ್ಪದೇ ಉಳಿಸಿಕೊಂಡಿರುವ ಪಕ್ಷವಾಗಿದೆ. ನಾವು ಚುನಾವಣೆಯಲ್ಲಿ ಮತ ಪಡೆಯಲು ಹೇಳಿಕೆ ಕೊಡುವ ಪಕ್ಷವಾಗಿದೆ. ಆದರೆ ಬಹಳ ಸ್ಪಷ್ಟವಾಗಿ ಹೇಳುವುದೇನೆಂದರೆ, ಇವತ್ತು ಸಮ್ಮಿಶ್ರ ಸರ್ಕಾರ ರಾಜ್ಯಪಾಲರ ಭಾಷಣವನ್ನು ಜಂಟಿ ಸದನದಲ್ಲಿ ಪ್ರಸ್ತಾಪಿಸಿದ್ದು, ಅವರು ಮಾಡಿರುವ ವಿಷಯಗಳಿಗೆ ದಯವಿಟ್ಟು ಸದನ ಒಪ್ಪಿಗೆ ಕೊಡಬೇಕು ಎಂದು ಮನವಿ ಮಾಡುತ್ತೇನೆ. ವಂದನೆಗಳು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ** :- ಮಾನ್ಯ ಸಭಾಪತಿಯವರೇ,

**ಸಭಾಪತಿಯವರು** :- ಮಾನ್ಯ ಮುಖ್ಯಮಂತ್ರಿಗಳ ಮಾತು ಮುಗಿದಿದೆ, ನಾನು ಮುಂದಿನ ಹಂತಕ್ಕೆ ಹೋಗಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ** :- ಮಾನ್ಯ ಸಭಾಪತಿಯವರೇ, ಅವರಿಗೆ ಧನ್ಯವಾದಗಳನ್ನು ಹೇಳುವುದು ಬೇಡವೇ?

**ಸಭಾಪತಿಯವರು** :- ಧನ್ಯವಾದಗಳನ್ನು ಹೇಳುವುದು ಬೇಡ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಮುಖ್ಯಮಂತ್ರಿಗಳು ಅವರ ಮಾತುಗಳನ್ನು ವಾಪಸ್ಸು ತೆಗೆದುಕೊಂಡಿದ್ದಾರೆ,

**ಸಭಾಪತಿಯವರು** :- ನಿಮ್ಮ ಧನ್ಯವಾದಗಳು ಬೇಡ. ಮುಗಿಯಿತಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ನಿಮಗೆ ಬೇಡ ಇರಬಹುದು, ನಮಗೆ ಬೇಕು. ನಾವು ಶಿಷ್ಟಾಚಾರ ಪಾಲಿಸಿಕೊಂಡು ಬಂದವರು. ಮಾನ್ಯ ಮುಖ್ಯಮಂತ್ರಿಗಳು ಅವರ ಮಾತುಗಳನ್ನು ವಾಪಸ್ಸು ತೆಗೆದುಕೊಂಡಿರುವುದರಿಂದ ಅವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.(ಮುಂದು

**೨೦/04.07.2018/7.20/ಹೆಚ್‌ವಿಃವಿಕೆ**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರುಃ–** ಪ್ರಸ್ತಾವ ಏನೆಂದರೆ:

**"2018ನೇ ಜುಲೈ 02ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುವುದು."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಪ್ರಸ್ತಾವಕ್ಕೆ ಸದನದ ಅನುಮೋದನೆ ದೊರೆಯಿತು.**

**ಸಭಾಪತಿಯವರುಃ–** ಈ ಸದನವು ಅಂಗೀಕರಿಸಿದ ಪ್ರಸ್ತಾವವನ್ನು ಘನತೆವೆತ್ತ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುತ್ತದೆ.

ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಗ್ಗೆ 11 ಗಂಟೆ 30 ನಿಮಿಷಗಳಿಗೆ ಸೇರುವುದು.

**(ಸದನವು ಸಂಜೆ 7 ಗಂಟೆ 21 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 05ನೇ ಜುಲೈ ಮಾಹೆ 2016ರ ಗುರುವಾರದಂದು ಬೆಳಗ್ಗೆ 11 ಗಂಟೆ 30 ನಿಮಿಷಗಳಿಗೆ ಸೇರಲು ನಿಶ್ಚಯಿಸಿತು.)**

*********

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"